8TH STANDARD SIRI KANNADA PRATHAMA

by Karnataka Patyapustaka Sangha

Karnataka Patyapustaka Sangha

Table of Contents

ಕರ್ನಾಟಕ ಸರ್ಕಾರ

ಸಿರಿ ಕನ್ನಡ

ಪ್ರಥಮಭಾಷಾ ಕನ್ನಡ ಪಠ್ಯಪುಸ್ತಕ
(ಪರಿಷ್ಕೃತ)

ಎಂಟನೆಯ ತರಗತಿ
2017

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ ಮೂರನೆಯ ಹಂತ,
ಬೆಂಗಳೂರು – 560085

1. ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು:

ಡಾ. ಸಿ. ಎಸ್. ರಾಮಚಂದ್ರ, ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಭಾಷಾವಿಜ್ಞಾನ ಅಧ್ಯಯನ ವಿಭಾಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು - 570 006.

ಸದಸ್ಯರು:

1. **ಡಾ. ಮುಳುಕುಂಟೆ ರಮೇಶ್**, ಕನ್ನಡಭಾಷಾ ಅಧ್ಯಾಪಕ, ರಾಗೀಗುಡ್ಡ ಪ್ರೌಢಶಾಲೆ ಜಯನಗರ, ಬೆಂಗಳೂರು-560069
2. **ಶ್ರೀ ವಿ. ರಂಗಪ್ಪಯ್ಯ ಹೊಳ್ಳ**, ಕನ್ನಡಭಾಷಾ ಅಧ್ಯಾಪಕ (ನಿವೃತ್ತ), ಉಡುಪಿ ಜಿಲ್ಲೆ-576225
3. **ಶ್ರೀ ಬಿ. ಬಾಲಕೃಷ್ಣಯ್ಯ**, ಕನ್ನಡಭಾಷಾ ಅಧ್ಯಾಪಕ, ಸರ್ಕಾರಿ ಪ್ರೌಢಶಾಲೆ ಬೋಗಾದಿ, ಮೈಸೂರು -570 026
4. **ಶ್ರೀ ಸಿ. ಬಿ. ವೀರಭದ್ರಾಚಾರಿ**, ಕನ್ನಡಭಾಷಾ ಅಧ್ಯಾಪಕ ಸರ್ಕಾರಿ ಪದವಿಪೂರ್ವ ಕಾಲೇಜು ಮಾಲೂರು, ತಾ
5. **ಡಾ. ಸುಂದರ ಕೇನಾಜೆ,** ಬಿ. ಆರ್. ಪಿ. ಬಿ ಆರ್ ಸಿ ಕಚೇರಿ, ಸುಳ್ಯ ದಕ್ಷಿಣಕನ್ನಡ ಜಿಲ್ಲೆ
6. **ಶ್ರೀ ವಿ. ಕೆ. ವಿಟ್ಲ,** ಚಿತ್ರಕಲಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಗುರುವಾಯನಕೆರೆ ಬೆಳ್ತಂಗಡಿ, ದ. ಕ. ಜಿಲ್ಲೆ.

ಪರಿಶೀಲಕರು:

ಪ್ರೊ. ಸಾ. ಶಿ. ಮರುಳಯ್ಯ, ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.
-ಸಂಪಾದಕೀಯ ಮಂಡಳಿ ಸದಸ್ಯರು

1. **ಪ್ರೊ. ಸಾ. ಶಿ. ಮರುಳಯ್ಯ**, ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.
2. **ಪ್ರೊ. ಅ. ರಾ. ಮಿತ್ರ, ಸಾಹಿತಿಗಳು**, ಕೆ. ಎಚ್. ಬಿ. ಕಾಲೋನಿ, ಯಲಹಂಕ, ಬೆಂಗಳೂರು.
3. **ಡಾ. ವಿಷ್ಣು ಎಂ.** ಶಿಂದೆ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಾಪುರ.

ಮುಖ್ಯ ಸಂಯೋಜಕರು:

ಪ್ರೊ. ಜಿ. ಎಸ್. ಮುಡಂಬಡಿತ್ತಾಯ, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ. ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-560085.

ಸಲಹೆ ಮತ್ತು ಮಾರ್ಗದರ್ಶನ:

1. **ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-560085
2. **ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-560085.

ಕಾರ್ಯಕ್ರಮ ಸಂಯೋಜಕರು: ಶ್ರೀ ಪಾಂಡುರಂಗ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-560085.

2. ಮುನ್ನುಡಿ

2005 ರ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿಗೆ ಅನುಗುಣವಾಗಿ ಕರ್ನಾಟಕ ಪಠ್ಯಪುಸ್ತಕ ಸಂಘವು 2010ನೆಯ ಸಾಲಿನಿಂದ ಒಂದರಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ಹನ್ನೆರಡು ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಏಳು ಮಾಧ್ಯಮಗಳಲ್ಲಿ ಕೋರ್ ವಿಷಯಗಳನ್ನು ರಚನೆ ಮಾಡಲಾಗುತ್ತಿದೆ. 1 ರಿಂದ 4ನೇ ತರಗತಿಯವರೆಗೆ ಪರಿಸರ ಅಧ್ಯಯನ ಮತ್ತು 5 ರಿಂದ 10ನೇ ತರಗತಿಯ ವರೆಗೆ ಐಚ್ಛಿಕ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಗಳಿರುತ್ತವೆ.

2005 ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

1. ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
2. ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
3. ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
4. ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
5. ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
6. ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
7. ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
8. ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
9. ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ. ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach).

ಪಠ್ಯಪುಸ್ತಕಗಳಲ್ಲಿರುವ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು

ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬೆಳೆಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆ ಹಾಗೂ ಮಕ್ಕಳ ಅಭ್ಯಾಸ ಪುಸ್ತಕಗಳಲ್ಲಿ ಅನೇಕ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ಅವರಲ್ಲಿ ಸಂಬಂಧಪಟ್ಟ ಸಾಮರ್ಥ್ಯ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ವೃದ್ಧಿಮಾಡುತ್ತದೆ. ಪ್ರತಿ ಘಟಕದಲ್ಲಿಯೂ ಕೆಲವು ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಜೋಡಿಸಲಾಗಿದೆ. ಅವುಗಳನ್ನು ಮಕ್ಕಳೇ ಕಂಡುಹಿಡಿದು, ಚರ್ಚಿಸಿ ಜೀವನದಲ್ಲಿ ಅವುಗಳ ಅರಿವನ್ನುಂಟು ಮಾಡಿಕೊಳ್ಳುವಂತೆ ಮಾಡಬೇಕು.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ ಮತ್ತು ಸಿ. ಟಿ. ಇ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಿಗೆ, ಸಂಪಾದಕ ಮಂಡಳಿಯ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕವಿಗಳ ಹಾಗೂ ಸಾಹಿತಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಇದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿರುವ ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

ಪ್ರೊ. ಜಿ. ಎಸ್. ಮುಡಂಬಡಿತ್ತಾಯ, ಮುಖ್ಯ ಸಂಯೋಜಕರು, ಪಠ್ಯಕ್ರಮ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ ಕ. ಪ. ಪು. ಸಂಘ ಬೆಂಗಳೂರು.

ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ ಬೆಂಗಳೂರು

3. ಪಠ್ಯ ಓದು ಹಾಗೂ ಬೋಧನೆಗೆ ಮುನ್ನ ಬೋಧಕರೊಂದಿಗೆ ಸಮಾಲೋಚನೆ

ನಾವಿಂದು ನಾಗರಿಕ, ಶೈಕ್ಷಣಿಕ ಹಾಗೂ ಜಾಗತಿಕ ಮೇಲಾಟದಲ್ಲಿದ್ದೇವೆ. ಪ್ರತಿಯೊಂದು ಭೌತಿಕ ಹಾಗೂ ಬೌದ್ಧಿಕ ಆಯಾಮದಲ್ಲೂ ಹೊಸ ಹೊಸ ಶೈಕ್ಷಣಿಕ ಶೋಧನೆ, ಚಿಂತನಾ ಆವಿಷ್ಕಾರ, ಕಲಿಕಾ ತಂತ್ರಗಾರಿಕೆ ಮತ್ತು ವೈಜ್ಞಾನಿಕ ಮನೋಭಾವವನ್ನು ಸ್ಥಿರೀಕರಿಸುವ ವಾಸ್ತವಿಕ ಪ್ರಯತ್ನಗಳು ನಾಡಿನ ಉದ್ದಗಲಕ್ಕೂ ನಡೆಯುತ್ತಿವೆ. ಪ್ರಸ್ತುತ ಸಂದರ್ಭ, ಸ್ಥಿತಿಗತಿಯನ್ನು ಮನಗಂಡ ಶಿಕ್ಷಣತಜ್ಞರು, ಮನೋವಿಜ್ಞಾನಿಗಳು, ಸಾಹಿತ್ಯ ವಿದ್ವಾಂಸರು ಹಾಗೂ ಅಂತರಾಷ್ಟ್ರೀಯ ಮೇಧಾವಿಗಳು ಕಲೆತು ಆಯೋಜಿಸಿದ ನಿರ್ದಿಷ್ಟ ನಿಯೋಜನಾ ಫಲವೇ ಹೊಸ ಪಠ್ಯ ತಯಾರಿ ಹಾಗೂ ಅನುಷ್ಠಾನತೆ.

ಕಲಿಕಾರ್ಥಿಗಳ ಶೈಕ್ಷಣಿಕ ಜೀವನದಲ್ಲಿ ತಾಯ್ನುಡಿಯ ಕಲಿಕೆ ಅದರ ಬಳಕೆ ಮಹತ್ವದ್ದು. ಅದಕ್ಕೆ ಪೂರಕವಾಗಿ ಶಿಕ್ಷಣ ಇಲಾಖೆ ನಿಗದಿಪಡಿಸುವ ಬೋಧನಾ ಪಠ್ಯ ಅಗತ್ಯ ಹಾಗೂ ಅನಿವಾರ್ಯ. ಸಾಮಾನ್ಯವಾಗಿ ಮಕ್ಕಳ ಪರಿಸರದ ಮಾತು ನಿತ್ಯದ ಪರಸ್ಪರ ಸಂವಹನ ಸಂಪರ್ಕವಷ್ಟೇ ಅಲ್ಲದೆ ಜ್ಞಾನಾರ್ಜನೆಯ ಉದ್ದೇಶವೂ ಅದರದು. ಮಕ್ಕಳು ತಮ್ಮ ನುಡಿಯಲ್ಲಿ ಶಾಲಾಮಟ್ಟದ ಭಾಷಿಕ ಸಾಮರ್ಥ್ಯವನ್ನು ಅರ್ಜಿಸಿಕೊಳ್ಳುತ್ತಾ ಶೈಕ್ಷಣಿಕ ಸಾರ್ಥಕತೆಗೆ ತಮ್ಮನ್ನು ತೆರೆದುಕೊಳ್ಳುವ ಆಶಯದಿಂದ ಔಪಚಾರಿಕ ನೆಲೆಯಲ್ಲಿ ಸಿದ್ಧಪಡಿಸಿದ ಕಲಿಕಾ ಹಾಗೂ ಬೋಧನಾ ಪಠ್ಯವಿದು. ಕಲಿಕೆಯ ಮೂಲಭೂತ ಕೌಶಲಗಳ ವೈಜ್ಞಾನಿಕ ದೃಢತ್ವವೇ ಇವುಗಳ ಆಂತರ್ಯದನಿ.

ಕಲಿಕೆ ಹಾಗೂ ಕಲಿಸುವಿಕೆಯ ನಿರ್ಧಾರಿತ ವಿಧಾನ ಮತ್ತು ಮೌಲ್ಯವನ್ನು ಸಾರ್ವತ್ರಿಕ ಶೈಕ್ಷಣಿಕ ನೆಲೆಯಲ್ಲಿ ಮೌಲೀಕರಿಸುವ ಉದ್ದೇಶದಿಂದ 1986ರ ರಾಷ್ಟ್ರೀಯ ಶಿಕ್ಷಣ ನೀತಿಗೆ ಬದ್ಧವಾಗಿ, ಅಂತೆಯೇ 2001–2002 ಶೈಕ್ಷಣಿಕ ಆಧುನಿಕತೆಗೆ ಪೂರಕವಾಗಿ ಪಠ್ಯಪುಸ್ತಕಗಳು ಶೋಧವಾದವು. ಮಕ್ಕಳ ಮಾನಸಿಕ ವಲಯಕ್ಕೆ ಸರಿಹೊಂದುವಂತೆ ಸಾಮರ್ಥ್ಯಾಧಾರದಿಂದ ಪರಿಷ್ಕಾರವಾಗಿ ಕಾಲಧರ್ಮದ ಶೈಕ್ಷಣಿಕತೆಗೆ ಸಮರ್ಪಕವಾದವು. ಹಾಗಾಗಿಯೂ ಇಂದಿನ ಶೈಕ್ಷಣಿಕ ಆಶೋತ್ತರ, 2005 ಎನ್. ಸಿ. ಎಫ್. ನೆಲೆಯಾಧಾರಿತ ಆನ್ವಯಿಕ ಶೋಧನಾ ಚಿಂತನೆಗಳನ್ನು ಗಂಭೀರವಾಗಿ ಗಮನಿಸುವುದು ಹಿತಕರ. ಇದು ಸುಶಿಕ್ಷಿತ ವ್ಯಕ್ತಿತ್ವ ವಿಕಸನಕ್ಕೆ ನಾಂದಿ.

ಪಠ್ಯಪುಸ್ತಕದಲ್ಲಿ ಕಲಿಕೆ ಮತ್ತು ಬೋಧನಾಂಶಗಳನ್ನು ಸಮಾನ ರೀತ್ಯಾಪರಿಗಣಿಸಿ ಯುಕ್ತ ಕಲಿಕಾ ಪ್ರಾಯೋಗಿಕತೆಯ ಮೂಲಕ ಸಮನ್ವಯಗೊಳಿಸಿ, ಭಾಷಾ ಕಲಿಕೆ ಮತ್ತು ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡಬೇಕು. ಈ ನೆಲೆಯಲ್ಲಿ ಸಿರಿ ಕನ್ನಡ- 8 ಸಮರ್ಥನೀಯ. ಇತ್ತೀಚಿನ ಕಲಿಕೆಯ ಎಲ್ಲಾ ಸಾಧಕ-ಬಾಧಕಗಳನ್ನು ತಾರ್ಕಿಕ ರೀತ್ಯಾ ಅಳವಡಿಸಿದೆ. ಮುಖ್ಯವಾಗಿ ತರಗತಿವಾರು ಕಲಿಕೆಯ ಮೂಲವಿಷಯ ಮತ್ತು ನಿರ್ಧರಿಸಿದ ಮಾನವೀಯ ಮೌಲ್ಯಗಳನ್ನು ಪರಿಗಣಿಸಿದೆ. ಭಾಷಾ ಸಾಮರ್ಥ್ಯಗಳನ್ನು

ಕ್ಷೇತ್ರಗಳಿಗನುಗುಣವಾಗಿ ಅನ್ವಯಿಸಿ ಸಮರ್ಥ ಕಲಿಕೆಗೆ ಅನುವಾಗುವಂತೆ ಪಠ್ಯದ ಗದ್ಯ-ಪದ್ಯ ಪಾಠಗಳಲ್ಲಿ ಅಳವಡಿಸಿದೆ. ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯನ್ನು ಕಾಯ್ದುಕೊಂಡಿದೆ. ಇಲ್ಲಿನ ಪಾಠಗಳೆಲ್ಲವೂ ಸ್ವಕಲಿಕೆ ಹಾಗೂ ಬೋಧನಾ ಕೌಶಲಕ್ಕೆ ಸೂಕ್ತವಾಗಿವೆ. ಕಲಿಕಾರ್ಥಿಗಳ ಆಸಕ್ತಿ ಮತ್ತು ಉಲ್ಲಾಸವನ್ನು ಹೆಚ್ಚಿಸುವ ಉದ್ದೇಶದಿಂದ ರಚಿಸಿರುವ ಪಾಠಗಳಲ್ಲಿ ವೈವಿಧ್ಯ ಉಂಟು.

ಯೋಜಿತ ಕ್ರಿಯಾತ್ಮಕತೆಯ ಪಠ್ಯದ ಸಾರ್ಥಕತೆಗೆ ಸೂಕ್ತ ಆದ್ಯತೆಯನ್ನು ನೀಡುವುದರ ಹಿನ್ನೆಲೆಯಲ್ಲಿ ಪ್ರಸ್ತುತ ಬೋಧನೆ ಹಾಗೂ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಇಂಬುಕೊಡುವ ಪ್ರಾಯೋಗಿಕ ಹಾಗೂ ತಾತ್ವಿಕ ಪ್ರಯತ್ನ ಇಲ್ಲಿನದು. ಬೋಧನಾ ವಿಶೇಷತೆಯೊಂದಿಗೆ ಆಯ್ದು ನಿಗದಿಪಡಿಸಿದ ಸಾಹಿತ್ಯಪ್ರಕಾರದ ಭಾಗಗಳನ್ನು ಅರ್ಥೈಸಿಕೊಳ್ಳಲು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕ್ರಿಯಾತ್ಮಕ ಭಾಷಿಕ ಕ್ರಮಗಳನ್ನು ವ್ಯವಸ್ಥಿತವಾಗಿ ಅನ್ವಯಿಸಿದೆ. ಭಾಷಾಶುದ್ಧತೆ, ವಾಸ್ತವಿಕತೆ ಮತ್ತು ತರ್ಕಬದ್ಧತೆಯನ್ನೂ ಜತನದಿಂದ ಸ್ಥಿರೀಕರಿಸಿದೆ. ಕಲಿಕಾ ಮೂಲತತ್ವವನ್ನು ಸಮರ್ಪಕವಾಗಿ ಅನುಸರಿಸಿದೆ.

ಇಲ್ಲಿ ಮುಖ್ಯವಾಗಿ ಮಕ್ಕಳು ಕಲಿಕಾ ಪ್ರಾಯೋಗಿಕತೆಯನ್ನು ಸಮರ್ಥರೀತಿಯಲ್ಲಿ ಮೌಲೀಕರಿಸುವ ಉದ್ದೇಶದಿಂದ ಪಠ್ಯದಲ್ಲಿನ ನಿಗದಿತ ಕಲಿಕಾ ಗದ್ಯಪಾಠ ಮತ್ತು ಪದ್ಯಪಾಠಗಳ ಸ್ಪಷ್ಟ ಅರ್ಥೈಸುವಿಕೆಗೆ ಸಂಬಂಧಿಸಿದಂತೆ ಪ್ರಾಯೋಗಿಕ ವಸ್ತುನಿಷ್ಠ ನಿಖರನಿರ್ಣಯ ಬಹುವಿಧದ ನಮೂನಾ ಪ್ರಶ್ನೆಗಳನ್ನು ನಿದರ್ಶನಾತ್ಮಕವಾಗಿ ಪಠ್ಯಪುಸ್ತಕದಲ್ಲಿ ನೀಡಿದೆ. ಅಲ್ಲದೆ ಕಲಿತ ಪಾಠದ ಸಾರನಿರ್ಣಯಕತೆಯನ್ನು ಬಹುವಿಧದಿಂದ ಪರೀಕ್ಷಿಸಿ ಕಲಿಕಾರ್ಥಿಯ ಜ್ಞಾನ ಸಂವರ್ಧನೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಒಂದೆರಡು ಮಾದರಿಗಳನ್ನಷ್ಟೇ ಕೊಟ್ಟಿದೆ. ಇದರಿಂದ ಸ್ವಸಾಮರ್ಥ್ಯ, ಸ್ವಪ್ರಯೋಗಶೀಲ, ಸ್ವಸೃಜನಶೀಲ, ಸ್ವಸಂವಹನಶೀಲ ಗುಣಗಳು ಸಹಜವಾಗಿ ಹೆಚ್ಚುತ್ತವೆ. ಭಾಷಾ ಹಾಗೂ ಜ್ಞಾನ ಗ್ರಹಿಕೆಗೆ ಸಂಬಂಧಿಸಿದ ಇನ್ನೂ ಹೆಚ್ಚಿನ ಸೂಕ್ತ ಅಭ್ಯಾಸ, ಭಾಷಾಭ್ಯಾಸ ಮತ್ತು ಚಟುವಟಿಕಾ ಮಾದರಿಗಳನ್ನು ಅಳವಡಿಸಿಕೊಳ್ಳುವ ಜವಾಬ್ದಾರಿ ಸ್ವಾತಂತ್ರ್ಯ ಬೋಧಕರದು ಆಗಿರುತ್ತದೆ. ಅದಕ್ಕೇ ಅಭ್ಯಾಸ/ ಚಟುವಟಿಕೇತರ ನಮೂನೆಗಳನ್ನು ನೀಡಿರುವುದಿಲ್ಲ.

ಶಿಕ್ಷಕರ ಬೋಧನಾ ಸಂಪನ್ಮೂಲ ವಿವರವನ್ನು ಬೋಧಕರಿಗೆ ಪ್ರತ್ಯೇಕಿಸದೆ ಪಠ್ಯದಲ್ಲೇ ಸಹಸಂಬಂಧಿ ರೀತಿಯಲ್ಲಿ ಸಂಕ್ಷಿಪ್ತವಾಗಿ ನೀಡಿದೆ. ಸಾಹಿತ್ಯ ಪ್ರಕಾರ ಭಾಷಾ ಕ್ರಿಯಾತ್ಮಕ ವಿಚಾರ, ಕನ್ನಡ ಭಾಷಾ ಅವಸ್ಥಾ ಘಟಕಾಂಶ ಬೋಧನಾ ಆಶಯ ಸಂಬಂಧಿತ ಮಾಹಿತಿ ಇತ್ಯಾದಿಗಳನ್ನು ಸಂಕ್ಷಿಪ್ತ ರೀತಿಯಲ್ಲಿ ಒದಗಿಸುವ ಪ್ರಯತ್ನ ಮಾಡಿದೆ.

ನಿಗದಿತ ಮೂಲಪಾಠವನ್ನು ಅರ್ಥೈಸುವ ಅನುಕ್ರಮಣಿಕೆ ಇಂತಿದೆ. ಅರ್ಥೈಸಿ- ಓದಿ, ಕರ್ತೃ- ಭಾವ- ಆಕರ, ಪದ-ಗದ್ಯ/ ಪದ್ಯ- ಅರ್ಥ, ಪಠ್ಯಾಧಾರಟಿಪ್ಪಣಿ, ಕಲಿತಪಠ್ಯದ ಅಭ್ಯಾಸ, ಭಾಷಾಭ್ಯಾಸ, ಪ್ರಾಯೋಗಿಕ ಅಭ್ಯಾಸ ಇತ್ಯಾದಿ ಪಠ್ಯದ ಒಳತೋಟಗಳು. ಪಠ್ಯಸಾರವನ್ನು ಕಲಿಕಾರ್ಥಿಗಳು ಸುಲಭವಾಗಿ ಅರ್ಥೈಸಿಕೊಳ್ಳುವ ದೃಷ್ಟಿಯಿಂದ ನಿಗದಿತ ಪಾಠದ ಬೋಧನಾ ವಿನ್ಯಾಸವನ್ನು ಹೊಸ ಬೋಧನಾ ವಿಧಾನ ಮತ್ತು ಬೋಧನಾ ವಿಶ್ಲೇಷಣಾ ವಿಧಾನದ ಅಡಿಯಲ್ಲಿ ಪ್ರಸ್ತಾಪಿಸಿದೆ. ಕಲಿಕೆಯ ಮುನ್ನ ಅರ್ಥೈಸಿ- ಓದಿ ಶೀರ್ಷಿಕೆಯಲ್ಲಿ ಗದ್ಯ/ ಪದ್ಯದ

ಕೆಲವು ವಿಶೇಷ ಪರಿಕಲ್ಪನಾ ಪದಗಳನ್ನು ಓದುವ ಸಲುವಾಗಿ ನೀಡಿದೆ. ಮುಖ್ಯವಾಗಿ ಓದುವಿಕೆಯನ್ನು ಖಚಿತಪಡಿಸುವ ಉದ್ದೇಶವೇ ಇದರದು. ಕಲಿತ ಪಾಠದ ಅಭ್ಯಾಸ ಭಾಗದಲ್ಲಿರುವ ಪ್ರಶ್ನೆಗಳು ಕಲಿಕಾರ್ಥಿಗಳು ಕಲಿಕೆಯಲ್ಲಿ ಸಾಮರ್ಥ್ಯ ಗಳಿಸುವುದಕ್ಕಾಗಿಯೇ ಹೊರತು ಪರೀಕ್ಷೆಯ ಪ್ರಶ್ನಪತ್ರಿಕೆಯ ತಯಾರಿಕೆಗಾಗಿ ಅಲ್ಲ. ಇದೇ ಪ್ರಶ್ನೆಗಳನ್ನು ಪರೀಕ್ಷೆಯಲ್ಲಿ ಮೌಲ್ಯಮಾಪನಕ್ಕಾಗಿ ಕೇಳಲೇಬೇಕೆಂಬ ನಿರ್ಬಂಧವಿಲ್ಲ. ಇಲ್ಲಿ ಒಂದು/ ಎರಡು/ ಮೂರು/ ನಾಲ್ಕು/ ಐದು... ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ಕೇಳಲಾಗಿದೆ. ಇದು ವಿಷಯ ಗ್ರಹಣದ ಸಲುವಾಗಿಯೇ ಹೊರತು ಪರೀಕ್ಷಾ ಮೌಲ್ಯಮಾಪನದ ಮಾದರಿಗಾಗಿ ಅಲ್ಲ. ಅಂತೆಯೇ ವಸ್ತುನಿಷ್ಠ ನಿರ್ಣಾಯಕ ಪ್ರಶ್ನೆಗಳು ಕಲಿಕಾರ್ಥಿಯ ನಿರ್ದಿಷ್ಟ ಸಾಮರ್ಥ್ಯಕ್ಕೆ ಸಂಬಂಧಿಸಿದ್ದಾಗಿದೆ. ಒಟ್ಟಿನಲ್ಲಿ ಶೈಕ್ಷಣಿಕ ಸಾರೋದ್ದೇಶದ ಪ್ರಣಾಳಿಕೆ ಇದು.

ಪ್ರಸ್ತುತ ಕೈಂಕರ್ಯಕ್ಕೆ ಸಹಕರಿಸಿದ ಪಠ್ಯಪುಸ್ತಕ ರಚನಾಸಮಿತಿಯ ಗೌರವಾನ್ವಿತ ಸದಸ್ಯರೆಲ್ಲರ ಸಮರ್ಪಕ ಸಲಹೆ, ಬೆಂಬಲ, ನೆರವು, ವಿಶ್ವಾಸ ಮತ್ತು ಆದರತೆ ಮನನೀಯ. ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರು, ಉಪನಿರ್ದೇಶಕರು ಹಾಗೂ ಮುಖ್ಯ ಸಂಯೋಜಕರಾದ ಪ್ರೊ. ಮುಡಂಬಡಿತ್ತಾಯ ಅವರ ಸಮಯೋಚಿತ ಸಲಹೆ, ಮಾರ್ಗದರ್ಶನ ಮಹತ್ವದ್ದು. ನಾಡಿನ ಖ್ಯಾತಸಾಹಿತಿಗಳಾದ ಪ್ರೊ. ಸಾ. ಶಿ. ಮರುಳಯ್ಯ ಅವರ ಸೂಕ್ತ ಪರಿಶೀಲನೆ ಸಮ್ಮತ. ಸಂಯೋಜಕ ಶ್ರೀ. ಪಾಂಡುರಂಗ ಅವರ ಒತ್ತಾಸೆ, ಜವಾಬ್ದಾರಿಯುತ ಕಾಳಜಿ ಮತ್ತು ವಿಶ್ವಾಸ ಪೂರ್ವಕ ಅಭಿಮಾನ ವಿಶೇಷ. ಇವರೆಲ್ಲರಿಗೂ ಸಮಿತಿಯ ಪರವಾಗಿ ಆತ್ಮೀಯ ಗೌರವ ಪೂರ್ವಕ ಧನ್ಯವಾದಗಳು.

ಸಿರಿ ಕನ್ನಡ- 8 ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದ ಸಂಪಾದಕ ಮಂಡಳಿಯ ಸದಸ್ಯರಾದ ಗೌರವಾನ್ವಿತ ಪ್ರೊ. ಸಾ. ಶಿ. ಮರುಳಯ್ಯ, ಸಾಹಿತಿಗಳು, ಪ್ರೊ. ಅ. ರಾ. ಮಿತ್ರ, ಸಾಹಿತಿಗಳು ಮತ್ತು ಡಾ. ವಿಷ್ಣು ಎಂ. ಶಿಂದೆ, ಸಹಾಯಕ ಪ್ರಾಧ್ಯಾಪಕರು ಮಹಿಳಾ ವಿಶ್ವವಿದ್ಯಾನಿಲಯ ಬಿಜಾಪುರ ಅವರ ಸೂಕ್ತ ಮಾರ್ಗದರ್ಶನ ಸಲಹೆ, ಸೂಚನೆಗಳು ಪಠ್ಯಪುಸ್ತಕದ ಮೌಲಿಕತೆಗೆ ಪೋಷಕವಾಗಿವೆ. ಗಂಭೀರ ಚಿಂತನಾಯುಕ್ತ ಮಾತುಗಳು ಸೂಕ್ತ ಹಾಗೂ ಮೌಲಿಕ. ಅಂತೆಯೇ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ ಗಳಿಂದ ಬಂದಿರುವ ಹಿಮ್ಮಾಹಿತಿ ಸೂಕ್ತ ಹಾಗೂ ಸಮಂಜಸ. ಯುಕ್ತಾಯುಕ್ತತೆಯ ಹಿನ್ನೆಲೆಯಲ್ಲಿ ಅವನ್ನು ಗಮನಿಸಿದೆ. ಅದಕ್ಕಾಗಿ ಪಠ್ಯಪುಸ್ತಕ ರಚನಾಸಮಿತಿಯ ಪರವಾಗಿ ಅವರಿಗೆ ಗೌರವ ಪೂರ್ವಕ ಧನ್ಯವಾದಗಳು.

ಪ್ರತ್ಯಕ್ಷ ಪರೋಕ್ಷವಾಗಿ ಸಹಕರಿಸಿದ ಕರ್ನಾಟಕ ಪಠ್ಯಪುಸ್ತಕ ಸಂಘದ ಆತ್ಮೀಯ ಸ್ನೇಹಿತರಿಗೂ ಸಂಯೋಜಕರಿಗೂ ಕಲಾವಿದರಿಗೂ ಆದರಪೂರ್ವಕ ವಂದನೆಗಳು. ಪಠ್ಯಕ್ಕೆ ಆಯ್ಕೆ ಮಾಡಿಕೊಂಡ ಆಕರ ಸಂಪನ್ಮೂಲ ಭಾಗಗಳನ್ನು ಅಳವಡಿಸಿಕೊಳ್ಳಲು ಒಪ್ಪಿಗೆ ನೀಡಿರುವ ಲೇಖಕ ವಿದ್ವಾಂಸರಿಗೆ ಹಾಗೂ ಕೃತಿ ಸ್ವಾಮ್ಯ ಹೊಂದಿದವರಿಗೂ ಅಭಿಮಾನ ಪೂರ್ವಕ ಧನ್ಯವಾದಗಳು.

ಸಿ. ಎಸ್. ರಾಮಚಂದ್ರ, ಅಧ್ಯಕ್ಷ, ಸಿರಿ ಕನ್ನಡ-8, ಪಠ್ಯಪುಸ್ತಕ ರಚನಾ ಸಮಿತಿ

4. ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

ಸರ್ವಾಧ್ಯಕ್ಷರು: ಪ್ರೊ. ಬರಗೂರು ರಾಮಚಂದ್ರಪ್ಪ, ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ (ರಿ.) ಬೆಂಗಳೂರು-85

ಪರಿಷ್ಕರಣ ಸಮಿತಿ

ಅಧ್ಯಕ್ಷರು:

ಡಾ. ರಾಜಪ್ಪ ದಳವಾಯಿ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.

ಸದಸ್ಯರು:

ಡಾ. ಜಗನ್ನಾಥ್ ಹೆಬ್ಬಾಳೆ, ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ, ವಾಣಿಜ್ಯ ಪ್ರಥಮದರ್ಜೆ ಕಾಲೇಜು, ಬೀದರ್

ಶ್ರೀ. ಅಲ್ಲಮಪ್ರಭು ಬೆಟ್ಟದೂರು, ನಿವೃತ್ತ ಪ್ರಾಂಶುಪಾಲರು, ಅಮರ ಚೇತನ, ತವಳಗೇರಿ ಕಾಲೋನಿ, ಕಲ್ಯಾಣನಗರ, ಕೊಪ್ಪಳ

ಶ್ರೀ. ವಿ. ರಂಗಪ್ಪಯ್ಯಹೊಳ್ಳ, ನಿವೃತ್ತ ಕನ್ನಡ ಭಾಷಾ ಶಿಕ್ಷಕರು, ಶ್ರೀನಿವಾಸ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ ತಾ.

ಶ್ರೀ. ಬಿ. ರವೀಶ್‌ಕುಮಾರ್. ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ ಮೈಸೂರು ತಾಲ್ಲೂಕು.

ಶ್ರೀ. ಚಿಕ್ಕದೇವೇಗೌಡ, ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ ಬೆಂಗಳೂರು-

ಶ್ರೀ. ತಮ್ಮಣ್ಣಗೌಡ ಹೆಚ್. ಸಿ. ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು

ಶ್ರೀಮತಿ. ಸುಶೀಲ, ಕನ್ನಡ ಅಧ್ಯಾಪಕಿ, (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿಪೂರ್ವ ಕಾಲೇಜು, ಮದ್ದೂರು ತಾಲ್ಲೂಕು

ಶ್ರೀ. ಬಸವರಾಜಪ್ಪ, ಎಂ, ಕನ್ನಡ ಅಧ್ಯಾಪಕರು (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿ ಪೂರ್ವಕಾಲೇಜು, ಹೊಸನಗರ ತಾ.

ಶ್ರೀ. ಎನ್. ಬಿ. ವೀರನಗೌಡ, ಬಿ. ಅರ್. ಪಿ, ಕ್ಷೇತ್ರಸಮನ್ವಯಾಧಿಕಾರಿಗಳ ಕಛೇರಿ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

ಕಲಾವಿದರು:

ಶ್ರೀ. ವೆಂಕಟೇಶ್. ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು, ಉನ್ನತ ಪರಿಶೀಲನ ಸಮಿತಿ

ಡಾ. ಎಚ್. ಎಸ್. ರಾಘವೇಂದ್ರರಾವ್, ನಿವೃತ್ತ ಪ್ರಾಧ್ಯಾಪಕರು, ನಂ. 7, 15ನೇ ಕ್ರಾಸ್, ಜೆ. ಪಿ. ನಗರ, ಬೆಂಗಳೂರು-78

ಡಾ. ಜಿ. ಆರ್. ತಿಪ್ಪೇಸ್ವಾಮಿ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನಸಂಸ್ಥೆ, ಮಾನಸ ಗಂಗೋತ್ರಿ , ಮೈಸೂರು-6

ಡಾ. ಸೈಯದ್ ಜಮೀರ್‌ಉಲ್ಲಾಷರೀಫ್, ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ

ಡಾ. ಯಲ್ಲಪ್ಪ ಹಿಮ್ಮಡಿ, ಎಸ್. ಪಿ. ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ

ಡಾ. ಕಲಾವತಿ, ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ

ಡಾ. ಪ್ರಶಾಂತ್ ನಾಯಕ್, ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

ಡಾ. ಗೀತಾವಸಂತ, ಸಹಪ್ರಾಧ್ಯಾಪಕರು ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

ಡಾ. ಸತ್ಯನಾರಾಯಣ, ಎಚ್. ಎಸ್. ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

ಸಲಹೆ ಮತ್ತು ಮಾರ್ಗದರ್ಶನ:

ಶ್ರೀ. ನರಸಿಂಹಯ್ಯ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.) ಬೆಂಗಳೂರು-85

ಶ್ರೀಮತಿ ಸಿ. ನಾಗಮಣಿ, ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.) ಬೆಂಗಳೂರು-85

ಕಾರ್ಯಕ್ರಮ ಸಂಯೋಜಕರು:

ಶ್ರೀ ಪಾಂಡುರಂಗ, ಹಿರಿಯ ಸಹಾಯಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.) ಬೆಂಗಳೂರು- 85

5. ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ಧರಾಮಯ್ಯನವರು ತಮ್ಮ 2014-15ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24-11-2014 ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24-11-2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19-09-2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016-17ರ ಬದಲು 2017-18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ನೀಡಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ

ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್. ಸಿ. ಇ. ಆರ್. ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ, ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

ನರಸಿಂಹಯ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-85.

ಪ್ರೊ. ಬರಗೂರು ರಾಮಚಂದ್ರಪ್ಪ, ಸರ್ವಾಧ್ಯಕ್ಷರು, ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು- 85

6. ಪರಿವಿಡಿ

ಕ್ರಮ	**ಗದ್ಯ ಭಾಗ**	**ಕೃತಿಕಾರರ ಹೆಸರು**
1.	ಮಗ್ಗದ ಸಾಹೇಬ	ಬಾಗಲೋಡಿ ದೇವರಾಯ
2.	ನೀರು ಕೊಡದ ನಾಡಿನಲ್ಲಿ	ನೇಮಿಚಂದ್ರ
3.	ತಲಕಾಡಿನ ವೈಭವ	ಹಿರೇಮಲ್ಲೂರು ಈಶ್ವರನ್
4.	ಸಾರ್ಥಕ ಬದುಕಿನ ಸಾಧಕ	ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ
5.	ಹೂವಾದ ಹುಡುಗಿ	ಎ. ಕೆ. ರಾಮಾನುಜನ್
6.	ಯಶೋಧರೆ	ಮಾಸ್ತಿ ವೆಂಕಟೇಶ ಅಯ್ಯಂಗಾರ್
7.	ಅಮ್ಮ	ಯು. ಆರ್. ಅನಂತಮೂರ್ತಿ
8.	ಸಪ್ತಾಕ್ಷರಿ ಮಂತ್ರ	ಮುದ್ದಣ
ಪದ್ಯ ಭಾಗ		
1.	ಕನ್ನಡಿಗರ ತಾಯಿ	ರಾಷ್ಟ್ರಕವಿ ಎಂ. ಗೋವಿಂದ ಪೈ
2.	ಸಣ್ಣ ಸಂಗತಿ	ಕೆ. ಎಸ್. ನರಸಿಂಹಸ್ವಾಮಿ
3.	ಗೆಳೆತನ	ಚೆನ್ನವೀರ ಕಣವಿ
4.	ಭರವಸೆ	ಬಿ. ಟಿ. ಲಲಿತಾನಾಯಕ್
5.	ವಚನಾಮೃತ	ಅಲ್ಲಮಪ್ರಭು- ಆಯ್ದಕ್ಕಿಮಾರಯ್ಯ, ಅಮುಗೆರಾಯಮ್ಮ- ಶಿವಶರಣೆ ಲಿಂಗಮ್ಮ
6.	ಸೋಮೇಶ್ವರ ಶತಕ	ಪುಲಿಗೆರೆ ಸೋಮನಾಥ
7.	ಜೀವನ ದರ್ಶನ	ಶ್ರೀಪಾದರಾಜ ಗೋಪಾಲದಾಸರು- ವಿಜಯದಾಸರು

8.	ರಾಮಧಾನ್ಯ ಚರಿತೆ	ಕನಕದಾಸರು

ಪಠ್ಯಪೂರಕ ಅಧ್ಯಯನ

1.	ಕಟ್ಟುವೆವು ನಾವು	ಎಂ. ಗೋಪಾಲಕೃಷ್ಣ ಅಡಿಗ
2.	ಸಾರ್ಥಕ	ದಿನಕರ ದೇಸಾಯಿ
3.	ಆಹುತಿ	ಕೊಡಗಿನ ಗೌರಮ್ಮ
4.	ಮಗಳಿಗೆ ಬರೆದ ಪತ್ರಗಳು	ಜವಹರಲಾಲ್ ನೆಹರು, ಅನುವಾದ- ತಿ ತಾ. ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮ
5.	ಆಟೋರಿಕ್ಷಾದ ರಸಪ್ರಸಂಗಗಳು	ಎಚ್. ನರಸಿಂಹಯ್ಯ

7. ಗದ್ಯ ಭಾಗ-1. ಮಗ್ಗದ ಸಾಹೇಬ - ಬಾಗಲೋಡಿ ದೇವರಾಯ

ಪ್ರವೇಶ:

ಬಹಳ ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣ ಕಥೆಯೂ ಒಂದು. ಕಥೆಯನ್ನು ಹೇಳುವುದು ಹಾಗೂ ಕೇಳುವುದು ಮಾನವನ ಹುಟ್ಟುಗುಣ. ನಮ್ಮ ಹಿರಿಯರು ತಮ್ಮ ಮಕ್ಕಳಲ್ಲಿ ಆಸಕ್ತಿ ಕೆರಳಿಸಿ ಕುತೂಹಲ ಉಂಟುಮಾಡಲು, ಮನಸ್ಸಿಗೆ ಮುದ ನೀಡಲು ಮನಸ್ಸನ್ನರಳಿಸುವ ಕಥೆಗಳನ್ನು ಹೇಳುತ್ತಿದ್ದರು. ಈ ಕಥನ ಕಲೆಯು ವಿಸ್ತಾರಗೊಂಡು ಕೆಲವು ಸಾಹಿತಿಗಳು ವಸ್ತು, ಶೈಲಿ, ನಿರೂಪಣೆಗಳೆಲ್ಲದರಲ್ಲಿಯೂ ಪರಿಣಾಮಕಾರಿಯಾದ ಮಾರ್ಪಾಡುಗಳನ್ನು ಮಾಡಿ ಸಣ್ಣಕಥೆ ಎಂಬ ಸಾಹಿತ್ಯಪ್ರಕಾರವನ್ನು ಪ್ರಚುರಗೊಳಿಸಿದರು ಮತ್ತು ಸಂಕ್ಷಿಪ್ತತೆ, ವಾಸ್ತವತೆಗಳು ಇದರ ಗುಣಗಳಾಗಿವೆ. ಶಿಕ್ಷಣ, ಬದುಕಿನ ಏಳುಬೀಳುಗಳು, ಸ್ವಉದ್ಯೋಗ, ವಿಜ್ಞಾನ ಮೊದಲಾದವುಗಳು ಸಣ್ಣಕಥೆಗೆ ವಸ್ತುಗಳಾಗಿವೆ.

ಪ್ರಸ್ತುತ ಕಥೆಯಲ್ಲಿ ಬಹು ಮುಖ್ಯವಾಗಿ ಇಂದು ವಿನಾಶದ ಅಂಚಿನಲ್ಲಿರುವ ಗುಡಿಕೈಗಾರಿಕೆಗೆ ನಮ್ಮ ಶಿಕ್ಷಣದಲ್ಲಿ ನೀಡಬೇಕಾದ ಮಹತ್ವವನ್ನು ಸಾದರಪಡಿಸುವ ಉದ್ದೇಶವಿದೆ. ತಂದೆಯ ಆಸೆಯಂತೆ ಸರ್ಕಾರಿ ಉದ್ಯೋಗವನ್ನೇ ಅವಲಂಬಿಸದೆ, ಸ್ವಯಂ ಉದ್ಯೋಗ ಕಂಡುಕೊಳ್ಳುವ ಯುವಕನೊಬ್ಬ ರಾಷ್ಟ್ರಮಟ್ಟದ ಗೌರವಾದರಗಳಿಗೆ ಪಾತ್ರನಾಗುವುದೇ ಇಲ್ಲಿಯ ಕಥಾವಸ್ತು.

ಮಗ್ಗದ ಸಾಹೇಬ ಅಂದರೆ ಅಬ್ದುಲ್ ರಹೀಮ್ ಸಾಹೇಬ್. ಅವನು ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಕ್ಕೂ ಹೆಚ್ಚಾಗಿದೆ. ಆದರೂ ಅವನನ್ನು ಮಗ್ಗದ ಸಾಹೇಬನೆಂದೇ ಕರೆಯುವುದು ವಾಡಿಕೆ. ಅವರ ಪೂರ್ವಜರು ಸಾಹೇಬ್ ಬಹಾದ್ದೂರ್ ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರು. ಅವರು ಮಸೀದಿ ಮಾತ್ರವಲ್ಲ ದೇವಸ್ಥಾನವನ್ನೂ ಕಟ್ಟಿಸಿದ್ದರು. ಇಂದಿಗೂ ಈ ದೇವಸ್ಥಾನದಲ್ಲಿ ರಥೋತ್ಸವದ ಸಮಯದಲ್ಲಿ ಅವರ ಮನೆತನದ ಹಿರಿಯ ಪ್ರತಿನಿಧಿಗೆ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವ ಹಕ್ಕಿದೆ.


ಇಂತಹ ಸಂಪ್ರದಾಯ ಪದ್ಧತಿಗಳು ಇಂದಿಗೂ ಕರ್ನಾಟಕದಲ್ಲಿ ನಡೆಯುತ್ತಿವೆ. ಇದರಿಂದ ಪೂರ್ವಜರಲ್ಲಿ ಎಂತಹ ಘನತೆ, ಸದಾಚಾರ, ಸದ್ಭಾವನೆಗಳು ಇದ್ದವು ಎಂದು ತಿಳಿಯುವುದು. ಉದಾಹರಣೆಗೆ ನನ್ನದೇ ಹುಟ್ಟೂರಿನ ಪಕ್ಕದಲ್ಲಿ ಮುಸಲ್ಮಾನರ ವಸತಿ ಇದೆ. ಅದರೊಳಗೆ ಒಂದು ಪವಿತ್ರ ಸ್ಥಾನವಿದೆ. ಅಲ್ಲಿ 'ಉರ್ಸ್' ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದ ಕಾಲದಲ್ಲಿ ನಮ್ಮ ಮನೆತನದ ಒಬ್ಬ ಪ್ರತಿನಿಧಿ ಇದ್ದೇ ಇರಬೇಕೆಂಬ ಸಂಪ್ರದಾಯ ಇತ್ತು.

ಹಾಗೆಯೇ ಗಣೇಶಚತುರ್ಥಿ, ಕೃಷ್ಣಾಷ್ಟಮಿಗಳ ಮರುದಿನ ಮುಸಲ್ಮಾನ ಸಮಾಜದ ಪ್ರತಿಷ್ಠಿತ ಮುಖ್ಯಸ್ಥರು ನಮ್ಮ ಮನೆಗೆ ಬರುವುದು, ಕುಶಲೋಪಚಾರ ಮಾತನಾಡುವುದು, ನಾವು ಅವರಿಗೆ ಮೋದಕ, ಉಂಡೆ, ಚಕ್ಕುಲಿ ಇತ್ಯಾದಿ ಹಬ್ಬದ ಭಕ್ಷ್ಯ-ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು. ಒಂದು ಬಾರಿ ನಮ್ಮ ತಾಯಿ ಕಾಯಿಲೆ ಬಿದ್ದ ಕಾರಣ ತಂದೆಯವರು ಅಂಗಡಿಯಿಂದ ಲಡ್ಡುಗಳನ್ನು ಕೊಂಡು ಕೊಟ್ಟುದಕ್ಕೆ ಅವರಿಗೆ ಬಹಳ ಸಿಟ್ಟು ಬಂತು. 'ರಾಯರೆ, ಅಂಗಡಿಯಿಂದ ತೆಗೆದುಕೊಳ್ಳಲು ನಮ್ಮಲ್ಲಿ ಹಣವಿಲ್ಲವೆ? ಮನೆಯಲ್ಲಿ ಕಾಯಿಲೆಯಿದ್ದರೆ ಒಂದು ತುಂಡು ಬೆಲ್ಲವನ್ನೋ ಕಲ್ಲುಸಕ್ಕರೆ ಹರಳನ್ನೋ ಕೊಡಿ. ನಿಮ್ಮ ಹಬ್ಬದ ಪೂಜೆಯ ಪ್ರಸಾದವನ್ನು ನಾವು ತೆಗೆದುಕೊಳ್ಳುವುದು ತಲತಲಾಂತರದಿಂದ ಬಂದ ಹಳೆಯ ಸಂಪ್ರದಾಯ. ಅಂಗಡಿಯ ಮಿಠಾಯಿಯನ್ನು ಪ್ರಸಾದವೆಂದು ಕೊಡುವುದು ಸರಿಯೇ?' ಎಂದು ಕೇಳಿಯೇ ಬಿಟ್ಟಿದ್ದರು.

ಅದು ಹೇಗೇ ಇರಲಿ. ಈಗ ಅಬ್ದುಲ್ ರಹೀಮನಿಗೆ 'ಮಗ್ಗದ ಸಾಹೇಬ' ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು. "ಅನಿಷ್ಟ ಮಗ್ಗದ ಹೆಸರೆತ್ತಬೇಡಿ" "ಮಗ್ಗವಲ್ಲ ಕೊರಳಿಗೆ ಹಗ್ಗ!" ಎಂಬುದು ಆತನ ನಿರಾಶೆ, ರೋಷಗಳ ಉದ್ಗಾರವಾಗಿತ್ತು.

ಏಕೆಂದರೆ ಅವನ ಅಜ್ಜನ ಕಾಲದಲ್ಲಿ ಬ್ರಿಟಿಷರು ಅಗ್ಗದ ವಿಲಾಯತೀ ಮಿಲ್ಲಿನ ಬಟ್ಟೆಗಳನ್ನು ನಮ್ಮ ದೇಶದಲ್ಲಿ ಹೇರಿಬಿಟ್ಟರು. ಅವೇನೋ ನಿಜಕ್ಕೂ ನಿಕೃಷ್ಟ ವಸ್ತುಗಳು, ಒಂದು ವರ್ಷದೊಳಗೇ ಕಳೇಬರಗಳಾಗಿ ಹರಕು ಚಿಂದಿಯಾಗುವುವು. ಬಣ್ಣವೋ ಒಂದೇ ತಿಂಗಳಲ್ಲಿ ವಿವರ್ಣವಾಗಿ ಎರಡೇ ತಿಂಗಳಲ್ಲಿ ಮಾಯವಾಗುವುದು. ಆದರೇನು? ಬಹು ಅಗ್ಗ. ಜನರಿಗೆ ಬೇಕಾದುದು ಅಗ್ಗದ ವಸ್ತು. ಗುಣವನ್ನು ಯಾರು ಕೇಳುತ್ತಾರೆ? ಅಗ್ಗದ ಮಾಲಿನದೇ ಆಧಿಪತ್ಯವಾಯಿತು. ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು.

ಪಾಪ! ಅಬ್ದುಲ್ ರಹೀಮನ ಗತಿ? ಹಿರಿಯರು ಕಟ್ಟಿದ ಭವ್ಯವಾದ ಹಳೆಯ ಕಾಲದ ಮನೆ. ವಿಶಾಲವಾದ ತೋಟ. ಆದರೆ ಮಗ್ಗಗಳೆಲ್ಲಾ ಧೂಳು ತುಂಬಿ ಜೇಡನ ಬಲೆಗಳಿಂದ ಆಚ್ಛಾದಿತವಾಗಿವೆ. ಮನೆಯಲ್ಲಿ ಊಟಕ್ಕೆ ಇದೆಯೋ ಇಲ್ಲವೋ ಎಂಬಂತಾಗಿದೆ.



ಈಗ ಅವನಿಗೆ ಒಂದೇ ಹಠ, ಒಂದೇ ವ್ರತ. ಅವನ ಮೂವರು ಗಂಡುಮಕ್ಕಳಿಗೆ ಒಂದಿಷ್ಟಾದರೂ ವಿದ್ಯಾಭ್ಯಾಸ ಕೊಡಿಸಿ ಸರಕಾರಿ ನೌಕರರನ್ನಾಗಿ ಮಾಡಬೇಕು ಎಂದು. ಅಂತೆಯೇ ಇಬ್ಬರು ಮಕ್ಕಳು ವಿಧೇಯರಾಗಿ ಅವನ ಅಭೀಷ್ಟವನ್ನು ನೆರವೇರಿಸಿದರು. ಒಬ್ಬ ಸರಕಾರಿ ಕಚೇರಿಯಲ್ಲಿ ಗುಮಾಸ್ತನಾದ. ಇನ್ನೊಬ್ಬ ಪೋಸ್ಟ್ ಮಾಸ್ತರನಾದ. ಆದರೆ ಕೊನೆಯ ಮಗ ಕರೀಮ್‌ನಿಂದ ಬಹಳ ನಿರಾಸೆ ಉಂಟಾಯಿತು. ಕರೀಮ್ ಆಟದಲ್ಲೂ ಪಾಠದಲ್ಲೂ ಬಹು ಚುರುಕು; ಬುದ್ಧಿವಂತ; ಹಸನ್ಮುಖಿ ಎಲ್ಲರಿಗೂ ಬೇಕಾದವನು. ಆದರೆ ಏನೋ ಕಾರಣದಿಂದ ಅವನಿಗೆ ಅನಿಷ್ಟ ಮಗ್ಗದಲ್ಲಿ ಬಹಳ ಅಭಿರುಚಿ, ಮನೆಯಲ್ಲಾದರೋ ಮಗ್ಗವನ್ನು ಮುಟ್ಟಲೂ ತಂದೆ ಬಿಡುತ್ತಿರಲ್ಲಿಲ್ಲ. ಆದರೆ ಮಗನ ಗ್ರಹಚಾರ ಎನ್ನಿ, ಶಾಲೆಯಲ್ಲಿಯೇ ಮಗ್ಗ ಉದ್ಭವಿಸಬೇಕೇ?

ಮಹಾತ್ಮಾ ಗಾಂಧಿ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ ‘ನವೀನ ಶಿಕ್ಷಣ’ ಆರಂಭವಾಯಿತು. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಲವು ತರಹದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು, ಅವರಲ್ಲಿ ಹಸ್ತಕೌಶಲವನ್ನು, ದೇಹಶ್ರಮದಲ್ಲಿ ಗೌರವ-ಭಾವವನ್ನು ಉಂಟು ಮಾಡುವುದು ಒಂದು ಭಾಗವಾಗಿತ್ತು. ಕೆಲವರಿಗೆ ಬಡಗಿಯ ಕೆಲಸ, ಕೆಲವರಿಗೆ ಬೆತ್ತದ ಕುರ್ಚಿ ಕೆಲಸ ಇತ್ಯಾದಿ ಸಾಮಗ್ರಿಗಳನ್ನು ಮಾಡುವ, ಕೆಲವರಿಗೆ ಕೃಷಿ, ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸತೊಡಗಿದ್ದರು.

ಹುಡುಗ ಕರೀಮ್ ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತು ಬಹು ನಿಪುಣನಾಗಿಬಿಟ್ಟ. ಅವನ ತಂದೆಗೆ ರೋಷ ಉಕ್ಕಿಬಂತು. ಮುಖ್ಯೋಪಾಧ್ಯಾಯ ಶಂಕರಪ್ಪ ಅವರೊಡನೆ ನಿಷ್ಠುರವಾಗಿ ಜಗಳವಾಡಿದ್ದನು. ಆದರೆ ಹುಡುಗ ಕರೀಮ್ ಶಾಲೆಯ ಮಗ್ಗದಲ್ಲಿ ಒಂದು ಪರಿವರ್ತನೆಯನ್ನು ತನ್ನದೇ ಬುದ್ಧಿವಂತಿಕೆ ಹಾಗೂ ಕೌಶಲದಿಂದ ಮಾಡಿಬಿಟ್ಟಿದ್ದ. ಅದನ್ನು ಶಂಕರಪ್ಪ ಅವರು ಸ್ವಾಭಾವಿಕವಾಗಿಯೇ ಪ್ರಶಂಸೆ ಮಾಡಿ ಮೇಲಧಿಕಾರಿಗಳಿಗೆ ವರದಿ ಮಾಡಿದ್ದರು. ಅದರ ಫಲಸ್ವರೂಪವಾಗಿ ಸರಕಾರದಿಂದ ಹುಡುಗ ಕರೀಮ್‌ನಿಗೆ ಒಂದು ಬೆಳ್ಳಿಯ ಪದಕವೂ ಒಂದು ನೂರು ರೂಪಾಯಿಯ ಬಹುಮಾನವೂ ಬಂದುಬಿಟ್ಟವು.

ಹುಡುಗನ ಉತ್ಸಾಹ ಆಕಾಶಕ್ಕೇರಿತು. ತಂದೆ ಈ ಹಠಮಾರಿಗೆ ಮಗ್ಗದ ಹುಚ್ಚನ್ನು ಬಿಡಿಸಬೇಕೆಂದು ಶಾಲೆಯಿಂದಲೇ ಬಿಡಿಸಿಬಿಟ್ಟನು. ಹೆಡ್‌ಮಾಸ್ಟರ್ ಶಂಕರಪ್ಪ ಅವರ ಎಷ್ಟೋ ಅನುನಯ ವಿನಯಗಳನ್ನು ಗಣಿಸದೆ ನಿರಾಕರಿಸಿದನು.

ಒಂದು ದಿನ ಶಾಲೆಯ ವಾರ್ಷಿಕೋತ್ಸವ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ಒಂದು ನಾಟಕವಿತ್ತು. ಅದರಲ್ಲಿ ಕರೀಮನದು ಸ್ತ್ರೀಪಾತ್ರ. ಅದಕ್ಕೆಂದು ತಾಯಿಯಿಂದ ಗೌಪ್ಯವಾಗಿ ಹಳೆಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡ. ನಾಟಕ ಮುಗಿದ ನಂತರ ಮನೆಗೆ ಬರಲಿಲ್ಲ. ಎಲ್ಲೋ ಮಾಯವಾಗಿ ಹೋದ.

ತಂದೆಗೆ ಮೈಯಲ್ಲಿ ಅಗ್ನಿಸಂಚಾರವಾಯಿತು. ಮಗನನ್ನು ಕ್ರೂರವಾಗಿ ಶಪಿಸಿದನು. “ಹಾಳಾಗಿ ಹೋಗಲಿ! ಹಠಮಾರಿ. ತಂದೆಯ ಮಾತನ್ನು ಉಲ್ಲಂಘಿಸಿದವನು ಎಂದು ಮಾತ್ರ ತಿಳಿದಿದ್ದೆ. ಈಗ ಕಳ್ಳನೆಂದೂ ತಿಳಿಯಿತು. ನನಗೆ ಇಬ್ಬರೇ ಗಂಡು ಮಕ್ಕಳು; ಕಳ್ಳನಾದವನು, ಮನೆಬಿಟ್ಟು ಓಡಿಹೋದವನು ಮಗನೇ ಅಲ್ಲ” ಎಂದು ಆಣೆ ಹಾಕಿದನು.

ಕೆಲವು ವರ್ಷಗಳ ಅನಂತರ ಕರೀಮ್- ಈಗ ಬೆಳೆದು ಯುವಕನಾಗಿದ್ದಾನೆ- ಮನೆಗೆ ಬಂದು ಬಾಗಿಲು ತಟ್ಟಿದ. ತಂದೆ ಬಾಗಿಲು ತೆರೆದು ಮುಖ ನೋಡಿ ಫಟಾರನೆ ಬಾಗಿಲು ಮುಚ್ಚಿದ. ಒಂದು ಘಂಟೆ ಬಾಗಿಲು ತಟ್ಟಿದರೂ ತಾಯಿ ಅತ್ತು ಹಂಬಲಿಸಿದರೂ ಬಾಗಿಲು ತೆರೆಯಲೇ ಇಲ್ಲ.

ಕೊನೆಗೆ ನಿವೃತ್ತರಾಗಿರುವ ಶಂಕರಪ್ಪ ಅವರ ಮನೆಗೆ ಹೋಗಿ, ಸಂಧಾನ ಮಾಡಿಸಿರಿ ಎಂದು ನಿವೇದಿಸಿದ. ‘ನನ್ನ ಮುಖವನ್ನೇ ನೋಡಬಾರದು ಎಂದು ಹಠವಿದ್ದರೆ ಕೊನೆಗೆ ತಾಯಿಯಾದರೂ ನನ್ನನ್ನು ಕಾಣಬಾರದೆ? ಅಮ್ಮನ ಚಿನ್ನದ ಸರವನ್ನು ತಂದಿದ್ದೇನೆ. ಅದರೊಡನೆ ಹತ್ತುಸಾವಿರ ರೂಪಾಯಿಗಳನ್ನು ತಂದಿದ್ದೇನೆ. ಅವನ್ನಾದರೂ ತಾಯಿಯ ಕಾಲ ಮೇಲೆ ಹಾಕಿ ಹೋಗುತ್ತೇನೆ. ತಂದೆಯವರಿಗೆ ಸಮಾಧಾನ ಹೇಳಿ. ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ’ ಎಂದ.



ಶಂಕರಪ್ಪ ಅವರು ಮುದುಕನೊಡನೆ ಒಂದು ಗಂಟೆ ಗೋಗರೆದರು, ನಿವೇದಿಸಿದರು, ತರ್ಕಿಸಿದರು, ಚರ್ಚಿಸಿದರು. ಆದರೆ ನಿಷ್ಫಲವಾಯಿತು. ಒಂದು ಪದವನ್ನೂ ಕೇಳುವ ತಾಳ್ಮೆ ಮುದುಕನಿಗೆ ಇರಲಿಲ್ಲ. ‘ಸಾಹೇಬ್ ಬಹಾದ್ದೂರ್ ಹುಸೇನ್ ಸಾಹೇಬರ ಕೀರ್ತಿಗೆ ಮಸಿಹಚ್ಚಿದ್ದಾನೆ. ಈ ಮಾತಿನಲ್ಲಿ ನೀವು ಅಡ್ಡಬಾಯಿ ಹಾಕಬೇಡಿ. ನೀವು ಕಲಿಸಿದ ಪಾಠದಿಂದಲೇ ಈ ಹಠಮಾರಿ ನಮ್ಮ ವಂಶದ ಕೀರ್ತಿಯನ್ನು ಮಣ್ಣುಪಾಲು ಮಾಡಿದ. ಹಣ ತಂದಿದ್ದಾನಂತೆ. ಕಳವಿನ ಹಣವೋ ದರೋಡೆಯ ಹಣವೋ?’ ಎಂದು ಸಿಡುಕಿದ. ಶಂಕರಪ್ಪ ಅವರು ಮುಖಬಾಡಿಸಿಕೊಂಡು ಹಿಂತೆರಳಿದರು.

ಕರೀಮ್‌ನ ಹಣ ಕಳವಿನದೂ ಅಲ್ಲ. ದರೋಡೆಯದೂ ಅಲ್ಲ. ಸಣ್ಣಪ್ರಾಯದಲ್ಲೇ ಮಗ್ಗದ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಅವನೀಗ ಅದರ ಅಧ್ಯಕ್ಷನಾಗಿದ್ದಾನೆ. ಸಾಕಷ್ಟು ಯಶಸ್ವಿಯೂ ಧನವಂತನೂ ಆಗಿದ್ದಾನೆ. ಅದೂ ಅಲ್ಲದೆ ಮಗ್ಗದ ಯಂತ್ರದ ಪ್ರಯೋಗದಲ್ಲಿ ಹೊಸ ಹೊಸ ಸುಧಾರಣೆಗಳನ್ನೂ ಪರಿವರ್ತನೆಗಳನ್ನೂ ತಂದು ಹೆಸರು ಮಾಡಿದ್ದಾನೆ. ಆದರೆ ಈ ವಿಷಯದ ಲವಲೇಶವೂ ತಂದೆಗೆ ತಿಳಿಯದು. ಏಕೆಂದರೆ ಆತ ಕರೀಮ್‌ನ ಕಡೆಗೆ ತನ್ನ ಹೃದಯವನ್ನು, ಮನೆಯ ಬಾಗಿಲು ಮುಚ್ಚಿದಂತೆ ಸಂಪೂರ್ಣವಾಗಿ ಮುಚ್ಚಿಬಿಟ್ಟಿದ್ದಾನೆ. ಯಾರಾದರೂ ಕರೀಮ್‌ನ ಹೆಸರೆತ್ತಿದರೆ 'ನನಗೆ ಎರಡೇ ಮಕ್ಕಳು, ಕಳ್ಳರ ಪರಿಚಯ ನನಗಿಲ್ಲ' ಎಂದೇ ಅವನ ನಿಷ್ಠುರದ ಉತ್ತರ.

ಕೆಲವು ವರ್ಷಗಳ ಅನಂತರ ಅಬ್ದುಲ್ ರಹೀಮ್ ಹಾಸಿಗೆಯಲ್ಲಿ ಒರಗಿದ್ದಾನೆ. ಅನಾರೋಗ್ಯದಿಂದ ನರಳುತ್ತಾ ಇದ್ದಾನೆ. ಎಲುಬಿನ ಹಂದರವಾಗಿದ್ದಾನೆ. ಕಣ್ಣೂ ಸರಿಯಾಗಿ ಕಾಣಿಸುತ್ತಿಲ್ಲ; ಕಿವಿಯೂ ಸರಿಯಾಗಿ ಕೇಳುತ್ತಿಲ್ಲ. ಶಂಕರಪ್ಪ ಅವರು ಬಾಗಿಲು ತಟ್ಟಿದರು. ಒಳಗೆ ಬಂದರು. ಕೈಯಲ್ಲಿ ಒಂದು ವಾರ್ತಾಪತ್ರಿಕೆ. 'ರಹೀಮ್ ಸಾಹೇಬರೇ, ಈ ಪತ್ರಿಕೆ ನೋಡಿದಿರಾ? ಈ ಭಾವಚಿತ್ರ ನೋಡಿ?' ಮುದುಕ ಕಣ್ಣಿನ ಹತ್ತಿರ ತಂದ. ಆದರೆ ಪಾಪ! ಕಣ್ಣು ಮಂಜಾಗಿವೆ. ಏನೂ ತೋರದು. ಅವನ ಹೆಂಡತಿ ಬಂದು ವಾರ್ತಾಪತ್ರಿಕೆ ತೆಗೆದುಕೊಂಡು ಹೋದಳು.

“ಕರೀಮ್! ನಮ್ಮ ಕರೀಮ್! ನಮ್ಮ ಕರೀಮ್” ಎಂದು ಗಟ್ಟಿಯಾಗಿ ಉದ್ಗರಿಸಿದಳು.

“ಏನು ಜೇಲಿಗೆ ಹೋದನೇ? ಫಾಶೀ ಆಯಿತೇ? ಇನ್ನೂ ಮನೆತನದ ಮೇಲೆ ಏನು ಅಪಕೀರ್ತಿ ಹೇರಿದ್ದಾನೆ?” ಎಂದು ಮುದುಕ ಕೆಮ್ಮುತ್ತ ಕೆಮ್ಮುತ್ತ ಗರ್ಜಿಸಿದ.

“ರಹೀಮ್ ಸಾಹೇಬರೇ, ನಿಮ್ಮ ಮಗ ಕರೀಮ್‌ನಿಗೆ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಟ್ಟಿದ್ದಾರೆ. ಅದರ ಭಾವಚಿತ್ರ ಈ ವಾರ್ತಾಪತ್ರಿಕೆಯಲ್ಲಿದೆ.”

“ಆಂ! ಪದ್ಮಭೂಷಣ! ಅಂದರೇನು?”

“ಪದ್ಮಭೂಷಣ ಅಂದರೆ ಸಾಹೇಬ್ ಬಹಾದ್ದೂರಿಗಿಂತಲೂ ಮೇಲಿನ ಬಿರುದು. ಖಾನ್ ಸಾಹೇಬ್, ಖಾನ್ ಬಹಾದ್ದೂರ್, ದಿವಾನ್ ಬಹಾದ್ದೂರ್ ಇವೆಲ್ಲದರಿಂದಲೂ ಮೇಲೆ, ದೊಡ್ಡ ಬಿರುದು!”

“ಕರೀಮ್! ನನ್ನ ಕರೀಮ್! ಸಾಹೇಬ್ ಬಹಾದ್ದೂರ್ ಗಿಂತಲೂ ಮೇಲಾದನೇ? ದೇವರು ದೊಡ್ಡವನು. ದೇವರು ದಯಾಳು. ನನ್ನ ಬಾಯಿಯಿಂದ ಬಿದ್ದ ಕೆಟ್ಟ ಮಾತನ್ನು ದೇವರು ಕಿವಿಗೆ ಹಾಕಿಕೊಳ್ಳಲಿಲ್ಲ. ನನ್ನ ಕರೀಮ್ ಮಗ್ಗದ ಹುಸೇನ್ ಸಾಹೇಬರ ಹೆಸರಿಗೆ ಕೀರ್ತಿ ತಂದ” ಎಂದು ಕೆಮ್ಮುತ್ತ ಕೆಮ್ಮುತ್ತ ಬಿಕ್ಕಿಬಿಕ್ಕಿ ಅಳತೊಡಗಿದ ಭಾವುಕನಾಗಿ.

ಕೃತಿಕಾರರ ಪರಿಚಯ



ಬಾಗಲೋಡಿ ದೇವರಾಯ ಅವರು (1927) ದಕ್ಷಿಣ ಕನ್ನಡ ಜಿಲ್ಲೆಯ ಬಾಗಲೋಡಿಯವರು. ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಆ ಕಾಲಕ್ಕೆ ಐ. ಎ. ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವಿದೇಶಿ ಸೇವೆಗೆ ಆಯ್ಕೆಯಾದರು. ಮಾಸ್ತಿ ಹಾಗೂ ಇವರೂ ಸಮಕಾಲೀನರು. ಅದಲ್ಲದೆ ಸಣ್ಣಕತೆಗಳನ್ನು ಬರೆದವರು. ಅವರು ರಾಯಭಾರಿಯಾಗಿ ಇಟಲಿ, ನೇಪಾಳ, ನೈಜೀರಿಯಾ, ಫಿಲಿಫೈನ್ಸ್, ನ್ಯೂಜಿಲ್ಯಾಂಡ್, ಬಲ್ಗೇರಿಯಾ ಮೊದಲಾದ ದೇಶಗಳಲ್ಲಿ ಕಾರ್ಯನಿರ್ವಹಿಸಿದರು. ಅವರ ಕಥಾಸಂಗ್ರಹಗಳೆಂದರೆ ಹುಚ್ಚು ಮುನಸೀಫ ಮತ್ತು ಇತರ ಕತೆಗಳು, ಆರಾಧನಾ, ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು. ಬಾಗಲೋಡಿ ದೇವರಾಯ ಅವರು ಒಟ್ಟು 26 ಕತೆಗಳನ್ನು ಬರೆದಿದ್ದಾರೆ. ಇವರು 1985 ರಲ್ಲಿ ನಿಧನರಾದರು.

ಆಶಯ ಭಾವ

ಪ್ರಕೃತ ಗದ್ಯಭಾಗ ಧಾರ್ಮಿಕ ಸಹಿಷ್ಣುತೆ, ಗುಡಿಕೈಗಾರಿಕೆಗಳ ವಿನಾಶಕ್ಕೆ ಕಾರಣವಾದ ಅಂಶ, ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣ, ಮಕ್ಕಳ ಆಸಕ್ತಿಗೆ ಪೂರಕವಾದ ಶಿಕ್ಷಣ ನೀಡುವುದು, ಸ್ವಯಂ ಉದ್ಯೋಗಕ್ಕೆ ಪ್ರೇರಣೆ ಮೊದಲಾದ ಮಹತ್ವದ ಅಂಶಗಳನ್ನು ಒಳಗೊಂಡಿದೆ. ತಂದೆ ಮಗನಿಗಿದ್ದ ಮಗ್ಗದ ಬಗೆಗಿನ ಒಲವಿಗೆ ವಿರೋಧ ವ್ಯಕ್ತಪಡಿಸಿದರು. ಇದರಿಂದ ಮನನೊಂದ ಮಗ ತನ್ನ ಮಾರ್ಗವನ್ನು ಸ್ವತಂತ್ರವಾಗಿ ಕಂಡುಕೊಂಡ ಆಶಯವನ್ನು ಹೊಂದಿದೆ ಈ ಪಠ್ಯಭಾಗ.

ಪ್ರಕೃತ ಮಗ್ಗದ ಸಾಹೇಬ ಕಥೆಯನ್ನು ಬಾಗಲೋಡಿ ದೇವರಾಯ ಅವರ ಸಮಗ್ರ ಕತೆಗಳು ಎಂಬ ಕಥಾಸಂಕಲನದಿಂದ (ಪುಟ 185-189) ಆಯ್ದು ಕಥೆಯನ್ನು ಸಂಪಾದಿಸಿ ನಿಗದಿಪಡಿಸಿದೆ.

ಪದಗಳ ಅರ್ಥ

ಅಭೀಷ್ಟ- ಬಯಸಿದ್ದು; ಆಚ್ಛಾದಿತ- ಮುಚ್ಚಲ್ಪಟ್ಟ; ಆಧಿಪತ್ಯ- ಯಜಮಾನಿಕೆ; ಕಳೇಬರ- ಮೃತ ದೇಹ/ ಶರೀರ; ಗಣಿಸದೆ- ಲೆಕ್ಕಿಸದೆ; ಗೌಪ್ಯ- ಗುಟ್ಟು, ರಹಸ್ಯ; ಚಿಂದಿ- ಚೂರು; ಪರಿವರ್ತನೆ-ಬದಲಾವಣೆ; ಪ್ರಶಂಸೆ- ಹೊಗಳಿಕೆ; ಭಿಕಾರಿ- ನಿರ್ಗತಿಕ; ವಿಲಾಯತಿ- ವಿದೇಶ, ಅನ್ಯದೇಶ; ಹಸನ್ಮುಖಿ- ನಗುಮುಖ ಉಳ್ಳವನು.

ಪಠ್ಯಾಧಾರ ಟಿಪ್ಪಣಿ

ಸಾಹೇಬ್ ಬಹಾದ್ದೂರ್: ಮೊಗಲ್ ರಾಜರ ಆಳ್ವಿಕೆಯ ಸಂದರ್ಭದಲ್ಲಿ ಸಮಾಜದ ಗಣ್ಯ ವ್ಯಕ್ತಿಗಳಿಗೆ ಕೊಡುತ್ತಿದ್ದ ಗೌರವಪೂರ್ವಕ ಬಿರುದು.

ಉರುಸ್: ಮಹಮದೀಯ ಸಾಧುಗಳ ಪುಣ್ಯತಿಥಿ ಮತ್ತು ಅಂದು ನಡೆಸುವ ಜಾತ್ರೆ.

ಪದ್ಮಭೂಷಣ: ಕಲೆ, ವಿಜ್ಞಾನ, ಸಮಾಜಸೇವೆ, ಕ್ರೀಡೆ ಮುಂತಾದ ಯಾವುದಾದರೂ ಕ್ಷೇತ್ರದಲ್ಲಿ ವಿಶೇಷ ಸಾಧನೆಯನ್ನು ಮಾಡಿದ ಸಾಧಕರಿಗೆ ಭಾರತ ಸರ್ಕಾರ ನೀಡುವ ಮೌಲಿಕ ಪ್ರಶಸ್ತಿ.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ

1. ರಹೀಮ ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?
2. ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿದ್ದ ಹಕ್ಕು ಯಾವುದು?
3. ಅಬ್ದುಲ್ ರಹೀಮನ ಹಠವೇನು?
4. ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದ ಬಗೆ ಹೇಗೆ?
5. ರಹೀಮ ಮಗನನ್ನು ಶಾಲೆಯಿಂದ ಬಿಡಿಸಿದ್ದೇಕೆ?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಹುಸೇನ್ ಸಾಹೇಬರ ವ್ಯಕ್ತಿತ್ವವನ್ನು ವಿವರಿಸಿ.
2. ಲೇಖಕರ ಹುಟ್ಟೂರಿನಲ್ಲಿದ್ದ ಮುಸ್ಲಿಂ ಧಾರ್ಮಿಕ ಉತ್ಸವದ ಸಂಪ್ರದಾಯವೇನು?
3. ಮಿಠಾಯಿ ಕೊಟ್ಟಿದ್ದಕ್ಕೆ ಅತಿಥಿಗಳ ಆಕ್ಷೇಪವೇನು?
4. ಕರೀಮನಿಗೆ ಶಾಲೆಯಲ್ಲಿ ಮಗ್ಗ ಕಲಿತುದರಿಂದ ಆದ ಪ್ರಯೋಜನವೇನು?
5. ಶಾಲಾ ವಾರ್ಷಿಕೋತ್ಸವದಂದು ಕರೀಮ ಮಾಡಿದ ಕೆಲಸವೇನು?

III. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ.

1. ನವೀನ ಶಿಕ್ಷಣದ ವೈಶಿಷ್ಟ್ಯಗಳೇನು?
2. ಶಂಕರಪ್ಪ ಅವರು ರಹೀಮನ ಬಳಿಗೆ ಸಂಧಾನಕ್ಕಾಗಿ ಬಂದ ಪ್ರಸಂಗವನ್ನು ತಿಳಿಸಿ.

IV. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. ಕರೀಮ ಧನವಂತನಾದ ಬಗೆ ಹೇಗೆ? ವಿವರಿಸಿ.
2. ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಗಲು ಕಾರಣವೇನು?

V. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಮಗ್ಗವಲ್ಲ ಕೊರಳಿಗೆ ಹಗ್ಗ!"
2. "ಕಳ್ಳನಾದವನು, ಮನೆ ಬಿಟ್ಟು ಓಡಿ ಹೋದವನು ಮಗನೇ ಅಲ್ಲ"
3. "ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ"
4. "ದೇವರು ದೊಡ್ಡವನು ದೇವರು ದಯಾಳು"

VI. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.

1. ಅಬ್ದುಲ್ ರಹೀಮನಿಗೆ _______ ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು.
2. ಮನೆಯಲ್ಲಿ ______ ಇದೆಯೋ ಇಲ್ಲವೋ ಎಂಬಂತಾಗಿದೆ.
3. ಹುಡುಗನ _______ ಆಕಾಶಕ್ಕೇರಿತು.
4. ಶಂಕರಪ್ಪ ಅವರು _______ ಹಿಂತೆರಳಿದರು.
5. ನನಗೆ ಎರಡೇ ಮಕ್ಕಳು _______ ಪರಿಚಯ ನನಗಿಲ್ಲ.

ಸೈದ್ಧಾಂತಿಕ ಭಾಷಾಭ್ಯಾಸ

ವ್ಯಾಕರಣ ಪರಿಚಯಾತ್ಮಕ ಸ್ಥೂಲ ವಿವರ:

ಮಾನವ ಮನಸ್ಸಿನ ಭಾವನೆಗಳನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತಾನೆ. ಆಡಿದ, ಆಡಬೇಕಾದ ಮಾತುಗಳನ್ನು ನಿರ್ದಿಷ್ಟ ಲಿಪಿಯ (ಲಿಖಿತ) ರೂಪಕ್ಕಿಳಿಸುವುದೇ ಬರೆವಣಿಗೆ. ಪದ ಮತ್ತು ಪದಗಳ ಸಂಬಂಧವನ್ನು ಖಚಿತವಾಗಿ ತಿಳಿಸುವುದೇ ವ್ಯಾಕರಣಶಾಸ್ತ್ರ. ಆದ್ದರಿಂದ ಭಾಷೆಯನ್ನು ಕಲಿಯುವವರು ಆ ಭಾಷೆಯ ವ್ಯಾಕರಣವನ್ನು ಅರಿಯುವುದು ಉತ್ತಮ. ಕ್ರಿಯಾತ್ಮಕ ವ್ಯಾಕರಣದ ಕಲಿಕೆಯಿಂದ ಭಾಷೆಯನ್ನು ಸ್ಪಷ್ಟ ಹಾಗೂ ನಿಖರವಾಗಿ ಬಳಸಲು ಸಾಧ್ಯ.

ವರ್ಣಮಾಲೆ

ನಾನು ಶಾಲೆಗೆ ಹೋಗಿ ಬಂದೆನು ಈ ವಾಕ್ಯದಲ್ಲಿ ನಾನು, ಶಾಲೆಗೆ, ಹೋಗಿ, ಬಂದೆನು ನಾಲ್ಕು ಅರ್ಥಪೂರ್ಣ ಪದಗಳಿವೆ. ಒಂದೊಂದು ಪದದಲ್ಲಿಯೂ ಬೇರೆ ಬೇರೆ ಅಕ್ಷರಗಳಿವೆ. ಉದಾ: ನಾನು ಪದದಲ್ಲಿ ನ್ ಆ ನ್ ಉ ಎಂಬ ನಾಲ್ಕು ಅಕ್ಷರಗಳಿವೆ. ಬಂದೆನು ಪದದಲ್ಲಿ ಬ್ ಅಂ ದ್ ಎ ನ್ ಉ ಎಂಬ ಏಳು ಅಕ್ಷರಗಳಿವೆ. ಈ ಎರಡು ಪದಗಳಲ್ಲಿರುವ ನ್ ನ್ ಬ್ ದ್ ವ್ ಎಂಬ ಅಕ್ಷರಗಳನ್ನು ಉಚ್ಚರಿಸುವಾಗ ಧ್ವನ್ಯಂಗದ ಅಡೆತಡೆಯೊಂದಿಗೆ ಉಚ್ಚರಿಸಬೇಕಾಗುತ್ತದೆ. ಇವೇ ವ್ಯಂಜನಾಕ್ಷರಗಳು. ಆ ಅಕ್ಷರಗಳ ಹಿಂದೆ ಅಥವಾ ಮುಂದೆ ಆ ಉ ಎ ಮುಂತಾದವು ಧ್ವನ್ಯಂಗದ ಅಡೆತಡೆ ಇಲ್ಲದೆ ಉಚ್ಚರಿಸಬಹುದಾದ ಅಕ್ಷರಗಳಿವೆ. ಇವೇ ಸ್ವರಾಕ್ಷರಗಳು. ಇವು ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು. ಹಾಗೆಯೇ ಬಂದೆನು ಎಂಬ ಪದದಲ್ಲಿರುವ ಂ ಎಂಬ ಅಕ್ಷರವನ್ನು ಉಚ್ಚರಿಸಲು ಆಗುವುದಿಲ್ಲ. ಇದರ ಹಿಂದೆ ಸ್ವರಾಕ್ಷರಗಳು ಬಂದಾಗ ಮಾತ್ರ ಉಚ್ಚರಿಸಬಹುದು. ಇದೇ ಯೋಗವಾಹ. ಕನ್ನಡ ವರ್ಣಮಾಲೆಯನ್ನು ಪ್ರಧಾನವಾಗಿ ಸ್ವರ, ವ್ಯಂಜನ ಮತ್ತು ಯೋಗವಾಹ ಎಂಬ ಮೂರು ವಿಭಾಗ ಮಾಡಲಾಗಿದೆ.

ಸ್ವರಗಳು

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಇವು ಹದಿಮೂರು ಸ್ವರಾಕ್ಷರಗಳು. ಇವುಗಳಲ್ಲಿ ಅ ಇ ಉ ಋ ಎ ಒ ಎಂಬ ಆರು ಅಕ್ಷರಗಳು ಒಂದೊಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವಂತಹ ಅಕ್ಷರಗಳು. ಹಾಗಾಗಿ ಇವು ಹ್ರಸ್ವಸ್ವರಗಳು. ಆ ಈ ಊ ಏ ಐ ಓ ಔ ಎಂಬ ಏಳು ಅಕ್ಷರಗಳು ಎರಡೆರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವಂತಹ ಅಕ್ಷರಗಳು. ಹಾಗಾಗಿ ಇವು ದೀರ್ಘಸ್ವರಗಳು. ಈ ದೀರ್ಘಸ್ವರಗಳು ಕೆಲವೊಮ್ಮೆ ಮೂರು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುತ್ತವೆ. ಉದಾ: ಅಣ್ಣಾ3 ಇಲ್ಲಿ ಬಾ. ಮಕ್ಕಳೇ3 ಇಲ್ಲಿ ಬನ್ನಿ -ಇಲ್ಲಿ (3) ಎಂದು ಗುರುತಿಸಲ್ಪಟ್ಟ ಆ3, ಏ3 ಅಕ್ಷರಗಳು ಮೂರು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಟ್ಟಿವೆ. ಹೀಗೆ ಮೂರು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳೇ ಪ್ಲುತ ಸ್ವರಗಳು.

ವ್ಯಂಜನಗಳು

ವರ್ಗೀಯ ವ್ಯಂಜನಗಳು

1	2	3	4	5 ವರ್ಗವಿವರ
ಕ್	ಖ್	ಗ್	ಘ್	ಙ್ 5 ಕ ವರ್ಗ

ಚ್	ಛ್	ಜ್	ಝ್	ಞ್ 5 ಚ ವರ್ಗ
ಟ್	ಠ್	ಡ್	ಢ್	ಣ್ 5 ಟ ವರ್ಗ
ತ್	ಥ್	ದ್	ಧ್	ನ್ 5 ತ ವರ್ಗ
ಪ್	ಫ್	ಬ್	ಭ್	ಮ್ – 5 ಪ ವರ್ಗ

ಅವರ್ಗೀಯ ವ್ಯಂಜನಗಳು

ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ = 9 **ಅವರ್ಗೀಯ ವ್ಯಂಜನಗಳು**

ಕೊಟ್ಟಿರುವ ಕ್ ದಿಂದ ಮ್ ವರೆಗಿನ 25 ಅಕ್ಷರಗಳನ್ನು ಉಚ್ಚರಿಸುವಾಗ ಅವು ಹುಟ್ಟುವ ಸ್ಥಳವನ್ನು ಆಧರಿಸಿ ಅವನ್ನು 5 ವರ್ಗಗಳಾಗಿ ವಿಂಗಡಿಸಲಾಗಿದೆ. ಅವೇ ವರ್ಗೀಯ ವ್ಯಂಜನಗಳು. ಅವು ಇಂತಿವೆ:

1. **ಕವರ್ಗದ ಅಕ್ಷರಗಳು ಕಂಠಭಾಗದಲ್ಲಿ ಹುಟ್ಟುವುದರಿಂದ ಅವು ಕಂಠ್ಯ ಅಕ್ಷರಗಳು.**
2. **ಚವರ್ಗದ ಅಕ್ಷರಗಳು ತಾಲುವಿನ (ದವಡೆಯ) ಸಹಾಯದಿಂದ ಹುಟ್ಟುವುದರಿಂದ ಅವು ತಾಲವ್ಯ ಅಕ್ಷರಗಳು.**
3. **ಟವರ್ಗದ ಅಕ್ಷರಗಳು ಮೂರ್ಧಭಾಗದಲ್ಲಿ ಅಂದರೆ ನಾಲಿಗೆಯನ್ನು ಹಿಂದೆ ಚಾಚಿ ಬಾಯಿಯ ಮೇಲ್ಭಾಗವನ್ನು ಸ್ಪರ್ಶಿಸಿದಾಗ ಉಚ್ಚಾರಗೊಳ್ಳುವುದರಿಂದ ಅವು ಮೂರ್ಧನ್ಯ ಅಕ್ಷರಗಳು.**
4. **ತವರ್ಗದ ಅಕ್ಷರಗಳು ಹಲ್ಲುಗಳ ಬಳಿ ಹುಟ್ಟುವುದರಿಂದ ಅವು ದಂತ್ಯ ಅಕ್ಷರಗಳು.**
5. **ಪವರ್ಗದ ಅಕ್ಷರಗಳು ತುಟಿಗಳ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಅವು ಓಷ್ಠ್ಯ ಅಕ್ಷರಗಳು.**

ಈ ವರ್ಗೀಯ ವ್ಯಂಜನಗಳನ್ನು ಅಲ್ಪಪ್ರಾಣ, ಮಹಾಪ್ರಾಣ ಮತ್ತು ಅನುನಾಸಿಕ ಅಕ್ಷರಗಳೆಂದು ವಿಭಾಗಿಸಲಾಗಿದೆ. ಪ್ರಾಣ ಎಂದರೆ ಉಸಿರು ಎಂದರ್ಥ. ಕಡಿಮೆ ಪ್ರಾಣದಿಂದ (ಉಸಿರಿನಿಂದ) ಉಚ್ಚರಿಸಲ್ಪಡುವ ಕ್ ಚ್ ಟ್ ತ್ ಪ್ ಗ್ ಜ್ ಡ್ ದ್ ಬ್ ಅಕ್ಷರಗಳು ಅಂದರೆ ಪ್ರತಿ ವರ್ಗದ ಒಂದು ಮತ್ತು ಮೂರನೆಯ ಅಕ್ಷರಗಳು ಅಲ್ಪಪ್ರಾಣ ಅಕ್ಷರಗಳು. ಹೆಚ್ಚು ಪ್ರಾಣದಿಂದ (ಉಸಿರು) ಉಚ್ಚರಿಸಲ್ಪಡುವ ಖ್ ಛ್ ಠ್ ಥ್ ಫ್ ಘ್ ಝ್ ಢ್ ಧ್ ಭ್ ಅಕ್ಷರಗಳು ಅಂದರೆ ಪ್ರತಿ ವರ್ಗದ ಎರಡು ಮತ್ತು ನಾಲ್ಕನೆಯ ಅಕ್ಷರಗಳು ಮಹಾಪ್ರಾಣ ಅಕ್ಷರಗಳು. ಮೂಗಿನ (ನಾಸಿಕದ) ಸಹಾಯದಿಂದ ಉಚ್ಚರಿಸಲ್ಪಡುವ ಙ್ ಞ್ ಣ್ ನ್ ಮ್ ಅಕ್ಷರಗಳು ಅಂದರೆ ವರ್ಗದ ಕೊನೆಯ ಅಕ್ಷರಗಳು ಅನುನಾಸಿಕ ಅಕ್ಷರಗಳು. ಉಳಿದ

ಒಂಬತ್ತು ಅಕ್ಷರಗಳು (ಯ್ ದಿಂದ ಳ್ ವರೆಗಿನ) ಬೇರೆ ಬೇರೆ ಸ್ಥಳಗಳಲ್ಲಿ ಹುಟ್ಟುವುದರಿಂದ ವರ್ಗಗಳಾಗಿ ವಿಂಗಡಿಸಲು ಸಾಧ್ಯವಿಲ್ಲ. ಹಾಗಾಗಿ ಅವು ಅವರ್ಗೀಯ ವ್ಯಂಜನಗಳು.

ಯೋಗವಾಹಗಳು

ಅನುಸ್ವಾರ (ಅಂ), ವಿಸರ್ಗ (**ಅಃ**)

ಯೋಗ ಎಂದರೆ ಕೂಡು, ವಾಹ ಎಂದರೆ ಹೋಗುವ ಎಂದರ್ಥ. ಯೋಗವಾಹ ಎಂದರೆ ಕೂಡಿಹೋಗುವ (ಕೂಡಿಕೊಂಡಿರುವ) ಅಂದರೆ ಬೇರೆ ಅಕ್ಷರಗಳ ಜೊತೆಯಲ್ಲಿ ಮಾತ್ರ ಉಚ್ಚರಿಸಬಹುದಾದ ಅಕ್ಷರ ಎಂದರ್ಥ.

ಯೋಗವಾಹಗಳು ಎರಡು

1. ಅಂ- ಅನುಸ್ವಾರ (ಒಂದು ಅಕ್ಷರಗಾತ್ರದ ಒಂದು ಸೊನ್ನೆ)

2. **ಅಃ** - ವಿಸರ್ಗ (ಎರಡು ಸಣ್ಣ ಸೊನ್ನೆಗಳು ಒಂದರ ಕೆಳಗೆ ಒಂದರಂತೆ ಒಂದು ಅಕ್ಷರಗಾತ್ರದಲ್ಲಿ)

ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಹೀಗೆ ಗುರುತಿಸಬಹುದು.

ವರ್ಣಮಾಲೆ- 49

1. ಸ್ವರ-13

ಹ್ರಸ್ವ- 6	**ದೀರ್ಘ-7**
ಅ	ಆ
ಇ	ಈ
ಉ	ಊ
ಋ	ಏ
ಎ	ಓ
ಒ	ಐ
	ಔ

2. ವ್ಯಂಜನ-34

ವರ್ಗೀಯ 25			ಅವರ್ಗೀಯ-9
ಅಲ್ಪಪ್ರಾಣ	ಮಹಾಪ್ರಾಣ	ಅನುನಾಸಿಕ	ಯ್
ಕ್	ಖ್	ಙ್	ರ್
ಚ್	ಛ್	ಞ್	ಲ್
ಟ್	ಠ್	ಣ್	ವ್
ತ್	ಥ್	ನ್	ಶ್
ಪ್	ಫ್	ಮ್	ಷ್
ಗ್	ಘ್		ಸ್
ಜ್	ಝ್		ಹ್
ಡ್	ಢ್		ಳ್
ದ್	ಧ್		ಯ್
ಬ್	ಭ್		

3. ಯೋಗವಾಹ- 2

ಅನುಸ್ವಾರ- 1	ವಿಸರ್ಗ -1

ಅಂ	**ಅಃ**

ಒಟ್ಟು ಅಕ್ಷರಗಳು 49

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ? ಅವುಗಳನ್ನು ಹೇಗೆ ವರ್ಗೀಕರಿಸುವಿರಿ? ವಿವರಿಸಿ.
2. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಹಾಗೂ ದೀರ್ಘ ಸ್ವರಗಳನ್ನು ಬರೆಯಿರಿ.
3. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳನ್ನು ಬರೆಯಿರಿ.
4. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ಅಕ್ಷರಗಳನ್ನು ತಿಳಿಸಿ.
5. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಗಳನ್ನು ಪಟ್ಟಿಮಾಡಿ.

II. **ಕೊಟ್ಟಿರುವ ಪದಗಳಲ್ಲಿರುವ ಸ್ವರಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ.**

ಅಬ್ದುಲ್, ಅವನು, ಇಪ್ಪತ್ತು, ಆದರೂ, ಅವನನ್ನು, ಇತ್ಯಾದಿ

ಇರಲಿ, ಏಕೆಂದರೆ, ಓಡಿಹೋದ, ಈಗ, ಏನೂ

III. ಕೊಟ್ಟಿರುವ ಪದಗಳಲ್ಲಿರುವ ಮಹಾಪ್ರಾಣಾಕ್ಷರಗಳನ್ನು ಬರೆಯಿರಿ.

ಧನವಂತ, ರಥ, ಘನತೆ, ಧರ್ಮ, ಮುಖ್ಯ

ಭಕ್ಷ್ಯ, ಹಠ, ಪಾಠ, ಹಸನ್ಮುಖ, ಫಲ

IV. ಕೊಟ್ಟಿರುವ ಪದಗಳಲ್ಲಿರುವ ಅವರ್ಗೀಯ ವ್ಯಂಜನಗಳನ್ನು ಬರೆಯಿರಿ.

ಅವನ, ಇಂತಹ, ಅದರ, ಒಳಗೆ, ಕುಶಲ

ಹಬ್ಬ, ಬಹಳ, ತಲ, ಸಮಯ, ಕಾಲ

ಪೂರಕ ಓದು:

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ನಮ್ಮ ಊರಿನ ರಸಿಕರು ಕೃತಿಯಲ್ಲಿ ಬರುವ ಶಾಲುಸಾಬಿಯ ವಿಚಾರವನ್ನು ಓದಿ ತಿಳಿಯಿರಿ.

3. 2. ನೀರು ಕೊಡದ ನಾಡಿನಲ್ಲಿ –ನೇಮಿಚಂದ್ರ

ಪ್ರವೇಶ:

ವಿಶ್ವವು ಜಾಗತೀಕರಣದ ಹೆಸರಿನಲ್ಲಿ ಪ್ರಕೃತಿಯಿಂದ ಮಾನವನಿಗೆ ಉಚಿತವಾಗಿ ಲಭ್ಯವಾಗಬಹುದಾದ ಗಾಳಿ, ಬೆಳಕು, ನೀರು ಮತ್ತು ಆಹಾರಗಳಂಥ ಅತ್ಯವಶ್ಯಕವಾದ ವಸ್ತುಗಳನ್ನು ಹಣಗಳಿಸುವ ಮಾರ್ಗವನ್ನಾಗಿ ಪರಿವರ್ತಿಸ ಹೊರಟಿರುವುದು ಆತಂಕಕಾರಿ ವಿಷಯವಾಗಿದೆ. ಭಾರತೀಯರಾದ ನಾವು ಮಾನವೀಯತೆಗೆ ಬೆಲೆಕೊಟ್ಟು "ಬಳಲಿ ಬಂದವರಿಗೆ ನೀರು, ಹಸಿದು ಬಂದವರಿಗೆ ಅನ್ನವನ್ನಿಕ್ಕಿ" ಮೌಲ್ಯಯುತ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿರುವುದು ವಿಶ್ವವೇ ಹೆಮ್ಮೆಪಡುವ ಸಂಗತಿಯಾಗಿದೆ. ಆದರೆ ವಿಶ್ವದ ಜಾಗತೀಕರಣದ ಹೊಡೆತಕ್ಕೆ ಸಿಲುಕಿದ ನಮ್ಮ ನಗರಗಳಿಂದು ಕೊಳ್ಳುಬಾಕತನವನ್ನು, ಲಾಭಕೋರತನವನ್ನು ಹುಟ್ಟುಹಾಕಿ ವಿಶ್ವದ ಮಾರುಕಟ್ಟೆಯಾಗಲು ಹೊರಟಿರುವುದು ಬಲು ಅಪಾಯಕಾರಿ ಎಂಬ ವೈಚಾರಿಕ ಚಿಂತನೆಯನ್ನು ಹಾಗೂ ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಕಾಪಾಡಿಕೊಳ್ಳುವ ಅನಿವಾರ್ಯತೆಯನ್ನು "ನೀರು ಕೊಡದ ನಾಡಿನಲ್ಲಿ" ಈ ಗದ್ಯಭಾಗದಲ್ಲಿ ಅತ್ಯುತ್ತಮವಾಗಿ ಚಿತ್ರಿಸಿದೆ.

ಭಾರತದಿಂದ ಹೊರಗೆ ಕಾಲಿಟ್ಟರೆ, ಉಳಿದೆಲ್ಲವೂ 'ನೀರು ಕೊಡದ ನಾಡುಗಳು' ಎಂಬುದು ನನ್ನ ಇಲ್ಲಿಯವರೆಗಿನ ಅನುಭವ. ಎರಡು ವಾರ ಕಳೆದಿದೆ. ಊರೂರು ಅಲೆದಿದ್ದಾಯಿತು. ದಿನವೂ ಅಸಾಧ್ಯ ಬಾಯಾರಿಕೆ. ಕೋಲಾಗಳು, ಫ್ರೆಂಚ್ ವೈನ್, ಬಿಯರ್, ಬಾಟಲಿಯಲ್ಲಿ ಹಣ್ಣಿನ ರಸ ಧಾರಾಳವಾಗಿ ದೊರೆಯುತ್ತವೆ. ಕುಡಿಯಲು ನೀರು ಸಿಗದು.

ಇಲ್ಲಿ ಯೂರೋಪಿನಲ್ಲಾಗಲಿ, ಅಲ್ಲಿ ಅಮೇರಿಕದಲ್ಲಾಗಲಿ ನೀರು ಕೊಡುವ ಸಂಪ್ರದಾಯವಿಲ್ಲ. ಹಿಂದೆ ಇತ್ತೇನೋ, ಈಗಂತೂ ಇಲ್ಲ. ನೀರು ಸಲೀಸಾಗಿ ಎಲ್ಲೆಂದರಲ್ಲಿ ಪುಕ್ಕಟ್ಟೆಯಾಗಿ ನಿಮಗೆ ಖಂಡಿತ ಸಿಗದು. ನಮ್ಮಲ್ಲಿಯಂತೆ ರೈಲು ನಿಲ್ದಾಣಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲೂ 'ದುಡ್ಡಿಲ್ಲದೆ ಕುಡಿಯಬಲ್ಲ' ನೀರನ್ನು ಇರಿಸುವುದಿಲ್ಲ. ಬಾಯಾರಿದಾಗ ಈಗಲೂ ಹೋಟೆಲ್ ಒಂದಕ್ಕೆ ಹೊಕ್ಕು, ನೀರು ಮಾತ್ರ ಕುಡಿದು ಹೊರ ಬರಬಹುದಾದ ಸವಲತ್ತು ಇಲ್ಲಿಲ್ಲ. ಮನೆಯ ಹೊರಗೆ ಕಾಂಪೌಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ 'ದನಕರುಗಳು ಕುಡಿದು ಹೋಗಲಿ' ಎಂದು ನೀರು ತುಂಬಿಡುತ್ತಿದ್ದ ಬಾಲ್ಯದ ದಿನಗಳು ನನಗಿನ್ನೂ ನೆನಪಿವೆ. ನಾನು ದಿಲ್ಲಿಗೆ ಬಂದು, ವಿದೇಶಕ್ಕೆ ಹಾರಿದ್ದೆ. ದಿಲ್ಲಿಯಲ್ಲೋ ಧಗೆಧಗೆ ಬಿಸಿಲು. ಆದರೆ ಯಾರೋ ಪುಣ್ಯಾತ್ಮರು ಅಲ್ಲಿ ದೊಡ್ಡ ಮಣ್ಣಿನ ಮಡಕೆಗಳಲ್ಲಿ ನೀರು ತುಂಬಿಟ್ಟಿರುತ್ತಿದ್ದರು. ಅನೇಕ ಗುರುದ್ವಾರಗಳ ಬಳಿ, ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು, ನಿಲ್ಲಿಸಿದ ಆಟೋ, ಬಸ್ಸು ಹಾಗೂ ದಾರಿಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುವುದನ್ನೂ ನೋಡಿದ್ದೇನೆ. ರೋತಕ್

ರಸ್ತೆಯ ಅತ್ತೆಯ ಮನೆಯೊಳಗೆ ಕಾಲಿಡುತ್ತಿದ್ದಂತೆ, 'ಬೇಟಾ ತಾಯಾಜಿ ಆಯೆ ಹೈ, ಥಂಡಾ ಪಾನಿ ಪಿಲಾವ್ರೋ' ನನ್ನ ಮೈದುನನ ಮಗನಿಗೆ ಅತ್ತೆ ಕೂಗಿ ಹೇಳಿದರು. ಪುಟ್ಟ ಹುಡುಗ ತತ್‌ಕ್ಷಣ 'ತಣ್ಣನೆಯ ನೀರು' ತಂದು ಕೈಗಿಟ್ಟ. ದಿಲ್ಲಿಯ ಧೂಳು ಹಾದಿಗಳೆಲ್ಲ ಮರೆತವು. ಮನೆಗೆ ಬಂದವರಿಗಂತು 'ಮೊದಲು ನೀರು ಕೊಡುವ' ಸಂಪ್ರದಾಯ. ಡಾಬಾ ಆಗಲಿ, ದರ್ಶಿನಿ ಆಗಲಿ, ಪಂಚತಾರಾ ಹೋಟಲೇ ಆಗಲಿ ಮೊದಲು ನೀರು ಮೇಜಿನ ಮೇಲೆ ಕುಳಿತುಕೊಳ್ಳುತ್ತದೆ. ಪುಕ್ಕಟ್ಟೆಯಾಗಿ ಕೊಡುವ ನೀರು. ಆದರೆ ನಾನೀಗ 'ನೀರು ಕೊಡದ ನಾಡು' ಗಳಲ್ಲಿ ಅಲೆಯುತ್ತಿದ್ದೇನೆ.

'ಮ್ಯಾಗ್ಡೊನಾಲ್ಡ್' ನಂತಹ ಅಗ್ಗದ ಫಾಸ್ಟ್‌ಫುಡ್ ಜಾಯಿಂಟ್ಸ್‌ಗೆ ಹೋಗಿ, ವೈಭವದ ಪಂಚತಾರಾ ಹೋಟೇಲುಗಳಿಗೇ ಹೋಗಿ, ನೀರು ಇಡುವ ಅಥವಾ ಕೊಡುವ ಸಂಪ್ರದಾಯವೇ ಇಲ್ಲಿಲ್ಲ. ಹೋಟೇಲುಗಳಲ್ಲಿ ವೈನ್, ಬಿಯರ್, ಇಲ್ಲವೇ ಕೋಲಾಗಳಿಂದಲೇ ಊಟ ಆರಂಭ. 'ಮ್ಯಾಗ್ಡೊನಾಲ್ಡ್' ಗಳಲ್ಲಿ ಫ್ರೆಂಚ್ ಫ್ರೈಸ್ ಇರಲಿ, ಸ್ಯಾಂಡ್ವಿಚ್ ಆಗಲಿ, ಬರ್ಗರ್ ಆಗಲಿ ಜೊತೆಗೆ ದೊಡ್ಡ ಗಾತ್ರದ ಕೋಲಾದೊಡನೆಯೇ ನೀಡುತ್ತಾರೆ.

ಮಧ್ಯಾಹ್ನದ ಊಟದ ಸಮಯ, ನಾನು 'ನೀರು, ನೀರು' ಎಂದು ಬಡಬಡಿಸುವಾಗ, ಸಣ್ಣ ಬಾಟಲಿಯಲ್ಲಿ ನೀರು ಬರುತ್ತಿತ್ತು. ಕುಡಿದು ನೋಡಿದರೆ ಅದು ಬರೀ ಸೋಡಾ. 'ಸೋಡಾ ಅಲ್ಲ ವಾಟರ್' ಎನ್ನುತ್ತಿದ್ದೆ. 'ಇದು ನೀರೆ, ಸ್ಪಾರ್ಕ್ಲಿಂಗ್ ವಾಟರ್' ಎನ್ನುತ್ತಿದ್ರು. 'ಅಪ್ಪಾ ಮಹಾನಿಯರೇ, ನನಗೆ ಹೊಳೆಯುವ ನೀರು ಬೇಡ. ಸಾದಾ ನೀರು ಕೊಡಿ' ಎಂದೆ ಪುಟ್ಟ ಬಾಟಲು ತರಿಸಿದರು. ಸ್ಟಿಲ್ ವಾಟರ್ ಹೊಸ ಪದಪುಂಜವನ್ನು ಕಲಿತೆ. ಅದನ್ನು ಕುಡಿದು ನೋಡಿದರೆ, ಅದರಲ್ಲೂ ಅಲ್ಪ ಮಟ್ಟದ ಸೋಡಾ, ಕಡೆಗೂ ದುಡ್ಡು ಕೊಟ್ಟರೂ, ಸೀದಾಸಾದಾ ನೀರು ಸಿಗುವುದು ಅಪರೂಪವಿತ್ತು. ಏಕೆ ಹೀಗೆ? ಉತ್ತರ ಹೊಳೆಯುವುದೇನೂ ಕಷ್ಟವಲ್ಲ. ಪುಕ್ಕಟ್ಟೆಯಾಗಿ ಏನನ್ನೂ ಕೊಡದಿದ್ದರೆ, ನೀವು ಕೊಳ್ಳುತ್ತೀರಿ. ಕೊಳ್ಳುತ್ತಿರುವುದು ಸೀದಾಸಾದಾ ಅಲ್ಲ ಎಂದು ನಂಬಿಸಿದರೆ, ಮತ್ತಷ್ಟು ಕೊಳ್ಳುತ್ತೀರಿ. 'ಕೊಳ್ಳುತ್ತಿರುವುದು ಅದ್ಭುತವಾದದ್ದು' ಎಂದರೆ ಇನ್ನಷ್ಟು ಕೊಳ್ಳುತ್ತೀರಿ. ಕೊಳ್ಳುಬಾಕ ಸಂಸ್ಕೃತಿಯ ತಳಹದಿಯೇ ಇಲ್ಲಿದೆ. ನೀರು ನಿಮಗೆ ಧಾರಾಳವಾಗಿ ಎಲ್ಲೆಡೆ ಪುಕಟ್ಟೆಯಾಗಿ ದೊರತರೆ, ಕೋಲಾ ಕಂಪನಿಗಳ ಜಾಹೀರಾತಿಗೆ ಮಣಿಯುವುದು ಹೇಗೆ? ಇದು ಒಂದು ಬಗೆಯ ಸೂಕ್ಷ್ಮ ರೀತಿಯ 'ಸೈಕಾಲಜಿಕಲ್ ವಾರ್ ಫೇರ್'. ಅಮೆರಿಕದ ಉದ್ದಗಲವನ್ನು ವಾರಗಟ್ಟಲೆ ಅಲೆವಾಗ, ಎಲ್ಲೆಡೆಯಲ್ಲಿ ಗಮನಿಸಿದ್ದೆ, ದೊಡ್ಡಗಾತ್ರದ ಕೋಲಾ ಬಾಟಲಿಗಳಿಗೆ 0.99 ಡಾಲರ್ ಬೆಲೆ, ಅದೇ ಸಣ್ಣಗಾತ್ರದ ನೀರಿನ ಬಾಟಲಿಗೂ ಅದಕ್ಕಿಂತ ಹೆಚ್ಚಿನ ಹಣ! ಕೊಳ್ಳುವ ಗ್ರಾಹಕನ ಮನಸಿನಲ್ಲಿ 'ನೀರಿಗೇಕೆ ಅಷ್ಟು ಹಣ?' ಅದಕ್ಕಿಂತ ಅಗ್ಗವಾಗಿ ಕೋಲಾ ಸಿಗುತ್ತದೆಯಲ್ಲ?, ಎಂಬ ತರ್ಕ ಹೊಳೆದು ಕೋಲಾ ಅಭ್ಯಾಸ ಮಾಡಿಕೊಳ್ಳುತ್ತಾನೆ. ಅಲ್ಲಿಗೆ ನೀರು ಕುಡಿಯುವ ಅಭ್ಯಾಸ ತಪ್ಪುತ್ತದೆ.

ವಿದೇಶಗಳಲ್ಲಿ ಮನೆಯ ನಲ್ಲಿಯಲ್ಲಿ ಬರುವ ನೀರನ್ನು ಯಾರೂ ಕುಡಿಯುವುದಿಲ್ಲ. ಅದನ್ನು ಕುಡಿದರೇನು ಪ್ರಾಣ ಹೋಗುವುದಿಲ್ಲ. ಆದರೆ 'ಅದು ಶುದ್ಧವಲ್ಲ, ಶುದ್ಧ ನೀರನ್ನು

ಬಾಟಲಿಯಲ್ಲಿ ಕೊಂಡು ಮಾತ್ರ ತರಬಹುದು' ಎಂದು ಇಡೀ ದೇಶದ ತಲೆ ತೊಳೆದಿರುವಾಗ, ಪ್ರತಿಯೊಬ್ಬರೂ ನೀರನ್ನು ಕೊಂಡು ಕುಡಿಯುತ್ತಾರೆ. ಇಂತಹುದೇ ಹುನ್ನಾರ ಭಾರತದಲ್ಲಿ ಅದಾಗಲೇ ಆರಂಭವಾಗಿದೆ. ಕೀಟನಾಶಕವಿರುವ ನೀರನ್ನೂ ಶುದ್ಧವೆಂದು ಮಾರಿ ಉದ್ಧಾರವಾದ ಕಂಪನಿಗಳು! ಕೊಳ್ಳುಬಾಕ ಸಂಸ್ಕೃತಿಯ ಪರಾಕಾಷ್ಠೆಯಾಗಿ ನನಗೆ 'ನೀರು ಕೊಡದ ನಾಡುಗಳು' ಕಾಣುತ್ತವೆ. ಇಂತಹುದೇ ಮರಳುತನಕ್ಕೆ ಅದಾಗಲೇ ಭಾರತೀಯರು ಬಲಿಯಾಗಿದ್ದಾರೆ. ನಮ್ಮ ಎಳನೀರು, ಮಜ್ಜಿಗೆ, ಪಾನಕ, ಕಬ್ಬಿನ ಹಾಲು, ತಾಜಾ ಹಣ್ಣಿನ ರಸ ಎಲ್ಲವನ್ನು ತೊರೆದು ಕೋಲಾಗಳಿಗೆ ಮುಗಿಬೀಳುತ್ತಿರುವ ಜನರ ಸಂಖ್ಯೆ ಏರುತಿದೆ. ವೈಯಕ್ತಿಕ ವಿದೇಶ ಪ್ರವಾಸಗಳಲ್ಲಿ ನನಗೆ ಇಷ್ಟು ಕಷ್ಟವಾಗಿದ್ದಿಲ್ಲ. ತಿಂಗಳುಗಟ್ಟಲೆ ಅಲೆದರೂ ನಾವಿಳಿದುಕೊಳ್ಳುತ್ತಿದ್ದ ಅಗ್ಗದ ಹೋಟೇಲಿನಿಂದ ಬೆಳಗ್ಗೆ ಹೊರಡುವಾಗಲೇ ಬಾಟಲಿಯಲ್ಲಿ ನಲ್ಲಿ ನೀರನ್ನು ತುಂಬಿಸಿಕೊಂಡು ಹೊರಡುತ್ತಿದ್ದೆವು. ನಮ್ಮ ಭಾರತೀಯ 'ನಿರೋಧಕ ಶಕ್ತಿಯ' ಎದುರು ಯಾವ ನೀರಾದರೂ ಅಡ್ಡಿ ಇರಲಿಲ್ಲ. ಆದರೆ ಕೆಲಸದ ಮೇಲೆ ಬಂದ ಈ ಪ್ರವಾಸದಲ್ಲಿ ಮಣಮಣ ಫೈಲುಗಳನ್ನು ಹೊತ್ತು, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಅಲೆಯುವಾಗ ನೀರಿನ ಬಾಟಲಿ ಹಿಡಿದು ಹೋಗುವುದು ಅಸಾಧ್ಯವಾಗಿತ್ತು.

ಕೊಳ್ಳುಬಾಕತನ, ಲಾಭಕೋರತನದ ರೋಗಗಳು ಸಾಂಕ್ರಾಮಿಕವಾಗಿ ಎಲ್ಲ ನೆಲದಲ್ಲೂ ಹರಡಿ, ಭಾರತಕ್ಕೂ ಲಗ್ಗೆ ಇಟ್ಟಿವೆ ಎಂದು ತೀರಾ ಇತ್ತೀಚಿನ ದಿನಗಳಲ್ಲಿ ಗಾಢವಾಗಿ ನಮ್ಮೆಲ್ಲರಿಗೂ ಅನುಭವವಾಗಿದೆ. 'ಸಂಸ್ಕೃತಿಯ ಮೇಲೆ ದಾಳಿ' ಎನ್ನುವಾಗ ನನಗೆ 'ಮದರ್ಸ್ ಡೇ,' 'ಫಾದರ್ಸ್ ಡೇ', 'ವ್ಯಾಲೆಂಟೈನ್ ಡೇ' ಆಚರಿಸುವುದು ಅಷ್ಟು ದೊಡ್ಡ ಅನಾಹುತವಾಗಿ ಕಾಣುವುದಿಲ್ಲ. ಈ ಹೊಸ ಹೊಸ ದಿನಗಳೆಲ್ಲ ಉಕ್ಕಿದ ಪ್ರೀತಿಯ ದ್ಯೋತಕವಲ್ಲ. 'ಗಿಫ್ಟ್', 'ಗ್ರೀಟಿಂಗ್ ಕಾರ್ಡ್' ಮಾರುವ ಹೊಸ ಹುನ್ನಾರಗಳೆಂದು ಸರ್ವರಿಗೂ ವೇದ್ಯವಾಗಿದೆ. ಆದರೆ ನನಗೆ ಗಾಬರಿ ಹುಟ್ಟಿಸುವುದು ನಮ್ಮ ಭಾರತೀಯ ಸಂಸ್ಕೃತಿಯ ಬುನಾದಿಯನ್ನು ಜೀವನಶೈಲಿಯನ್ನು, ನಂಬಿಕೆಗಳನ್ನು, ಮೌಲ್ಯಗಳನ್ನು, ಸಂಸ್ಕೃತಿಯ ಬುನಾದಿಯನ್ನು ಅಲುಗಿಸುವ 'ಕೊಳ್ಳುಬಾಕತನ'. ಅಗತ್ಯಗಳಲ್ಲಿ ನಡೆದು ಹೋಗುತ್ತಿದ್ದ ಬದುಕು, ಇಂದು 'ಬೇಕು' ಗಳ ಬಲೆಗೆ ಬಿದ್ದಿದೆ. ಸರಕಾರಿ ಕಾಲೇಜಿನ ಪ್ರೊಫೆಸರ್ ಮತ್ತು ಪ್ರಾಂಶುಪಾಲರಾದ ನಮ್ಮ ತಂದೆಗೆ ಕಾಲೇಜಿಗೆ ಸೈಕಲಿನಲ್ಲಿ ಹೋಗುವುದು ಅಪಮಾನಕರವಾಗಿ ಕಂಡಿರಲೇ ಇಲ್ಲ. ಕೊಂಡ ಒಂದು ವಸ್ತುವನ್ನು ಬದುಕಿಡೀ ಬಳಸುವ ಪರಿಪಾಠವಿತ್ತು. ಇಂದು ಶಾಲೆಯಲ್ಲಿಯೇ ಬೈಕು ಬೇಕು ಎನ್ನುವ ಮಗ. ಇಂತಹುದೇ ಬ್ರಾಂಡಿನ ಶೂ ಬೇಕು ಎನ್ನುವ ಮಕ್ಕಳು. ಮಾರುತಿ ಕಾರಿದ್ದರೆ, ಸ್ಯಾಂತ್ರೋ ಬೇಕು ಎಂದು ಓಡುವ ಹಿರಿಯರು. ಮಾರುಕಟ್ಟೆಗೆ ಬಂದದ್ದೆಲ್ಲವು ಬೇಕು. ಬೇಕುಗಳನ್ನು 'ಅಗತ್ಯ' ಗಳಾಗಿ, ಹಾಗೂ 'ಅತ್ಯಗತ್ಯ' ಗಳಾಗಿ ಬಲು ಜಾಣತನದಿಂದ ಬದಲಿಸುವ ಜಾಹೀರಾತುಗಳು ಮತ್ತೆ ಮತ್ತೆ ಬಿತ್ತರಿಸುತ್ತವೆ. ಆರಾಮ, ಐಷಾರಾಮದ, ಅಪ್ಪಟ ಅನಗತ್ಯದ ವಸ್ತುಗಳನ್ನು 'ಇವಿಲ್ಲದೆ ಬದುಕಿಲ್ಲ' ಎಂಬಂತೆ ಬಿಂಬಿಸುತ್ತಾರೆ. 'ಡಿಓಡರೆಂಟ್' ಹಾಕಿಕೊಳ್ಳದೆ ಇದ್ದರೆ 'ತಾನು ನಾತ ಬಡಿಯುತ್ತೇನೆ' ಎಂಬಷ್ಟು ಕೀಳರಿಮೆಯನ್ನು ಹುಟ್ಟಿಸಬಲ್ಲರು. ಕೊನೆಗೆ ಎಲ್ಲವೂ ನಿಮ್ಮನ್ನು ಕೊಳ್ಳುವಂತೆ ಪ್ರೇರೇಪಿಸುತ್ತವೆ.



ಕೆಲವು ವರ್ಷಗಳ ಹಿಂದೆ ದಿನಪತ್ರಿಕೆಯಲ್ಲಿ ಓದಿದ್ದೆ. ಜನಪ್ರಿಯ ಹೋಟೆಲಿನ ಮಾಲೀಕರೊಬ್ಬರು ಬರೆದಿದ್ದರು. ತಂಪು ಪಾನೀಯದ ಕಂಪನಿಯೊಂದು ಆತನನ್ನು ಸಂಪರ್ಕಿಸಿ ‘ನೀವು ಗ್ರಾಹಕರಿಗೆ ಬಂದೊಡನೆ ನೀರು ಕೊಡುವುದನ್ನು ನಿಲ್ಲಿಸಿದರೆ, ಇಷ್ಟು ಹಣ ಕೊಡುವುದಾಗಿ’ ಹೇಳಿತ್ತಂತೆ! ಈಗಾಗಲೇ ಬೆಂಗಳೂರಿನಲ್ಲೂ ನನಗೆ ‘ನೀರು ಕೊಡದ ಸಂಸ್ಕೃತಿ’ಯ ಅನುಭವವಾಗಿದೆ. ಮಹಾತ್ಮಗಾಂಧಿ ರಸ್ತೆಯ ‘ಬಾಂಬೆ ಬಜಾರ್’ ಎದುರಿನ ಪುಟ್ಟ ಜಾಯಿಂಟ್‌ನಲ್ಲಿ ನಾನು ಮತ್ತು ಮಗಳು ಕುಳಿತಿದ್ದೆವು. ಇಲ್ಲಿ ನೀರು ತಂದಿಡಲಿಲ್ಲ. ಐಸ್‌ಕ್ರೀಂ ತಿಂದ ನಾವು ‘ನೀರು ಬೇಕು’ ಎಂದು ಕೇಳಿದೆವು. ‘ಮಿನಿರಲ್ ವಾಟರ್?’ ವೇಟರ್ ಪ್ರಶ್ನಿಸಿದ ‘ಇಲ್ಲಪ್ಪ ಸಾಮಾನ್ಯ ನೀರು’ ಎಂದೆ. ಮಾಯವಾದ ವೇಟರ್ ಹದಿನೈದು ನಿಮಿಷ ಕಾದರೂ ಬರಲೇ ಇಲ್ಲ. ಕಾದು ಕಾದು ಸುಸ್ತಾಗಿ ಕೊನೆಗೆ ಕೌಂಟರಿಗೇ ಹೋಗಿ, ಬಿಲ್ಲು ಕೊಟ್ಟು ಹೊರಬಿದ್ದೆವು. ಅದೇ ವೇಟರ್, ಪುಟ್ಟ ಪುಟ್ಟ ಬಾಟಲಿಗಳಲ್ಲಿ ಮಿನರಲ್ ವಾಟರುಗಳನ್ನು ಬೇರೆ ಬೇರೆ ಮೇಜಿಗೆ ಸರಬರಾಜು ಮಾಡುವುದು ಕಂಡಿತು. ‘ಮಿನಿರಲ್ ವಾಟರ್?’ ಎಂದ ಅವರು ಕೇಳುವ ಭಂಗಿ ಭಾವ ಹೇಗಿರುತ್ತದೆ ಎಂದರೆ ನಿಮಗೆ ‘ಆರ್ಡಿನರಿ ವಾಟರ್’ ಎಂದು ಹೇಳಲೂ ಹಿಂಜರಿಕೆಯಾಗಬೇಕು.

ಆದರೆ ನಿಜಕ್ಕೂ ಆಘಾತವಾದದ್ದು, ತೀರಾ ಇತ್ತೀಚೆಗೆ ಮಾಲತಿಯೊಡನೆ ಇಂದಿರಾನಗರದ ಮುಖ್ಯ ರಸ್ತೆಯ ಪುಟ್ಟ ಜಾಯಿಂಟ್‌ಗೆ ಹೊಸ ಬಗೆಯ ಐಸ್‌ಕ್ರೀಂ ತಿನ್ನುವ ಬಯಕೆಯಲ್ಲಿ ಹೊಕ್ಕಾಗ. ‘ಮಿಸಿಸಿಪಿ ಮಡ್ ಪೀ’ ಎಂದು ಎಲ್ಲೋ ಪತ್ರಿಕೆಯಲ್ಲಿ ಓದಿದ್ದ ಮಾಲತಿ, ಆರ್ಡರ್ ಮಾಡಿದರು. ದೊಡ್ಡ ಬಿಳಿ ಪಿಂಗಾಣಿ ತಟ್ಟೆಯಲ್ಲಿ ಕೇಕ್ ಮತ್ತು ಐಸ್‌ಕ್ರೀಂ ಇರಿಸಿ, ಮೇಲೆ ಕೋಕೋ ಪುಡಿ ಉದುರಿಸಿ ಆಕರ್ಷಕವಾಗಿ ತಂದಿಟ್ಟರು. ಬೆಲೆ ನೂರು ರೂಪಾಯಿ ಎಂದಾಗ ಹೌಹಾರಿದ್ದುಂಟು! ಇಲ್ಲೂ ನೀರು ಕೊಟ್ಟಿರಲಿಲ್ಲ. ‘ನೀರು ಕೊಡಿ’ ಎಂದೆ, ‘ಮಿನಿರಲ್ ವಾಟರ್?’ ಎಂದಳು ಸರ್ವ್ ಮಾಡುತ್ತಿದ್ದ ಹುಡುಗಿ. ‘ಇಲ್ಲ ಸಾಧಾರಣ ನೀರು’ ಎಂದರೆ, ನಮ್ಮಲ್ಲಿ ಸಾಧಾರಣ ನೀರು ಇಲ್ಲ ಎಂದು ಬಿಡುವುದೆ! ನೂರು ರೂಪಾಯಿ ಐಸ್‌ಕ್ರೀಂ ತಿಂದರೂ ಪುಕ್ಕಟ್ಟೆಯಾಗಿ ಒಂದು ಲೋಟ ನೀರು ಕೊಡದ ಜಾಯಿಂಟ್‌ಗಳಿವು.

ಮತ್ತೆ ಹತ್ತೊ-ಇಪ್ಪತ್ತೋ ಪಡೆದು ಮಿನರಲ್ ವಾಟರ್ ಮಾರುವ ಹುನ್ನಾರ. ನನಗೆ ರೇಗಿಹೋಯಿತು. ಅಲ್ಲಿ ನೀರು ಕೊಡಲಿಲ್ಲ. ಹೊರಬಂದು 'ಬನ್ನಿ ಮಾಲತಿ ಸಾಗರ್ಗೆ, ಪಾನಿಪುರಿ ತಿನ್ನೋಣ' ಎಂದೆ. ಎದುರಿಗೊಂದು 'ಸಾಗರ್' ಹೋಟೇಲಿತ್ತು. ನುಗ್ಗಿದೆವು. ಕುಳಿತೊಡನೆ ವೇಟರ್ ಬಂದು ನಾಲ್ಕು ಲೋಟ ನೀರು ತಂದಿಟ್ಟ. ಬರೀ ಬಾಯಲ್ಲ ಮನಸ್ಸೂ ತಂಪಾಯಿತು.

ಹೇಳಿ, ಕಾಯ್ದುಕೊಳ್ಳಬಲ್ಲವೇ ಮಾನವೀಯ ಮೌಲ್ಯಗಳನ್ನು, ಕೊಳ್ಳುಬಾಕುತನದ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಬಲ್ಲವೇ? ಬಾಯಾರಿದವರಿಗೆ ನೀರು ಕೊಡಬಲ್ಲವೆ? ಹಸಿದವರಿಗೆ ಅನ್ನ ಕೊಡಬಲ್ಲವೆ? ಇನ್ನೊಬ್ಬರ ನೀರು-ಅನ್ನವನ್ನು ಕಸಿದುಕೊಳ್ಳದೆ ಬದುಕಬಲ್ಲವೆ? ನಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳುವ ಅಸ್ತ್ರ, ನಮ್ಮ ಕೈಯಲ್ಲೇ ಇದೆಯಲ್ಲವೇ? 'ಮತ್ತೆಂದೂ ನೀರು ಕೊಡದ ಆ ಜಾಯಿಂಟ್‌ಗೆ ಹೋಗುವುದಿಲ್ಲ. ನನ್ನಿಂದಂತೂ ಇಂತಹ ಜಾಯಿಂಟ್‌ಗಳು ಉದ್ಧಾರವಾಗುವುದು ಬೇಡ' ಎಂದುಕೊಂಡಿದ್ದೇನೆ.

ಕೃತಿಕಾರರ ಪರಿಚಯ



ಶ್ರೀಮತಿ ನೇಮಿಚಂದ್ರ ಅವರು ಚಿತ್ರದುರ್ಗದಲ್ಲಿ ಜುಲೈ 16, 1959 ರಂದು ಜನಿಸಿದರು. ತಂದೆ ಪ್ರೊ. ಜಿ. ಗುಂಡಣ್ಣ, ತಾಯಿ ತಿಮ್ಮಕ್ಕ. ಪ್ರಾರಂಭಿಕ ಶಿಕ್ಷಣ ತುಮಕೂರು, ಮೈಸೂರಿನಲ್ಲಿ ಪೂರೈಸಿದರು. ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜನಿಯರಿಂಗ್‌ನಿಂದ ಬಿ. ಎಸ್. ಸಿ. ಪದವಿಯನ್ನು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಎಂ. ಎಸ್. ಪದವಿಯನ್ನು ಗಳಿಸಿದರು. ಬೆಂಗಳೂರಿನ ಎಚ್. ಎ. ಎಲ್. ಸಂಸ್ಥೆಯಲ್ಲಿ ಉನ್ನತ ತಂತ್ರಜ್ಞ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕನ್ನಡದಲ್ಲಿ ಚಿಂತನ ಪೂರ್ಣ ಲೇಖನ, ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ ಯಾದ್ ವಶೇಮ್- ಕಾದಂಬರಿ, ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ

ಕಥೆಗಳು, ನೇಮಿಚಂದ್ರರ ಕಥೆಗಳು ಮುಂತಾದ ಕಥಾಸಂಕಲನಗಳು. ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆಯಲ್ಲಿ -ಪ್ರವಾಸ ಕಥನಗಳು. ಬದುಕು ಬದಲಿಸುವುದು ಅಂಕಣ ಬರಹಗಳು, ಮೊದಲಾದವುಗಳು. ಪೆರುವಿನ ಪವಿತ್ರ ಕಣಿವೆಯಲ್ಲಿ ಕೃತಿಗೆ ಕರ್ನಾಟಕ ಸಾಹಿತ್ಯ ಪ್ರಶಸ್ತಿ. ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಸಂದಿವೆ.

ಪ್ರಸ್ತುತ 'ನೀರು ಕೊಡದ ನಾಡಿನಲ್ಲಿ' ಅಂಕಣ ಬರೆಹವನ್ನು ಶ್ರೀಮತಿ ನೇಮಿಚಂದ್ರ ಅವರ 'ಬದುಕು ಬದಲಿಸಬಹುದು' ಕೃತಿಯಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

ಪದಗಳ ಅರ್ಥ

ಅಗ್ಗ- ಕಡಿಮೆ ಬೆಲೆ; ಅಲೆ- ಸುತ್ತಾಡು; ಅಸ್ತ್ರ- ಆಯುಧ; ಜನಪ್ರಿಯ- ಪ್ರಸಿದ್ಧ, ಖ್ಯಾತಿಪಡೆದ; ಪರಾಕಾಷ್ಠೆ- ಕೊನೆಯ ಗಡಿ; ಪುಕ್ಕಟ್ಟೆ- ಉಚಿತ; ಬುನಾದಿ- ತಳಹದಿ; ಭಂಗಿ- ವ್ಯಂಗ್ಯ, ಕುಟಿಲತೆ; ಮಣ- ಹೆಚ್ಚು ತೂಕವಾದ; ಮರುಳು- ಹುಚ್ಚುತನ; ಮಾಲೀಕ- ಯಜಮಾನ; ಹರಡು- ಪಸರಿಸು, ಕೆದರು; ಹಿಂಜರಿಕೆ- ಹಿಂದೆ ಸರಿ, ಕೀಳರಿಮೆ; ಹುನ್ನಾರ- ಸಂಚು; ಹೊಕ್ಕು- ಒಳಗೆ ಹೋಗು.

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಎಲ್ಲೆಲ್ಲಿ ನೀರು ಕೊಡುವ ಸಂಪ್ರದಾಯವಿಲ್ಲ?
2. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ?
3. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು?
4. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ?
5. ಸರ್ವರಿಗೂ ವೇದ್ಯವಾಗಿರುವ ಅಂಶಗಳಾವುವು?
6. ಲೇಖಕಿಗೆ ಹೋಟೆಲ್‌ನಲ್ಲಿ ನಾಲ್ಕು ಲೋಟ ನೀರು ತಂದಿಟ್ಟಾಗ ಆದ ಅನುಭವವೇನು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ವಿದೇಶಗಳಲ್ಲಿ ಬಾಯಾರಿಕೆಗೆ ಧಾರಾಳವಾಗಿ ಏನೇನು ದೊರೆಯುವವು?
2. ಗುರುದ್ವಾರಗಳ ಬಳಿ ಸ್ವಯಂ ಸೇವಕರು ಏನು ಮಾಡುತ್ತಿದ್ದರು?
3. ಕೋಲಾಗಳ ಆಸೆಯಿಂದ ನಾವು ಏನೆಲ್ಲವನ್ನು ತೊರೆಯುತ್ತಿದ್ದೇವೆ?

4. ನಾಗರೀಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು?

5. ಜನಪ್ರಿಯ ಹೋಟಲಿನ ಮಾಲೀಕನಿಗೆ ತಂಪುಪಾನೀಯ ಕಂಪನಿ ಹೇಳಿದ್ದೇನು?

III. ಕೊಟ್ಟಿರುವ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.

1. ದುಡ್ಡಿಲ್ಲದೇ ಕುಡಿಯಬಲ್ಲ ನೀರು ಸಿಗುತ್ತಿದ್ದ ಕಾಲದ ಬಗ್ಗೆ ಲೇಖಕರ ಅಭಿಪ್ರಾಯವೇನು?
2. ಕಂಪನಿಗಳು ಅಪ್ಪಟ ಅಗತ್ಯದ ವಸ್ತುಗಳನ್ನು 'ಇವಿಲ್ಲದೆ ಬದುಕಿಲ್ಲ' ಎಂಬಂತೆ ಹೇಗೆ ಬಿಂಬಿಸುತ್ತಿವೆ?

3. ಲೇಖಕಿಗೆ ಬೆಂಗಳೂರಿನಲ್ಲಿ 'ನೀರು ಕೊಡದ ಸಂಸ್ಕೃತಿಯ' ಬಗ್ಗೆ ಆದ ಅನುಭವನ್ನು ಬರೆಯಿರಿ.

IV. ಖಾಲಿಬಿಟ್ಟ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.

1. ಭಾರತದಿಂದ ಹೊರಗೆ ಕಾಲಿಟ್ಟರೆ ಉಳಿದೆಲ್ಲವು _______.
2. ಈ ದೇಶಗಳಲ್ಲಿ ಮನೆಯ _______ ಯಲ್ಲಿ ಬರುವ ನೀರನ್ನು ಕುಡಿಯುವುದಿಲ್ಲ.

3. ಗ್ರೀಟಿಂಗ್ ಕಾರ್ಡ್ ಮಾರುವ ಹೊಸ _______ ಗಳೆಂದು ಸರ್ವರಿಗೂ ವೇದ್ಯವಾಗಿದೆ.
4. ಸ್ಯಾಂಡ್ವಿಚ್ ಬರ್ಗರ್ ಜೊತೆಗೆ ದೊಡ್ಡ ಗಾತ್ರದ _______ ನೀಡುತ್ತಾರೆ.

ಸೈದ್ಧಾಂತಿಕ ಭಾಷಾಭ್ಯಾಸ

ಗುಣಿತಾಕ್ಷರ ಪರಿಚಯಾತ್ಮಕ ವಿವರ

ದ್ ವ್ ರ್ ವ್ಯಂಜನಾಕ್ಷರಗಳನ್ನು ಸೇರಿಸಿ ಬರೆದರೆ ಪದ ರಚನೆಯಾಗುವುದಿಲ್ಲ. ಅದರ ಬದಲಿಗೆ **ದ್** + **ಏ** = **ದೇ, ವ್** + **ಅ** = **ವ, ರ್** + **ಉ** = **ರು** ಈ ರೀತಿ ಸ್ವರಾಕ್ಷರಗಳನ್ನು ಸೇರಿಸಿ ಬರೆದರೆ ಅರ್ಥಪೂರ್ಣವಾದ ದೇವರು ಎಂಬ ಪದ ರಚನೆ ಆಗುತ್ತದೆ. ಹೀಗೆ ವ್ಯಂಜನಕ್ಕೆ ಸ್ವರ ಸೇರಿದಾಗ ಆಗುವ ಅಕ್ಷರವೇ ಗುಣಿತಾಕ್ಷರ. ಒಂದು ವ್ಯಂಜನಕ್ಕೆ ಅ ದಿಂದ ಔ ವರೆಗಿನ 13 ಸ್ವರಗಳು ಸೇರಿದರೆ 13 ಗುಣಿತಾಕ್ಷರಗಳಾಗುತ್ತವೆ. 34 ವ್ಯಂಜನಗಳಿಗೆ ತಲಾ 13 ಸ್ವರಾಕ್ಷರಗಳನ್ನು ಸೇರಿಸುವುದರಿಂದ 442 ಗುಣಿತಾಕ್ಷರಗಳನ್ನು ರಚಿಸಬಹುದು. ಈ ಗುಣಿತಾಕ್ಷರಗಳೇ ಕಾಗುಣಿತ ಅಕ್ಷರಗಳು. ಅದೇ ರೀತಿ ಯೋಗವಾಹಗಳನ್ನು ಸೇರಿಸಿ ಗುಣಿತಾಕ್ಷರಗಳನ್ನು ಮಾಡಬಹುದು.

ಸಂಯುಕ್ತಾಕ್ಷರ

ಅಪ್ಪ ಅಮ್ಮ ಅಕ್ಷರ ಅಸ್ತ್ರ ಮುಂತಾದ ಪದಗಳನ್ನು ಬಳಸುತ್ತೇವೆ. ಅಪ್ಪ ಪದದಲ್ಲಿ ಅ ಪ್ ಪ್ ಅ ಎಂಬ ನಾಲ್ಕು ಅಕ್ಷರಗಳಿವೆ. ಮೇಲ್ನೋಟಕ್ಕೆ ಎರಡೇ ಅಕ್ಷರಗಳು ಕಾಣುತ್ತವೆ. ಮೊದಲ ಅಕ್ಷರ ಸ್ವರಾಕ್ಷರ. ಎರಡನೆಯ ಅಕ್ಷರದಲ್ಲಿ ಪ್ ಪ್ ಅ ಎಂಬ ಮೂರು ಅಕ್ಷರಗಳಿವೆ. ಅವುಗಳಲ್ಲಿ ಎರಡು ವ್ಯಂಜನಗಳು ಮತ್ತು ಒಂದು ಸ್ವರಾಕ್ಷರ. ಅದೇ ರೀತಿ ಅಸ್ತ್ರ ಪದದಲ್ಲಿ ಅ ಸ್ ತ್ ರ್ ಅ ಎಂಬ ಐದು ಅಕ್ಷರಗಳಿವೆ. ಈ ಪದದ ಎರಡನೆಯ ಅಕ್ಷರ ಸ್ತ್ರ ದಲ್ಲಿ ಮೂರು ವ್ಯಂಜನ ಮತ್ತು ಒಂದು ಸ್ವರಾಕ್ಷರವಿದೆ. ಹೀಗೆ - ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ. ಇದನ್ನು ದ್ವಿತ್ವಾಕ್ಷರ/ಒತ್ತಕ್ಷರ ಎಂತಲೂ ಕರೆಯುವರು. ಸಂಯುಕ್ತಾಕ್ಷರದಲ್ಲಿ ಸಜಾತೀಯ ಹಾಗೂ ವಿಜಾತೀಯ ಎಂಬೆರಡು ವಿಧಗಳಿವೆ.

ಸಜಾತೀಯ ಸಂಯುಕ್ತಾಕ್ಷರ

ಅಪ್ಪ, ಅಮ್ಮ, ಲೆಕ್ಕ, ಕಗ್ಗ ಪದಗಳನ್ನು ಗಮನಿಸಿದಾಗ ಇಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಆಯಾ ಜಾತಿಯ ಎರಡೆರಡು ವ್ಯಂಜನಗಳಿವೆ. ಹೀಗೆ– ಒಂದೇ ಜಾತಿಯ ಎರಡು ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ಸಜಾತೀಯ ಸಂಯುಕ್ತಾಕ್ಷರ.

ವಿಜಾತೀಯ ಸಂಯುಕ್ತಾಕ್ಷರ

ಅಷ್ಟ, ಆರ್ಯ, ಅಸ್ತ್ರ ಪದಗಳಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಬೇರೆ ಬೇರೆ ಜಾತಿಯ ವ್ಯಂಜನಗಳಿವೆ. ಹೀಗೆ -ಬೇರೆ ಬೇರೆ ಜಾತಿಯ ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ವಿಜಾತೀಯ ಸಂಯುಕ್ತಾಕ್ಷರ.

ಪದಗಳು

ಯಾವುದೇ ಭಾಷೆಯಾಗಲಿ ಅದು ತನ್ನ ಸುತ್ತಮುತ್ತಣ ಭಾಷೆಗಳ ಸಂಪರ್ಕದಿಂದಾಗಿ ಬೇರೆ ಭಾಷೆಗಳ ಪದಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ಬೆಳೆಯುತ್ತದೆ. ಇದು ಭಾಷಿಕ ಸಹಜ ಕ್ರಿಯೆ.

ಮೋಟಾರುಗಳಲ್ಲಿ ಜಬರ್ದಸ್ತಿನಿಂದ ಓಡಾಡುವುದೇ ಜೀವನದ ಮುಖ್ಯ ಗುರಿಯಲ್ಲವೆಂದು ನಾವು ತಿಳಿಯಬೇಕು.

ಈ ವಾಕ್ಯ ಕನ್ನಡ ಭಾಷೆಯ ವಾಕ್ಯವಾದರೂ ಇಲ್ಲಿರುವ ಎಲ್ಲಾ ಪದಗಳು ಕನ್ನಡದವುಗಳಲ್ಲ. ಮೋಟಾರು ಪದ ಆಂಗ್ಲ ಭಾಷೆಯಿಂದಲೂ ಜಬರ್ದಸ್ ಪದ ಹಿಂದಿ ಭಾಷೆಯಿಂದಲೂ ಜೀವನ, ಮುಖ್ಯ ಪದಗಳು ಸಂಸ್ಕೃತದಿಂದಲೂ ಬಂದ ಪದಗಳಾಗಿದ್ದು

ಉಳಿದವು ಕನ್ನಡ ಪದಗಳು. ಹೀಗಾಗಿ ಕನ್ನಡ ಭಾಷೆಯಲ್ಲಿ ಕನ್ನಡದ ಪದಗಳಲ್ಲದೆ ಬೇರೆ ಭಾಷೆಗಳಿಂದ ಬಂದ ಪದಗಳೂ ಇವೆ.

ದೇಶ್ಯ ಪದ: ಆಯಾ ಭಾಷೆಯ ಮೂಲ (ಸ್ವಂತ) ಪದಗಳೇ ದೇಶ್ಯ ಪದಗಳು.

ಸಂಖ್ಯಾಪದಗಳು (ಒಂದರಿಂದ ಒಂಬೈನೂರ ತೊಂಬತ್ತೊಂಬತ್ತರವರೆಗೆ), ದೇಹದ ಅಂಗಗಳ ಹೆಸರು(ಕೈ, ಕಾಲು, ಬಾಯಿ ಇತ್ಯಾದಿ), ವಿಭಕ್ತಿ ಪ್ರತ್ಯಯಗಳು, ಬಂಧುವಾಚಕ ಪದಗಳು (ಅಜ್ಜ ಅಜ್ಜಿ ಅಪ್ಪ ಅಮ್ಮ ಚಿಕ್ಕಪ್ಪ ಅಣ್ಣ ಇತ್ಯಾದಿ), ಮುಂತಾದ ನಿರ್ದಿಷ್ಟ ಪದಗಳು, ಪ್ರತಿಯೊಂದು ಭಾಷೆಯಲ್ಲೂ ಆಯಾ ಭಾಷೆಗಳ ಸ್ವಂತ ಪ ದಗಳಾಗಿರುತ್ತವೆ.

ಅನ್ಯದೇಶ್ಯ ಪದ: ಬೇರೆ ಭಾಷೆಯಿಂದ ಬಂದಿರುವ ಪದಗಳೇ ಅನ್ಯದೇಶ್ಯ ಪದಗಳು. ಕನ್ನಡದಲ್ಲಿ ಬಳಕೆಯಾಗುತ್ತಿರುವ ಅರ್ಜಿ, ಕಚೇರಿ, ಕಾರ್ಖಾನೆ, ಜಮೀನು ಮುಂತಾದವು ಹಿಂದುಸ್ತಾನೀ ಭಾಷೆಯ ಪದಗಳು. ಕೋರ್ಟು, ಬ್ಯಾಂಕು, ಹಾರ್ಮೋನಿಯಂ, ಹೋಟೆಲು ಮುಂತಾದವು ಆಂಗ್ಲಭಾಷೆಯಿಂದ ಬಂದ ಪದಗಳು. ಅಲಮಾರು, ಸಾಬೂನು, ಮೇಜು ಮುಂತಾದವು ಪೋರ್ಚುಗೀಸ್ ಭಾಷೆಯಿಂದ ಬಂದ ಪದಗಳು. ಹೀಗೆ ಕನ್ನಡ ಭಾಷೆಗೆ ಅನ್ಯಭಾಷೆ ಪದಗಳು ಬಂದಾಗ ಅವು ಕನ್ನಡದ ಜಾಯಮಾನಕ್ಕೆ ತಕ್ಕಂತೆ ಬದಲಾವಣೆಗೊಂಡು ಬಳಕೆಯಾಗುತ್ತವೆ. ಮಾಲೆ ರಾಜ ವಿಪತ್ತು ದೇವತೆ ಮುಂತಾದ ಪದಗಳು ಸಂಸ್ಕೃತ ಭಾಷೆಯಿಂದ ಬಂದಿವೆ. ಇವನ್ನು ಅನ್ಯದೇಶ್ಯ ಪದಗಳೆಂದು ಕರೆಯುವ ವಾಡಿಕೆ ಇಲ್ಲ. ಇವುಗಳನ್ನು ತದ್ಭವ ಎಂದು ಕರೆಯುವರು.

ತತ್ಸಮ- ತದ್ಭವ:

ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಕನ್ನಡಕ್ಕೆ ಪದಗಳನ್ನು ಪಡೆದುಕೊಳ್ಳುವಾಗ್ ಅಲ್ಪಸ್ವಲ್ಪ ಬದಲಾವಣೆಗೆ ಒಳಪಟ್ಟ ಹಾಗೂ ಬಹಳಷ್ಟು ಬದಲಾವಣೆಗೆ ಒಳಪಟ್ಟ ಪದಗಳು ಇವೆ.

ತತ್ಸಮ: ತತ್ ಎಂದರೆ ಅದಕ್ಕೆ, ಸಮ ಎಂದರೆ ಸಮಾನ ಎಂದರ್ಥ. ಹಾಗಾಗಿ ತತ್ಸಮ ಎಂದರೆ ಸಂಸ್ಕೃತ ಕ್ಕೆ ಸಮಾನವಾದುದು ಎಂದರ್ಥ.

ಸಂಸ್ಕೃತ ದಿಂದ ಕನ್ನಡಕ್ಕೆ ಬರುವಾಗ ಯಾವುದೇ ಬದಲಾವಣೆ ಹೊಂದದೆ ಹಾಗೆಯೇ ಬಂದು ಸೇರಿದ ಪದಗಳೂ ಇವೆ. ಉದಾ: ರಾಮ ಭೀಮ ವಸಂತ ಸೋಮ ಚಂದ್ರ ಕರ್ತೃ ಸ್ತ್ರೀ ಇತ್ಯಾದಿ ಪದಗಳು. ಮಾಲೆ ಶಾಲೆ ಆಶೆ, ನಿದ್ರೆ ಇತ್ಯಾದಿ 'ಆ' ಕಾರಾಂತ ಪದಗಳು 'ಎ' ಕಾರಾಂತವಾಗಿ ಬದಲಾವಣೆಗೊಂಡ ಪದಗಳೂ ಇವೆ. ಇಂತಹ ಪದಗಳನ್ನು 'ತತ್ಸಮ' ಗಳೆಂದು ಕರೆಯಲಾಗುತ್ತದೆ.

ತದ್ಭವ: ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಅಥವಾ ಪೂರ್ಣ ಬದಲಾವಣೆ ಹೊಂದಿರುವ ಪದಗಳೇ ತದ್ಭವಗಳು ('ತತ್' ಎಂದರೆ 'ಅದರಿಂದ' ಅಂದರೆ 'ಸಂಸ್ಕೃತ ದಿಂದ', 'ಭವ' ಎಂದರೆ 'ಹುಟ್ಟಿದ' ಅಂದರೆ 'ಸಂಸ್ಕೃತ ದಿಂದ ಹುಟ್ಟಿದ', ಎಂದರ್ಥ.) ಸಿರಿ, ಬಾವಿ, ದನಿ,

ಆಸೆ ಮುಂತಾದ ಪದಗಳು ಅಲ್ಪಸ್ವಲ್ಪ ಬದಲಾವಣೆ ಹೊಂದಿದ ಪದಗಳು. ಬಸದಿ, ಬೇಸಗೆ, ಕೊಡಲಿ, ಬಸವ, ಬಿನ್ನಣ, ಮುಂತಾದ ಪದಗಳು ಪೂರ್ಣ ಬದಲಾವಣೆ ಹೊಂದಿದ ಪದಗಳು.

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಗುಣಿತಾಕ್ಷರ ಎಂದರೇನು?
2. ಸಂಯುಕ್ತಾಕ್ಷರ ಎಂದರೇನು? ಉದಾಹರಣೆ ನೀಡಿ.
3. ದೇಶ್ಯ ಮತ್ತು ಅನ್ಯ ದೇಶ್ಯ ಪದಗಳನ್ನು ಪಟ್ಟಿ ಮಾಡಿ.
4. ಕನ್ನಡದಲ್ಲಿರುವ ಯಾವುದಾದರು ಐದು ತದ್ಭವ ಪದಗಳನ್ನು ಪಟ್ಟಿ ಮಾಡಿ.

II. ಪ್ರಾಯೋಗಿಕ ಭಾಷಾಭ್ಯಾಸ

1. **ಕೊಟ್ಟಿರುವ ಪದಗಳಲ್ಲಿರುವ ಗುಣಿತಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ.**

   ಹೋಟೆಲ್, ಮಾಲೀಕ, ರಸ್ತೆ, ಗ್ರಾಹಕ, ಗಾಂಧೀಜಿ, ಇವರು, ಪುಣ್ಯಾತ್ರ,

2. **ಕೊಟ್ಟಿರುವ ಪದಗಳಲ್ಲಿರುವ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.**

   ದಿನಪತ್ರಿಕೆ, ಅಗತ್ಯ, ಅಮ್ಮ, ವಸ್ತು, ಪುಕ್ಕಟ್ಟೆ, ಹಣ್ಣಿನರಸ, ನಿಲ್ದಾಣ, ಮಣ್ಣು, ಸಂಪ್ರದಾಯ, ಶುದ್ಧ, ಅಗ್ಗ, ಸಂಸ್ಕೃತಿ, ಪ್ರವಾಸ, ಶಕ್ತಿ, ಹುನ್ನಾರ

3. **ಕೊಟ್ಟಿರುವ ಪದಗಳ ತದ್ಭವ ರೂಪ ಬರೆಯಿರಿ**

   ವರ್ಷ, ಪ್ರಾಣ, ಶಕ್ತಿ, ಪುಣ್ಯ

4. **ಕೊಟ್ಟಿರುವ ಪದಗಳಲ್ಲಿರುವ ದೇಶೀಯ ಮತ್ತು ಅನ್ಯದೇಶೀಯ ಪದಗಳನ್ನು ಆರಿಸಿ ಬರೆಯಿರಿ**

   ದೊಡ್ಡದು,ಬಸ್ಸು, ಬರ್ಗರ್ , ಪಾನಕ, ವಾಟರ್, ಸಣ್ಣ, ಹುನ್ನಾರ

ಪೂರಕ ಓದು:

1.ಗೊರೂರು ರಾಮಸ್ವಾಮಿ ಅಯ್ಯಂಗಾರರ ಅಮೇರಿಕಾದಲ್ಲಿ ಗೊರೂರು ಪುಸ್ತಕವನ್ನು ಓದಿರಿ.

2.ನೇಮಿಚಂದ್ರ ಅವರ ಬದುಕು ಬದಲಿಸಬಹುದು ಕೃತಿಯನ್ನು ಓದಿರಿ.

3. ತಲಕಾಡಿನ ವೈಭವ -ಹಿರೇಮಲ್ಲೂರು ಈಶ್ವರನ್

ಪ್ರವೇಶ:

ನಾವು ಇಂದು ಧಾರ್ಮಿಕ ಭಾವನೆ, ಪ್ರಕೃತಿ ವೀಕ್ಷಣೆ, ಶೈಕ್ಷಣಿಕ ಅರಿವು, ಮನೋರಂಜನೆ, ಮೊದಲಾದ ಉದ್ದೇಶಗಳಿಗಾಗಿ ದೇಶ ವಿದೇಶಗಳ ಪ್ರವಾಸ ಕೈಗೊಂಡು ಲೋಕಾನುಭವ ಪಡೆಯುತ್ತಿದ್ದೇವೆ. ತಾವು ಪಡೆದ ಅನುಭವಗಳನ್ನು ಬರೆದು ಕಥಾ ರೂಪದಲ್ಲಿ ಪ್ರಕಟಿಸಿ ಇತರರಿಗೂ ಮಾರ್ಗದರ್ಶನವಾಗುವಂತೆ ಮಾಡುವ ಕಾರ್ಯವನ್ನು ಕೆಲ ಸಾಹಿತಿಗಳು ಕವಿಗಳು ಮಾಡುತ್ತಾ ಬಂದಿದ್ದು, ಇಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಪ್ರವಾಸ ಕಥನ'ವು ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ. ಇದು ವಾಚಕರಿಗೆ ಪ್ರವಾಸದ ಪರೋಕ್ಷ ಮಾಹಿತಿಯನ್ನು ದಟ್ಟವಾಗಿ ಕಟ್ಟಿಕೊಡುತ್ತವೆ. ಈ ಪ್ರವಾಸ ಸಾಹಿತ್ಯವನ್ನು ಸ್ಥಳೀಯ ಪ್ರವಾಸ, ದೇಶೀ ಪ್ರವಾಸ ಮತ್ತು ವಿದೇಶಿ ಪ್ರವಾಸವೆಂದು ಮೂರು ಭಾಗಗಳಾಗಿ ಮಾಡಿ ಅಧ್ಯಯನ ಮಾಡುವಷ್ಟು ಸಮರ್ಥವಾಗಿ ಪ್ರವಾಸ ಸಾಹಿತ್ಯ ಬೆಳೆದಿದೆ. ಪ್ರಕೃತ ಪ್ರವಾಸ ಕಥನವು ಸ್ಥಳೀಯ ಪ್ರವಾಸವಾಗಿದ್ದು ತಲಕಾಡಿನ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸ್ಥಳಪುರಾಣವನ್ನು ತಿಳಿಸುತ್ತಾ ಸಮಗ್ರ ಇತಿಹಾಸವನ್ನು ಓದುಗರ ಮನಮಿಡಿವಂತೆ ವಿವರಿಸಲಾಗಿದೆ.



1950 ನೇಯ ಇಸವಿ ಅಕ್ಟೋಬರ್ ತಿಂಗಳು ಮಂಗಳವಾರ 20ನೇಯ ತಾರೀಖು, ಶಿವನ ಸಮುದ್ರದ ಪ್ರವಾಸಿಗರ ನಿಲ್ದಮನೆಯಲ್ಲಿ ಕುಳಿತುಕೊಂಡು ಈ ದಿನದ ಪಯಣದ ವಿವರ ಬರೆಯುತ್ತಿದ್ದೇನೆ. ಈಗ ರಾತ್ರಿ ಹನ್ನೆರಡು ಹೊಡೆದು ಹದಿನೈದು ನಿಮಿಷವಾಗಿದೆ.

ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ. ನನ್ನ ಬಳಿ ಈ ತಂಗು ಮನೆಯಲ್ಲಿ ನನ್ನ ಗೆಳೆಯರು, ಕನ್ನಡದ ಯಾತ್ರಿಕರು ಮಲಗಿಕೊಂಡಿದ್ದಾರೆ. ಇಂದು ದಿನವೆಲ್ಲ ಅಲೆದು ಅಲೆದು ಅವರು ದಣಿದು ನಿದ್ರೆ ಹೋಗಿದ್ದಾರೆ.

ಶಿವನಸಮುದ್ರವನ್ನು ಒಳಸೇರುವ ಮುನ್ನ ಬಾಗಿಲ ಬಳಿ ನಿಂತ ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು. ನಿಲ್ಲನೆಯನ್ನು ಕೂಡಲೆ ಖಾಲಿ ಮಾಡಿಸಿದರು. ಹಾಸಿಗೆ ಹಾಸಿಕೊಟ್ಟರು. ಊಟ ಉಪಚಾರದ ಬಗೆಗೆ ಕೇಳಿದರು. ಕೊನೆಗೆ ಹೋಗುವಾಗ 'ಗುಡ್‌ನಾಯಿಟ್' ಅಂದರು. ಸುಬ್ರಹ್ಮಣ್ಯಮ್ ನೌಕರನೇನೋ ಅಹುದು. ಆದರೆ ಅವರಿತ್ತ ಸ್ವಾಗತ, ವಿಶ್ವಾಸದ ನುಡಿ ನೆನೆದರೆ ನಾವು ಸುಬ್ರಹ್ಮಣ್ಯನಿಗಿಂತ ಸಣ್ಣವರು ಎನ್ನುವಲ್ಲಿ ಸಂದೇಹವಿಲ್ಲ!

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ ಇದೆ. ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ. ಸುಮಾರು ಕ್ರಿ. ಶ. 500 ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ತಲಕಾಡು ಪುಣ್ಯಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು. ಅವನ ಹೆಸರು ಚಾವುಂಡರಾಯ. ಆತ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿ. ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ರಾಯ', 'ಅಣ್ಣ' ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ. ಸ್ವತಃ ಕವಿ. 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ, ಅವನು ಕನ್ನಡಕ್ಕೆ ಕೊಟ್ಟ ಕಾಣಿಕೆ.

ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲಿನಿಂದ ತಂದೆತಾಯಿಯರಿಗೆ ಹೇಳದೆ ಬಳೆಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನ ಓಡಿ ಬಂದನು. ಏನು ನಂಬಿ ಬಂದ? ತಲಕಾಡಿನ ಮಣ್ಣನ್ನು! ಇಲ್ಲಿ ರಾಯನಿದ್ದಾನೆ. ಅತ್ತಿಮಬ್ಬೆ ಇದ್ದಾಳೆ. ಅಜಿತಸೇನ ಗುರುಗಳ ಶಿಷ್ಯವೃಂದವಿದೆ. ಅದು ಕಲಾಶ್ರೀ ವಿಹರಿಸುವ ನಂದನವನ.

ಗಂಗವಾಡಿಯು ಹಬ್ಬಿ, ಕನ್ನಡದ ಬಾವುಟವನ್ನು ಬಿತ್ತರದ ಬಾನಿನೆಡೆ ಹಾರಿಸುತ್ತ "ಓಹೋ! ಕನ್ನಡನಾಡು, ಆಹಾ! ಕನ್ನಡನುಡಿ, ಹಾರಿಸಿ, ತೋರಿಸಿ ಕೆಚ್ಚೆದೆಯ ಬಾವುಟ" ಎಂದು ಹಾಡುತ್ತಿರುವ ಹೊತ್ತಿಗೆ ಚೋಳ ದೇಶದ ಕಡೆಯಿಂದ ಬಿರುಗಾಳಿ ಬೀಸಿತು. ಚೋಳರು ಬಂದರು. ಗುಡಿಗೋಪುರಗಳನ್ನು ಕಟ್ಟಿಸಿದರು. ರಾಜೇಶ್ವರ, ವೈಕುಂಠನಾರಾಯಣ, ಮರಳೇಶ್ವರ, ಪಾತಾಳೇಶ್ವರ, ವೈದ್ಯೇಶ್ವರ ಗುಡಿಗಳನ್ನು ಕಟ್ಟಿಸಿದರು.

1116, ವಿಷ್ಣುವರ್ಧನ ದೊರೆಯ ಆಳ್ವಿಕೆ ಪ್ರಾರಂಭವಾಯಿತು. ವಿಷ್ಣುವರ್ಧನ ದೊರೆಯ ಕಾರ್ಯವನ್ನು ಕೇಳುತ್ತೀರಾ? ವಿಕ್ರಮ ಚೋಳನ ಸೇನಾನಿ ಆದಿಯಮನನ್ನು ಮನೆಗೆ ಕಳುಹಿಸಿ ಹೊಯ್ಸಳರ ಕನ್ನಡ ಬಾವುಟವನ್ನು ಹಾರಿಸಿ, ಗೆಲುವಿನ ಸ್ಮಾರಕವಾಗಿ ತಲಕಾಡಿನ ನೆಲದ ಮೇಲೆ ವಿಜಯನಾರಾಯಣನ ಗುಡಿಕಟ್ಟಿ ಮನೆಗೆ ಬಂದು ಗೆಲುವಿನ ಕಥನವನ್ನು ಬಣ್ಣಿಸಿಯೇ ಬಣ್ಣಿಸಿದರು. ಹೊಯ್ಸಳರು ಹೋದ ನಂತರ ವಿಜಯನಗರದ ರಾಯರು ಬಂದರು. ಮೈಸೂರಿನ ಒಡೆಯರು ಬಂದರು. ಆದರೆ ಯಾರು ಬಂದರೇನು? ಯಾರು ಹೋದರೇನು? ತಿರುಗುವ ಕಾಲಚಕ್ರವನ್ನು ನಿಲ್ಲಿಸುವುದಕ್ಕೆ ಯಾರಿಗೆ ಸಾಧ್ಯ? ತಲಕಾಡಿಗೆ ಕೆಟ್ಟ ಹೊತ್ತು ಕಾಯ್ದುಕೊಂಡು ಕುಳಿತಿದೆ. ತಪ್ಪಿಸಲು ಏನು ತಪಸ್ಸು ಮಾಡಿದರೂ ಸಾಧ್ಯವೇ ಇಲ್ಲವಾಗಿದೆ.

ನಾ ಮುಂದೆ ನೀ ಮುಂದೆ ಎಂದು ತಲಕಾಡಿನ ಕಡೆಗೆ ಪ್ರವಾಸಿಗರನ್ನು ಹೊತ್ತುಕೊಂಡೊಯ್ಯುತ್ತಿದ್ದ ಎರಡು ಮೋಟಾರುಗಳು ಓಡುತ್ತಿರುವಾಗ ನನ್ನ ಕಣ್ಮುಂದೆ ತಲಕಾಡಿನ ನೆಲದ ಮೇಲೆ ವೈಭವದಿಂದ ರಾಜ್ಯವಾಳಿದವರ ಕಥೆ ಹಕ್ಕಿಯಂತೆ ಚಲಿಸಿ ಪಾತರಗಿತ್ತಿಯಂತೆ ಕುಣಿದು ಮೃಗಜಲದಂತೆ ಮಾಯವಾಯಿತು. ಇದು ಕೀರ್ತಿನಾರಾಯಣನ ದೇಗುಲ. ಕ್ರಿಸ್ತಶಕಾಬ್ದ 1117 ನೆಯ ವರ್ಷದಲ್ಲಿ ವಿಷ್ಣುವರ್ಧನದೇವ ತಲಕಾಡಿನ ವಿಜಯದ ನಿಮಿತ್ತ ವೀರನಾರಾಯಣನ ಹೆಸರಿನಲ್ಲಿ ಗುಡಿ ಕಟ್ಟಿಸಿದನು.

ಕೀರ್ತಿನಾರಾಯಣ ದೇವಾಲಯದ ಆಚೆಗೆ 150 ಗಜದ ಅಂತರದಲ್ಲಿ ವೈದ್ಯೇಶ್ವರ ದೇವಾಲಯ! ಈ ದೇವಾಲಯದ ರಚನೆಯ ಕಾಲ ನಿಶ್ಚಿತವಾಗಿ ತಿಳಿದು ಬಾರದಿದ್ದರೂ ಈಗ ಸಿಕ್ಕಿರುವ ಆಧಾರಗಳ ಅನ್ವಯ ಇದರ ಕಾಲವನ್ನು ಹದಿಮೂರನೆಯ ಶತಮಾನದ ಪೂರ್ವಕ್ಕೆ ತಂದಿರುವರು. ದೇವಾಲಯದ ಹೊರವಲಯದಲ್ಲಿ ಇರುವ ಕಲಶಗಳೂ ಗರ್ಭಗುಡಿಯ ಗೋಪುರವೂ ಶಿಲ್ಪದ ನಿರ್ಮಾಣದಲ್ಲಿ ತೋರಿರುವ ಕೆಲವು ವಿಶಿಷ್ಟ ರೂಪಗಳೂ ಕಟ್ಟಡಕ್ಕೆ ಉಪಯೋಗಿಸಿರುವ ಸಾಮಗ್ರಿಯೂ ಈ ಕಾಲವನ್ನು ನಿರ್ದೇಶಿಸುವುವು. ಇವು ಶೃಂಗೇರಿಯ ವಿದ್ಯಾಶಂಕರ ದೇಗುಲ, ಹಂಪೆಯ ಹಜಾರರಾಮರ ಗುಡಿ, ತಾಡಪತ್ರಿಯ ಲೇಪಾಕ್ಷಿ ಮಂದಿರ, ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಸರಿ ಹೊಂದುವ ಕಟ್ಟಡಗಳಾಗಿವೆ.

ಸಂಜೆ ಧಾವಿಸಿ ಬರುತ್ತಲಿದ್ದಿತು. ಕಪ್ಪುಪರದೆ ಇಳೆಯ ಮೇಲೆ ರಭಸದಿಂದ ಇಳಿಯುತ್ತಲಿದ್ದಿತು. ನಾವಾಗ ಪಾತಾಳೇಶ್ವರನ ಗುಡಿಯಿಂದ ಮರಳೇಶ್ವರ ದೇಗುಲದೆಡೆಗೆ, ಮರಳೇಶ್ವರನಿಂದ ಗೋಕರ್ಣೇಶ್ವರ ಅಲ್ಲಿಂದ ವೀರಭದ್ರನೆಡೆಗೆ ಮರಳಿನಲ್ಲಿ ಸಿಕ್ಕಿ ಬೀಳುತ್ತಿದ್ದ ಕಾಲುಗಳನ್ನು ಕಸುವಿನಿಂದ ಕೀಳುತ್ತ ಮುಂದಕ್ಕೆ ಬಾಗಿ ಉದ್ವೇಗ ಅನುತಾಪಗಳನ್ನು ಬೆಂದ ಹೃದಯದಲ್ಲಿರಿಸಿಕೊಂಡು ನಾಗಾಲೋಟಕ್ಕೆ ತೊಡಗಿದ್ದೆವು.

ಮೂರು ಮೈಲುಗಳಾಚೆ ವಿಜಯಪುರ, ವಿಜಯಪುರದ ಅರ್ಕೇಶ್ವರನ ದರ್ಶನವೊಂದು ಮುಗಿದರೆ ತಲಕಾಡಿನ ಪಂಚಲಿಂಗಗಳ ದರ್ಶನ ಪೂರ್ತಿಯಾಗುವುದೆಂದು ನಂಬಿ ಆ ದಾರಿಯಲ್ಲಿ ನಡೆದಾಗ ಮೂಡಣ ದಿಗಂತದಲ್ಲಿ ಕಾರ್ತಿಕ ಹುಣ್ಣಿಮೆಯೆಡೆಗೆ ನಡೆದಿದ್ದ ಚಂದ್ರಮ ಮೆಲ್ಲಮೆಲ್ಲಗೆ ಮೇಲೇರುತ್ತಿದ್ದ. ದಾರಿ

ಕೊರಕಲು, ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರ. ಹಳ್ಳವೊಂದು ಇದಿರಾಯಿತು. ಮೋಟಾರು ನಿಂತೇ ಬಿಟ್ಟಿತು. ಸಾರಥಿಗೆ ಹೇಳಿದೆ! ಅರ್ಕೇಶ್ವರ ದೇವಾಲಯ ಕಾಣದೆ ಹೋದರೆ ಮನಸ್ಸಿನಲ್ಲಿ ಕೊನೆಯವರೆಗೂ ಅತೃಪ್ತಿ ಉಳಿಯುತ್ತದೆ. ಏನು ಮಾಡಲಿ?

ನನ್ನ ಮನದ ಇಂಗಿತವನ್ನು ಅರಿತ ಸಾರಥಿ "ಬನ್ನಿ, ನಾವಿಬ್ಬರೂ ಮುಂದಕ್ಕೆ ಹೋಗಿ ನೋಡಿಕೊಂಡು ಬರೋಣ, ಸಿಕ್ಕರೆ ತಿರುಗಿ ಬಂದು ಇವರನ್ನು ಕರೆದುಕೊಂಡು ಹೋಗೋಣ" ಎಂದನು. ಇಬ್ಬರೂ ಹೋದೆವು. ರಾತ್ರಿ ಒಂದು ಗಂಟೆ. ಎಡಬಲಕ್ಕೆ ಶಾಲಿವನ, ನರಿಗಳು ಬಯಲಾಟದ ತಾಳಗತಿಗೆ ತಕ್ಕಂತೆ ಕೂಗುವ ಹಿಮ್ಮೇಳದವರಂತೆ ಕೂಗುತ್ತಲಿದ್ದವು. ಅನತಿ ದೂರ ಹೋಗುವಷ್ಟರಲ್ಲಿ ಗಿಡ ಮರಗಳ ಪೊದೆಯಲ್ಲಿ ಏನೋ ಬೆಳ್ಳಬೆಳ್ಳಗೆ, ಮಸುಕುಮಸುಕಾಗಿ ಕಂಡಿತು. ಎದೆ ಜೋರಿನಿಂದ ಹಾರತೊಡಗಿತು. ಧಾವಿಸಿದೆವು, ಸಮೀಪಿಸಿದೆವು, ಯುರೇಕಾ! ಯುರೇಕಾ!

ಆನಂದದ ಆವೇಶದಲ್ಲಿ ನನ್ನ ಯಾತ್ರಿಕರಿಗೆ ಕೇಳುವಂತೆ ಚೀರು ಧ್ವನಿಯಿಂದ "ಬರ್ರೋ ಗುಡಿ ಸಿಕ್ಕಿತು. ಬರ್ರೋ ದೇವಾಲಯ ದೊರಕಿತು", ಎಂದು ಕೂಗಿದೆ. ಇವರೆಲ್ಲ ಬಂದರು ಅರ್ಕೇಶ್ವರ ಲಿಂಗ ತಲಕಾಡಿನ ಪಂಚಲಿಂಗಕ್ಕೆ ಸೇರಿದ್ದು. ಗೋಕರ್ಣ ತೀರ್ಥದಲ್ಲಿ ಮಿಂದು ಐದೂ ಲಿಂಗಗಳನ್ನು ಒಂದೊಂದು ಸಾರಿ ಸಂದರ್ಶಿಸಿ ವೈದ್ಯೇಶ್ವರ ಲಿಂಗಕ್ಕೆ ವರದಿಯನ್ನೊಪ್ಪಿಸಿ ಸಂಜೆ ಮುಗಿಯುವುದರೊಳಗೆ ಪಂಚಲಿಂಗಗಳ ದರ್ಶನವನ್ನು ಪೂರೈಸಿದರೆ ಶ್ರದ್ಧಾವಂತನಾದ ಭಕ್ತನಿಗೆ ಮುಕ್ತಿ ದೊರಕುವುದೇ ನಿಜ!

ಈಗ ಮಧ್ಯಾಹ್ನವಾಗಿದೆ, ನೇಸರು ಬಾನಿನ ನಡುನೆತ್ತಿಯಿಂದ ಈಚೆಗೆ ಪಡುವಣಕ್ಕೆ ತಿರುಗಿ ಎರಡು ತಾಸಾಗಿದೆ. ನಾವೀಗ ಹೊಯ್ಸಳರ ನಾಡಿನಲ್ಲಿ ಸಂಚರಿಸುತ್ತಿದ್ದೇವೆ. ಕಪಿಲಾನದಿಯನ್ನು ಆ ಕಡೆಗೆ ಬಿಟ್ಟು ಈಚೆಗೆ ಉತ್ತರಾಭಿಮುಖವಾಗಿ ಹೊರಟು ಮುಂದಕ್ಕೆ ಬಂದರೆ ಹೊಯ್ಸಳ ಬಲ್ಲಾಳರ ಅಭಿಮಾನದ ಕಲಾಸಂಪದವಾಗಿ ನಿಂತಿರುವ ಅನರ್ಘ ವಾಸ್ತುಶಿಲ್ಪ ಕಲಾರತ್ನವೊಂದನ್ನು ಕಾಣುತ್ತೇವೆ. ಅದೇ ಸೋಮನಾಥ ದೇವಾಲಯ.

ಹೊಯ್ಸಳ ಬಲ್ಲಾಳರು ಕನ್ನಡದ ಕುಲದೀಪಕರು. ಕ್ರಿಸ್ತಶಕಾಬ್ದ ಸಾವಿರದ ಇಸವಿಯಿಂದ ಹದಿಮೂರು ನೂರರವರೆಗೆ ಎಂದರೆ ಅಖಂಡ ಮೂನ್ನೂರು ವರ್ಷಗಳ ಪರ್ಯಂತ ಕನ್ನಡದ ನಂದಾದೀವಿಗೆಯನ್ನು ಹಚ್ಚಿ ನಾಡುನುಡಿಯನ್ನು ಸಂರಕ್ಷಿಸಿದರು. ಈ ವಂಶದ ಮೂಲಪುರುಷನ ಹೆಸರು ಸಳ. ಮೂಡಿಗೆರೆ ತಾಲೂಕಿನಲ್ಲಿರುವ ಸೊಸೆವೂರು ಇವನ ಜನ್ಮಸ್ಥಳ. ಆಗಿನ ಸೊಸೆವೂರಿಗೆ ಈಗ ಅಂಗಡಿ ಎಂದು ಮರುನಾಮಕರಣವಾಗಿದೆ. ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳ, ಸುದತ್ತ ಗುರುವಿನ ಬಳಿ ಉಪದೇಶ ಕೇಳುತ್ತಾ ಕುಳಿತಂದು ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು. ಆಗ ಸುದತ್ತ ಮುನಿ ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ ಹೊಯ್‌ಸಳ ಎಂದು ಆದೇಶವಿತ್ತನೆಂದೂ ಸಳ ಕೂಡಲೆ ಹುಲಿಯನ್ನು ಎದುರಿಸಿ ಅದರ ಗಂಟಲಲ್ಲಿ ಖಡ್ಗವನ್ನು ತುರುಕಿ ಹುಲಿಯನ್ನು ಹೊಯ್ದನೆಂದೂ ತಿಳಿಯುವುದು. ಅಂದಿನಿಂದ ಸಳನ ಮನೆತನಕ್ಕೆ ಹೊಯ್ಸಳ ಎಂಬ ಹೆಸರು ಬಂದಿತು.

ನಮ್ಮ ದೇಗುಲಗಳೇ ನಮ್ಮ ರಾಷ್ಟ್ರದ ಚರಿತ್ರೆಯ ಹೆಗ್ಗುರುತು. ಇಂತಹ ದೇಗುಲಗಳ ಅಭ್ಯಾಸದಿಂದ ನಮ್ಮ ಬದುಕು ನಯವಾಗುತ್ತದೆ. ನಿರ್ಮಲವಾಗುತ್ತದೆ. ಕವಿಕಂಡ ಸತ್ಯ, ಶಿಲ್ಪಿ ಕಂಡ ಸೌಂದರ್ಯಗಳೇ ನಮ್ಮ ಬಾಳಿನ ಅಲಂಕಾರ.

ಕೃತಿಕಾರರ ಪರಿಚಯ



ಹಿರೇಮಲ್ಲೂರು ಈಶ್ವರನ್ (11-01-1922 ರಿಂದ 22-06-1998) ಅವರ ಊರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಹಿರೇಮಲ್ಲೂರು. ಸಮಾಜಶಾಸ್ತ್ರಜ್ಞರಾದ ಇವರು ಅಂತಾರಾಷ್ಟ್ರೀಯ ಪುರಸ್ಕೃತ ಸಾಹಿತಿ. ಲಿಂಗರಾಜ ಮಹಾವಿದ್ಯಾಲಯದಲ್ಲಿ ಎಂ. ಎ. ಪದವಿ ಪಡೆದ ಇವರು ಕೊಲ್ಲಾಪುರದಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಆರಂಭಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಶ್ರೀಯುತರು ಕೆನಡಾದ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಕವಿ ಕಂಡ ನಾಡು (ಪ್ರವಾಸ ಕಥನ), ವಿಷನಿಮಿಷಗಳು, ಭಾರತದ ಹಳ್ಳಿಗಳು, ವಲಸೆ ಹೋದ ಕನ್ನಡಿಗನ ಕತೆ, ಹಾಲಾಹಲ, ರಾಜಾರಾಣಿ ದೇಖೋ, ಶಿವನ ಬುಟ್ಟಿ, ತಾಯಿನೋಟ ಮೊದಲಾದವು ಇವರ ಕೃತಿಗಳು. ಶ್ರೀಯುತರ ಹರಿಹರನ ಕೃತಿಗಳು ಒಂದು ಸಂಖ್ಯಾನಿರ್ಣಯ ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರಕಿದೆ.

ಹಿರೇಮಲ್ಲೂರು ಈಶ್ವರನ್ ಅವರ ಕವಿಕಂಡ ನಾಡು ಪ್ರವಾಸ ಕಥನ (ಪುಟ 01-20) ದಿಂದ ಪ್ರಕೃತ ಭಾಗವನ್ನು ಆರಿಸಿ ಸಂಪಾದಿಸಿ ನಿಗದಿಪಡಿಸಿದೆ.

ಆಶಯ ಭಾವ

ಕರ್ನಾಟಕ, ಶ್ರೀಗಂಧ ಮತ್ತು ಚಂದನಗಳ ನಾಡು; ಚಿನ್ನದ ಖನಿ ಎಂಬ ಪ್ರತೀತಿ ಇದೆ. ಚಾಲುಕ್ಯ, ಹೊಯ್ಸಳ ಮುಂತಾದ ಶೈಲಿಗಳ ದೇವಾಲಯಗಳು ಹೇರಳವಾಗಿರುವುದರಿಂದ ಕರ್ನಾಟಕ ದೇವಾಲಯಗಳ ನಾಡೂ ಹೌದು. ಕರ್ನಾಟಕದ ತಲಕಾಡು ಪ್ರಕೃತಿ ಸೌಂದರ್ಯದಿಂದ ಕೂಡಿರುವುದರ ಜತೆಗೆ ರಾಜಮನೆತನಗಳ ವೈಭವಗಳನ್ನೂ ದೇವಾಲಯಗಳ ಸೌಂದರ್ಯವನ್ನೂ ಹೊಂದಿರುವುದು ವಿಶೇಷ. ಅದರಲ್ಲೂ ಪಂಚ

ಶಿವಾಲಯಗಳು ಆಸ್ತಿಕರ ಚಿತ್ತವನ್ನು ಗಮನಸೆಳೆಯುವಲ್ಲಿ ಮಹತ್ವದ ಪಾತ್ರವಹಿಸಿವೆ. ಪ್ರವಾಸಿಗರ, ಯಾತ್ರಾರ್ಥಿಗಳ, ವಾಸ್ತುತಜ್ಞರ ಕೇಂದ್ರಬಿಂದು ತಲಕಾಡಿನ ಚಿತ್ರಣವನ್ನು ಈ ಗದ್ಯಭಾಗ ಒಳಗೊಂಡಿದೆ.

ಪದಗಳ ಅರ್ಥ

ಅನರ್ಘ- ಶ್ರೇಷ್ಠ; ಉಜ್ವಲ- ಶ್ರೇಷ್ಠ; ಉದ್ರೇಕ- ಅತಿಶಯ, ಮೇರೆಮೀರು; ಕೆಚ್ಚೆದೆಯ- ಭಯವಿಲ್ಲದ ಮನಸ್ಸಿನ; ತಂಗುಮನೆ- ಪ್ರವಾಸಿಗರ ವಾಸ್ತವ್ಯಕ್ಕಾಗಿ ಇರುವ ಮನೆ;ತಾಸು- ಗಂಟೆ; ನಂದನವನ- ದೇವೇಂದ್ರನ ಉಪವನ, ಸಂತಸ ನೀಡುವ ಪ್ರದೇಶ; ನಿಲ್‌ಮನೆ- ಪ್ರವಾಸಿಗರು ಉಳಿದುಕೊಳ್ಳುವ ಮನೆ, ಅತಿಥಿಗೃಹ; ನೇಸರು- ಸೂರ್ಯ; ಪಡುವಣ- ಪಶ್ಚಿಮ; ಪಾತರಗಿತ್ತಿ- ಚಿಟ್ಟೆ, ಪತಂಗ; ಬಣ್ಣಿಸು- ವರ್ಣಿಸು; ಬಿತ್ತರ- ವಿಸ್ತಾರ; ಬಿರುಗಾಳಿ- ಜೋರಾಗಿ ಬೀಸುವ ಗಾಳಿ; ಮಸುಕು- ಅಸ್ಪಷ್ಟ; ಮೃಗಜಲ- ಬಿಸಿಲ್ಗುದುರೆ, ಮರೀಚಿಕೆ; ವಾಸ್ತುಶಿಲ್ಪ- ಕಟ್ಟಡ ರಚನೆಯ ಕಲೆ; ಸಂಪದ- ಸಂಪತ್ತು, ಐಶ್ವರ್ಯ; ಸಂಬೋಧಿಸು- ಕುರಿತು ಹೇಳು; ಸಾರಥಿ- ರಥವನ್ನು ಓಡಿಸುವವ, ವಾಹನ ಚಾಲಕ; ಸ್ಮಾರಕ- ನೆನಪಿಗಾಗಿ ಕಟ್ಟಿದ್ದು.

ಟಿಪ್ಪಣಿ

ಮೃಗಜಲ: ವಿಶಾಲ ಮರುಭೂಮಿಯಲ್ಲಿ, ಸಮತಟ್ಟಾದ ಬಟ್ಟಬಯಲಿನಲ್ಲಿ ನೀರಿಲ್ಲದಿದ್ದರೂ ಬಿಸಿಲಿನ ಝಳದಿಂದಾಗಿ ದೂರದಿಂದ ನೋಡುವಾಗ ನೀರಿದ್ದಂತೆ ಭಾಸವಾಗುವುದು. ಇದನ್ನು ಕಂಡು ಬಿಸಿಲಿನ ಝಳಕ್ಕೆ ಕಂಗಾಲಾಗಿ ಬಾಯಾರಿದ ಪ್ರಾಣಿಗಳು (ಮೃಗಗಳು) ನೀರು ಸಿಕ್ಕಿತೆಂದು ಸಂತೋಷದಿಂದ ಬಂದಾಗ ನಿರಾಶೆಗೆ ಒಳಗಾಗುತ್ತವೆ. ಮತ್ತೆ ಮುಂದೆ ನೋಡುತ್ತವೆ. ಆಗ ಅನತಿ ದೂರದಲ್ಲಿ ನೀರಿದ್ದಂತೆ ಕಂಡು ಓಡುತ್ತವೆ. ಅಲ್ಲಿಯೂ ನೀರು ಕಾಣದೆ ನಿರಾಶೆಗೊಳ್ಳುತ್ತವೆ. ಹೀಗೆ ನೀರಿಲ್ಲದ ಜಾಗದಲ್ಲಿ ನೀರಿದ್ದಂತೆ ಭಾಸವಾಗುವುದೇ ಮೃಗಜಲ.

ಯುರೇಕಾ: ಆರ್ಕಿಮಿಡಿಸ್ ಸ್ನಾನದ ತೊಟ್ಟಿಯಲ್ಲಿ ಸ್ನಾನಕ್ಕಾಗಿ ಇಳಿದಾಗ ಸ್ವಲ್ಪ ನೀರು ಹೊರಗೆ ಚೆಲ್ಲಿತು. ನೀರು ಚೆಲ್ಲಲು ಕಾರಣವೇನಿರಬಹುದೆಂದು ಚಿಂತಿಸಿದಾಗ ತನ್ನನ್ನು ಕಾಡುತ್ತಿದ್ದ ಕಿರೀಟದ ಸಮಸ್ಯೆಗೆ ಪರಿಹಾರ ದೊರೆಯಿತು. ತಕ್ಷಣ ಯುರೇಕಾ (ತಿಳಿಯಿತು, ಸಿಕ್ಕಿತು) ಎಂದು ಬೊಬ್ಬಿಡುತ್ತಾ ಓಡಿದನು. ಅದೇ ರೀತಿ ಇಲ್ಲಿ ಲೇಖಕರು ಮತ್ತು ವಾಹನ ಚಾಲಕರು ವಿಜಯಪುರದ ಅರ್ಕೇಶ್ವರನ ಗುಡಿಯನ್ನು ಹುಡುಕುತ್ತಾ ಹೋಗಿ ಸಿಕ್ಕಿದಾಗ ಯುರೇಕಾ ಎಂದು ಕೂಗಿಕೊಂಡರು.

ಕ್ರಿಸ್ತಶಕಾಬ್ದ: ಕ್ರಿಸ್ತ ಹುಟ್ಟಿದ ಕಾಲದಿಂದ ಆರಂಭವಾದ ಶಕೆ/ ವರ್ಷ

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಎಲ್ಲಿ?
2. ಗಂಗರ ಮೊದಲ ರಾಜಧಾನಿ ಯಾವುದು?
3. 'ರಾಯ', 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?
4. ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣ್ಕೆ ಏನು?
5. ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿಸಲು ಕಾರಣವೇನು?
6. ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು ಯಾವುದು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಶಿವನಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವುವು?
2. ಚಾವುಂಡರಾಯ ಯಾರು? ಆತನ ವಿಶೇಷತೆಯೇನು?
3. ಚೋಳರ ಸಾಧನೆಯೇನು?

III. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ.

1. ಗಂಗರ ಇತಿಹಾಸದ ವಿಶೇಷತೆಯೇನು?
2. ವೈದ್ಯೇಶ್ವರ ದೇವಾಲಯದ ನಿರ್ಮಾಣದ ಕಾಲನಿರ್ಣಯಕ್ಕೆ ಸಹಕಾರಿಯಾಗುವ ಅಂಶಗಳಾವುವು? ವಿವರಿಸಿ.
3. ಲೇಖಕರು 'ಯುರೇಕಾ' ಎಂದು ಕೂಗಿದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
4. ಸಳನ ವಂಶಕ್ಕೆ 'ಹೊಯ್ಸಳ' ಹೆಸರು ಬರಲು ಕಾರಣವೇನು?

IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ"
2. "ಅದು ಕಲಾಶ್ರೀ ವಿಹರಿಸುವ ನಂದನವನ"
3. "ಮೋಟರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರನು"
4. "ಬರ್ರೋ್ ಗುಡಿ ಸಿಕ್ಕಿತು ಬರ್ರೋ್ ದೇವಾಲಯ ದೊರಕಿತು"

ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

1. ಸಾಹಿತ್ಯಾವಲೋಕನ, ಭಕ್ತಿಭಂಡಾರಿಬಸವಣ್ಣ, ಹಿರೇಮಲ್ಲೂರು, ವಚನಧರ್ಮಸಾರ.

2. ಮಾರಸಿಂಹ, ಚಾವುಂಡರಾಯ, ರಾಚಮಲ್ಲ, ರಕ್ಕಸಗಂಗ.

3. ರಾಜೇಶ್ವರ, ಮರಳೇಶ್ವರ, ಮಹಾಲಿಂಗೇಶ್ವರ, ಪಾತಾಳೇಶ್ವರ.
4. ಮುಚ್ಚಿಟ್ಟು, ಹಾಡುತ್ತಿರುವ, ಉಧ್ಯಮವನ್ನು, ಬಾನಿನೆಡೆ.

ಸೈದ್ಧಾಂತಿಕ ಭಾಷಾಭ್ಯಾಸ

ಸಂಧಿ ಪರಿಚಯಾತ್ಮಕ ವಿವರ

ಮಾತನಾಡುವಾಗ ಕೆಲವು ಪದಗಳನ್ನು ಬಿಡಿಬಿಡಿಯಾಗಿ ಹೇಳದೆ ಕೂಡಿಸಿ ಹೇಳುತ್ತೇವೆ. ಉದಾ: ಅಲ್ಲಿಅಲ್ಲಿ ಎಂಬ ಎರಡು ಪದಗಳನ್ನು 'ಅಲ್ಲಲ್ಲಿ' ಎಂದು ಒಂದೇ ಪದವಾಗಿ ಹೇಳುತ್ತೇವೆ. ಇಲ್ಲಿ ಎರಡು ಪದಗಳ ನಾಲ್ಕು ಅಕ್ಷರಗಳು ಒಟ್ಟು ಸೇರಿ ಮೂರು ಅಕ್ಷರಗಳ ಒಂದು ಪದವಾಗಿದೆ. ಹೀಗೆ- ಪದ ರಚನೆ ಆಗುವಾಗ ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಒಟ್ಟು ಸೇರುವುದೇ ಸಂಧಿ. ಈ ರೀತಿಯಲ್ಲಿ ಪದಗಳು ಒಟ್ಟು ಸೇರುವಾಗ ಮೂಲ ಪದಗಳ ಅರ್ಥಕ್ಕೆ ಯಾವ ಲೋಪವೂ ಬರಬಾರದು. ಅರ್ಥಕ್ಕೆ ಲೋಪ ಬರುವುದಾದಲ್ಲಿ ಸಂಧಿ ಮಾಡಬಾರದೆಂಬ ನಿಯಮವುಂಟು.

ಹೀಗೆ ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಇದ್ದು ಸಂಧಿಯಾದರೆ ಅದು ಸ್ವರಸಂಧಿ. ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ಸ್ವರ ಅಥವಾ ವ್ಯಂಜನದ ಮುಂದೆ ವ್ಯಂಜವನ ಇದ್ದು ಸಂಧಿಯಾದರೆ ಅದು ವ್ಯಂಜನ ಸಂಧಿ. ಈ ಸಂಧಿಗಳಲ್ಲಿ 'ಕನ್ನಡಸಂಧಿ' ಮತ್ತು 'ಸಂಸ್ಕೃತ ಸಂಧಿ' ಗಳೆಂದು ಎರಡು ವಿಧಗಳಿವೆ. ಕನ್ನಡ ಪದಗಳೇ ಸೇರಿ ಅಥವಾ ಕನ್ನಡ ಮತ್ತು ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ 'ಕನ್ನಡಸಂಧಿ' ಎಂತಲೂ ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ 'ಸಂಸ್ಕೃತಸಂಧಿ' ಎಂತಲೂ ಕರೆಯಲ್ಪಡುತ್ತವೆ.

ಸಂಧಿಯಾಗುವಾಗ ಕೆಲವು ವ್ಯತ್ಯಾಸಗಳಾಗುತ್ತವೆ. ಈ ವ್ಯತ್ಯಾಸವೇ ಸಂಧಿಕ್ರಿಯೆ. ಈ ವ್ಯತ್ಯಾಸ ಪೂರ್ವಪದದ ಅಂತ್ಯದಲ್ಲಿ ಅಥವಾ ಪರಪದದ (ಉತ್ತರಪದ) ಆದಿಯಲ್ಲಿ ಇಲ್ಲವೇ ಎರಡೂ ಪದಗಳ ಮಧ್ಯದಲ್ಲಿ ನಡೆಯುತ್ತದೆ. ಈ ವರ್ಣ ವ್ಯತ್ಯಾಸಕ್ಕನುಗುಣವಾಗಿ ಲೋಪ, ಆಗಮ, ಆದೇಶ ಎಂಬ ಮೂರು ವಿಧದ ಸಂಧಿಕ್ರಿಯೆಗಳು ನಡೆಯುತ್ತವೆ.

ಉದಾ: ಬೇರೆ + ಒಬ್ಬ > ಬೇರೊಬ್ಬ

ರ್ + ಎ + ಒ > ರ್ + ಒ

ಇಲ್ಲಿ ಸಂಧಿಕ್ರಿಯೆಗೆ ಒಳಪಟ್ಟ ಅಕ್ಷರಗಳನ್ನು ಗೆರೆ ಹಾಕಿ ಗುರುತಿಸಿದೆ. ಸಂಧಿಕ್ರಿಯೆ ನಡೆಯುವ ಮೊದಲು ಬೇರೆ ಮತ್ತು ಒಬ್ಬ ಎಂಬ ಎರಡು ಪದಗಳಿರುವುದನ್ನು ಗಮನಿಸಬಹುದು. ಪೂರ್ವಪದದ ಅಂತ್ಯದಲ್ಲಿ ರ್ ಮತ್ತು ಎ ಎಂಬ ಎರಡು ಅಕ್ಷರಗಳಿವೆ. ಪರಪದದ ಆದಿಯಲ್ಲಿ ಒ ಎಂಬ ಅಕ್ಷರವಿದೆ. ಸಂಧಿಯಾದಾಗ ಬೇರೊಬ್ಬ ಎಂಬ ಪದ

ರಚನೆಯಾಗಿದ್ದು ಸಂಧಿಗೊಳಪಟ್ಟ ರೊ ಅಕ್ಷರದಲ್ಲಿ ರ್ ಮತ್ತು ಒ ಎಂಬ ಎರಡು ಅಕ್ಷರಗಳಿವೆ. ಹಾಗಾಗಿ ಪೂರ್ವಪದದ ಅಂತ್ಯದಲ್ಲಿದ್ದ ಎ ಎಂಬ ಸ್ವರಾಕ್ಷರ ಲೋಪವಾಗಿದೆ. ಇದೇ ಲೋಪಕ್ರಿಯೆ.

ಉದಾ: ಮನೆ + ಅಲ್ಲಿ > ಮನೆಯಲ್ಲಿ

ನ್ + ಎ + ಅ > ನ್ + ಎ + ಯ್ + ಅ

ಈ ಉದಾಹರಣೆಯನ್ನು ಗಮನಿಸಿದಾಗ ಸಂಧಿಯಾಗುವ ಮೊದಲು ಮೂರು ಅಕ್ಷರಗಳಿದ್ದು ಸಂಧಿಯಾದಾಗ ನಾಲ್ಕು ಅಕ್ಷರಗಳಾಗಿವೆ. ಇಲ್ಲಿ ಪೂರ್ವಪದದ ಅಂತ್ಯ ಮತ್ತು ಪರಪದದ ಆದಿಯ ಮಧ್ಯೆ ಯ್ ಎಂಬ ವ್ಯಂಜನಾಕ್ಷರ ಸೇರಿಕೊಂಡಿದೆ. ಹೀಗೆ ಹೊಸತಾಗಿ ಅಕ್ಷರ ಬಂದು ಸೇರುವುದೇ ಆಗಮಕ್ರಿಯೆ.

ಉದಾ: ಮಳೆ + ಕಾಲ > ಮಳೆಗಾಲ

ಳ್ + ಎ + ಕ್ + ಆ > ಳ್ + ಎ + ಗ್ + ಆ

ಇಲ್ಲಿ ಪರಪದದ ಆದಿಯಲ್ಲಿದ್ದ ಕ್ ಅಕ್ಷರದ ಬದಲಿಗೆ ಗ್ ಅಕ್ಷರ ಬಂದಿದೆ. ಹೀಗೆ ಒಂದು ಅಕ್ಷರದ ಬದಲಿಗೆ ಮತ್ತೊಂದು ಅಕ್ಷರ ಬರುವುದೇ ಆದೇಶಕ್ರಿಯೆ. ಸಂಧಿಕ್ರಿಯೆಯ ಹೆಸರಿನಿಂದಲೇ ಕನ್ನಡ ಸಂಧಿಗಳನ್ನು ಹೆಸರಿಸಲಾಗುವುದು. ಲೋಪಕ್ರಿಯೆ ಆದರೆ ಲೋಪಸಂಧಿ, ಆಗಮಕ್ರಿಯೆ ಆದರೆ ಆಗಮಸಂಧಿ ಮತ್ತು ಆದೇಶಕ್ರಿಯೆ ಆದರೆ ಆದೇಶಸಂಧಿ. ಹೀಗೆ ಕನ್ನಡದಲ್ಲಿ ಲೋಪ, ಆಗಮ ಮತ್ತು ಆದೇಶ ಎಂಬ ಮೂರು ವಿಧದ ಸಂಧಿಗಳಿವೆ.

ಲೋಪಸಂಧಿ: ಸಂಧಿಕ್ರಿಯೆ ಆಗುವಾಗ ಸ್ವರದ ಮುಂದೆ ಸ್ವರ ಬಂದು ಪೂರ್ವಪದದ ಸ್ವರ ಲೋಪವಾದರೆ ಅದು ಲೋಪಸಂಧಿ.

ಉದಾ: ಊರು + ಊರು > ಊರೂರು ಬಲ್ಲೆನು + ಎಂದು > ಬಲ್ಲೆನೆಂದು

ಊರು + ಇಂದ > ಊರಿಂದ

ಆಗಮಸಂಧಿ: ಸ್ವರದ ಮುಂದೆ ಸ್ವರಬಂದು ಸಂಧಿಯಾಗುವಾಗ 'ಯ' ಕಾರ ಅಥವಾ 'ವ' ಕಾರವು ಈ ಸ್ವರಗಳ ಮಧ್ಯೆಹೊಸದಾಗಿ ಸೇರಿದರೆ ಅದು ಆಗಮಸಂಧಿ.

ಉದಾ: ಕೈ + ಅನ್ನು > ಕೈಯನ್ನು ಚಳಿ + ಇಂದ > ಚಳಿಯಿಂದ

ಗುರು + ಅನ್ನು > ಗುರುವನ್ನು ಪುಸ್ತಕ + ಅನ್ನು > ಪುಸ್ತಕವನ್ನು

ಆದೇಶಸಂಧಿ: ಸಂಧಿಕ್ರಿಯೆ ಆಗುವಾಗ ಪರಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ ಆದೇಶಸಂಧಿ. ಕ ತ ಪ ಗಳಿಗೆ ಗ ದ ಬ ಗಳೂ ಕೆಲವೊಮ್ಮೆ ಪ ಬ ಮ ಗಳ ಬದಲಿಗೆ ವ ಕಾರವೂ ಆದೇಶವಾಗಿ ಬರುತ್ತವೆ.

ಉದಾ:
ಹುಲ್ಲು + ಕಾವಲು > ಹುಲ್ಲುಗಾವಲು
ಬೆನ್ + ಪತ್ತು > ಬೆಂಬತ್ತು
ಮೈ + ತೊಳೆ > ಮೈದೊಳೆ
ಕೆನೆ + ಪಾಲ್ > ಕೆನೆವಾಲ್

ಪ್ರಕೃತಿಭಾವ: ಆ + ಆಡು ಅಯ್ಯೋ + ಇದೇನು

ಓಹೋ + ಅಜ್ಜಿ ಬಂದರೇ ಅಕ್ಕಾ + ಇತ್ತಬಾ

ಕೊಟ್ಟಿರುವ ಉದಾಹರಣೆಗಳನ್ನು ಗಮನಿಸಿದಾಗ ಸ್ವರದ ಮುಂದೆ ಸ್ವರ ಬಂದಿರುವುದರಿಂದ ಲೋಪ ಅಥವಾ ಆಗಮ ಸಂಧಿ ಆಗಬೇಕಿತ್ತು. ಹಾಗೆ ಸಂಧಿ ಮಾಡಿದರೆ ಅರ್ಥ ಕೆಡುತ್ತದೆ. ಹಾಗಾಗಿ ಸಂಧಿ ಮಾಡುವುದಿಲ್ಲ. ಪ್ಲುತ ಸ್ವರದ ಮುಂದೆ ಸ್ವರ ಬಂದಾಗ; ಅಯ್ಯೋ, ಆಹಾ, ಓಹೋ ಮುಂತಾದ ಭಾವಸೂಚಕ ಅವ್ಯಯಗಳ ಮುಂದೆ ಸ್ವರ ಬಂದಾಗ ಹಾಗೂ ಆ ಎಂಬ ಪದದ ಮುಂದೆ (ಅಕ್ಷರದ ಮುಂದೆ ಅಲ್ಲ) ಸ್ವರ ಬಂದಾಗ ಸಂಧಿ ಮಾಡಬಾರದು. ಹೀಗೆ- ಸ್ವರದ ಮುಂದೆ ಸ್ವರ ಬಂದರೂ ಸಂಧಿಯಾಗದೆ ಇದ್ದ ಹಾಗೆಯೇ ಇರುವುದು ಪ್ರಕೃತಿಭಾವ.

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಸಂಧಿ ಎಂದರೇನು? ಅದರ ವಿಧಗಳನ್ನು ಹೇಳಿ.
2. ಸಂಧಿಕ್ರಿಯೆ ಎಂದರೇನು? ಅದರ ವಿಧಗಳನ್ನು ವಿವರಿಸಿ.
3. ಪ್ರಕೃತಿಭಾವ ಎಂದರೇನು? ಉದಾಹರಣೆ ಕೊಡಿ.

II. **ಕೊಟ್ಟಿರುವ ಪದಗಳನ್ನು ವಿಂಗಡಿಸಿ ಸಂಧಿ ಹೆಸರಿಸಿ.**

ನಿಮಿಷವಾಗಿದೆ, ದಿನವೆಲ್ಲ,ನಿಲ್ಲನೆಯನ್ನು, ಸಂದೇಹವಿಲ್ಲ, ಕಥನವಿದೆ, ಮಿಗಿಲಾಗಿ, ಚರಿತ್ರೆಯಿದೆ, ಹೆಸರಾಗಿದೆ, ತಲೆಯೆತ್ತಿ, ಮುಚ್ಚಿಟ್ಟು, ಬಾನಿನೆಡೆ, ಪೂರ್ತಿಯಾಗು, ಹಳ್ಳವೊಂದು, ತಾಸಾಗಿದೆ,ಊರಿಂದ.

ಪೂರಕ ಓದು:


1. ಡಾ. ಪ್ರಭುಶಂಕರ ಅವರ ಅಮೆರಿಕದಲ್ಲಿ ನಾನು ಮತ್ತು ಶಾಂತಿ ಪ್ರವಾಸ ಕಥನವನ್ನು ಓದಿ.
2. ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ ಅವರ ಗಂಗೆಯ ಶಿಖರಗಳಲ್ಲಿ ಪ್ರವಾಸ ಕಥನವನ್ನು ಓದಿ.

4. ಸಾರ್ಥಕ ಬದುಕಿನ ಸಾಧಕ- ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಪ್ರವೇಶ:

ಮಾನವನ ಜನ್ಮದ ಸಾರ್ಥಕತೆ, ಮೌಲ್ಯಯುತ ಜೀವನವನ್ನು ನಡೆಸುವುದರಿಂದ ಮಾತ್ರ ರೂಪುಗೊಳ್ಳಬಲ್ಲುದು. ಪ್ರತಿಯೊಬ್ಬರಿಗೂ ಸಾಧನೆಯ ಮೆಟ್ಟಿಲೇರುವ ವಿಪುಲ ಅವಕಾಶಗಳಿದ್ದರೂ ಸಾಧನೆಯನ್ನು ಸಾಧ್ಯವಾಗಿಸಿಕೊಂಡವರು ಕೆಲವರು ಮಾತ್ರ. ಇಂಥ ಸಾರ್ಥಕ ಬದುಕನ್ನು ಕಟ್ಟಿಕೊಂಡು ಮೌಲ್ಯಯುತ ಜೀವನ ನಡೆಸಿದ ಮಹಾನ್ ವ್ಯಕ್ತಿಗಳ ಜೀವನದ ಪ್ರಮುಖ ಘಟನೆಗಳ ಸ್ಥೂಲ ವಿಚಾರಗಳನ್ನು ಕಲಾತ್ಮಕವಾಗಿ ದಾಖಲಿಸುವುದೇ ‘ವ್ಯಕ್ತಿಚಿತ್ರ’. ಇಂದು ಆತ್ಮಕಥನ, ಜೀವನಚರಿತ್ರೆಗಳಂತೆ ವ್ಯಕ್ತಿಚಿತ್ರವು ಸಹ ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ.

‘ಅಧಿಕಾರ’ ಎಂಬುದು ಮನುಷ್ಯನ ವ್ಯಕ್ತಿತ್ವದ ಸತ್ವಪರೀಕ್ಷೆ ಎನ್ನುತ್ತಾರೆ. ಲೌಕಿಕ ಆಸೆ ಆಮಿಷಗಳಿಗೆ ಒಳಗಾಗದ ವ್ಯಕ್ತಿ ಆದರ್ಶ ವ್ಯಕ್ತಿತ್ವ ಹೊಂದಬಲ್ಲ ಎನ್ನುವ ಮಾತಿಗನುಗುಣವಾಗಿ, ಕನ್ನಡ ಸಾಹಿತ್ಯದಲ್ಲಿ ಅಪ್ರತಿಮ ಧೀಮಂತರಾಗಿ ಬೆಳೆದವರು ಡಿ. ವಿ. ಜಿಯವರು. ಸಾಹಿತಿಯಾಗಿ, ಪತ್ರಕರ್ತರಾಗಿ, ಸಂಪಾದಕರಾಗಿ ಮತ್ತು ರಾಜಕಾರಣಿಯಾಗಿದ್ದರೂ ಸಹ ಬದುಕಿನ ಮೌಲ್ಯಗಳಿಗೆ ಬೆಲೆ ಕೊಟ್ಟು ಜೀವನವನ್ನು ಸಾರ್ಥಕಗೊಳಿಸಿಕೊಂಡ ಈ ಮಹಾನ್ ಸಾಧಕನ ಆದರ್ಶ ಬದುಕಿನ ಚಿತ್ರಣವನ್ನು ಪ್ರಕೃತ ಗದ್ಯಭಾಗದಲ್ಲಿ ಸ್ಮರಿಸಲಾಗಿದೆ.



ಡಿವಿಜಿ ಅವರು ತಮ್ಮೊಡನೆ ಮಾತು ನಿಲ್ಲಿಸಿಬಿಟ್ಟರೆಂದು ದಿವಾನ್ ಮಿರ್ಜಾ ಸಾಹೇಬರಿಗೆ ಕಳವಳವಾಗಿ ಹೋಗಿತ್ತು. ಆಪ್ತರೆದುರು ಅದನ್ನು ತೋಡಿಕೊಂಡರು. ತಮ್ಮದು ಏನೂ ತಪ್ಪಿಲ್ಲ ಎಂದರು. ಅದಕ್ಕಾಗಿ ಅವರಿವರ ಮೂಲಕ ಪ್ರಯತ್ನ ಕೂಡ ಮಾಡಿದರು. ಆ ಕಾಲದ ದೊಡ್ಡ ದಿವಾನರನ್ನೂ ತಮ್ಮ ಸ್ನೇಹಕ್ಕಾಗಿ ಹೀಗೆ ಹಾತೊರೆಯುವಂತೆ ಮಾಡಿದ ವ್ಯಕ್ತಿಯೇನು ಸಾಮಾನ್ಯರೆ?

ಹಾಗೆಂದು ಅವರೇನು ದೊಡ್ಡದೊಡ್ಡ ಡಿಗ್ರಿ ಪಡೆದವರಲ್ಲ, ಎಸ್. ಎಸ್. ಎಲ್. ಸಿ. ಕೂಡ ದಾಟದ ಓದು. ಭಾರಿ ಶ್ರೀಮಂತರೋ ಎಂದರೆ ದಿನದಿನದ ಅಗತ್ಯ ಪೂರೈಸಿದ್ದೇ ಹೆಚ್ಚು ಎನ್ನುವಂಥ ಕೆಲಸ. ಸರ್ಕಾರಿ ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತಂತೂ ಇಲ್ಲವೇ ಇಲ್ಲ. ಆದರೆ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು.

ಇಂಥಾ ಸತ್ವಶಾಲಿ ವ್ಯಕ್ತಿತ್ವ ಡಿವಿಜಿಗೆ ಬಂದದ್ದು ಹೇಗೆ? ಕೇವಲ ಶೀಲ, ವಿವೇಕ, ನಿಸ್ಪೃಹತೆ, ಸ್ವಯಂ ಆರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ, ಮಿರ್ಜಾರ ಕಾಲಕ್ಕೆ ಡಿವಿಜಿ ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

ಡಿವಿಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು. ಅವರದು ವೇದಶಾಸ್ತ್ರ ಸಂಪನ್ನರಾದ ಹಿರಿಯರಿದ್ದ ಕುಟುಂಬ. ಅವರ ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಡಿವಿಜಿ ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದ ವ್ಯಕ್ತಿಗಳು ಇಬ್ಬರು. ಒಬ್ಬರು ಅವರ ಅಜ್ಜಿ, ಎಂದರೆ ತಾಯಿಯ ತಾಯಿ ಸಾಕಮ್ಮ. ಮಹರ್ಷಿಪ್ರಾಯರಾದ ಚೇತನ ಎಂದು ಡಿವಿಜಿ ಅವರನ್ನು ವರ್ಣಿಸಿದ್ದಾರೆ. ಇನ್ನೊಬ್ಬರು ಅವರ ಸೋದರಮಾವ ತಿಮ್ಮಪ್ಪ. ಪ್ರಸಿದ್ಧ ಕೃತಿಯಾದ ಮಂಕುತಿಮ್ಮನ ಕಗ್ಗದಲ್ಲಿ ತಿಮ್ಮ ಅವರ ಹೃದಯಸ್ಪರ್ಶಿಯಾದ ಚಿತ್ರಣವಿದೆ. ಆ ಚಿತ್ರಣಕ್ಕೆ ಆಧಾರವಾದ ವ್ಯಕ್ತಿತ್ವ ಈ ತಿಮ್ಮಪ್ಪನವರದೇ.

ಡಿವಿಜಿ ಮುಳಬಾಗಿಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಲೋವರ್ ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಿದರು. ಮುಂದಿನ ಓದಿಗೆ ಬೇರೆ ಊರಿಗೇ ಹೋಗಬೇಕು; ಆದರೆ ಹಣದ ಅನುಕೂಲವಿಲ್ಲ. ಓದು ಇಲ್ಲಿಗೆ ಸಾಕು ಎಂದು ತಂದೆ, ಅಜ್ಜಿ ತೀರ್ಮಾನಿಸಿದರು. ಆದರೆ ಡಿವಿಜಿ ಅವರ ಭಾಗ್ಯ ಎಂಬಂತೆ ಅವರ ಸಹಾಯಕ್ಕೆ ಬಂದವನು ರಸೂಲ್‌ಖಾನ್. ಆತನೊಬ್ಬ ಬಂಡಿ ಹೊಡೆಯುವ ವ್ಯಕ್ತಿ. ಬಡವ, ಪ್ರಾಮಾಣಿಕ. ಡಿವಿಜಿ ಅವರ ತಂದೆಗೆ ಬೇಕಾಗಿದ್ದವನು. “ಗುಂಡಣ್ಣ ತುಂಬ ಚುರುಕಾದ ಹುಡುಗ. ಅವನು ಮುಂದೆ ಓದಲೇಬೇಕು”, ಅಂತ ರಸೂಲ್‌ಖಾನ್ ಹಟ ಹಿಡಿದುಬಿಟ್ಟ. “ನೀವೆಲ್ಲ ಏನಾದರು ಹೇಳಿ. ಅವನನ್ನು ನನ್ನ ಬಂಡಿಯಲ್ಲಿ ಕೂರಿಸಿಕೊಂಡು ಬೌರಿಂಗ್ ಪೇಟೆ (ಬಂಗಾರಪೇಟೆ) ಗೆ ಹೋಗ್ತೀನಿ. ಬೆಂಗಳೂರಿನ ರೈಲಿನಲ್ಲಿ ಕೂರಿಸಿ ಟಿಕೆಟ್ ಕೊಡಿಸಿ, ಒಂದು ರೂಪಾಯಿ ಕೈ ಖರ್ಚಿಗೆ ಕೊಟ್ಟುಬಿಡ್ತೀನಿ. ಅವನ ಓದು ಮಾತ್ರ ನಡೀಲೇಬೇಕು”. ರಸೂಲ್‌ಖಾನ್‌ನ ಈ ನಿರ್ಧಾರ ಎಲ್ಲರನ್ನೂ ದಂಗುಬಡಿಸಿತು. ಎಲ್ಲ ಅವನು ಹೇಳಿದಂತೆಯೇ ನಡೆಯಿತು. ಡಿವಿಜಿ ಬೆಂಗಳೂರನ್ನು ಕಂಡದ್ದು ಹೀಗೆ ರಸೂಲ್‌ಖಾನನ ದಯೆಯಿಂದ.

ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದ ಕಾಲ. ಡಿವಿಜಿ ಆಗ ಯುವ ಪತ್ರಕರ್ತ. ದಸರಾ ಉತ್ಸವ ಬಂತು. ರಾಜ್ಯದ ಎಲ್ಲ ಪತ್ರಿಕೆಗಳೂ ಅದರ ವಿಶೇಷ ವರದಿ ನೀಡಿದವು. ಇದಾದ ನಾಲ್ಕು ದಿನಕ್ಕೆ ಪತ್ರಕರ್ತರಿಗೆಲ್ಲ ಸರ್ಕಾರದಿಂದ ದೊಡ್ಡ ಮೊತ್ತ ಸಂಭಾವನೆ ರೂಪದಲ್ಲಿ ಹೋಯಿತು. ಡಿವಿಜಿ ತಮಗೆ ಬಂದಿದ್ದ ಹಣದ ಸಹಿತ ದಿವಾನರಲ್ಲಿಗೆ ಬಂದರು.

"ಏನು ಬಂದಿರಿ ಗುಂಡಪ್ಪ?"

"ನನಗೆ ಈ ಹಣ ಯಾಕೆ ಕಳಿಸಿದ್ದಾರೆ?"

ದಸರಾ ಉತ್ಸವವನ್ನು ಚೆನ್ನಾಗಿ ವರದಿ ಮಾಡಿದ್ದೀರಿ, ಅದಕ್ಕೆ

"ಅದಕ್ಕೆ ಹಣ ಯಾಕೆ ಕಳಿಸಬೇಕು?"

"ಪತ್ರಕರ್ತರಿಗೆ ಓಡಾಟ, ಖರ್ಚು ಇರುತ್ತದೆ. ಅಲ್ಲದೆ ಹಿಂದಿನಿಂದ ಬಂದ ಪದ್ಧತಿ"

"ವರದಿ ಮಾಡುವುದು ಪತ್ರಕರ್ತರ ಕರ್ತವ್ಯ. ಅದಕ್ಕೆ ಖರ್ಚಾದರೆ ಪತ್ರಿಕೆಯವರು ಕೊಡಬೇಕು, ಸರ್ಕಾರವಲ್ಲ. ನನಗೆ ಈ ಹಣ ಖಂಡಿತ ಬೇಡ. ಬೇಡವೇ ಬೇಡ". ಎಂದರು ಡಿವಿಜಿ.

ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಹೇಳಿದರು.

"ಈ ಮನುಷ್ಯನ ರೀತಿಯೇ ಬೇರೆ. ಇವರಿಗೆ ನಾವು ಹಣ ಕೊಡಲು ಬರುವುದಿಲ್ಲ. ಅದನ್ನು ಹಿಂದಕ್ಕೆ ತೆಗೆದುಕೊಂಡು ಬಿಡಿ!"

ವಿಶ್ವೇಶ್ವರಯ್ಯ ಅವರು ತಮ್ಮ ಕೆಲಸ ಕಾರ್ಯಗಳಲ್ಲಿ ಎಷ್ಟೋ ಜನ ಮೇಧಾವಿಗಳ್ ಸಹಾಯ ಪಡೆಯುತ್ತಿದ್ದರು. ಪ್ರತಿಯಾಗಿ ಅದಕ್ಕೆ ತಕ್ಕ ಸಂಭಾವನೆಯನ್ನು ಕೊಡುತ್ತಿದ್ದರು. ಡಿವಿಜಿ ಅವರಿಂದಲೂ ಅವರು ಅನೇಕ ಕೆಲಸ ಮಾಡಿಸಿಕೊಂಡಿದ್ದುಂಟು. ಮೊದಲ ಸಲ ಅವರಿಗೆ ಸಂಭಾವನೆ ಕೊಡಲು ಹೋದಾಗ ಡಿವಿಜಿ ಒಪ್ಪಲಿಲ್ಲ. ಇದು ರಾಜ್ಯದ ಕೆಲಸ. ಅಲ್ಲದೆ ವಿಶ್ವೇಶ್ವರಯ್ಯ ಎಂಥ ಮಹಾವ್ಯಕ್ತಿ! ಅವರ ಜೊತೆಗೆ ವ್ಯವಹರಿಸಿದ್ದೇ ತಮಗೊಂದು ಹೆಮ್ಮೆ. ಹಾಗಿರುವಾಗ ಅದಕ್ಕೆ ಸಂಭಾವನೆಯೇ? ಎಂದಿಗೂ ಕೂಡದು. ಇದು ಅವರ ತರ್ಕ. ಆದರೆ ಈ ತರ್ಕ ನಡೆಯಲಿಲ್ಲ. ಡಿವಿಜಿ ಮೊಂಡಾದರೆ ವಿಶ್ವೇಶ್ವರಯ್ಯ ಜಗಮೊಂಡು. ಇದು ನನ್ನ ವೈಯಕ್ತಿಕ ಕೆಲಸ. ನನಗೆ ಇದಕ್ಕೆ ಹಣ ಬರುತ್ತದೆ. ನೀವು ತೆಗೆದುಕೊಳ್ಳಲೇಬೇಕು. ಇಲ್ಲದಿದ್ದರೆ ಮುಂದೆ ನಿಮ್ಮ ಸಹಾಯವೇ ಬೇಡ ಎಂದು ಕೋಪಿಸಿಕೊಂಡರು. ಆಯಿತು; ತೆಗೆದುಕೊಳ್ಳಲು ಡಿವಿಜಿ ಒಪ್ಪಿದರು. ಮುಂದೆ ವಿಶ್ವೇಶ್ವರಯ್ಯ ಅವರಿಗೆ ಪ್ರತಿಸಲವೂ ಚೆಕ್ಕು ಕೊಡುತ್ತಾ ಹೋದರು. ಡಿವಿಜಿ ಪಡೆಯುತ್ತಾ ಹೋದರು. ಆದರೆ ಆ ಚೆಕ್ಕುಗಳು ಬ್ಯಾಂಕಿನ ಮೆಟ್ಟಿಲನ್ನು ಹತ್ತಿದರೆ ತಾನೆ?

ಹಣವನ್ನು ಸರ್ಕಾರದ ಸಹಾಯವನ್ನು ಇಷ್ಟು ಉದಾಸೀನ ಮಾಡಿದ ವ್ಯಕ್ತಿ ಎಂಥ 'ಶ್ರೀಮಂತ' ರಿದ್ದಿರಬಹುದು. ಒಮ್ಮೆ ಡಿವಿಜಿಯ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಡಿವಿಜಿಗೆ ಹೋಗಲು ಆಗಲಿಲ್ಲ. ಮಕ್ಕಳನ್ನು ಕಳಿಸಿದರು. ಆರತಿ ಅಕ್ಷತೆಯ ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಾರೆ. ಗಂಡ ಅಸಮಾಧಾನದಿಂದ ಕೇಳಿದರು.

"ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"

'ಇಲ್ಲ'

'ಯಾಕೆ'?

'ಮಕ್ಕಳನ್ನು ಕಳಿಸಿದ್ದೇನಲ್ಲ'

"ಅದು ಸರಿ ನೀನೂ ಹೋಗಬೇಕಷ್ಟೆ. ಅವರು ನಮಗೆ ಬಹಳ ಬೇಕಾದವರು ನೀನು ಹೋಗದಿದ್ದರೆ ಬೇಸರಪಡುವುದಿಲ್ಲವೇ?"

"ಮನೆಯಲ್ಲಿ ಯಾರಾದರೂ ಇರಬೇಕಲ್ಲ"

"ನಾನು ಇರುತ್ತೇನೆ. ನೀನು ಹೋಗಿ ಬಾ."

ಅವರ ಹೆಂಡತಿ ಏನೇನೋ ಸಬೂಬು ಹೇಳಿದರು. ಡಿವಿಜಿ ಅದಕ್ಕೆ ಉತ್ತರ ಕೊಡುತ್ತಲೇ ಹೋದರು. ನಿಜವಾದ ಕಾರಣ ಕಡೆಗೆ ಹೊರಬರಲೇಬೇಕಾಯಿತು. "ನಾನು ಹೇಳಬಾರದೆಂದಿದ್ದೆ. ನೀವು ಪಟ್ಟುಹಿಡಿದು ನನ್ನ ಬಾಯಿ ಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೇ ನಿಮ್ಮ ಮರ್ಯಾದೆಗೆ ಊನಬಾರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ?"

ಡಿವಿಜಿ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. ಕನ್ನಡ ಸಾರಸ್ವತ ಲೋಕದ ಭೀಷ್ಮ ಎಂದು ಕರೆಸಿಕೊಂಡವರು. ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಇತರ ಸಾಹಿತಿಗಳಂತೆ ಅವರು ಸಾಹಿತಿ ಮಾತ್ರವಾಗಿರಲಿಲ್ಲ. ಹೆಸರಾಂತ ಪತ್ರಕರ್ತರಾಗಿದ್ದರು. ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳಿವಳಿಕೆಯುಳ್ಳವರಾಗಿದ್ದರು. ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ ಗೋಖಲೆ ಸಾರ್ವಜನಿಕ ಸಂಸ್ಥೆಯಂಥ ಪ್ರಸಿದ್ಧ ಸಂಸ್ಥೆಯನ್ನು ಕಟ್ಟಿದ ಸಾಹಿತಿ ಬೇರೆ ಯಾರಿದ್ದಾರೆ? ಅವರನ್ನು 'ಮಹಾಧೀಮಂತ' ಎಂಬ ಮಾತಿನಿಂದ ವರ್ಣಿಸುವುದು ಸರಿಯಾದೀತೇನೋ. ಅವರು ಬರೆದ ಕವಿತೆಗಳು ಅವರ ವ್ಯಕ್ತಿತ್ವವನ್ನು ಬಹಳ ಸೊಗಸಾಗಿ ವರ್ಣಿಸುತ್ತವೆ. ಈ ಸಾಲುಗಳನ್ನು ಗಮನಿಸಿ.

ವನಸುಮದೊಲೆನ್ನ ಜೀವನವು ವಿಕಸಿಸುವಂತೆ

ಮನವನನುಗೊಳಿಸು ಗುರುವೇ- ಹೇ ದೇವ

ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ

ಸೌರಭವ ಸೂಸಿ ನಲವಿಂ

ತಾನೆಲೆಯ ಪಿಂತಿರ್ದು ದೀನತೆಯ ತೋರಿ ಅಭಿ
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ
ಇಳೆಯಿಂದ ಮೊಳಕೆ ಒಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು- ಮಂಕುತಿಮ್ಮ
ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ.

ಕೃತಿಕಾರರ ಪರಿಚಯ



ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು 29-10-1936 ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ತಂದೆ ಶಿವರಾಮ ಭಟ್ಟ, ತಾಯಿ ಮೂಕಾಂಬಿಕೆ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಆರ್ಟ್ಸ್ ಫ್ಯಾಕಲ್ಟಿಯ ಡೀನ್ ಆಗಿ ದುಡಿದಿದ್ದಾರೆ. ಇವರು ಶ್ರೇಷ್ಠ ಸಾಹಿತಿ, ಪ್ರೌಢ ವಿಮರ್ಶಕ, ಜನಪ್ರಿಯ ಭಾವಗೀತಕಾರ, ಸಮರ್ಥ ಅನುವಾದಕ, ವಿದ್ವಾಂಸ ಮತ್ತು ವಾಗ್ಮಿ.

ಇವರ ಕವನ ಸಂಕಲನಗಳು ವೃತ್ತ, ಚಿತ್ರಕೂಟ, ಸುಳಿ. ಇವರ ಪ್ರಸಿದ್ಧ ಧ್ವನಿ ಸುರುಳಿಗಳು ದೀಪಿಕಾ, ಭಾವಸಂಗಮ, ಬಂದೇಬರತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ. ಮಕ್ಕಳ ಧ್ವನಿ ಸುರುಳಿಗಳು ನಂದನ, ಕಿನ್ನರಿ, ನವಿಲುಗರಿ, ಕಿಶೋರಿ ಮುಂತಾದವು. ಹತ್ತಾರು ಸಾಹಿತ್ಯ ಸಾಧಕರ ಜೀವನ ಘಟನೆಗಳ ಬಗೆಗೆ ಬೆಳಕು ಚೆಲ್ಲುವ ಸಾಹಿತ್ಯ ರತ್ನ ಸಂಪುಟ ಕೃತಿಯನ್ನು ರಚಿಸಿದ್ದಾರೆ. 2000 ದಲ್ಲಿ ಹ್ಯೂಸ್ಟನ್ನಿನಲ್ಲಿ ನಡೆದ ಪ್ರಥಮ ಅಮೆರಿಕಾ ವಿಶ್ವ ಕನ್ನಡ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಇವೆಲ್ಲವೂ ಇವರ ಸಾಹಿತ್ಯ ಸೇವೆಗೆ ಸಂದಿವೆ.

ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರ ಸಾಹಿತ್ಯ ರತ್ನ ಸಂಪುಟ ಕೃತಿಯಿಂದ ಪ್ರಸ್ತುತ ಗದ್ಯ ಭಾಗವನ್ನು ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

ಆಶಯ ಭಾವ

ಕನ್ನಡ ನಾಡು ರಸ ಋಷಿಗಳ ಬೀಡು. ಸಾಧು ಸತ್ಪುರುಷರ ನೆಲೆವೀಡು. ಕನ್ನಡ ನಾಡಿನಲ್ಲಿ ಹಲವಾರು ಸತ್ಪುರುಷರು ಜನಿಸಿ, ತ್ಯಾಗಜೀವನ ನಡೆಸಿ, ಇತರರಿಗೆ ಆದರ್ಶಪ್ರಾಯರಾಗಿದ್ದಾರೆ. ಇಂತಹ ಋಷಿಪ್ರಾಯರಾದವರಲ್ಲಿ ಡಿವಿಜಿ ಅವರೂ ಒಬ್ಬರು. ಸುಸಂಸ್ಕೃತ ವಿದ್ವಾಂಸರಾದ ಡಿವಿಜಿ ಅವರು ಸುಮಾರು 66 ಕೃತಿಗಳನ್ನು ಎಂದರೆ ಸುಮಾರು 8000 ಪುಟಗಳ ಸಾಹಿತ್ಯವನ್ನು 1500 ಪುಟಗಳ ಬಿಡಿ ಲೇಖನಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಸಿರಿವಂತ ಸಾಹಿತಿ. ಲೇಖಕ, ಪತ್ರಕರ್ತ, ಸಂಪಾದಕ, ಸಾಹಿತಿ ಮತ್ತು ರಾಜಕಾರಣಿಯಾಗಿ ಎಲ್ಲದಕ್ಕೂ ಮಿಗಿಲಾಗಿ ಲೌಕಿಕ ಆಸೆ ಆಮಿಷಗಳಿಗೆ ಒಳಗಾಗದೇ ಮೇರು ವ್ಯಕ್ತಿತ್ವದ ಆದರ್ಶ ವ್ಯಕ್ತಿಯಾಗಿ ಬಾಳಿ ಬದುಕಿದವರು ಡಾ. ಡಿ. ವಿ. ಗುಂಡಪ್ಪ ಅವರು. ತನಗಾಗಿ ಆಸ್ತಿ, ಹಣ ಮುಂತಾದುವನ್ನು ಗಳಿಸದೆ ಸದಾ ಸಮಾಜಮುಖಿಯಾಗಿ, ಆದರ್ಶ ರಾಷ್ಟ್ರನಿರ್ಮಾಣಕ್ಕಾಗಿ ದಣಿಯದೇ ದುಡಿದವರು ಡಿವಿಜಿ. ಅವರ ಸಾರ್ಥಕ ಬದುಕು, ಆದರ್ಶ ಜೀವನ ನಮ್ಮೆಲ್ಲರ ಬದುಕಿನ ಸೂತ್ರವಾಗಲಿ ಎಂಬುದೇ ಪಠ್ಯದ ಆಶಯ.

ದಗಳ ಅರ್ಥ

ಇಳೆ- ಭೂಮಿ; ಕಾನನ- ವನ, ಕಾಡು;ತರ್ಕ- ವಾದ; ತಿರುಪೆ- ಭಿಕ್ಷೆ; ಪರಮೋಚ್ಚ- ಅತ್ಯುನ್ನತ; ಮೆಟ್ರಿಕ್ಯುಲೇಷನ್- 10ನೆಯ ತರಗತಿಗೆ ಸಮಾನ ಓದು; ಮೇಧಾವಿ- ಬುದ್ಧಿವಂತ; ವನಿ- ಕಾಡು; ವಿಕಸನ- ಹಿಗ್ಗುವಿಕೆ, ಅರಳುವಿಕೆ, ದೊಡ್ಡದಾಗುವಿಕೆ; ಸಂಭಾವನೆ- ಗೌರವಧನ; ಸುಮ- ಹೂವು.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಡಿವಿಜಿ ಅವರ ಹುಟ್ಟೂರು ಯಾವುದು?
2. ಡಿವಿಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಯಾರು?
3. ಡಿವಿಜಿ ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು?
4. ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ್ದ ಹುದ್ದೆ ಯಾವುದು?
5. ಡಿವಿಜಿ ಅವರು ಸ್ಥಾಪಿಸಿದ ಸಂಸ್ಥೆ ಯಾವುದು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ರಸೂಲ್‌ಖಾನ್ ಅವರು ಡಿವಿಜಿ ಅವರ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಹಾಯವೇನು?
2. ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಏನು ಹೇಳಿದರು?
3. ಡಿವಿಜಿ ಅವರು ಏಕೆ ಸಂಭಾವನೆಯನ್ನು ಪಡೆಯಲಿಲ್ಲ?
4. ಡಿವಿಜಿ ಅವರ ಶ್ರೀಮತಿ ಅವರು ಬಂಧುಗಳ ಮನೆಯಲ್ಲಿ ನಡೆದ ಉತ್ಸವಕ್ಕೆ ಏಕೆ ಹೋಗಿರಲಿಲ್ಲ?
5. ಎಲ್ಲರೊಂದಿಗೆ ಹೇಗೆ ಬಾಳಬೇಕೆಂದು ಡಿವಿಜಿ ಹೇಳಿದ್ದಾರೆ?

III. ಕೊಟ್ಟಿರುವ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ.

1. ಡಿವಿಜಿ ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.
2. ಡಿವಿಜಿ ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.

IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಏನು ಬಂದಿರಿ ಗುಂಡಪ್ಪ?"
2. "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"
3. "ನನ್ನ ಹತ್ತಿರ ಇರುವುದು ಇದೊಂದೇ ಸೀರೆ"
4. "ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ"
5. "ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ"

V. ಬಿಟ್ಟ ಸ್ಥಳ ತುಂಬಿ.

1. ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದವರು _______.
2. ಮಿರ್ಜಾ ಅವರ ಕಾಲಕ್ಕೆ ಡಿವಿಜಿ ದೊಡ್ಡ _______ ಎಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.
3. ಮುಳಬಾಗಿಲು _______ ಜಿಲ್ಲೆಗೆ ಸೇರಿದೆ.
4. ಡಿವಿಜಿ ಅವರು ಮುಳಬಾಗಿಲಿನ _______ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಪೂರ್ತಿಗೊಳಿಸಿದರು.
5. ಡಿವಿಜಿ ಅವರು ಕನ್ನಡ ಸಾರಸ್ವತ ಲೋಕದ _______ ಎಂದು ಕರೆಸಿಕೊಂಡರು.

ಸೈದ್ಧಾಂತಿಕ ಭಾಷಾಭ್ಯಾಸ

ನಾಮಪದ ಪರಿಚಯಾತ್ಮಕ ವಿವರ

1. ಭೀಮನು ಚೆನ್ನಾಗಿ ಹಾಡಿದನು.
2. ರಾಗಿಣಿಯು ನೃತ್ಯ ಸ್ಪರ್ಧೆಯಲ್ಲಿ ಪ್ರಥಮಸ್ಥಾನವನ್ನು ಪಡೆದಳು.

ಈ ಎರಡು ವಾಕ್ಯಗಳನ್ನು ಗಮನಿಸಿದಾಗ ಬೇರೆ ಬೇರೆ ಬಗೆಯ ಪದಗಳು ಬಳಕೆಯಾಗಿರುವುದನ್ನು ಕಾಣಬಹುದು. ವ್ಯಾಕರಣದ ಪ್ರಕಾರ ಇಂತಹ ಪದಗಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಲಾಗಿದೆ.

ಭೀಮನು, ರಾಗಿಣಿಯು, ನೃತ್ಯ ಸ್ಪರ್ಧೆಯಲ್ಲಿ, ಪ್ರಥಮಸ್ಥಾನವನ್ನು- **ನಾಮಪದಗಳು.**

ಹಾಡಿದನು, ಪಡೆದಳು- **ಕ್ರಿಯಾಪದಗಳು.**

ಚೆನ್ನಾಗಿ- **ಅವ್ಯಯ**.

ಹೀಗೆ ಆಡುವ ಮಾತುಗಳನ್ನು ಮುಖ್ಯವಾಗಿ ನಾಮಪದ, ಕ್ರಿಯಾಪದ ಮತ್ತು ಅವ್ಯಯ ಎಂಬ ಮೂರು ಗುಂಪುಗಳನ್ನಾಗಿ ಮಾಡಬಹುದು.

ಭೀಮನು, ಭೀಮನನ್ನು, ಭೀಮನಿಂದ, ಭೀಮನಿಗೆ, ಭೀಮನ ದೆಸೆಯಿಂದ, ಭೀಮನ, ಭೀಮನಲ್ಲಿ ಇವೆಲ್ಲವೂ ನಾಮಪದಗಳೇ ಆಗಿರುತ್ತವೆ. ಇವುಗಳಲ್ಲಿ ಭೀಮ ಎಂಬುದು ಮೂಲರೂಪವಾಗಿದೆ. ಇದೇ ನಾಮಪ್ರಕೃತಿ.

ಇಲ್ಲಿ ಭೀಮ ಎಂಬ ನಾಮಪ್ರಕೃತಿಯ ಜೊತೆಗೆ ಉ, ಅನ್ನು, ಇಂದ, ಗೆ, ದೆಸೆಯಿಂದ, ಅ, ಅಲ್ಲಿ ಎಂಬ ಏಳು ತೆರನಾದ ನಾಮವಿಭಕ್ತಿಪ್ರತ್ಯಯಗಳು ಸೇರಿವೆ. ಹೀಗೆ – ನಾಮಪ್ರಕೃತಿಗಳಿಗೆ ನಾಮವಿಭಕ್ತಿಗಳು ಸೇರಿ ಆಗುವ ಪದವೇ ನಾಮಪದ.

ನಾಮವಿಭಕ್ತಿಗಳು: ಕ್ರಿಯಾಪದದೊಂದಿಗೆ ನಾಮಪದದ ಸಂಬಂಧವನ್ನು ತಿಳಿಸುವ ಕರ್ತೃ, ಕರ್ಮ, ಕರಣ ಮುಂತಾದುವು ಕಾರಕಾರ್ಥಗಳು. ಕಾರಕಾರ್ಥವನ್ನು ವಿಭಜಿಸಿ ಹೇಳುವ ಪ್ರತ್ಯಯಗಳೇ ವಿಭಕ್ತಿಪ್ರತ್ಯಯಗಳು. ಇವುಗಳ ಸ್ವರೂಪ ಮತ್ತು ಪರಸ್ಪರ ಸಂಬಂಧವನ್ನು ಕೊಟ್ಟಿರುವ ಕೋಷ್ಠಕದ ಸಹಾಯದಿಂದ ತಿಳಿಯೋಣ.

ವಿಭಕ್ತಿಗಳು	ವಿ ಭಕ್ತಿ ಪ್ರತ್ಯಯಗಳು	ಕಾರಕಾರ್ಥ	ನಾಮಪದ
ಪ್ರಥಮಾ	ಉ	ಕರ್ತೃ ಅರ್ಥ	ಮನೆಯು
ದ್ವಿತೀಯಾ	ಅನ್ನು	ಕರ್ಮಾರ್ಥ	ಮನೆಯನ್ನು
ತೃತೀಯಾ	ಇಂದ	ಕರಣಾರ್ಥ (ಸಾಧನ)	ಮನೆಯಿಂದ
ಚತುರ್ಥೀ	ಕ್ಕೆ, ಗೆ, ಇಕೆ	ಸಂಪ್ರದಾನ ಕೊಡುವಿಕೆ)	ಮನೆಗೆ
ಪಂಚಮೀ	ದೆಸೆಯಿಂದ	ಅಪಾದಾನ (ಅಗಲುವಿಕೆ)	ಮನೆಯ ದೆಸೆಯಿಂದ
ಷಷ್ಠೀ	ಅ	ಸಂಬಂಧ	ಮನೆಯ
ಸಪ್ತಮೀ	ಅಲ್ಲಿ	ಅಧಿಕರಣ	ಮನೆಯಲ್ಲಿ

ಈ ವಿಭಕ್ತಿ ಪ್ರತ್ಯಯಗಳು ನಾಮಪ್ರಕೃತಿಗೆ ಬಂದು ಸೇರುವಾಗ ಹೆಚ್ಚಾಗಿ 'ಅ' ಕಾರಾಂತ ಪದಗಳಿಗೆ 'ನ' ಕಾರವೂ (ರಾಮನು, ರಾಮನನ್ನು, ರಾಮನಲ್ಲಿ ಇತ್ಯಾದಿ) 'ಎ' ಕಾರಾಂತ ಪದಗಳಿಗೆ 'ಯ' ಕಾರವೂ (ಮನೆಯು, ಮನೆಯಿಂದ, ಮನೆಯ, ಮನೆಯಲ್ಲಿ) ಆದೇಶವಾಗಿ ಬರುತ್ತವೆ. ಆದರೆ ಇತ್ತೀಚೆಗೆ ಕೆಲವು ಪ್ರದೇಶಗಳ ಆಡು ಭಾಷೆಯ ಪ್ರಭಾವದಿಂದ 'ಮನೆಯಲ್ಲಿ' ಪದ 'ಮನೆನಲ್ಲಿ' ಎಂತಲೂ 'ಶಾಲೆಯಲ್ಲಿ' ಪದ 'ಶಾಲೆನಲ್ಲಿ' ಎಂತಲೂ ಪ್ರಯೋಗವಾಗುತ್ತಿದೆ. ಇಲ್ಲಿ 'ನ' ಕಾರ ಹೇಗೆ ಆಗಮವಾಯಿತೆಂದು ತಿಳಿಯದು. ಆದರೆ ಅದೇ 'ಮನೆ' ಎಂಬ 'ಎ' ಕಾರಾಂತ ಪದಕ್ಕೆ ಸಪ್ತಮೀವಿಭಕ್ತಿ ಬಿಟ್ಟು ಉಳಿದ ವಿಭಕ್ತಿಪ್ರತ್ಯಯಗಳು ಸೇರಿದಾಗ ಈ ಕ್ರಿಯೆ ಕಾಣಿಸುವುದಿಲ್ಲ. ಅಂದರೆ 'ಮನೆಯು, ಮನೆಯನ್ನು, ಮನೆಯಿಂದ, ಮನೆಯ' ಪದಗಳಲ್ಲಿ ವ್ಯಾಕರಣ ನಿಯಮ ರೀತ್ಯಾ 'ಯ' ಕಾರವೇ ಆಗಮವಾಗಿದೆಯೇ ಹೊರತು 'ಮನೆನು, ಮನೆಯನ್ನು, ಮನೆನನ್ನು, ಮನೆನಿಂದ, ಮನೆನ' ಎಂಬ ರೂಪವನ್ನು ಹೊಂದಿಲ್ಲ. ಸಪ್ತಮೀವಿಭಕ್ತಿ ಸೇರಿದಾಗ ಮಾತ್ರ ಇಂತಹ ಕ್ರಿಯೆ ಕಾಣುತ್ತದೆ. ಹಾಗಾಗಿ 'ಮನೆಯಲ್ಲಿ' ಪದದ ಬದಲಿಗೆ 'ಮನೆನಲ್ಲಿ' ಎಂಬ ರೀತಿಯ (ಅಂದರೆ ಸಪ್ತಮೀ ವಿಭಕ್ತಿ ಸೇರಿದಾಗ ಆಗುವ ತಪ್ಪುಗಳು) ಪ್ರಯೋಗ ವ್ಯಾಕರಣರೀತ್ಯಾಸಮ್ಮತವಲ್ಲ.

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ನಾಮಪದ ಎಂದರೇನು?
2. ನಾಮವಿಭಕ್ತಿ ಪ್ರತ್ಯಯಗಳೆಷ್ಟು? ಯಾವುವು?

ಪ್ರಾಯೋಗಿಕ ಅಭ್ಯಾಸ

II. ಕೊಟ್ಟಿರುವ ವಾಕ್ಯಗಳಲ್ಲಿರುವ ನಾಮಪದಗಳನ್ನು ಆರಿಸಿ ಬರೆಯಿರಿ.

1. ಡಿವಿಜಿಯ ಊರು ಮುಳಬಾಗಿಲು.
2. ಬೆಂಗಳೂರಿನ ರೈಲಿನಲ್ಲಿ ಕೂರಿಸುತ್ತೇನೆ.
3. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲವದು.
4. ಡಿವಿಜಿಯ ಬಂಧುಗಳ ಮನೆಯಲ್ಲಿ ಒಂದು ಉತ್ಸವವು ನಡೆಯಿತು.

III. **ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆದು ಅದು ಯಾವ ವಿಭಕ್ತಿ ಎಂಬುದನ್ನು ಬರೆಯಿರಿ.**

ದಿವಾನರನ್ನು	ದಿನದಿನದ	ಡಿವಿಜಿಗೆ	ಬಲದಿಂದ
ವಲಯದಲ್ಲಿ	ಮಂಕುತಿಮ್ಮನ	ಶಿಕ್ಷಣವನ್ನು	ಓದಿಗೆ
ಸಹಾಯಕ್ಕೆ	ಬಂಡಿಯಲ್ಲಿ	ದಯೆಯಿಂದ	ಸೂಲ್‌ಖಾನನ

ಪೂರಕ ಓದು:

ಡಿ. ವಿ. ಜಿ. ಅವರ ಮಂಕುತಿಮ್ಮನ ಕಗ್ಗ, ಜ್ಞಾಪಕ ಚಿತ್ರಶಾಲೆ, ಮೈಸೂರಿನ ದಿವಾನರುಗಳು ಕೃತಿಗಳನ್ನು ಓದಿರಿ.

11. 5.ಹೂವಾದ ಹುಡುಗಿ- ಎ. ಕೆ. ರಾಮಾನುಜನ್


ಪ್ರವೇಶ: ಇಂದಿನ ಶಿಷ್ಟ ಸಾಹಿತ್ಯ ಸಂಪದ್ಭರಿತವಾಗಿ ಬೆಳೆಯಲು, ಜನಪದ ಸಾಹಿತ್ಯವೇ ಬುನಾದಿಯಾಗಿದೆ. ಆದುದರಿಂದ ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ವಿಶೇಷ ಸ್ಥಾನವಿದೆ. "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತಮತಿಗಳ್" ಎಂಬ ಕವಿರಾಜಮಾರ್ಗಕಾರನ ಮಾತು ಜನಪದ ಸಾಹಿತ್ಯದ ಮಹತ್ವವನ್ನು ಸಾರುತ್ತದೆ. ನಮ್ಮ ಜನಪದರು ತಮ್ಮ ಬದುಕಿನ ಸುಖ-ದುಃಖ, ನೋವು ನಲಿವು, ಸರಸ-ವಿರಸ, ಪ್ರೀತಿ-ವಾತ್ಸಲ್ಯ, ಆಸರಿಕೆ-ಬೇಸರಿಕೆಗಳನ್ನು ಗಂಡು ಹೆಣ್ಣೆಂಬ ಭೇದವಿಲ್ಲದೆ ಅನುಭವಗಳನ್ನು ಹಾಡುಗಳ ಮೂಲಕ, ಕತೆಗಳ ರೂಪದಲ್ಲಿ, ಹಾಡುಗಬ್ಬವಾಗಿ ವ್ಯಕ್ತ ಪಡಿಸಿದ್ದಾರೆ.

ಹಿಂದೆ ಅವಿಭಕ್ತ ಕೌಟುಂಬಿಕ ವ್ಯವಸ್ಥೆಯಲ್ಲಿ ಅಜ್ಜ-ಅಜ್ಜಿಯರು ಹೇಳುತ್ತಿದ್ದ ರೋಮಾಂಚನವನ್ನು ಉಂಟುಮಾಡುತ್ತಿದ್ದ ಕಥೆಗಳು ಕುತೂಹಲ ಕೆರಳಿಸುವ, ಕಲ್ಪನಾ ಲೋಕದ ಬಾಗಿಲು ತೆರೆಸುವ, ಮನಸ್ಸಿಗೆ ಮುದ ನೀಡುವ ಮೂಲಕ ಮಕ್ಕಳಲ್ಲಿ ಜ್ಞಾಪಕಶಕ್ತಿ, ಕಲ್ಪನಾಶಕ್ತಿ ಬೆಳೆಸುತ್ತಿದ್ದವು. ಇವೆಲ್ಲ ಇಂದು ಕಣ್ಮರೆಯಾಗುತ್ತಿವೆ. ಇಂಥಹ ಒಂದು ಅನುಭವವನ್ನು ಜನಪದಕಥೆಗಳ ಮೂಲಕ ಮಕ್ಕಳಿಗೆ ಕಟ್ಟಿಕೊಡುವ ಅಗತ್ಯವಿದೆ. ಈ ಉದ್ದೇಶದಿಂದ ಪ್ರಕೃತ ಕತೆಯನ್ನು ನಿಗದಿಗೊಳಿಸಿದೆ.

ಒಂದು ಪಟ್ಟಣ. ಅಲ್ಲೊಬ್ಬ ದೊರೆಯಿದ್ದ. ಆತನಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ದೊರೆಯ ಮೊದಲನೆಯ ಹೆಣ್ಣು ಮಗಳಿಗೆ ಲಗ್ನವಾಗಿತ್ತು.

ಅದೇ ಊರಿನಲ್ಲಿ ಒಬ್ಬಳು ಮುದುಕಿಯಿದ್ದಳು. ಅವಳಿಗೆ ಇಬ್ಬರು ಹೆಣ್ಣುಮಕ್ಕಳು. ಆ ಮುದುಕಿ ಕೂಲಿಮಾಡಿ ತನ್ನ ಮಕ್ಕಳನ್ನು ಸಾಕುತ್ತಿದ್ದಳು. ಒಂದು ದಿನ ತಂಗಿ, "ಅಕ್ಕಯ್ಯ ಹೋದಷ್ಟು ದಿನಕ್ಕೆ ಅಮ್ಮ ಕೂಲಿಮಾಡಿ ನಮ್ಮನ್ನು ಸಾಕಬೇಕು ಅಂದ್ರೆ ಕಷ್ಟ. ಆದ್ದರಿಂದ ನಾನು ಹೂವಿನ ಗಿಡ ಆಗ್ತೀನಿ, ನೀನು ಹೂ ತಕ್ಕೊಂಡು ಹೋಗಿ ಮಾರ್ಕೊಂಡು ಬಂದ್ಬಿಡೇ" ಎಂದು ಅಕ್ಕನಿಗೆ ಹೇಳಿದಳು. ಅಕ್ಕನಿಗೆ ಕುತೂಹಲ ಕೆರಳಿ, "ಅದು ಹೇಗೆ ಹೂವಿನ ಗಿಡ ಆಗ್ತೀಯೆ?" ಎಂದು ಕೇಳಿದಳು. "ಅದೆಲ್ಲ ನಾನು ಆಮೇಲೆ ಹೇಳ್ತೀನಿ ಕಣೆ, ಮೊದಲು ಮನೆಯೆಲ್ಲ ಸಾರಿಸಿಬಿಡು. ನೀನು ಸ್ನಾನಮಾಡಿ ಬಾವಿಯಿಂದ ಚೆಳ್ಉಗುರು ಸೋಕದ ಹಾಗೆ ಎರಡು ತಂಬಿಗೆ ನೀರು ತಗೊಂಡು ಬಾ" ಅಂದಳು. ಅಕ್ಕ ಹಾಗೆ ಮಾಡಿದಳು. ಇವರ ಮನೆ ಎದುರಿಗೆ ಒಂದು ದೊಡ್ಡ ಮರವಿತ್ತು. ಅಲ್ಲೂ ಗುಡಿಸಿ ಸಾರಿಸಿದಳು. ಅಲ್ಲಿಗೆ ಇಬ್ಬರೂ ಹೋದರು. ತಂಗಿ ಅಕ್ಕನನ್ನು ಕರೆದು, "ನೋಡಕ್ಕಯ್ಯ ನಾನಿಲ್ಲಿ ದೇವರ ಧ್ಯಾನಮಾಡಿ ಕುಳಿತ್ಕೋತೀನಿ. ನೀನು ಒಂದು ತಂಬಿಗೆ ನೀರನ್ನೆಲ್ಲ ನನ್ನ ಮೈಮೇಲೆ ಸುರಿದುಬಿಡು. ನಾನು ಹೂವಿನ ಗಿಡ ಆಗ್ತೀನಿ. ಸುಳಿ ಮುರಿಯದ ಹಾಗೆ, ಎಲೆ ಮುರಿಯದ ಹಾಗೆ ಬೇಕಾದಷ್ಟು ಹೂ ಕಿತ್ಕೋ. ನಿನಗೆ ಸಾಕಾದ ಮೇಲೆ ಇನ್ನೊಂದು ತಂಬಿಗೆ ನೀರನ್ನು ನನ್ನ ಮೇಲೆ ಸುರಿದುಬಿಡು. ಪುನಃ ನಾನು ಮನುಷ್ಯಳಾಗ್ತೀನಿ" ಅಂದಳು. ತಂಗಿ ದೇವರನ್ನು ನೆನೆದು ಕುಳಿತಳು. ಅಕ್ಕ ಒಂದು ಬಿಂದಿಗೆ

ನೀರನ್ನು ಅವಳ ಮೇಲೆ ಸುರಿದಳು. ಸರಿ, ಹೂವಿನ ಗಿಡವಾದಳು. ಅಕ್ಕ, ಸುಳಿ, ಎಲೆ, ತೊಟ್ಟು ಮುರಿಯದ ಹಾಗೆ ಹೂವನ್ನು ಬಿಡಿಸಿಕೊಂಡಳು. ನಂತರ ಮತ್ತೊಂದು ತಂಬಿಗೆ ನೀರನ್ನು ಗಿಡದ ಮೇಲೆ ಸುರಿದಳು. ಯಥಾಸ್ಥಿತಿಯಂತೆ ತಂಗಿ ಲಕ್ಷಣವಾಗಿ ಮನುಷ್ಯಳಾದಳು. ಅನಂತರ ಇಬ್ಬರೂ ಆ ಹೂವನ್ನೆಲ್ಲ ಬುಟ್ಟಿಗೆ ತುಂಬಿ ಮನೆಗೆ ತಂದರು. ಇಬ್ಬರೂ ಸೇರಿ ಹೂವು ಕಟ್ಟಿದರು. ಎಲ್ಲಿಗೆ ತೆಗೆದುಕೊಂಡು ಹೋಗಿ ಮಾರಲಿ ಅಂದಳು ದೊಡ್ಡವಳು. "ಅಕ್ಕಯ್ಯ, ದೊರೆಮನೆಗೆ ತಗೊಂಡು ಹೋಗು. ಅವರು ಹೆಚ್ಚಿಗೆ ಹಣ ಕೊಡುತ್ತಾರೆ. ಅಮ್ಮ ನಮಗೋಸ್ಕರ ಯಾವಾಗಲೂ ಕೂಲಿ ಮಾಡುತ್ತಿರುತ್ತಾಳೆ. ಹೆಚ್ಚು ಹಣ ಕೂಡಿಹಾಕಿ ಅಮ್ಮನಿಗೆ ತೋರಿಸೋಣ" ಅಂದಳು ಚಿಕ್ಕವಳು.



ಅಂದು ಒಂದು ಬುಟ್ಟಿಯಲ್ಲಿ ಹೂವನ್ನೆಲ್ಲ ಇಟ್ಟುಕೊಂಡು, "ಹೂವು ಬೇಕೇನಮ್ಮ ಹೂವು" ಎಂದು ಕೂಗಿಕೊಂಡು ದೊರೆಯ ಮನೆ ಮುಂದೆ ಬಂದಳು. ದೊರೆಯ ಚಿಕ್ಕ ಮಗಳು "ಅಮ್ಮ, ಹೂವು ಗಮಗಮ ಅಂತಾವೆ ಕೊಡಿಸಿ ಕೊಡು" ಅಂದಳು. ದೊರೆಯ ಹೆಂಡತಿ ಹೂವನ್ನು ನೋಡಿದಳು, ಎಷ್ಟು ಬೆಲೆ? ಅಂತ ಕೇಳಿದಳು. "ಎಷ್ಟಾನ್ ಕೊಡಿರವ್ವ; ನಾವು ಬಡವರು" ಎಂದಳು ಅಕ್ಕ. ದೊರೆ ಹೆಂಡತಿ ಹೂವು ತಗೊಂಡು ಒಂದು ಮೊಗೆ ಹಣ ಕೊಟ್ಟಳು. ಅಕ್ಕ ಮೊಗೆ ಹಣವನ್ನು ತಂದು ತಂಗಿಗೆ ತೋರಿದಳು. "ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು" ಅಂದಳು. ಹೀಗೆ ಕೆಲವು ದಿನ ಮಾಡಿದರು. ಒಟ್ಟು ಐದು ಮೊಗೆ ಹಣವಾಯಿತು. ಅಕ್ಕ ಅಮ್ಮನಿಗೆ ತೋರಿಸೋಣ? ಅಂದಳು. ಬೇಡವೆ ತಂಗಿ, ಅಮ್ಮ ಹೊಡೀತಾಳೆ ಅಂತ ಅವರವರೆ ಮಾತಾಡಿಕೊಂಡರು. ಈ ಹುಡುಗಿಯರಿಗೆ ಸಂಪಾದನೆ ಮಾಡೋ ಆಸೆ.

ಈ ಹೂವು ದೊರೆಮಗನ ಕಣ್ಣಿಗೆ ಬಿತ್ತು. ಒಳ್ಳೆ ಗಮಗಮ ಅನ್ನುತ್ತಿತ್ತು. ಇಂತಹ ಸೊಗಸಾದ ಹೂವನ್ನು ಅವನೆಂದೂ ನೋಡೇ ಇರಲಿಲ್ಲ. ಈ ಹೂವನ್ನು ಯಾರು ತಂದು ಕೊಡುತ್ತಾರೆ ಎಂದು ಯೋಚಿಸಿ ಆ ದೊಡ್ಡ ಹುಡುಗಿ ತಂದು ಕೊಡುವುದನ್ನು ನೋಡಿ, ಅವಳನ್ನೇ ಹಿಂಬಾಲಿಸಿ ಹೋಗಿ ನೋಡಿದ. ಈ ಮನೆಯ ಸುತ್ತ ಮುತ್ತ ಹೂವಿನ ಗಿಡಗಳಿಲ್ಲದ್ದನ್ನು ಗಮನಿಸಿ ಇಂಥ ಹೂವು ಇವರಿಗೆಲ್ಲಿಂದ ಬರುತ್ತವೆ ಎಂದು ಯೋಚನೆ ಮಾಡಿ ಅರಮನೆಗೆ ಬಂದ. ಮಾರನೆ ದಿನ ಸೂರ್ಯ ಹುಟ್ಟುವ ಮೊದಲೇ ಹೋಗಿ ಹುಡುಗಿಯರಿದ್ದ ದೊಡ್ಡ ಮರದ ಮೇಲೆ ಕುಳಿತುಕೊಂಡ.



ಅಂದು ಸಹ ಹುಡುಗಿಯರು, ಆ ಮರದಡಿ ಸಾರಿಸಿ ಗುಡಿಸಿದರು. ತಂಗಿ ಯಥಾಪ್ರಕಾರ ಹೂವಿನ ಗಿಡವಾದಳು. ಅಕ್ಕ ಎಚ್ಚರಿಕೆಯಿಂದ ಹೂ ಬಿಡಿಸಿಕೊಂಡಳು. ಆನಂತರ ಪುನಃ ಹೂವಿನ ಗಿಡವಾಗಿದ್ದ ತಂಗಿ ಮನುಷ್ಯಳಾದಳು. ಇದೆಲ್ಲವನ್ನೂ ಮರದ ಮೇಲಿದ್ದ ದೊರೆಮಗ ನೋಡಿಕೊಂಡ. ಆ ಮೇಲೆ ಸೀದಾ ಅರಮನೆಗೆ ಬಂದು ಮಂಚದ ಮೇಲೆ ಮಕಾಡೆ ಮಲಗಿಕೊಂಡ. ತಂದೆ-ತಾಯಿ ಬಂದು ಕೇಳಿದರೂ ಏನು ಹೇಳಲಿಲ್ಲ. ಆಗ ಮಂತ್ರಿಯ ಮಗ ಬಂದು ಕೇಳಲಾಗಿ ಹೂವಿನ ಗಿಡವಾಗುವ ಹುಡುಗಿಯ ವಿಚಾರವೆಲ್ಲ ಹೇಳಿದ. ದೊರೆಗೆ ಈ ವಿಚಾರ ತಿಳಿದು ಆ ಮುದುಕಿಯನ್ನು ಕರೆಸಿ ಮದುವೆಗೆ ಸಕಲ ಸಿದ್ಧತೆಮಾಡಿದನು. ಒಳ್ಳೆ ಮುಹೂರ್ತದಲ್ಲಿ ಹೂವಿನ ಗಿಡವಾಗುತ್ತಿದ್ದ ಹುಡುಗಿಯ ಜೊತೆಯಲ್ಲಿ ರಾಜಕುಮಾರನಿಗೆ ಮದುವೆಯಾಗುತ್ತದೆ. ಅರಮನೆಯಲ್ಲಿ ಅವರಿಬ್ಬರನ್ನು ಏಕಾಂತದಲ್ಲಿ ಬಿಟ್ಟರು. ಇವನಿಷ್ಟಕ್ಕೆ ಇವನಿದ್ದಾನೆ ಅವಳಿಷ್ಟಕ್ಕೆ ಅವಳಿದ್ದಾಳೆ. ಅವರೇ ಮಾತನಾಡಲಿ ಅಂತ ಅವಳು. ಅವಳೇ ಮಾತಾಡಲಿ ಅಂತ ಅವನು. ಹೀಗೆ ಇಬ್ಬರೂ ಗುಮ್ಮಾಗಿ ಸುಮ್ಮನಿದ್ದರು. “ಏನು ಅವರು ಮಾತಾಡಿಸಲೇ ಇಲ್ಲವಲ್ಲ, ಮತ್ತೇಕೆ ಮದುವೆಯಾದರು” ಅಂತ ಯೋಚನೆಮಾಡಿ, “ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?” ಅಂತ ರಾಜಕುಮಾರನನ್ನು ಕೇಳಿದಳು. “ನಾನು ಹೇಳಿದ ಹಾಗೆ ಕೇಳಿದ್ರೆ ಮಾತಾಡ್ತಿನಿ. ಇಲ್ದೇ ಇದ್ರೆ ಇಲ್ಲ.” ಎಂದು ಒರಟಾಗಿ ಹೇಳಿದ ದೊರೆಮಗ. “ಪತಿ ಮಾತು ಕೇಳದೆ ಉಂಟೇ?” ಅದೇನು ಹೇಳಿ ಅಂದಳು. ಮತ್ತೆ ನೀನು ಹೂವಿನ ಗಿಡ ಆಗ್ತೀಯಲ್ಲ ಆಗು, ಹೂವ

ಹಾಸಿಕೊಂಡು, ಹೊದ್ದುಕೊಂಡು ಮಲಿಕೋಬೇಕು ಅಂದ. ಸ್ವಾಮಿ, ನಾನು ದೇವರಲ್ಲ, ದೆವ್ವವಲ್ಲ. ಎಲ್ಲಾರ ಹಾಗೆ ನಾನೂ ನರಮನುಷ್ಯಳು. ನರಮನುಷ್ಯರು ಹೂವಿನಗಿಡ ಆಗೋದುಂಟೇ? ಎಂದಳು ದೈನ್ಯದಿಂದ. ಈ ಕೆಳ್ಳಾಟವೆಲ್ಲ ಬೇಡ ಆವತ್ತು ನೀನು ಹೂವಿನಗಿಡ ಆಗಿದ್ದನ್ನು ಕಣ್ಣಾರೆ ನಾನು ನೋಡಿದೆ. ನನ್ನ ಮುಂದೆ ನೀನು ಹೂವಿನಗಿಡ ಆಗದಿದ್ದಮೇಲೆ ಇನ್ನಾರಮುಂದೆ ಆಗ್ತೀಯಾ ಎಂದು ಸಿಟ್ಟಾದ. ಕಣ್ಣೀರನ್ನು ಸೆರಗಿನಿಂದ ಒರೆಸಿಕೊಂಡು, ಸ್ವಾಮಿ ಸಿಟ್ಟಾಗಬೇಡಿ ಎರಡು ತಂಬಿಗೆ ನೀರನ್ನು ತರಿಸಿ, ಮಂತ್ರಿಸಿಕೊಟ್ಟು ನೀರನ್ನು ಹಾಕುವ ವಿಧಾನ ಹಾಗೂ ಹೂವನ್ನು ಬಿಡಿಸುವ ವಿಧಾನವನ್ನು ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ದೊರೆಮಗ ನೀರನ್ನು ಸುರಿದ ಕೂಡಲೇ ಹೂವಿನ ಗಿಡವಾದಳು. ತಮಗೆ ಬೇಕಾದಷ್ಟು ಹೂವನ್ನು ಬಿಡಿಸಿಕೊಂಡು ಮತ್ತೊಂದು ತಂಬಿಗೆ ನೀರನ್ನು ಸುರಿದನು ಮನುಷ್ಯಳಾದಳು. ಇಬ್ಬರೂ ಆನಂದದಿಂದ ಹೂವು ಹಾಸಿಕೊಂಡು ಹೊದ್ಕೊಂಡು ಮಲಗಿದರು.

ಹೀಗೇ ಕೆಲವು ದಿನ ಕಳೆಯಲು ಅರಮನೆಯ ಪಕ್ಕದಲ್ಲಿ ಬಾಡಿದ ಹೂವಿನ ರಾಸಿಯನ್ನು ನೋಡಿದ ದೊರೆಯ ಕಿರಿಮಗಳು. ಅತ್ತಿಗೆ ಮುಡಿದು ಬಿಸಾಕಿದ ಹೂವೇ ಒಂದು ರಾಸಿಯಾಗಿದೆ ನನಗೆ ಹೂವು ಕೊಟ್ಟಿಲ್ಲವೆಂದು ತಾಯಿಗೆ ದೂರು ಹೇಳಿದಳು. ಹೂಬೇಕಾದರೆ ಕೊಡಿಸಿ ಕೊಡ್ತೀನಿ, ಸುಮ್ಮನಿರಮ್ಮ ಎಂದು ತಾಯಿ ಸಮಾಧಾನ ಮಾಡಿದಳು.

ಒಂದು ದಿನ ದೊರೆ ಮಗ ಎಲ್ಲೋ ಹೊರಗೆ ಹೋಗಿದ್ದ. ಆಗ ದೊರೆ ಮಗಳು ತನ್ನ ಸ್ನೇಹಿತೆಯರಿಗೆಲ್ಲ, ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗೋಣ ನಮ್ಮ ಅತ್ತಿಗೆ ಹೂವಿನಗಿಡ ಆಗ್ತಾಳೆ ನೀವೆಲ್ಲರೂ ಬನ್ನಿ. ಗಮಗಮ ಅನ್ನೋ ಹೂವು ಬೇಕಾದಷ್ಟು ಕೊಡ್ತೀನಿ. ಎಂದು ಹೇಳಿ ಬಂದಳು. ತಾಯಿಗೆ ಅತ್ತಿಗೆಯನ್ನು ಕಳಿಸಿ ಕೊಡುವಂತೆ ಕೇಳ್ತಾಳೆ. ತಾಯಿ ಅಣ್ಣನ ಕೇಳ್ಕೊಂಡು ಕರ್ಕೊಂಡೋಗು ಅನ್ತಾಳೆ. ಅಣ್ಣ ಕೇಳಿದರೆ ನನ್ನಿಷ್ಟ ಅಲ್ಲಮ್ಮ ಕಳ್ಸಕೆ ಅಮ್ಮನ್ನ ಕೇಳು ಅಂತಾನೆ. ತಾಯಿಯನ್ನು ಕೇಳಿದಳು. ಹೋಗಿ ಸಂಜೆ ಹೊತ್ತಿಗೆ ಜೋಪಾನವಾಗಿ ಬನ್ನಿ ಅಂತ ತಾಯಿ ಹೇಳಿದಳು.

ಎಲ್ಲರೂ ಸುರಹೊನ್ನೆ ತೋಟಕ್ಕೆ ಹೋದರು. ಉಯ್ಯಾಲೆ ಹಾಡುತ್ತಾ ಇದ್ದಾಗ ಇದ್ದಕಿದ್ದಂತೆ ದೊರೆ ಮಗಳು ಅತ್ತಿಗೆಗೆ ನೀನು ಹೂವಿನಗಿಡ ಆಗ್ತೀಯಲ್ಲ ಆಗು ಎಂದಳು. “ಅಯ್ಯೋ ದೇವರೇ, ಇದ್ಯಾರು ನಿನಗೆ ಹೇಳಿದ್ದು. ನಾನು ನಿಮ್ಮ ಹಾಗೆ ಮನುಷ್ಯಳೇ! ಹುಚ್ಚು ಹುಚ್ಚಾಗಿ ಆಡಬೇಡ” ಎಂದು ಗದರಿಸಿದಳು ಅತ್ತಿಗೆ. “ಆಹಾ... ಅಲ್ಲ ಅತ್ತಿಗೆ ನಮ್ಮುಂದೆ ಆಗದೆ, ಇನ್ನಾರ ಮುಂದೆ ಹೂವಿನಗಿಡ ಆಗಾಕೆ ಹೋಗ್ತೀಯಾ” ಎಂದು ನಿಷ್ಠುರವಾಗಿ ಮಾತಾಡಿದಳು. ವ್ಯಥೆಪಟ್ಟು ಎರಡು ತಂಬಿಗೆ ನೀರು ತರಿಸಿ, ಅದನ್ನು ಮಂತ್ರಿಸಿ ಕೊಟ್ಟು ಅವುಗಳನ್ನು ಸುರಿಯುವ, ಹೂವನ್ನು ಕೀಳುವ ವಿಧಾನವನ್ನೆಲ್ಲ ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ಹುಡುಗಿಯರು ಸರಿಯಾಗಿ ಆಲಿಸದೆ ನಿರ್ಲಕ್ಷದಿಂದ ತಂಬಿಗೆ ನೀರು ಅಡ್ಡಾದಿಡ್ಡಿಯಾಗಿ ಸುರಿದರು ಆಕೆ ಅರ್ಧಂಬರ್ಧ ಗಿಡ ಆದಳು. ಅಷ್ಟು ಹೊತ್ತಿಗೆ ಸಾಯಂಕಾಲವಾಗಿತ್ತು; ಗುಡುಗುಸಿಡಿಲಿನ ಮಳೆ ಪ್ರಾರಂಭವಾಯಿತು. ಆಗ ಅವರು ಹೂವು ಕೀಳೋ ಸಂಭ್ರಮದಲ್ಲಿ ತೊಟ್ಟು, ಎಲೆ ಸುಳಿ ಕಿತ್ತು. ರೆಂಬೆನೆಲ್ಲ ತರದು ಬಿಟ್ಟರು.

ಈ ಮಳೆಗೆ ಹೆದರಿ ಮನೆಗೆ ಹೋಗೋ ಆತುರದಲ್ಲಿ ಮತ್ತೊಂದು ತಂಬಿಗೆ ನೀರನ್ನು ಅಡ್ಡಾದಿಡ್ಡಿ ಸುರಿದು ಹೊರಟು ಹೋದರು. ಆಕೆ ಮನುಷ್ಯಳಾದಾಗ ಕೈಯಿಲ್ಲದ ಕಾಲಿಲ್ಲದ ಅರ್ಧಂಬರ್ಧ ದೇಹವಾಗಿದ್ದಳು, ಮೈಯೆಲ್ಲ ಗಾಯವಾಗಿತ್ತು. ಆ ಮಳೆಯ ನೀರಿನಲ್ಲಿ ತೇಲಿಕೊಂಡು ಬಹುದೂರ ಹೋಗಿ ಅಲ್ಲೊಂದು ಮೋರಿಯಲ್ಲಿ ಬಿದ್ದಿದ್ದಳು.

ಮಾರನೆಯ ದಿನ ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದವು. ಹ್ಹಾ... ಹ್ಹಾ... ಅಂತ ಕೊರಗುತ್ತ ಬಿದ್ದಿರುವುದನ್ನು ಗಾಡಿಯವನೊಬ್ಬ ನೋಡ್ತಾನೆ. ಒಂದು ದೇಹದ ಮುದ್ದೆ! ಮುಖ ಮಾತ್ರ ಚೆನ್ನಾಗಿತ್ತು. ಬಟ್ಟೆಯಿಲ್ಲ ಬರೆಇಲ್ಲ. ಅಯ್ಯೋ ಮನುಷ್ಯ ಕಣಪ್ಪ ಅಂತ ಹೇಳಿ ತನ್ನ ತಲೆಯಲ್ಲಿದ್ದ ವಸ್ತ್ರ ಹಾಕಿ ಗಾಡಿಮೇಲೆ ಕೂರಿಸಿಕೊಂಡು ಮುಂದಿನೂರಿನ ಹಾಳು ಮಂಟಪದಲ್ಲಿ ಗಾಡಿ ನಿಲ್ಲಿಸಿ, ಅವಳನ್ನು ಆ ಮಂಟಪದಲ್ಲಿಟ್ಟು ಯಾರಾದರು ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ ಅಂತ ಹೇಳಿ ಹೋಯ್ತಾನೆ. ಇತ್ತ ನಿಜವಾದ ಸಂಗತಿ ತಿಳಿದೇ ದೊರೆಮಗ ಬೇಜಾರಾಗಿ ಗೋಸಾಯಿ ದಿರ್ಸು ಹಾಕಿಕೊಂಡು ದೇಶಾಂತರ ಹೊರಟ.

ಇತ್ತ ಮೈಯೆಲ್ಲ ಗಾಯವಾಗಿ ಅರ್ಧಂಬರ್ಧ ದೇಹವಾಗಿದ್ದ 'ಇವಳು' ತನ್ನ ಗಂಡನ ದೊಡ್ಡಕ್ಕಳ ಮದುವೆ ಮಾಡಿಕೊಟ್ಟಿದ್ದ ಪಟ್ಟಣದಲ್ಲಿ ಬಿದ್ದಿದ್ದಳು. ಆ ಪಟ್ಟಣದ ದಾದೇರು, ಗೌಡೇರು ದಿನವಹಿ ನೀರಿಗೆ ಹೋಗಿ ಬರುವಾಗ ಇವಳನ್ನು ನೋಡುತ್ತಿದ್ದು, ಈ ವಿಚಾರನ ರಾಣಿಗೆ ಅಮ್ಮ... ಅಮ್ಮ, ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ, ಕರೆತರಲೇ ಎನ್ತಾರೆ. ಹೋಗ್ರೆ, ಹೋಗ್ರೆ ಅವಳ ಸೇವೆ ಮಾಡಿ ಅನ್ನ ಹಾಕಬೇಕಾಗುತ್ತೆ ಎಂದು ತಾತ್ಸಾರ ಮಾಡ್ತಾಳೆ. ದಾದೇರು ಗೋಗರೆದದ್ದಕ್ಕೆ ಒಪ್ಪತಾಳೆ. ಅವಳ ಸೇವೆ ನೀವೇ ಮಾಡಬೇಕು ಅಂದಳು ರಾಣಿ. ಆಯಿತು ನಾವೇ ಮಾಡ್ತೀವಮ್ಮ ಎಂದು ಒಪ್ಕೊಂಡು ಅವಳನ್ನು ಕರೆತಂದು ನೀರು ನಿಡಿ ಒಯ್ದು, ಬಟ್ಟೆ ಉಡಿಸಿ, ಅರಮನೆ ಬಾಗಿಲಲ್ಲಿ ಕುಳ್ಳರಿಸಿದರು ದಿನವಹಿ ಮೈ ಮೇಲಿನ ಗಾಯಗಳಿಗೆ ಔಷಧ ಹಾಕಿ, ವಾಸಿಮಾಡಿದರು.

ಇತ್ತ ದೊರೆಮಗ ದೇಶದೇಶವೆಲ್ಲ ತಿರುಗಿ ತನ್ನ ಅಕ್ಕನ ಪಟ್ಟಣಕ್ಕೆ ಬಂದ. ಬಂದು ಪಟ್ಟಣದ ಬಾಗಿಲ ಬಳಿ ಕುಳಿತ. ತಿಕ್ಕಲು ಮನುಷ್ಯನ ಹಾಗೆ ಅವನಿಗೆ ಗಡ್ಡಮೀಸೆ ಬೆಳೆದಿತ್ತು. ನೀರಿಗೆ ಹೋಗಿ ಬರುತ್ತಿದ್ದ ದಾದೇರು ಇವನನ್ನು ನೋಡಿ ಅರಮನೆಗೆ ಬಂದು ಅಮ್ಮಾವ್ರೇ, ಯಾರೋ ನಿಮ್ಮ ತಮ್ಮ ಕುಳಿತಂಗ ಕಾಣುತ್ತೆ ಅಂತ ಗೋಗರೆದರು. ದುರಬೀನು ಹಾಕಿ ನೋಡಿ, ಕರೆಸಿ, ರಾಣಿ ಚೆನ್ನಾಗಿ ನೋಡಿದಳು. ನನ್ನ ತಮ್ಮನೇ ಇರಬೇಕೆಂದು ಕೊಂಡಳು. ಕೊಪ್ಪ-ಕೊಪ್ಪರಿಗೆ ಎಣ್ಣೆ ಕಾಯಿಸಿ ನೆತ್ತಿಗೆ ತಿಕ್ಕಿಸಿ, ಹಂಡೆ-ಹಂಡೆ ನೀರು ಹಾಕ್ಸಿ, ತನ್ನ ತಮ್ಮನೇ ವರತು ಬೇರಲ್ಲವೆಂದು ತಿಳಿದುಕೊಂಡಳು. ದಿನಕ್ಕೊಂದು ಅಡುಗೆ, ದಿನಕ್ಕೊಂದು ದಿರ್ಸು ಕೊಟ್ಟಳು. ಆದರೆ ಆತ ಮಾತನಾಡಲೇ ಇಲ್ಲ. ಅಷ್ಟು ಹೊತ್ತಿಗೆ ಇಬ್ಬರಿಗೂ ತಾವು ಅಕ್ಕ-ತಮ್ಮ ಅನ್ನೋದು ಚೆನ್ನಾಗಿ ಗೊತ್ತಾಗಿತ್ತು.

ನಾನೆಷ್ಟು ಉಪಚಾರ ಮಾಡಿದರೂ ನನ್ನ ತಮ್ಮ ಮಾತಾಡಲಿಲ್ಲ. ಏನು ಕಾರಣ? ಎಂದು ಯೋಚಿಸಿ. ಚೆಲುವೆಯರಾದ ದಾಸಿಯರನ್ನು ಸೇವೆಗೆ ಕಳುಸಿದಳು ಆದರೂ ಯಾರೊಂದಿಗೂ ಮಾತಾಡಲಿಲ್ಲ. ಆಗ ಮಾರನೆಯ ದಿನ ರಾತ್ರಿ ದಾದೇರೆಲ್ಲ ಸೇರಿ ಅರಮನೆಯ ಮುಂದಿದ್ದ ಇವಳಿಗೆ ಶೃಂಗಾರಮಾಡಿ, ರಾಣಿಯಿಂದ ಅಪ್ಪಣೆ ಪಡೆದು ಇವನ

ಮಂಚದ ಮೇಲೆ ಕೂರಿಸಿದರು. ಇವನು ದಾದೇರ್ನ ನೋಡಲು ಇಲ್ಲ ಮಾತನಾಡಿಸಲೂ ಇಲ್ಲ. ಆದರೆ ರಾತ್ರಿ ಇದು ಮೋಟುಗೈಯಲ್ಲಿ ಇವನ ಕಾಲನ್ನು ಒತ್ತುತ್ತ, ಹೂ... ಹೂ... ಅಂತ ಕೊರಗುತ್ತಿತ್ತು. ಆಗ ಎದ್ದು ನೋಡಿದ, ಇವಳೇ ನನ್ನ ಹೆಂಡತಿಯೆಂದು ತಿಳ್ಕೊಂಡ. ನಿಂತಿದ್ದ ಮಾತು ಬಂತು. ಆಗ ಏನು? ಎತ್ತ? ಎಂದು ಅವಳನ್ನು ವಿಚಾರಿಸಿದ. ಆಕೆ "ನಿಮ್ಮ ತಂಗಿಯಿಂದಾಗಿ ಹೀಗಾಯ್ತು" ಎಂದು ಎಲ್ಲವನ್ನು ಹೇಳಿದಳು. "ಅದಕ್ಕೆ ಈಗೇನು ಮಾಡಬೇಕು?" ಅಂತ ಕೇಳಿದ. "ಹೆಚ್ಚಿಗೇನು ಮಾಡಬೇಡಿ, ಚಿಳ್‌ಉಗುರು ಸೋಕದ ಹಾಗೆ ಎರಡು ತಂಬಿಗೆ ನೀರನ್ನು ತನ್ನಿ" ಎಂದಳು. ಆತ ಯಾರಿಗೂ ಗೊತ್ತಾಗದ ಹಾಗೆ ಎರಡು ತಂಬಿಗೆ ನೀರನ್ನು ತಂದು ಕೊಟ್ಟ. ಎರಡು ತಂಬಿಗೆ ನೀರನ್ನು ಮಂತ್ರಿಸಿ ಕೊಟ್ಟು "ಮೊದಲು ಈ ತಂಬಿಗೆ ನೀರು ಹೊಯ್ದುಬಿಡಿ, ಹೂವಿನಗಿಡ ಆಗ್ತೀನಿ. ಆಗ ಎಲ್ಲಿ ಎಲೆ ಹೋಗಿದೆಯೋ ಅಲ್ಲಿಗೆ ಎಲೆ ಜೋಡಿಸಿ, ಎಲ್ಲಿ ರೆಂಬೆ ಹೋಗಿದೆಯೋ ಅಲ್ಲಿಗೆ ರೆಂಬೆ ಜೋಡಿಸಿ, ಆನಂತರ ಇನ್ನೊಂದು ತಂಬಿಗೆ ನೀರನ್ನು ಸುರಿಯಿರಿ" ಎಂದು ಹೇಳಿ, ದೇವರನ್ನು ನೆನೆದು ಕುಳಿತುಕೊಂಡಳು. ಒಂದು ತಂಬಿಗೆ ನೀರು ಸುರಿದು ನೋಡ್ತಾನೆ, ಕೊಂಬೆ ರಂಬೆನೆಲ್ಲ ತರದುಬಿಟ್ಟಿದ್ದಾರೆ. ಅದನ್ನೆಲ್ಲ ಸರಿಪಡಿಸಿ ಇನ್ನೊಂದು ತಂಬಿಗೆ ನೀರನ್ನು ಸುರಿದನು. ಆಗ ಪುನಃ ಮನುಷ್ಯಳಾಗಿ, ಎದ್ದು ತನ್ನ ಗಂಡನ ಕಾಲಿಗೆ ನಮಸ್ಕಾರ ಮಾಡ್ತಾಳೆ. ನಾದಿನಿಯಾದ ರಾಣಿಯೆನ್ನೆಬ್ಬಿಸಿ, ಆಕೆಯ ಕಾಲಿಗೂ ನಮಸ್ಕಾರ ಮಾಡಿದಳು. ನಡೆದ ಸಂಗತಿಯನ್ನೆಲ್ಲ ತಿಳಿಸಿದಳು. ಆಕೆ ಈಕೆಯನಪ್ಪಿ ಮುದ್ದಾಡಿ ಅತ್ತಳು. ಕಡೆಗೆ ಚೆನ್ನಾಗಿ ಉಪಚಾರ ಮಾಡಿ ನಾಲಾರು ವಾರ ತನ್ನ ಮನೆಯಲ್ಲಿಟ್ಟುಕೊಂಡು, ಅವರಿಬ್ಬರನ್ನು ತನ್ನ ತಂದೆಯ ಪಟ್ಟಣಕ್ಕೆ ಹೋಗುವಾಗ ಬೇಕಾದಷ್ಟು ಐಸಿರಿಯ ಉಡುಗೊರೆ ಕೊಟ್ಟು ಕಳುಸಿದಳು.

ಕೃತಿಕಾರರ ಪರಿಚಯ



ಎ. ಕೆ. ರಾಮಾನುಜನ್: ಕವಿ, ಚಿಂತಕ, ಪ್ರಾಧ್ಯಾಪಕ, ಜಾನಪದತಜ್ಞ ಹೀಗೆ ವಿವಿಧ ಪ್ರತಿಭೆಗಳ ಸಂಗಮವೆಂದು ಖ್ಯಾತರಾದವರು ಎ. ಕೆ. ರಾಮಾನುಜನ್. ಇವರ ಪೂರ್ಣ ಹೆಸರು ಅತ್ತಿಪಟ್ ಕೃಷ್ಣಸ್ವಾಮಿ ರಾಮಾನುಜನ್ ಇವರು ಮಾರ್ಚ್ 16. 1929 ರಲ್ಲಿ ಮೈಸೂರಿನಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ಪದವಿ ಗಳಿಸಿದ ಇವರು ದಕ್ಷಿಣ

ಭಾರತ ಮತ್ತು ಅಮೆರಿಕಾದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ, 1993 ರಲ್ಲಿ ನಿಧರಾದರು.

ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಕನ್ನಡದಲ್ಲಿ 'ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು', 'ಕುಂಟೋಬಿಲ್ಲೆ', 'ಮತ್ತೊಬ್ಬನ ಆತ್ಮ ಚರಿತ್ರೆ' ಪ್ರಸಿದ್ಧ ಕೃತಿಗಳು. ಕನ್ನಡ ವಚನ ಸಾಹಿತ್ಯವನ್ನು 'ಸ್ಪೀಕಿಂಗ್ ಆಫ್ ಶಿವ' ಎಂದು ಅನುವಾದಿಸಿದ್ದಾರೆ. ಇವರ ಸಾಹಿತ್ಯದಲ್ಲಿನ ಸಾಧನೆಗೆ 1976 ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 1983 ರಲ್ಲಿ ಪ್ರಸಿದ್ಧ 'ಮ್ಯಾಕ್‌ಅರ್ಥರ್ ಫೆಲೋಷಿಪ್' ಗೌರವ ಸಂದಿದೆ.

ಪ್ರಸ್ತುತ 'ಹೂವಾದ ಹುಡುಗಿ' ಜನಪದ ಕಥೆಯನ್ನು ಶ್ರೀ ಎ. ಕೆ. ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆಯ್ದು ನಿಗದಿಪಡಿಸಿದೆ.

ಆಶಯ ಭಾವ

ಕೂಲಿಮಾಡಿ ತಮ್ಮನ್ನು ಸಾಕುತಿದ್ದ ತಾಯಿಯ ಕಷ್ಟವನ್ನು ನೋಡಿದ ಹೆಣ್ಣುಮಗಳು ತಾಯಿಗೆ ನೆರವಾಗಲು ತಾನು ಹೂವಿನಗಿಡವಾಗಿ ಹೂಮಾರಿ ಹಣವನ್ನು ಸಂಗ್ರಹಿಸುವ, ಈ ಹೂವಿನ ರಹಸ್ಯವನ್ನು ತಿಳಿದು ಆಕೆಯನ್ನೇ ಮದುವೆಯಾಗುವ ದೊರೆಮಗ. ಹೂವಿನ ಗಿಡವಾಗುವ ಹುಡುಗಿಯು ತನ್ನ ಗಂಡನ ತಂಗಿಯಿಂದಲೇ ಕಷ್ಟಕ್ಕೆ ಸಿಲುಕಿ ಯಾತನೆಯನ್ನನುಭವಿಸಿ, ಕೊನೆಗೆ ಎಲ್ಲಾ ತೊಂದರೆಗಳಿಂದ ಪಾರಾಗಿ ದಂಪತಿಗಳು ಒಂದಾಗುವ ಕಥೆಯಿದು. ಇಲ್ಲಿ ಹೆಣ್ಣಿನ ಸಹನೆ, ದಾಂಪತ್ಯದ ಅನ್ಯೋನ್ಯತೆ, ಪ್ರೀತಿ, ಸಹಕಾರ ಮನೋಭಾವಗಳ ಮೌಲ್ಯವನ್ನು ತಿಳಿಸುವ ಆಶಯ ಇಲ್ಲಿದೆ.

ಪದಗಳ ಅರ್ಥ

ಐಸಿರಿ- ಐಶ್ವರ್ಯ, ಸಂಪತ್ತು; ಕುತೂಹಲ- ಅನುಭವಿಸುವ ತಿಳಿದುಕೊಳ್ಳುವ ಹಂಬಲ, ಆಶ್ಚರ್ಯ, ಉತ್ಸುಕತೆ; ಕೊಪ್ಪರಿಗೆ- ಕಡಾಯಿ; ಗುಮ್ಮಾಗಿ- ಸುಮ್ಮನೆ, ಯಾರ ಬಳಿಯಲ್ಲಿ ಮಾತನಾಡದೇ; ಗೋಸಾಯಿ- ಸನ್ಯಾಸಿ, ಬೈರಾಗಿ; ತಿಕ್ಕಲು-ಬುದ್ಧಿಭ್ರಮಣೆ, ಹುಚ್ಚು; ದಾದೇರು- ಸೇವಕಿಯರು; ದಿರ್ಸು- ವಸ್ತ್ರ, ಬಟ್ಟೆ ಮೊಗೆ- ಬೊಗಸೆ ತುಂಬ; ಮೋರಿ- ಚರಂಡಿ, ಗಟಾರ; ಯಥಾಸ್ಥಿತಿ- ಮೊದಲು ಇದ್ದ ರೀತಿ; ಸಂಭ್ರಮ-ಸಂತೋಷ; ಸುರಹೊನ್ನೆ- ಒಂದು ಜಾತಿಯ ಹೂವಿನ ಮರ, ಪನ್ನಾಗ;

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಮುದುಕಿಯ ಕಿರಿಯ ಮಗಳು ಏಕೆ ಹೂವಿನ ಗಿಡವಾದಳು?
2. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು?
3. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಯಾರ ಬಳಿ ಹೇಳಿದ?
4. ದೊರೆಯ ಚಿಕ್ಕಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು?
5. ಪಟ್ಟಣಕ್ಕೆ ಹಿಂದಿರುವಾಗ ಅಕ್ಕ ತಮ್ಮನಿಗೆ ಏನು ಉಡುಗೊರೆ ನೀಡಿದಳು?

II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯದಲ್ಲಿ ಉತ್ತರಿಸಿ.

1. ಅರಮನೆಗೆ ಹೂವು ಎಲ್ಲಿಂದ ಬರುತ್ತದೆಂದು ದೊರೆಮಗ ಹೇಗೆ ಕಂಡು ಹಿಡಿದನು?
2. ತಂಗಿ ಹೇಗೆ ಹೂವಿನ ಗಿಡವಾಗುತ್ತಿದ್ದಳು?
3. ದೊರೆಯಮಗ ದೇಶಾಂತರ ಹೋಗಲು ಕಾರಣವೇನು?
4. ಅರ್ಧಂಬರ್ಧ ದೇಹವಾಗಿದ್ದವಳು ಹೇಗೆ ರಾಣಿಯ ಅರಮನೆ ಸೇರಿದಳು?

III. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯದಲ್ಲಿ ಉತ್ತರಿಸಿ.

1. ದೊರೆಯ ಕಿರಿಯ ಮಗಳು ತನ್ನ ಅತ್ತಿಗೆಗೆ ಮಾಡಿದ ದ್ರೋಹವೇನು?
2. ದೊರೆಯ ಮಗ ತನ್ನ ಹೆಂಡತಿಯನ್ನು ಹೇಗೆ ಪುನಃ ಪಡೆದನು?

IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. “ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು”
2. “ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?”
3. “ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ”
4. “ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ,”

V. ಖಾಲಿಬಿಟ್ಟ ಜಾಗವನ್ನು ಸೂಕ್ತ ಪದಗಳಿಂದ ತುಂಬಿರಿ.

1. ನೋಡಕ್ಕಯ್ಯ ನಾನಿಲ್ಲಿ _______ ಧ್ಯಾನಮಾಡಿ ಕುತುಕೋತಿನಿ.
2. ಅವರು ಮಾತಾಡಲೇ ಇಲ್ಲವಲ್ಲ, ಮತ್ತೇಕೆ _______ ಯಾದರು.
3. ನರಮನುಷ್ಯರು _______ ಆಗೋದುಂಟೆ?
4. ದಿನವಹಿ ಮೈಮೇಲಿನ ಗಾಯಗಳಿಗೆ _______ ಹಾಕಿ ವಾಸಿಮಾಡಿದರು.

ಸೈದ್ಧಾಂತಿಕ ಭಾಷಾಭ್ಯಾಸ

ನಾಮವಾಚಕಗಳ ಪರಿಚಯಾತ್ಮಕ ವಿವರ

ನಾಮವಾಚಕಗಳು: ನಾಮವಾಚಕ ಪ್ರಕೃತಿಗಳನ್ನು ವಸ್ತುವಾಚಕ, ಗುಣವಾಚಕ, ಸಂಖ್ಯಾವಾಚಕ, ಸಂಖ್ಯೇಯವಾಚಕ, ಭಾವನಾಮ, ಪರಿಮಾಣ ವಾಚಕ, ದಿಗ್ವಾಚಕ, ಸರ್ವನಾಮ ಎಂಬುದಾಗಿ ಅನೇಕ ಗುಂಪುಗಳಾಗಿ ವಿಂಗಡಿಸಬಹುದು.

ವಸ್ತುವಾಚಕ: ವಸ್ತುಗಳ ಹೆಸರನ್ನು ಹೇಳುವ ಪದಗಳೇ ವಸ್ತುವಾಚಕಗಳು. ವಸ್ತುಗಳನ್ನು ಚೇತನ (ಚೇತನವುಳ್ಳ), ಅಚೇತನ (ಚೇತನವಿಲ್ಲದ್ದು) ಎಂದು ವಿಭಾಗಿಸಲಾಗಿದೆ.

ಉದಾ: ಮನುಷ್ಯ, ಪ್ರಾಣಿ, ಪಕ್ಷಿ ಇವು ಚೇತನವುಳ್ಳವು. ನೆಲ, ಜಲ, ಹಣ್ಣು, ಕಾಯಿ, ಮನೆ, ಬೆಟ್ಟ ಇವು ಚೇತನವಿಲ್ಲದವು.

ಇಂತಹ ವಸ್ತುವಾಚಕಗಳನ್ನು ರೂಢನಾಮ, ಅಂಕಿತನಾಮ, ಅನ್ವರ್ಥನಾಮಗಳೆಂದು ಮೂರು ವಿಭಾಗ ಮಾಡಲಾಗಿದೆ.

ರೂಢನಾಮ: ರೂಢಿಯಿಂದ ಬಂದಿರುವ ನದಿ, ಪರ್ವತ, ಮನುಷ್ಯ, ಹೆಂಗಸು, ಮರ, ದೇಶ ಮುಂತಾದ ಪದಗಳು ರೂಢನಾಮಗಳು.

ಅಂಕಿತನಾಮ: ವ್ಯವಹಾರಕ್ಕಾಗಿ ಅಥವಾ ಗುರುತಿಸಲು ಇಟ್ಟ ಹೆಸರುಗಳಾದ ಕಾವೇರಿ, ನಕುಲ, ಹಿಮಾಲಯ, ಶಂಕರ, ಬೆಂಗಳೂರು, ಬೇವು ಮುಂತಾದ ಹೆಸರುಗಳೇ ಅಂಕಿತನಾಮಗಳು.

ಅನ್ವರ್ಥನಾಮ: ಅರ್ಥಕ್ಕೆ ಅನುಗುಣವಾಗಿ ರಚನೆಯಾದ ವ್ಯಾಪಾರಿ, ವಿದ್ವಾಂಸ, ರೋಗಿ ಮುಂತಾದ ಪದಗಳೇ ಅನ್ವರ್ಥನಾಮಗಳು.

ಗುಣವಾಚಕ: ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ಹೇಳುವ ವಿಶೇಷಣಗಳೇ ಗುಣವಾಚಕಗಳು.

ಉದಾ: ಒಳ್ಳೆಯ, ಕೆಟ್ಟ, ಹೊಸದು, ದೊಡ್ಡದು ಇತ್ಯಾದಿ ಪದಗಳು.

ಸಂಖ್ಯಾವಾಚಕ: ಸಂಖ್ಯೆಯನ್ನು ಸೂಚಿಸುವ ಪದಗಳೇ ಸಂಖ್ಯಾವಾಚಕಗಳು.

ಉದಾ: ಒಂದು, ಎರಡು, ಹತ್ತು, ನೂರೈದು, ಸಾವಿರ, ಲಕ್ಷ ಇತ್ಯಾದಿ.

ಸಂಖ್ಯೇಯವಾಚಕ: 'ಮೂವರು ಮಕ್ಕಳು', 'ನಾಲ್ಕನೆಯ ತರಗತಿ', 'ಐವರು ರಾಜಭಟರು', 'ಇಪ್ಪತ್ತೆರಡನೆಯ ತಾರೀಕು'. ಇಲ್ಲಿ 'ಮೂವರು', 'ನಾಲ್ಕನೆಯ', 'ಐವರು' 'ಇಪ್ಪತ್ತೆರಡನೆಯ' ಪದಗಳು ಸಂಖ್ಯೆಯಿಂದ ಕೂಡಿರುವ ವಸ್ತುಗಳನ್ನು ಸೂಚಿಸುತ್ತವೆ. ಹೀಗೆ-ಸಂಖ್ಯೆಯಿಂದ ಕೂಡಿರುವ ವಸ್ತುಗಳನ್ನು ಹೇಳುವ ಪದಗಳೆಲ್ಲ ಸಂಖ್ಯೇಯ ವಾಚಕಗಳು

(ಎರಡನೆಯ, ನಾಲ್ಕನೆಯ, ಹತ್ತನೆಯ ಇತ್ಯಾದಿ) ಇವುಗಳನ್ನು ಇತ್ತೀಚೆಗೆ ಎರಡನೇ, ನಾಲ್ಕನೇ, ಹತ್ತನೇ ಎಂದೂ ಸಹಾ ಕೆಲವರು ಬಳಸುತ್ತಿದ್ದಾರೆ.

ಭಾವನಾಮ: ವಸ್ತು ಮತ್ತು ಕ್ರಿಯೆಗಳ ಭಾವವನ್ನು ತಿಳಿಸುವ ಪದಗಳೇ ಭಾವನಾಮ.

ಉದಾ: ಕೆಚ್ಚನೆಯದರ ಭಾವ-ಕೆಂಪು

ಬಿಳಿದರ ಭಾವ-ಬಿಳುಪು

ಹಿರಿದರ ಭಾವ-ಹಿರಿಮೆ

ನೋಡುವುದರ ಭಾವ-ನೋಟ

ಪರಿಮಾಣವಾಚಕ: 'ಅಷ್ಟು ದೊಡ್ಡ ಮರವನ್ನು ಹೇಗೆ ಕಡಿದರು?' 'ಇಷ್ಟು ಜನರು ಇಲ್ಲಿ ಸೇರಿ ಏನು ಮಾಡುತ್ತಾರೆ?' 'ತರಗತಿಯಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ?' ಈ ವಾಕ್ಯಗಳಲ್ಲಿ 'ಅಷ್ಟು' 'ಇಷ್ಟು', 'ಎಷ್ಟು' ಎಂಬ ಪದಗಳಿವೆ. ಈ ಪದಗಳು ನಿರ್ದಿಷ್ಟ ಅಳತೆ, ಸಂಖ್ಯೆಗಳನ್ನು ಹೇಳುವುದಿಲ್ಲ. ಕೇವಲ ಪರಿಮಾಣ ಅಥವಾ ಗಾತ್ರವನ್ನು ಸೂಚಿಸುತ್ತವೆ. ಹೀಗೆ -ವಸ್ತುವಿನ ಪರಿಮಾಣ, ಗಾತ್ರವನ್ನು ಹೇಳುವ 'ಅಷ್ಟು', 'ಇಷ್ಟು', 'ಹಲವು', 'ಕೆಲವು', 'ಎನಿತು', 'ಅನಿತು' ಆಸು, ಈಸು, ಏಸು ಮುಂತಾದ ಪದಗಳೇ 'ಪರಿಮಾಣವಾಚಕ'ಗಳು.

ದಿಗ್ವಾಚ: ದಿಕ್ಕುಗಳನ್ನು ಸೂಚಿಸುವ ಪದಗಳೇ ದಿಗ್ವಾಚಕಗಳು.

ಉದಾ: ಮೂಡಣ, ತೆಂಕಣ, ಪಡುವಣ, ಬಡಗಣ, ಪೂರ್ವ, ಪಶ್ಚಿಮ, ಆಗ್ನೇಯ, ದಕ್ಷಿಣ, ಉತ್ತರ, ಈಶಾನ್ಯ, ಇತ್ಯಾದಿ.

ಸರ್ವನಾಮ: ರಾಜಣ್ಣ ಅಜ್ಜನ ಮನೆಗೆ ಹೊರಟನು. ಅವನ ತಮ್ಮ ಕೃಷ್ಣನು 'ನಾನೂ ಬರುತ್ತೇನೆ' ಎಂದನು. ತಂಗಿ ರಾಜೀವಿ 'ತಾನೂ ಬರುವೆನೆಂದಳು'. ಆಗ ರಾಜಣ್ಣ 'ನೀವು ಇಬ್ಬರೂ ಆದಷ್ಟು ಬೇಗ ತಯಾರಾಗಿರಿ' ಎಂದನು. ಇಲ್ಲಿ ಅವನ, ನಾನೂ, ತಾನೂ, ನೀವು ಎಂಬ ಪದಗಳು ಬೇರೆ ಬೇರೆ ನಾಮಪದಗಳ ಬದಲಿಗೆ ಪ್ರಯೋಗಿಸಲ್ಪಟ್ಟವು. ಹೀಗೆ- ನಾಮಪದಗಳ ಸ್ಥಾನದಲ್ಲಿ ಬಂದು ಅವುಗಳ ಕಾರ್ಯವನ್ನು ನಿರ್ವಹಿಸುವ ಪದಗಳೇ ಸರ್ವನಾಮಗಳು. ಈ ಸರ್ವನಾಮಗಳನ್ನು ಪುರುಷಾರ್ಥಕ, ಪ್ರಶ್ನಾರ್ಥಕ ಮತ್ತು ಆತ್ಮಾರ್ಥಕ ಸರ್ವನಾಮಗಳೆಂದು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

ಪುರುಷಾರ್ಥಕ ಸರ್ವನಾಮ: ಇದನ್ನು ಮತ್ತೆ ಮೂರು ವಿಭಾಗ ಮಾಡಿದೆ.

ಉತ್ತಮ ಪುರುಷ: ನಾನು, ನಾವು

ಮಧ್ಯಮ ಪುರುಷ: ನೀನು, ನೀವು

ಪ್ರಥಮ ಪುರುಷ/ ಅನ್ಯ ಪರುಷ: ಅವನು- ಇವನು ಅವಳು- ಇವಳು ಅವರು- ಇವರು ಅದು- ಅವು ಇದು- ಇವು (ಇತ್ತೀಚೆಗೆ ಇವುಗಳನ್ನು ಪ್ರಥಮ, ದ್ವಿತೀಯ, ತೃತೀಯ ಪುರುಷಗಳೆಂದು ಹೇಳುವ ವಾಡಿಕೆ ಆರಂಭವಾಗಿದೆ.)

ಪ್ರಶ್ನಾರ್ಥಕ ಸರ್ವನಾಮ: ಯಾರು ಯಾವುದು ಏನು ಯಾವನು ಯಾವಳು

ಆತ್ಮಾರ್ಥಕ ಸರ್ವನಾಮ: ತಾನು ತಾವು ತನ್ನ ತಮ್ಮ

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ನಾಮಪ್ರಕೃತಿಗಳ ವಿಧಗಳಾವುವು?
2. ಭಾವನಾಮ ಎಂದರೇನು?
3. ಸರ್ವನಾಮ ಎಂದರೇನು? ವಿಧಗಳಾವುವು?
4. ಪುರುಷಾರ್ಥಕ ಸರ್ವನಾಮಗಳಲ್ಲಿ ಎಷ್ಟು ವಿಧ?

ಪ್ರಾಯೋಗಿಕ ಭಾಷಾಭ್ಯಾಸ

1. **ಕೊಟ್ಟಿರುವ ಪದಗಳಲ್ಲಿ ರೂಢ, ಅನ್ವರ್ಥ ಮತ್ತು ಅಂಕಿತನಾಮಗಳನ್ನು ಆರಿಸಿ ಬರೆಯಿರಿ.**

   ಕಾಲ, ಕಾಳಿ, ದೇವಸ್ಥಾನ, ವ್ಯಾಪಾರಿ, ರಾಜ, ಅಡಗೂರು

2. **ಕೊಟ್ಟಿರುವ ಪದಗಳಲ್ಲಿರುವ ಪ್ರಥಮ ಪುರುಷ, ಮಧ್ಯಮ ಪುರುಷ ಮತ್ತು ಉತ್ತಮ ಪುರುಷ ಪದಗಳನ್ನು ಆರಿಸಿ ಬರೆಯಿರಿ.**

   ಇವನು, ನೀನು, ಅವರು, ನಾನು, ಅವಳು, ಇವಳು

ಚಟುವಟಿಕೆ:

1. **ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ.**

   ಧ್ಯಾನಮಾಡು, ಬಡವರು, ಸಂಪಾದನೆ, ಉಡುಗೊರೆ

2. **ಕೊಟ್ಟಿರುವ ವಾಕ್ಯಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.**
   1. ನೀನು ಹೂ ತಕ್ಕೊಂಡು ಹೋಗಿ ಮಾರ್ಕೊಂಡು ಬಂದ್ಬಿಡೇ.

2. ದಾದೇರು ಗೋಗರೆದದ್ದಕ್ಕೆ ಒಪ್ಪತಾಳೆ.
3. ತಾಯಿ ಅಣ್ಣನ ಕೇಳ್ಕೊಂಡು ಕರ್ಕೊಂಡೋಗು ಅನ್ತಾಳೆ.

ಪೂರಕ ಓದು

1. **ಎ. ಕೆ. ರಾಮಾನುಜನ್** ರವರು ಸಂಪಾದಿಸಿರುವ 'ಸಾಲುಸಂಪಿಗೆ ಮರದ ನೆರಳು' ಜನಪದ ಕಥೆಗಳನ್ನು ಓದಿರಿ.
2. **ಡಾ. ಜೀ. ಶಂ. ಪರಮಶಿವಯ್ಯ** ಅವರು ಸಂಗ್ರಹಿಸಿರುವ ಆಯ್ದು ಜನಪದ ಕಥೆಗಳನ್ನು ಓದಿರಿ.
3. **ಡಾ. ಡಿ. ಕೆ. ರಾಜೇಂದ್ರ** ಅವರು ಸಂಪಾದಿಸಿರುವ ಬೆದರುಗೊಂಬೆ ಮತ್ತು ಇತರ ಜನಪದ ಕಥೆಗಳನ್ನು ಓದಿರಿ.

12. 6. ಯಶೋಧರೆ- ಮಾಸ್ತಿ ವೆಂಕಟೇಶ ಐಯ್ಯಂಗಾರ್

ಪ್ರವೇಶ:

ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ನಾಟಕವು ಒಂದು. "ಕಾವ್ಯಗಳಲ್ಲಿ ನಾಟಕ ಮನೋಹರವಾದದ್ದು" ನಾಟಕದಲ್ಲಿ ಪಾತ್ರಗಳ ಅಭಿನಯ, ದೃಶ್ಯಾವಳಿಗಳು, ಸಂಭಾಷಣೆ, ಸಂಗೀತ ಮೊದಲಾದವು ನೋಡುಗರ ಮನಸ್ಸನ್ನು ಸೂರೆಗೊಳ್ಳುತ್ತವೆ. ಇತಿಹಾಸದಲ್ಲಿ ಬರುವ ಮಹಾಪುರುಷರು, ಯುಗಪ್ರವರ್ತಕರು ಮೊದಲಾದವರ ಪರಿಚಯವನ್ನು ಹಾಗೂ ಅಂದಿನ ಸಾಮಾಜಿಕ ವ್ಯವಸ್ಥೆಗಳ ಪ್ರತಿಬಿಂಬವಾಗಿ ಮೂಡಿಬಂದವುಗಳೇ ಐತಿಹಾಸಿಕ ನಾಟಕಗಳು. ಈ ನಿಟ್ಟಿನಲ್ಲಿ ಕಪಿಲವತ್ತುವಿನ ರಾಜಕುಮಾರ 'ಸಿದ್ಧಾರ್ಥ', ಬುದ್ಧನಾಗ ಬಯಸಿ ರಾತ್ರೋರಾತ್ರಿ ಯಾರಿಗೂ ತಿಳಿಸದೆ ರಾಜ್ಯವನ್ನು ಪರಿತ್ಯಾಗ ಮಾಡಿ ಹೋಗುತ್ತಾನೆ. ಆದರೆ ಇತ್ತ ಆತನ ಮಡದಿ 'ಯಶೋಧರೆ' ಅನುಭವಿಸುತ್ತಿದ್ದ ಭಯ, ಆತಂಕ ಹಾಗೂ ಮಾನಸಿಕ ತುಮುಲಗಳನ್ನು ಈ ನಾಟಕದಲ್ಲಿ ಪ್ರೇಕ್ಷಕರ ಮನಮುಟ್ಟುವಂತೆ ಮನೋಜ್ಞವಾಗಿ ಚಿತ್ರಿಸಲಾಗಿದೆ.

(ಯಶೋಧರೆ ಪಠದ ಅಡಿಗೆ ತಲೆಯಿಟ್ಟು ದುಃಖಿಸುವಳು. ರಾಹುಲನು ಹೂಗಳನ್ನು ತೆಗೆದು ಪೀಠದ ಮೇಲೆ ಹಾಕುವನು. ತಾಯಿ ಹೆರಳಿಗೆ ಒಂದು ಹೂವನಿಟ್ಟು ಸೊಗಸು ನೋಡುವನು. ಅದೇ ವೇಳೆಗೆ ರಾಜನೂ, ಅಂಬಿಕೆಯೂ ಬರುವರು)



ರಾಜ: ಅಮ್ಮಾಜಿ, ಬಂದಿಹೆನು.

ಯಶೋಧರೆ: (ಎದ್ದು ಬಂದು ನಮಸ್ಕರಿಸಿ) ಪೀಠವನು ಕೊಳಬೇಕು.

ನಾನು ಬಹುದಿನದಿಂದ ನಿಮ್ಮ ಬೇಡುತಲಿದ್ದೆ.

ಸೋದರಿಯ ಸುತೆಯೆಂದು ಎಳೆತನದಲೇ ನನ್ನ
ಕರೆತಂದಿರಿ, ಸಾಕಿ ಸಲಹಿದಿರಿ; ಸೊಸೆಯಾಗಿ
ಮನೆಗೆ ಹೋಗಿಸಿದಿರಿ, ಬಾಳುವೆಯನುದ್ಧರಿಸಿದಿರಿ.
ಕನಸಿರಲಿ ಎಣಿಸಲಾಗದ ಸೌಖ್ಯಗಳ ನಾನು
ನಿಮ್ಮ ಅರಮನೆಯಲ್ಲಿ ಅನುಭವಿಸಿ ಸುಖಿಸಿದೆನು.

ರಾಜ: ನನ್ನ ಅರಮನೆಯಲ್ಲಿ?

ಯಶೋಧರೆ: ನಮ್ಮ ಅರಮನೆಯಲ್ಲಿ.

ನಿಮ್ಮ ಐಶ್ವರ್ಯದಲಿ ಕಣಮಾತ್ರವನು ನನಗೆ
ಇಲ್ಲವೆನ್ನದೆ ನನ್ನ ಪರಿಪಾಲಿಸಿದಿರಿ.
ಪತಿಯನಿತ್ತರಿ; ಬಾಲ ದೇವರಾಗಿರಲೆಂದು;
ಪತಿಯನಿನ್ನೊಮ್ಮೆ ನೀಡಿರಿ; ನನ್ನ ರಕ್ಷಿಸಿರಿ.

ರಾಜ: ಏನಮಾಡೆಂದು ಕೇಳುವೆ ?

ಯಶೋಧರೆ: ನಮ್ಮ ಅಣ್ಣಾಜಿ

ತಂದೆಯನು ಕರೆತರಲು ಹೋಗುವೆನು ಎನಲಾಗಿ
ನೀವು ಒಪ್ಪಿದಿರಂತೆ. ನಾನು ನಿಮ್ಮನು ಮೊದಲೆ
ಬೇಡಿಕೊಂಡಿದ್ದೆ. ನಾನವರೆಡೆಗೆ ಹೋಗುವೆನು
ಇವನನ್ನಿಲ್ಲಿಯೇ ನಿಲಿಸಿಕೊಳ್ಳಿರಿ.

ರಾಜ: ಅಮ್ಮಾಜಿ,

ಬಾಲಕನು ತಂದೆಯನು ಕರೆತರುವೆನೆಂದೆನಲು
ಕೇವಲ ವಿನೋದದಲಿ ಆಗಬಹುದೆಂದೆನು
ನಮ್ಮ ಕುವರನ ಕರೆದುತರಬೇಕು ಎನಲಾಗಿ

ಹೋಹ ಬೇಹಿಲ್ಲವೇ? ಎಳೆಯನನು ಕಳುಹುವರೆ?

ರಾಹುಲ: ಏನು ತಾತ, ಮುನ್ನ ಹೋಹಬಹುದೆಂದವರು
ಈಗ ಉಂಟೇ ಎಂದು ಹೇಳುವಿರಿ? ದೊಡ್ಡವರು
ನನಗೊಂದು ಮಾತನಾಡುತ ತಾಯಿ ಕೇಳಿದರೆ
ಬೇರೊಂದು ಮಾತ ಹೇಳುವಿರೊ? ನಾ ಹೋಹುವೆನು.
ಅಮ್ಮ ಇಂದಳುತಲಿದ್ದರು. ಅಣ್ಣ ಬಾರದಿರೆ
ಅಳುತಲೇ ಇರುವರು. ನಾ ಹೋಗಿ ಕರತರುವೆನು.

ಯಶೋಧರೆ: ಕೇಳಿದಿರ ಹಸುಳೆಯಾಡುವ ಮಾತ? ನನಗೋ
ನಿನ್ನೆ ನೋಡಿದ ಒಂದು ಕನಸು ಮನವು ತುಡುಕಿ
ಉಸಿರಿಂದ ಉಸಿರು ಕಳವಾಗಿ ಚೇತನವೆಲ್ಲ
ಬೆಂಡಾಗಿ ಹೋಗಿಹುದು; ಒಣಗಿ ತರಗಾಗಿಹುದು.

ರಾಜ: ಹೌದು. ಅಂಬಿಕೆ ಕನಸ ಮಾತ ಹೇಳಿದಳೆನಗೆ.
ನಿಜದಿಂದ ಬಂದಿರುವ ನೋವು ಸಾಕಾಗಿರಲು
ಕನಸೊಂದು ಬೇರೆ ನಿನ್ನನು ಹಿಂಸೆಪಡಿಸುತಿದೆ.

ಯಶೋಧರೆ: ಇಂದು ಇರುಳಾಗುವುದು; ಇನ್ನೇನ ಮಾಡುವ;
ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ
ಹಿಡಿಯುವುದೊ; ಇನ್ನೆನಿತು ತೊಳಲಬೇಕೋ, ಎಂದು
ಚೇತನಗಳೆಲ್ಲ ಭೀತಿಯಲಿ ಕಲಕಿಹವೆನಗೆ.
ನನ್ನನುದ್ಧರಿಸಬೇಕು. (ಮಂಡಿಯೂರಿ ನಮಸ್ಕರಿಸುವಳು.)

ರಾಜ: ಏಳು, ಅಮ್ಮಾಜಿ;
ನಿನ್ನ ದುಃಖವ ನಾನು ಕಾಣೆನೇ? ಏಳಮ್ಮ,

(ಯಶೋಧರಾ ಎದ್ದು ಕುಳಿತುಕೊಳ್ಳುವಳು)

ನೀ ಬಲ್ಲೆಯಲ್ತೆ ನಿನ್ನಾಣ್ಮ ಸನ್ಯಾಸವನು

ಸ್ವೀಕರಿಸಿಹನು ಎಂದು? ನೀ ಹೋಗಿ ಆತನನು

ನೋಡುವುದು ಸರಿಯಪ್ಪುದೇ ?

ಯಶೋಧರೆ: ಹೋಗಿ ಕೇಳುವೆನು.

ರಾಜ: ಸಂನ್ಯಾಸಿಯಾದವನು ಸತಿಯ ನೋಡುವ ಮಾತು

ಸಂಪ್ರದಾಯಕೆ ವಿರೋಧ.

ಯಶೋಧರೆ: ಪೂರ್ವದಲಿ ಗಾರ್ಗಿ,

ಸಂನ್ಯಾಸದಲಿ ತನ್ನ ಪತಿಯೊಡನೆ ಕಾನನಕೆ

ತೆರಳಿದಳು ಎಂದು ಕೇಳಿಹೆನು. ನಾನಂತೆಯೇ

ಸಂನ್ಯಾಸವನು ಕೊಂಡು ಪತಿಯೆಡೆಗೆ ಸಾರಿದರೆ...

ರಾಜ: ಈಗ ನೀನಿಹ ರೀತಿ ಸಂನ್ಯಾಸವಲ್ಲವೆ?

ಯಶೋಧರೆ: ಆಣ್ಮ ಸಂನ್ಯಾಸಿಯಾಗಿಹರೆಂಬುದನು ನೆನೆವ

ಸಾಧನೆಯ ವೇಷವಿದು. ಇಂದು ನಿಜದಲಿ ನಾನು.

ಸಂನ್ಯಾಸವನು ಕೊಂಡು ಪತಿಯೆಡೆಗೆ ಸಾರಿದರೆ

ರಾಜ: ಪತಿಯೆಡೆಗೆ ಸಾರುವರೆ ಸಂನ್ಯಾಸನು ಕೊಳಲು

ಅದನು ಸಂನ್ಯಾಸವೆನ್ನುವುದೆಂತು ಅಮ್ಮಾಜಿ?

ಯಶೋಧರೆ: ನನಗೆ ಕವಿದಿರುವ ಮಂಕನು ನೆನೆಯೆ ನನಗೇ

ನಗೆ ಬರುತಲಿದೆ, ಅಂತೆ ಅಳು ಬರುತಲಿದೆ. ಇನ್ನು

ಏನಮಾಡುವುದೋ ತೋರದು. ಎಂತು ನಡೆಯಲಿ?

ನೀವೆ ಅಪ್ಪಣೆಮಾಡಿ. ಅದರಂತೆ ನಡೆಯುವೆನು.

ರಾಜ: ಕುವರನಿಗೆ ಹೇಳಿ ಕಳುಹಿಸುವ, ಅವನಿಷ್ಟವನು

ತಿಳಿದು ಅದರಂತೆ ನಡೆಯುವ.

ಯಶೋಧರೆ: ಆಗಬಹುದು, ಇಂದೆ ಬೇಹನು ಕಳುಹಿ.

ರಾಜ: ಕಳುಹುವೆನು, ಯಾರಲ್ಲಿ?

ರಾಹುಲ: ತಾತ ಅಣ್ಣನ ನೋಡೆ ಯಾರನೋ ಕಳುಹುವಿರ? ನಾ ಹೋಗಿಬರುವೆ. ನನ್ನನು ಕಳುಹಿ.

ಯಶೋಧರೆ: ಅಣ್ಣಯ್ಯ

ಮೊದಲು ಬೇಹಿನ ಜನರು ಹೋಗಿ ಅವರಿಚ್ಛೆಯನು

ತಿಳಿದು ಮರಳಲಿ.



ರಾಹುಲ: ಮತ್ತೆ ಹೋಗುವುದಂತೆ! ಮತ್ತೆ! ನಾನೊಲ್ಲೆ.

ನಾನೀಗಲೇ ಹೋಗಬೇಕು. ನಿಮಗೇನು?

ಅಣ್ಣನನು ನೋಡಿಹಿರಿ: ನೋಡಬೇಕೆಂದಾಸೆ

ಅಷ್ಟು ಬಲವಾಗಿಲ್ಲ. ನಾನವರ ನೋಡಿಲ್ಲ.

ಇನ್ನೆಷ್ಟು ದಿನಕೆ ನೋಡುವುದು? ಅಮ್ಮಾಜಿ,

ನಿನಗೆ ಭಯ ಬೇಡಮ್ಮ, ನಾ ಮರಳಿ ಬಹೆನಮ್ಮ;

ನಿಜವಾಗಿಯೂ ಬಹೆನು, ಅಲ್ಲಿಯೇ ನಿಲೆನಮ್ಮ;

ನನ್ನ ಕಳುಹಿಸಮ್ಮ; ಅವರ ನಾ ಕರೆತರುವೆನು.

ತಾತ ನನ್ನನು ಕಳುಹಿ; ನಾ ಮರಳಿ ಬರುವೆನು.

ಅಣ್ಣನನು ನೋಡಬೇಕೆಂದು, ಅವರೊಡನಿದ್ದು

ಮಾತಾಡಬೇಕೆಂದು, ನನಗೆ ಬಹು ಆಸೆಯಿದೆ.

ರಾಜ: ಇರಲಿ ಸುಮ್ಮನಿರಣ್ಣ.

ಯಶೋಧರೆ: ಕನಸು ನಿಜವಾಯಿತು.

ಕನಸಿನಲಿ ಕಂಡ ಹುಲಿ ನಿಜದೊಳೆದುರಿಗೆ ಬಂದು,

ಕೊಡು ನಿನ್ನ ಜೀವವನು, ಎಂದು ಕೇಳುತಲಿಹುದು.

ರಾಹುಲ: ಅಮ್ಮಾಜಿ, ನಾನು ಬರುವೆನೊ ಇಲ್ಲವೋ ಎಂದು

ನಿನಗೆ ಭಯವಿಹುದಾಗೆ ನನ್ನ ಜೊತೆಯಲಿ ನಮ್ಮ

ಅಂಬಿಕೆಯ ಕಳುಹಮ್ಮ. ನಾವಿಬ್ಬರೂ ಹೋಗಿ

ಅಣ್ಣನನು ಕರೆದಹೆವಮ್ಮ. ಒಪ್ಪಮ್ಮ.

ರಾಜ: ಅಂಬಿಕೆ.

ಅಂಬಿಕ: ಸ್ವಾಮಿ.

ರಾಜ: ಬಾಲನಾಡಿದ ಮಾತ ಕೇಳಿದೆಯ? ಏನೆಂಬೆ?

ಅಂಬಿಕ: ಕೇಳಿದೆ. ಅಮ್ಮಾಜಿ

ಭಯಪಡುತಲಿಹರು. ತಾವರಿಯದಿಹದೇನುಂಟು?

ರಾಜ: ಅಮ್ಮಾಜಿ ಏನೆಂಬೆ? ಅಂಬಿಕೆಯ ಜೊತೆಯಲ್ಲಿ

ರಾಹುಲನ ಕಳುಹಿಸಲು ಧೈರ್ಯವಾಗಿರಬಹುದು.

ಏನಹೇಳುವೆ?

ಯಶೋಧರೆ: ನನಗೆ ಯಾವುದೂ ತೋಚದಿದೆ.

ಅವರ ನೋಡುವ ಪುಣ್ಯ ನನ್ನ ಈ ಕಣ್ಗಳಿಗೆ
ಇರುವುದೋ ಇಲ್ಲವೋ ನಾನರಿಯೆ. ಬಾಲಕನು
ತನ್ನ ತಂದೆಯ ನೋಡಬೇಕೆಂದು ಆಶಿಸಲು
ಬೇಡವೆನ್ನುವುದು ಸರಿಯೇ ಎಂದು ಆಂತರ್ಯ
ಸಂದೇಹದೊಳಗಿಹುದು. ಕಳುಹುವುದು ಸರಿಯೆಂದು.
ನಿಮಗೆ ತೋರಿದರೆ ಕಳುಹಿರಿ. ಬೇಡವೆನೆ ನಾನು.

ರಾಹುಲ: ಅಮ್ಮಾ, ಎಷ್ಟು ಒಳ್ಳೆಯವಳಮ್ಮಾ ನೀನು!
ಅಂಬಿಕೇ, ನಡೆ, ಹೋಗಿ ಅಣ್ಣನನು ಕರೆತರುವ.
ತಾತಾ ನಾ ಹೋಗಿಬರಲೆ? ಅಮ್ಮಾಜೀ.
ನಾವು ಹೋಗಿ ಬರೋಣವೇನಮ್ಮ?

ಯಶೋಧರೆ: ಆಹಾ, ಏನು ಉತ್ಸಾಹವಿದು! ಅಪ್ಪಾಜಿ ಹೋಗಿಬಾ.
ಅಣ್ಣಯ್ಯ, ನನ್ನ ಮರೆಯದಿರಣ್ಣ. ನಿಮ್ಮಣ್ಣ
ನಮ್ಮ ಮರೆತರು, ನನ್ನ ಬದುಕೆಲ್ಲ ಬಯಲಾಯ್ತು.
ಅವರು ಬಿಟ್ಟಂತೆ ನೀನೆನ್ನ ಕೈ ಬಿಡಬೇಡ.
ಹೋಗಿಬಾ. ಹೋಗಿಬಾ; ಅಂಬಿಕೆ, ಜೊತೆಯೊಳಿರು;
ನನ್ನ ಮರೆಯದಿರು.

ಅಂಬಿಕೆ: ನನ್ನಾಣೆ ಮರೆಯುವೆನೆ ತಾಯಿ?

ಯಶೋಧರೆ: ಮರೆತರೂ ತಪ್ಪಲ್ಲ. ಅದು ನನ್ನ ವಿಧಿ ಎಂಬೆ.

ರಾಜ: ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ.
ನಿನ್ನರಸನೀಗ ಲೋಕಕೆ ಪೂಜ್ಯನೆನಿಸಿಹನು.
ರಾಜ್ಯವಾಳುವುದೆಂಬ ಕಿರಿಯ ಹಿರಿಮೆಯನು.

ಜಗದ ಜೀವಗಳ ಉದ್ಧರಿಪ ಹಿರಿಹಿರಿಮೆಯನು
ಅಳವಟ್ಟು, ರಾಜ ಅಧಿರಾಜ ವೃಂದಗಳಿಂದ
ಓಲೈಸಿಕೊಳ್ಳುತ್ತ ಚಕ್ರಾಧಿಪತಿಯಂತೆ
ನಿಂದಿಹನು. ಏಕೆ ಚಿಂತಿಸುವೆ? ಈ ಬಾಲಕನು
ನಿನ್ನ ಈ ಹತ್ತು ವರುಷದ ತಪವೆ ಮೆಯ್‌ವೆತ್ತು
ನಿನ್ನಾಣ್ಮನನು ಕರೆಯಹೊರಟಂತೆ ಹೊರಟಿಹನು.
ವಿಧಿಯರಿತು ನಡೆವ ಹವನದಲಿ ಉದ್ದಾತ್ತೃಗಳು
ಸ್ವರಹಿಡಿದು ಸೊಗಸಾಗಿ ನುಡಿದ ಶಕ್ತಿಯ ಮಂತ್ರ
ದೇವರನು ತರುವಂತೆ ನಮ್ಮ ಈ ಬಾಲಕನು
ನಮ್ಮ ಸಿದ್ಧಾರ್ಥನನು ಬಿಡದೆ ತಂದೇತಹನು.
ಬಾ ನನ್ನ ಅಣ್ಣಯ್ಯ, ತಾಯಿಗಭಿವಂದಿಸು.
ಬಹು ಹಿರಿಯ ಜೀವವಯ್ಯಾ ನಿನ್ನ ತಾಯಿಯದು;
ಬಹು ಹಿರಿಯ ತಪ ಪುಣ್ಯ, ಬೀಳ್ಕೊಳುವ ಮೊದಲಲ್ಲಿ
ಹರಕೆಯನು ಕೊಳು. ಇಲ್ಲಿ ಬಾ, ಒಮ್ಮೆ ವಂದಿಸು.
ತಾಯ್ತಂದೆಗಳ ಪುಣ್ಯ ನಿನ್ನಲ್ಲಿ ಫಲಿಸಲಿ.
ಸಿದ್ಧಾರ್ಥನನು ಕರೆದುತಹ ಕಾರ್ಯದಲಿ ನೀನು
ಸಿದ್ಧಾರ್ಥನಪ್ಪಂತೆ ದೇವರ್ಕಳೆಸಗಲಿ.
(ರಾಹುಲನು ಇವರಿಗೆ ನಮಿಸುವನು. ತೆರೆ ಬೀಳುವುದು)

ಕೃತಿಕಾರರ ಪರಿಚಯ



ಕನ್ನಡ ಸಾಹಿತ್ಯ ಲೋಕದಲ್ಲಿ 'ಸಣ್ಣಕಥೆಗಳ ಜನಕ' ರೆಂದೇ ಖ್ಯಾತಿಪಡೆದು, 'ಶ್ರೀನಿವಾಸ' ಕಾವ್ಯನಾಮದಿಂದ ಹೆಸರಾಂತ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಎಂಬ ಗ್ರಾಮದಲ್ಲಿ 6-6-1891 ರಲ್ಲಿ ಜನಿಸಿದರು. ತುಂಬು ಬಡತನವಿದ್ದರೂ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಉತ್ತಮ ದರ್ಜೆಯಲ್ಲಿ ಇಂಗ್ಲಿಷ್ ಎಂ. ಎ. ಪದವಿ ಪಡೆದರು. 'ಮೈಸೂರು ಸಿವಿಲ್ ಸರ್ವಿಸ್' ಪರೀಕ್ಷೆಯಲ್ಲಿ ಮೊದಲಸ್ಥಾನ ಪಡೆದು ಅಸಿಸ್ಟೆಂಟ್ ಕಮಿಷನರ್ ಆಗಿ ರಾಜ್ಯದ ವಿವಿಧೆಡೆ ಕರ್ತವ್ಯ ನಿರ್ವಹಿಸಿ ನಿವೃತ್ತರಾದರು.

ಇವರು ಕಾವ್ಯ, ನಾಟಕ, ಕಾದಂಬರಿ ವಿಮರ್ಶೆ- ಹೀಗೆ ಕನ್ನಡ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಕೃತಿ ರಚಿಸಿದ್ದಾರೆ. ಇವರ ಸಣ್ಣಕಥೆಗಳು ಒಟ್ಟು ಹದಿಮೂರು ಸಂಪುಟಗಳಲ್ಲಿ ಪ್ರಕಟವಾಗಿವೆ. 'ಗೌತಮಿ ಹೇಳಿದ ಕಥೆ', 'ಸಾರಿಪುತ್ರನ ಕೊನೆಯ ದಿನಗಳು', 'ಕುಚೇಲನ ಭಾಗ್ಯ, 'ಹೇಮಕೂಟದಿಂದ ಬಂದ ಮೇಲೆ', 'ಚಿಕವೀರರಾಜೇಂದ್ರ ಮೊದಲಾದವು ಪ್ರಮುಖ ಕೃತಿಗಳು. ಇವರ ಚಿಕ್ಕವೀರರಾಜೇಂದ್ರ ಕೃತಿಗೆ 1983 ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಇವರು 6-6-1986 ರಲ್ಲಿ ನಿಧನರಾದರು.

ಪ್ರಸ್ತುತ ಗಧ್ಯಭಾಗವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರ 'ಯಶೋಧರೆ' ನಾಟಕದಿಂದ ಸಂಪಾದಿಸಿ ನಿಗದಿಪಡಿಸಿದೆ.

ಪೂರ್ವ ಕಥೆ

ಸಿದ್ಧಾರ್ಥ ರಾಜ್ಯವನ್ನು ಪರಿತ್ಯಾಗ ಮಾಡಿ ಹೋಗಿ ಹತ್ತು ವರ್ಷಗಳು ಕಳೆದಿವೆ. ತಂದೆಯನ್ನೇ ಕಾಣದ ಮಗು ರಾಹುಲನಿಗೂ ಹತ್ತು ವರ್ಷಗಳಾಗಿವೆ. ಇತ್ತ ಕಪಿಲವಸ್ತುವಿನ ಅರಮನೆಯ ಅಂತಃಪುರದಲ್ಲಿ ಯಶೋಧರಾ ಒಬ್ಬಳೇ ಚಿಂತಾಮಗ್ನಳಾಗಿ ಸಿದ್ಧಾರ್ಥನ ಪಠವನ್ನು ನೋಡುತ್ತಾ ಕಣ್ಣೀರಿಡುತ್ತಾ ಕುಳಿತಿರುತ್ತಾಳೆ. ದುಃಖಿಸಲು ಕಾರಣವನ್ನು ಆಕೆಯ ಸಖಿ ಅಂಬಿಕೆ ಕೇಳಲಾಗಿ ಹಿಂದಿನ ರಾತ್ರಿ ಅಮಂಗಳವನ್ನು ಸೂಚಿಸುವ ಕನಸೊಂದನ್ನು ಕಂಡೆನೆಂದು ಹೇಳುತ್ತಾ, ಹತ್ತು ವರ್ಷಗಳ ಹಿಂದೆ ಇಂಥಹ ಕನಸೊಂದನ್ನು ಕಂಡು ಎಚ್ಚರವಾಗಿ ನೋಡಿದರೆ ನನ್ನ ಮನದನ್ನ ಇರದೇ ರಾಜ್ಯ ತೊರೆದು ಹೋಗಿದ್ದ. ಇಂದು ಕನಸಿನಿಂದ ಎಚ್ಚೆತ್ತು ನೋಡಿದರೆ ಮಗ ಇದ್ದಾನೆ. ಆದರೆ ಎಲ್ಲಿ ನನ್ನನ್ನು ತೊರೆದು ಹೋಗುತ್ತಾನೆಂದು ವ್ಯಾಕುಲತೆಗೆ ಒಳಗಾಗಿರುವುದಾಗಿ ತಿಳಿಸುತ್ತಾಳೆ. ಅಭ್ಯಾಸಕ್ಕೆ ಹೋಗಿದ್ದ ರಾಹುಲನು ಬಂದು ಅಮ್ಮ ತಂದೆಯನ್ನು ನಾನು ನೋಡಿಯೇ ಇಲ್ಲ, ಆತನನ್ನು ಕರೆತರಲು ನಾನು ಹೋಗುವುದಾಗಿ ತಿಳಿಸುತ್ತಾ ಇದಕ್ಕೆ ತಾತನ ಅನುಮತಿ ಪಡೆದಿರುವುದಾಗಿ ತಿಳಿಸುತ್ತಾನೆ. ಇದರಿಂದ

ಆತಂಕಗೊಂಡು ರಾಜನನ್ನು ಕರೆಯಲು ಸಖಿ ಅಂಬಿಕೆಯನ್ನು ಕಳಿಸುತ್ತಾಳೆ. ರಾಜ ಅಂತಃಪುರಕ್ಕೆ ಅಂಬಿಕೆಯೊಂದಿಗೆ ಆಗಮಿಸುತ್ತಾನೆ.

ಪದಗಳ ಅರ್ಥ

ಆಣ್ಮ- ಒಡೆಯ, ಸ್ವಾಮಿ; ಆಶಿಸು- ಬಯಸು; ಉದ್ಗಾತೃ- ಋತ್ವಿಜ, ಯಜ್ಞದಲ್ಲಿ ಸಾಮಗಾನವನ್ನು ಹಾಡುವವನು; ಎನಿತು- ಎಷ್ಟು; ಎಸಗಲಿ- ಆಶೀರ್ವದಿಸಲಿ; ಕವಿ- ಆವರಿಸು, ಮುತ್ತು; ಕಾನನ- ಕಾಡು, ಅರಣ್ಯ; ಚೇತನ- ಶಕ್ತಿ, ಚೈತನ್ಯ; ತರಗು- ಕುಂದುವಿಕೆ, ಇರುಳು- ರಾತ್ರಿ; ತುಡುಕಿ- ಕಸಿದುಕೊಂಡು, ಕಿತ್ತುಕೊಳ್ಳು; ತೊಳಲು- ಚಿಂತೆಮಾಡು, ಶ್ರಮಪಡು; ಪರಿಪಾಲಿಸುರಕ್ಷಣೆ ಮಾಡು, ಕಾಪಾಡು; ಬೇಹು- ಗುಪ್ತಾಚಾರ; ಮಂಕು- ಭ್ರಾಂತಿ; ವಿನೋದ- ಹಾಸ್ಯ, ಉತ್ಸುಕತೆ; ವೃಂದ- ಸಮೂಹ, ಗುಂಪು; ಸಂದೇಹ- ಅನುಮಾನ; ಸತಿ- ಹೆಂಡತಿ; ಸಲಹು ಕಾಪಾಡು; ಸುತೆ- ಮಗಳು; ಹವನ- ಹೋಮ, ಯಜ್ಞ; ಹಸುಳೆ- ಮಗು;

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ?
2. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು?
3. ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರಾರು?
4. ಸಂಪ್ರದಾಯಕ್ಕೆ ವಿರುದ್ಧವಾದದ್ದು ಯಾವುದು?
5. ಈಗ ನೀನಿರುವ ಸ್ಥಿತಿ ಯಾವುದೆಂದು ರಾಜ ಹೇಳುತ್ತಾನೆ?

II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ.

1. ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ ಏನೆಂದು ವಿನಂತಿಸುತ್ತಾಳೆ?
2. ಯಶೋಧರೆ ಮಂಡಿಯೂರಿ ನಮಸ್ಕರಿಸುತ್ತಾ ಏನು ಹೇಳುತ್ತಾಳೆ?
3. ರಾಜನು ಈಗ ನೀನಿರುವ ರೀತಿ ಸನ್ಯಾಸವಲ್ಲವೆ ಎನ್ನಲು ಕಾರಣವೇನು?
4. ಯಶೋಧರೆಯ ಆಂತರ್ಯದಲ್ಲಿರುವ ಸಂದೇಹವೇನು?

III. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯದಲ್ಲಿ ಉತ್ತರಿಸಿ.

1. ಬೇಹಿನವರನ್ನು ಕಳಿಸುವ ವಿಚಾರದಲ್ಲಿ ರಾಹುಲನ ಅಭಿಪ್ರಾಯವೇನು?

2. ಯಶೋಧರೆಯ ವಿಧಿಯ ಬಗ್ಗೆ ರಾಜನು ಏನೆಂದು ಹೇಳಿದನು?

IV. ಕೆಳಗಿನ ಹೇಳಿಕೆಗಳನ್ನು ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಹೇಳಿದರು.

1. "ಸೋದರಿಯ ಸುತೆಯೆಂದು ಎಳೆತನದಲೇ ನನ್ನ ಕರೆತಂದು ಸಾಕಿದಿರಿ"
2. "ಅಮ್ಮಾಜಿ, ನಿನಗೆ ಭಯ ಬೇಡಮ್ಮ ನಾ ಮರಳಿ ಬಹೆನಮ್ಮ"
3. "ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ"
4. "ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ ಹಿಡಿಯುವುದೋ"

V. ಹೊಂದಿಸಿ ಬರೆಯಿರಿ

1. ಯಶೋಧರೆ	a. ಸಖಿ
2. ಶುದ್ಧೋದನ	b. ಬುದ್ಧನ ಮಗ
3. ಅಂಬಿಕೆ	c. ರಾಜ
4. ರಾಹುಲ	d. ಗೌತಮ ಬುದ್ಧ
5. ಸಿದ್ಧಾರ್ಥ	e. ಯುವರಾಣಿ

VI. ಈ ಕೆಳಗಿನ ಪದಗಳಿಗೆ ತದ್ಭವ ಪದಗಳನ್ನು ಬರೆಯಿರಿ.

ವಿನೋದ, ದುಃಖ, ರಾಜ, ಕಾರ್ಯ.

VII. ಈ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.

ನಿನ್ನಾಣ್ಣೆ, ಚಕ್ರಾಧಿಪತಿ, ಹರಕೆಯನು, ಪತಿಯೊಡನೆ, ಇಂದಳುತ

ಸೈದ್ಧಾಂತಿಕ ಭಾಷಾಭ್ಯಾಸ

ಲಿಂಗ, ವಚನ ಮತ್ತು ವಾಕ್ಯಗಳ ಪರಿಚಯಾತ್ಮಕ ವಿವರ

ಲಿಂಗಗಳು

1. ಶ್ಯಾಮ ಗಿರೀಶನಿಗೆ ಬುದ್ಧಿ ಹೇಳಿದನು.
2. ಗೌರಿ ತನ್ನ ತಂಗಿಗೆ ಪುಸ್ತಕವನ್ನು ಕೊಟ್ಟಳು.
3. ಆಡು ಸೊಪ್ಪನ್ನು ತಿನ್ನುತ್ತದೆ.

ಮೊದಲ ವಾಕ್ಯದಲ್ಲಿರುವ 'ಶ್ಯಾಮ', 'ಗಿರೀಶ' ಪದಗಳು ಗಂಡಸರಿಗೂ 'ಗೌರಿ', 'ತಂಗಿ' ಪದಗಳು ಹೆಂಗಸರಿಗೂ 'ಆಡು', 'ಸೊಪ್ಪು' ಪದಗಳು ಗಂಡಸೂ ಅಲ್ಲದ ಹೆಂಗಸೂ ಅಲ್ಲದ ಬೇರೆ ಯಾವುದಕ್ಕೋ ಸಂಬಂಧಿಸಿದ್ದೆಂದು ತಿಳಿಯುತ್ತದೆ.

'ಗಂಡಸು' ಎಂಬ ಅರ್ಥ ನೀಡುವ ಪದಗಳನ್ನು ಪುಲ್ಲಿಂಗ ಎಂತಲೂ 'ಹೆಂಗಸು' ಎಂಬ ಅರ್ಥ ನೀಡುವ ಪದಗಳನ್ನು ಸ್ತ್ರೀಲಿಂಗ ಎಂತಲೂ 'ಗಂಡಸು' ಎಂಬ ಅರ್ಥವನ್ನೂ 'ಹೆಂಗಸು' ಎಂಬ ಅರ್ಥವನ್ನೂ ನೀಡದ ಪದಗಳನ್ನು ನಪುಂಸಕಲಿಂಗ ಎಂತಲೂ ಕರೆಯುವರು.

ವಚನಗಳು

ವಚನ ಎಂದರೆ ಎಣಿಕೆ ಎಂದರ್ಥ. ವಸ್ತು ಅಥವಾ ವ್ಯಕ್ತಿಗಳನ್ನು ಎಣಿಸುವಾಗ ಒಂದು ಅಥವಾ ಒಂದಕ್ಕಿಂತ ಹೆಚ್ಚು ಎಂದು ಎಣಿಸಿ ಒಂದಕ್ಕಿಂತ ಹೆಚ್ಚಾದರೆ ಎಷ್ಟು ಎಂದು ನಿರ್ಧರಿಸುತ್ತೇವೆ. ಹೀಗೆ- ಒಂದು ವಸ್ತು ಅಥವಾ ಒಬ್ಬ ವ್ಯಕ್ತಿಯನ್ನು ಸೂಚಿಸುವ ಪದಗಳೇ ಏಕವಚನ. ಒಂದಕ್ಕಿಂತ ಹೆಚ್ಚು ಇರುವ ವಸ್ತು ಅಥವಾ ವ್ಯಕ್ತಿಗಳನ್ನು ಸೂಚಿಸುವ ಪದಗಳೇ ಬಹುವಚನ.

ಏಕವಚನದ ನಾಮಪ್ರಕೃತಿಗಳಿಗೆ ಅರು, ವು, ಗಳು, ಅಂದಿರು ಇತ್ಯಾದಿ ಬಹುವಚನ ಸೂಚಕಗಳು ಸೇರಿ ಬಹುವಚನ ಪದಗಳಾಗುತ್ತವೆ.

ಉದಾ: ರಾಜ + ಅರು > ರಾಜರು ನೀನು + ವು > ನೀವು

ಮರ + ಗಳು > ಮರಗಳು ಅಣ್ಣ + ಅಂದಿರು > ಅಣ್ಣಂದಿರು

ರಾಣಿ + ಅರು > ರಾಣಿಯರು

ವಾಕ್ಯಗಳು

ಮಾತು ಪದಗಳಿಂದ ಆರಂಭವಾಗುತ್ತದೆ. ಆದರೆ ಅದು ವಿಕಾಸಗೊಳ್ಳುವುದು ವಾಕ್ಯಗಳ ಮೂಲಕ. ಹಾಗಾಗಿ ಪದಗಳ ಅರ್ಥಪೂರ್ಣ ಸಮೂಹವೇ ವಾಕ್ಯ. ಹಾಗೆಂದ ಮಾತ್ರಕ್ಕೆ ಅದೊಂದು ಪದಗಳ ಗುಂಪು ಎಂದು ಹೇಳಲಾಗದು. ಆ ಪದಗಳು ಒಂದು ನಿರ್ದಿಷ್ಟ ರೀತಿಯಲ್ಲಿ (ಅರ್ಥವತ್ತಾದ) ಜೋಡಣೆಯಾದಾಗ ಮಾತ್ರ ವಾಕ್ಯ ಎನಿಸಿಕೊಳ್ಳುತ್ತದೆ.

ಈ ವಾಕ್ಯಗಳನ್ನು ಗಮನಿಸಿ

1. ಜಿಂಕೆ ಹುಲ್ಲನ್ನು ತಿಂದಿತು.
2. ಕೃಷ್ಣ ಧೇನುಕಾಸುರನನ್ನು ಕೊಂದ.

ಈ ಎರಡೂ ವಾಕ್ಯಗಳು ಸಂಪೂರ್ಣ ಅರ್ಥವನ್ನು ಕೊಡುತ್ತವೆ. ಆದರೆ ಪ್ರತಿಯೊಂದು ವಾಕ್ಯದಲ್ಲಿರುವ ಯಾವುದಾದರೂ ಒಂದು ಪದ ಇಲ್ಲವಾದಲ್ಲಿ ಆ ವಾಕ್ಯ ಪೂರ್ಣ ಅರ್ಥ ಕೊಡದೆ ಪ್ರಶ್ನೆ ಮೂಡುವಂತೆ ಮಾಡುತ್ತದೆ.

ಉದಾ: ಮೊದಲ ವಾಕ್ಯದಲ್ಲಿರುವ 'ಜಿಂಕೆ' ಪದ ಇಲ್ಲವಾದರೆ ಹುಲ್ಲನ್ನು ತಿಂದುದು ಯಾವುದು? ಎಂಬ ಪ್ರಶ್ನೆ ಮೂಡುತ್ತದೆ. 'ಹುಲ್ಲನ್ನು' ಪದ ಇಲ್ಲವಾದರೆ ಜಿಂಕೆ ಏನನ್ನು ತಿಂದಿತು ಎಂಬ ಪ್ರಶ್ನೆ ಮೂಡುತ್ತದೆ. 'ತಿಂದಿತು' ಪದ ಇಲ್ಲವಾದರೆ ಜಿಂಕೆ ಹುಲ್ಲನ್ನು ಏನು ಮಾಡಿತು ಎಂಬ ಪ್ರಶ್ನೆ ಮೂಡುವಂತೆ ಮಾಡುತ್ತದೆ.

ಇಲ್ಲಿ 'ಜಿಂಕೆ' ಎಂಬುದು 'ಕರ್ತೃಪದ'; 'ಹುಲ್ಲು' ಎಂಬುದು 'ಕರ್ಮಪದ'; 'ತಿಂದಿತು' ಎಂಬುದು 'ಕ್ರಿಯಾಪದ'. ಅರ್ಥಪೂರ್ಣ ವಾಕ್ಯ ಎಂದರೆ ಕರ್ತೃ, ಕರ್ಮ, ಕ್ರಿಯಾಪದಗಳಿಂದ ವ್ಯವಸ್ಥಿತವಾಗಿ ಕೂಡಿರುವ ಪದಸಮೂಹ. ಆದರೆ ಕೆಲವು ಕ್ರಿಯಾಪದಗಳು ಕರ್ಮಪದವನ್ನು ಅಪೇಕ್ಷಿಸುವುದಿಲ್ಲ. ಅಂತಹ ಕ್ರಿಯಾಪದದ ಜತೆಗೆ ಕರ್ತೃಪದ ಇದ್ದರೆ ಅರ್ಥಪೂರ್ಣ ವಾಕ್ಯವಾಗುತ್ತದೆ.

ಅಭ್ಯಾಸ ಚಟುವಟಿಕೆ

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ

1. ಲಿಂಗದ ವಿಧಗಳಾವುವು?
2. ಬಹುವಚನವನ್ನು ನಿದರ್ಶನದ ಮೂಲಕ ವಿವರಿಸಿ.
3. ವಾಕ್ಯ ಎಂದರೇನು?

ಪ್ರಾಯೋಗಿಕ ಭಾಷಾಭ್ಯಾಸ

1. **ಕೊಟ್ಟಿರುವ ಪದಗಳನ್ನು ಪುಲ್ಲಿಂಗ,ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಾಗಿ ವರ್ಗೀಕರಿಸಿ.**

ರಾಹುಲ, ಯಶೋಧರೆ, ಸಖಿ, ಅಮ್ಮಾಜಿ, ರಾಜ, ವಿಧಿ, ಅಂಬಿಕೆ, ಲೋಕ, ಅರಮನೆ, ತಂದೆ, ಸನ್ಯಾಸ, ಸತಿ, ಹುಲಿ, ಕನಸು

2. **ಕೊಟ್ಟಿರುವ ಪದಗಳ ಬಹುವಚನ ರೂಪ ಬರೆಯಿರಿ.**

ನಾನು, ಅಮ್ಮ, ಕಿರಿಯ, ರಾಜ, ನನ್ನ, ಲೋಕ, ಬಾಲಕ, ಮಗು, ತಾಯಿ, ದೇವ, ಸ್ವರ, ತಾತ, ನೀನು.

3. **ಕೊಟ್ಟಿರುವ ವಾಕ್ಯಗಳಲ್ಲಿರುವ ಕರ್ಮ, ಕ್ರಿಯಾ ಹಾಗೂ ಕರ್ತೃಪದಗಳನ್ನು ಆರಿಸಿ ಬರೆಯಿರಿ.**
    1. ಅಮ್ಮ ಅಣ್ಣನನ್ನು ಕರೆಯುವೆನು.
    2. ಸನ್ಯಾಸವನು ಕೊಂಡು ಪತಿಯನ್ನು ಸೇರುವೆನು.
    3. ಸಿದ್ಧಾರ್ಥನು ಕರೆಯನ್ನು ಕೇಳಿಸಿಕೊಳ್ಳಲಿಲ್ಲ.

ಪೂರಕ ಓದು:

1. ಡಾ. ಪ್ರಭುಶಂಕರ್‌ರವರ 'ಬುದ್ಧ ನಾಟಕ ಚಕ್ರ' ಗೀತಾನಾಟಕಗಳನ್ನು ಓದಿರಿ.
2. ದ. ರಾ. ಬೇಂದ್ರೆಯವರ 'ಬುದ್ಧ' ಕವನವನ್ನು ಓದಿರಿ.


13. 7. ಅಮ್ಮ- ಯು. ಆರ್. ಅನಂತಮೂರ್ತಿ

ಪ್ರವೇಶ:

ಕನ್ನಡ ಸಾಹಿತ್ಯದಲ್ಲಿ ಆತ್ಮಕಥನಕ್ಕೆ ವಿಶಿಷ್ಟ ಸ್ಥಾನವಿದೆ. 'ವ್ಯಕ್ತಿಯೊಬ್ಬ ತಾನು ಬದುಕಿದ ರೀತಿಯನ್ನು ಮತ್ತು ತನ್ನ ಜೀವನದಲ್ಲಿ ತಾನು ಕಂಡುಂಡ ನೋವು, ನಲಿವುಗಳ ರೀತಿಯನ್ನು ತಾನೇ ಬರೆದುಕೊಳ್ಳುವುದು ಆತ್ಮಕಥೆಯಾಗಿದೆ'. ವ್ಯಕ್ತಿ ತನ್ನ ಬದುಕನ್ನು ಕುರಿತು ಸಿಂಹಾವಲೋಕನ ಮಾಡಿಕೊಂಡ ಜೀವನದ ಯಶೋಗಾಥೆ ಇದಾಗಿದೆ. ವಾಸ್ತವದ ಜೊತೆಗೆ ಕಲಾತ್ಮಕತೆ ಈ ಸಾಹಿತ್ಯ ರಚನೆಯ ಜೀವನಾಡಿಯಾಗಿರುತ್ತದೆ. ಈ ಸಾಹಿತ್ಯದ ವಿಷಯದ ವ್ಯಾಪ್ತಿಯು ಸಮಕಾಲೀನ ಮತ್ತು ಚಾರಿತ್ರಿಕ ಸಂಗತಿಗಳಾದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಹೀಗೆ ಹಲವಾರು ಪರಿಸರಗಳಿಂದ ಕೂಡಿದ್ದಾಗಿದ್ದು, ವಾಚಕರ ಮನವನ್ನು ತನ್ನೆಡೆಗೆ ಸೆಳೆಯುತ್ತದೆ.

ಮಾನವನ ಬದುಕಿನಲ್ಲಿ ಬಾಲ್ಯ ಕಟ್ಟಿಕೊಡುವ ನೆನಪುಗಳು ಅಪಾರ ಹಾಗೂ ಅಮೋಘ, ಬಾಲ್ಯದ ಈ ನೆನಪಿನಂಗಳದಲ್ಲಿ ತುಂಬಿಬರುವ ಈ ನೆನಪಿನ ಬುತ್ತಿಯು ಬದುಕಿನುದ್ದಕ್ಕೂ ಎಷ್ಟು ಸವಿಯುತ್ತಿದ್ದರೂ ಮುಗಿಯದ ಅಕ್ಷಯಪಾತ್ರೆಯಾಗಿರುತ್ತದೆ. ಮಲೆನಾಡಿನ ಪ್ರಕೃತಿಯ ಮಡಿಲಿನಲ್ಲಿ ಬರುವ ತನ್ನೂರಿನ ಜನಜೀವನದೊಂದಿಗೆ ತನ್ನ ಶಾಲಾದಿನಗಳ ನೆನಪನ್ನು ಓದುಗರ ಮನಮುಟ್ಟುವಂತೆ ಲೇಖಕರು ಇಲ್ಲಿ ಚಿತ್ರಿಸಿದ್ದಾರೆ.

ಈ ಊರಿನಲ್ಲಿ ಹುಲಿಗಳ ಕಾಟ ಬಹಳ ಇತ್ತು. ನಮ್ಮಮ್ಮನಿಗೆ ದೂರದಲ್ಲಿ ಹುಲಿ ಕೂಗುತ್ತಿದ್ದರೆ ಥಟ್ಟನೆ ತಿಳಿದುಬಿಡುತಿತ್ತು. ಹುಲಿಗಳ ಶಬ್ದಕ್ಕೆ ತುಂಬ ಸೂಕ್ಷ್ಮವಾಗಿದ್ದ ಜೀವಿಗಳೆಂದರೆ ಕೊಟ್ಟಿಗೆಯ ದನಗಳು. ಅವು ಗಡಗಡ ನಡುಗಲು ಶುರುಮಾಡುತ್ತಿದ್ದವು. ಕೊರಳಿನ ಗಂಟೆ ಜೋರು ಶಬ್ದ ಮಾಡುತ್ತಿತ್ತು. ನಾನು, ನಮ್ಮಮ್ಮ, ನಮ್ಮಜ್ಜ, ಚಿಮಣಿ ದೀಪದ ಬೆಳಕಲ್ಲಿ ಒಳಗಡೆ ಕೂತು ಎಲ್ಲಿ ಹುಲಿ ನಮ್ಮ ಕೊಟ್ಟಿಗೇಗೂ ನುಗ್ಗಿಬಿಡುತ್ತದೆಯೋ ಎಂದು ಕಾಯುತ್ತಿದ್ದೆವು. ಮನೆಗೆ ನಿತ್ಯ ಆಳುಗಳು ಬಂದಾಗ ಮಾತು ಶುರುವಾಗುತ್ತಿದ್ದುದು ಯಾವುದೋ ಹುಲಿ ಯಾವುದೋ ದನವನ್ನು ಕಾಡಲ್ಲಿ ಹಿಡೀತು, ಅವರ ಮನೆ ದನ ಹೋಯ್ತು. ಇವರ ಮನೆ ದನ ಹೋಯ್ತು -ಹೀಗೆ. ಮಲೆನಾಡಿನಲ್ಲಿ ಹುಲಿ ಆಗ ನಿಜವಾದ ಹಸಿದ ಕಣ್ಣುಗಳ ಕೋರೆದಾಡೆಯ ಮುಖವಾಗಿತ್ತು. ನಮಗೆ ತುಂಬಾ ಭಯವಾದಾಗ ಹೇಳಿಕೊಳ್ಳಲು ಅರ್ಜುನ ಮಂತ್ರವಿತ್ತು. "ಅರ್ಜುನಃ ಫಲ್ಗುಣೋ ಪಾರ್ಥಃ ಕಿರೀಟೀ ಶ್ವೇತವಾಹನಃ" ಇದು ನಮ್ಮಜ್ಜ ಹೇಳಿಕೊಟ್ಟದ್ದು. ಅದನ್ನು ಹೇಳಿಬಿಟ್ಟರೆ ಭಯ ನಿವಾರಣೆ ಆಗುತ್ತೆ ಅಂತ ಹೇಳಿದ್ದರು. ಅದನ್ನು ಹೇಳುತ್ತ ಹೇಳುತ್ತ ನಾವು ನಿದ್ದೆ ಹೋಗುತ್ತಿದ್ದೆವು, ಅಮ್ಮ ಮಾತ್ರ ನಿದ್ದೆ ಮಾಡುತ್ತಿರಲಿಲ್ಲ. ಬೆಳಗ್ಗೆ ಎದ್ದು ಕೊಟ್ಟಿಗೆಯಲ್ಲಿ ಎಲ್ಲ ದನಗಳಿವೆ ಎಂದು ಗೊತ್ತಾದಾಗ ಮನಸ್ಸಿಗೆ ಸಮಾಧಾನ.



ನನ್ನ ಮೊದಲ ವಿದ್ಯಾಗುರು ನನ್ನ ಅಮ್ಮ. ಅಮ್ಮ ಸ್ಕೂಲಿಗೆ ಹೋಗಿ ಸ್ವಲ್ಪ ಓದಿ ಬರೆಯಲು ಕಲಿತಿದ್ದಳು. ಸ್ಕೂಲಿನಲ್ಲಿ ಅವಳು ಎಸ್. ವಿ. ಪರಮೇಶ್ವರ ಭಟ್ಟರ ಸಹಪಾಠಿಯಾಗಿದ್ದವಳು. ಕೆರೆಕೊಪ್ಪದ ಮನೆಯಲ್ಲಿದ್ದಾಗಲೇ ನನಗೆ ಅಕ್ಷರಾಭ್ಯಾಸ ಪ್ರಾರಂಭವಾಗಿದ್ದು. ಆಗ ಸ್ಕೂಲ್ ಹತ್ತಿರ ಇರಲಿಲ್ಲ. ಹಬ್ಬದ ದಿನ ಅದು. "ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣೀ, ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ" ಎಂದು ಹೇಳಿ ಅಮ್ಮ ನೆಲದಲ್ಲಿ ಮರಳು ಹರಡಿ ಕೂರಿಸಿ ನನ್ನ ಬೆರಳನ್ನು ಹಿಡಿದುಕೊಂಡು 'ಅ' ಎಂಬ ಅಕ್ಷರವನ್ನು ಬರೆಯಿಸಿದ್ದಳು. ಅಮ್ಮ ನಿತ್ಯ ಹೀಗೆ ಮಾಡಿಸುತ್ತಿದ್ದುದರಿಂದ ನಾನು ಶಾಲೆಯಲ್ಲಿ ಅಕ್ಷರ ಕಲಿಯುವುದಕ್ಕೆ ಆರಂಭಿಸುವ ಹೊತ್ತಿಗೆ ಅನೇಕ ಅಕ್ಷರಗಳನ್ನು ಕಲಿತು ಬಿಟ್ಟಿದ್ದೆ.

ಹುಲಿಯ ಭಯದಿಂದಾಗಿ ನನ್ನನ್ನು ಆ ದಿನಗಳಲ್ಲಿ ಶಾಲೆಗೆ ಕಳುಹಿಸುತ್ತಿರಲಿಲ್ಲ. ಪಾಠ ಹೇಳಲು ಮನೆಗೇ ಒಬ್ಬರು ಬರುತ್ತಿದ್ದರು. ಅವರ ಹೆಸರು ಕೃಷ್ಣಪ್ಪಯ್ಯ. ಬಹಳ ಕಟ್ಟುನಿಟ್ಟಿನ ಮೇಷ್ಟ್ರು ಅವರು. ನನಗೋ ಆಗ ರಂಜದ ಹೂವನ್ನು ತಂದು ಪೋಣಿಸಿ ದೊಡ್ಡ ದೊಡ್ಡ ಸರಗಳನ್ನು ಮಾಡಿ ಅಮ್ಮನಿಗೆ ಮುಡಿಯುವುದಕ್ಕೆ ಕೊಡುವುದು, ನಾನು ಮುಡಿದು ಕೊಳ್ಳುವುದು ಇದರಲ್ಲಿ ಹೆಚ್ಚು ಆಸಕ್ತಿ. ಆಗ ನನಗಿನ್ನೂ ಚೌಲವಾಗಿರಲಿಲ್ಲ. ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು. ಮಗಳು ಬೇಕೆಂಬ ಅಮ್ಮನ ಆಸೆ ಪೂರೈಕೆಯಾದದ್ದು ಅವರ ಮೂರನೇ ಹೆರಿಗೆಯಲ್ಲಿ. ಅಮ್ಮ ಒಂದೊಂದು ಸಾರಿ ನನಗೆ ಹುಡುಗಿಯರ ಉಡುಪು ತೊಡಿಸಿ ಹೂವು ಮುಡಿಸುತ್ತಿದ್ದಳು. ನಾನು ರಂಜದ ಹೂವನ್ನು ಪೋಣಿಸುತ್ತಾ ಕುಳಿತಿದ್ದನ್ನು ಕಂಡರೆ ಕೃಷ್ಣಪ್ಪಯ್ಯನವರಿಗೆ ಸಿಟ್ಟು ಬರುತ್ತಿತ್ತು. ಕೃಷ್ಣಪ್ಪಯ್ಯನವರೇ ಅಧಿಕೃತವಾಗಿ ನನ್ನ ಮೊದಲ ಶಿಕ್ಷಕರು. ಕೃಷ್ಣಪ್ಪಯ್ಯ ಬರುವಾಗಲೇ ಒಂದು ಬೆತ್ತ ತಂದಿರುತ್ತಿದ್ದರು. ಪೆಟ್ಟು ತಿಂದು ಅದೇನು ಕಲಿತೆ ಎಂಬುದು ಮರೆತು ಹೋಗಿದೆ. ಆದರೆ ಕೃಷ್ಣಪ್ಪಯ್ಯ ಮಾತ್ರ ನೆನಪಿನಲ್ಲಿದ್ದಾರೆ.

ಇದಾದ ಮೇಲೆ ನಾನು ಅಮ್ಮನ ಊರು ಮೇಳಿಗೆಗೆ ಹೋಗಿ ಅಲ್ಲಿನ ಶಾಲೆಯಲ್ಲಿ ಕೆಲವು ಕಾಲ ಕಲಿತೆ. ನನಗಾಗ ಆರು ವರ್ಷ ಇದ್ದಿರಬಹುದು. ಅಲ್ಲಿದ್ದ ಶೇಷಗಿರಿ ಮೇಷ್ಟ್ರು ನನ್ನ ಅಮ್ಮನಿಗೂ ಶಿಕ್ಷಕರಾಗಿದ್ದವರು. ಅದು ಏಕೋಪಾಧ್ಯಾಯ ಶಾಲೆ. ಶಾಲೆಯ ಹೊರಗೆ ಧೂಳು ತುಂಬಿದ ಅಂಗಳವಿತ್ತು. ಆ ಧೂಳಿನಲ್ಲಿ ದುಂಡಗಿನ ಸಣ್ಣ ಸಣ್ಣ ಕುಳಿಗಳ ಒಳಗೆ ಇರುವ ಒಂದು ಕಪ್ಪುಹುಳು ಇರುತ್ತಿತ್ತು. ಅದನ್ನು 'ತನ್ನಾದೇವಿ', 'ಗುಬ್ಬಿ' ಎಂದೆಲ್ಲಾ ಕರೆಯುತ್ತಾರೆ. ಅದನ್ನು ಆ ಕುಳಿಗಳಿಂದ ಎಬ್ಬಿಸಿ, 'ಕಾಶಿಗೆ ಹೋಗೋ ದಾರಿ ತೋರಿಸು, ಕಾಶಿಗೆ ಹೋಗೋ

ದಾರಿ ತೋರಿಸು' ಎಂದು ಹೇಳುತ್ತ ಬೆರಳಿನಿಂದ ಸುತ್ತು ಬರುತ್ತಿದ್ದೆವು. ಆಗ ಅದು ಹಿಂದೆ ಹಿಂದೆ ಹೋಗುತ್ತಿತ್ತು. ಮೇಷ್ಟ್ರು ಗದರಿಸಿ ನಮ್ಮನ್ನು ಒಳ ಕರೆದು ಪಾಠ ಮಾಡಬೇಕಾಗುತ್ತಿತ್ತು. ನಮಗೆ ತರಗತಿಯೊಳಗೆ ಕುಳಿತುಕೊಳ್ಳುವುದಕ್ಕಿಂತ ಹೊರಗೆ ಹೋಗಿ ಆಡುವುದೇ ಪ್ರಿಯವಾದುದರಿಂದ ಹೊರಗೆ ಹೋಗುವುದಕ್ಕೆ ಉಪಾಯ ಯೋಚಿಸುತ್ತಲೇ ಇರುತ್ತಿದ್ದೆವು. ಸುಲಭದ ಉಪಾಯವೆಂದರೆ 'ಒಂದಕ್ಕೆ ಸಾರ್' ಎಂದು ಎದ್ದು ನಿಂತು ಕೇಳುವುದು. ಅವರು ಹೊರಗೆ ಹೋಗಲು ಅನುಮತಿ ಕೊಡುತ್ತಿದ್ದರು.

ಸತತ ಮಳೆ ಸುರಿಯುತ್ತಿದ್ದ ಮಳೆಗಾಲದಲ್ಲಿ ಮನೆಯಲ್ಲಿ ಸೋರದ ಭಾಗವನ್ನು ನಾವು ಹುಡುಕಬೇಕಾಗುತ್ತಿತ್ತು. ಮಳೆಗಾಲದ ಆರಂಭಕ್ಕೆ ಮೊದಲೇ ಮನೆಯ ಕೆಲಸಕ್ಕೆ ನಮ್ಮ ಸಂಬಂಧಿಕರು, ಅಪ್ಪನ ಸ್ನೇಹಿತರು ಒಣ ಸೌದೆ, ಅಕ್ಕಿ, ಬೇಳೆ, ಜೋನಿ ಬೆಲ್ಲವನ್ನು ಸಂಗ್ರಹಿಸಲು ನೆರವಾಗುತ್ತಿದ್ದರು. ಆಗೆಲ್ಲ ಕಾಡು ಹಲಸಿನ ಹಣ್ಣು ಯಥೇಚ್ಛವಾಗಿ ಸಿಗುತ್ತಿತ್ತು. ಜೊತೆಗೆ ಅದು ಕಾಯಿಯಿಂದ ಹಣ್ಣಿನ ತನಕ ಎಲ್ಲ ಹಂತಗಳಲ್ಲೂ ಒಂದಲ್ಲ ಒಂದು ಆಹಾರ ಪದಾರ್ಥದ ತಯಾರಿಯಲ್ಲಿ ಉಪಯೋಗಕ್ಕೆ ಬರುತ್ತಿತ್ತು. ಸುರಿಯುವ ಮಳೆಯಲ್ಲಿ ನಾವು ಮಕ್ಕಳೆಲ್ಲ ಬಚ್ಚಲ ಒಲೆಯ ಬೆಂಕಿಯೆದುರು ಕುಳಿತು ಕೈಗಳನ್ನು ಮುಂಚಾಚಿ ಬೆಂಕಿ ಕಾಯಿಸುತ್ತಿದ್ದೆವು. ಆ ಜಡಿಮಳೆಯಲ್ಲಿ ಬೆಂಕಿಯ ಹಿತ ಸುಖವೆನ್ನಿಸುತ್ತಿತ್ತು. ಒಲೆಗೆ ಹಲಸಿನ ಬೀಜಗಳನ್ನು ಹಾಕಿ ಸುಟ್ಟು ತಿನ್ನುತ್ತ ನಮ್ಮ ಜೊತೆ ಇರುತ್ತಿದ್ದ ಯಾರಾದರೂ ದೊಡ್ಡವರು ಹೇಳುವ ಕತೆಗಳನ್ನು ಬಾಯಿಬಿಟ್ಟುಕೊಂಡು ಆಲಿಸುತ್ತಿದ್ದೆವು.

ಬೇಸಿಗೆಯಲ್ಲಿ ನಮ್ಮಮ್ಮ ಮಳೆಗಾಲದ ದಿನಗಳಿಗೆಂದು ಹಪ್ಪಳ, ಸಂಡಿಗೆಯಂತಹ ಅನೇಕ ತಿಂಡಿಗಳನ್ನು ಒಣಗಿಸಿ ಇಡುತ್ತಿದ್ದರು. ಮನೆಯ ಹಿರಿಯರಿಗೆ ಮಾತ್ರ ಗೊತ್ತಿದ್ದ ಕೆಲವು ಔಷಧೀಯ ಗುಣಗಳ ಸೊಪ್ಪುಗಳನ್ನು ಬೇಯಿಸಿ ನಿತ್ಯ ಊಟದಲ್ಲಿ ಬಳಸುತ್ತಿದ್ದರು. ಅದು ಎರಡನೇ ಮಹಾಯುದ್ಧದ ಕಾಲ. ಕೆರೆಕೊಪ್ಪದಲ್ಲಿ ಅಂಗಳದ ಆಚೆ ಮನೆಯನ್ನು ಆಕ್ರಮಿಸಲು ಹೊಂಚುತ್ತ ಇರುವ ಅರಣ್ಯವಿತ್ತು. ನಸುಕಿನಲ್ಲಿ ಎದ್ದು, ಮನೆಯೆದುರು ಅರಣ್ಯದ ಅಂಚಿನಲ್ಲಿ ಇದ್ದ ರಂಜದ ಮರವೊಂದರಿಂದ ನೆಲದ ಮೇಲೆ ಚೆಲ್ಲಿರುತ್ತಿದ್ದ ನಕ್ಷತ್ರದ ಆಕಾರದ ರಂಜದ ಹೂಗಳನ್ನು ಆರಿಸುದು, ದೂರ್ವೆಯನ್ನು ಹುಲ್ಲಲ್ಲಿ ಹುಡುಕಿ ಕಿತ್ತು ತರುವುದು, ಕೇದಗೆ ಅರಳಿದೆಯೆ, ಮರದ ಮೇಲಿನ ಗೂಡಲ್ಲಿ ಮೊಟ್ಟೆ ಮರಿಯಾಯಿತೆ ಎಂದು ಬಿದಿರಿನ ಸಂದಿಯಿಂದ ನಿತ್ಯ ನೋಡುವುದು ನನಗೆ ಖುಷಿಯ ಸಂಗತಿಗಳು. ದೂರ್ವೆಯನ್ನು ಅಜ್ಜಯ್ಯನಿಗೆ ಪೂಜೆಗೆ ಕೊಟ್ಟು, ಅಮ್ಮ ಕಡಗೋಲಿನಿಂದ ಮೊಸರು ಕಡೆಯುವಾಗ, 'ಏಳು ನಾರಾಯಣನೆ, ಏಳು ಲಕ್ಷ್ಮೀರಮಣ' ಎಂಬ ಹಾಡನ್ನು ಹೇಳುವುದನ್ನು ಆಲಿಸುತ್ತ, ರಂಜದ ಹೂವನ್ನು ಬಾಳೆಯ ನಾರಿನಲ್ಲಿ ಪೋಣಿಸುತ್ತ, ಕೃಷ್ಣಪ್ಪಯ್ಯ ಮೇಷ್ಟ್ರಿಗಾಗಿ ಆತಂಕದಲ್ಲಿ ಕಾಯುತ್ತ 'ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ' ಎಂದು ಮನಸ್ಸಲ್ಲೇ ಪ್ರಾರ್ಥಿಸುತ್ತ ಇರುವುದೇ ನನ್ನ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು.

ಕೆರೆಕೊಪ್ಪದಲ್ಲಿ ನಮಗೆಲ್ಲಾ ಚರಟದ ಕಾಫಿ. ಆದರೆ ಕೆಲವು ಸಾರಿ ಅಜ್ಜಯ್ಯನಿಗೆ, ನನ್ನ ತಂದೆ ಶಾನುಭೋಗರಿಗೆ ಮತ್ತು ಅವರ ಗೆಳೆಯರಾದ ಊರಿನ ಪಟೇಲರಿಗೆ ಮಾತ್ರ 'ಒರಿಜಿನಲ್' ಕಾಫಿಪುಡಿಯ ಕಾಫಿ, ಕಾಫಿ ಬೀಜವನ್ನು ಆಗಲೇ ಹುರಿದು, ಆಗಲೇ

ಪುಡಿಮಾಡಿ, ಆಗಲೇ ಕುದಿಯುವ ನೀರಿಗೆ ಬೆರಸಿ, ಮುಚ್ಚಿಟ್ಟು, ಅದರ ಗಸಿ ಇಳಿಯುವಷ್ಟು ಹೊತ್ತು ಕಾದು, ಅದಕ್ಕಾಗಿಯೇ ಇದ್ದ ಬಟ್ಟೆಗೆ ಸುರಿದು ಹಿಂಡಿ, ಡಿಕಾಕ್ಷನ್ ಇಳಿಯುವಾಗ ಕಳೆದುಕೊಂಡ ಉಷ್ಣಾಂಶವನ್ನು ಬಿಸಿಬಿಸಿ ಎಮ್ಮೆ ಹಾಲು ಬೆರೆಸಿ ಹದ ಮಾಡಿ ಕಾಫಿ ಮಾಡುವುದು ಸಾಮಾನ್ಯವಾಗಿತ್ತು. ಈ ಕಾಫಿಯನ್ನು ಫಳಫಳ ಹೊಳೆಯುವ ಒಂದು ಹಿತ್ತಾಳೆ ಲೋಟದಿಂದ ಇನ್ನೊಂದು ಲೋಟಕ್ಕೆ ನೊರೆ ಬರುವಂತೆ ಎತ್ತರದಿಂದ ಹಲವು ಸಾರಿ ಹುಯ್ದು ಕುಡಿಯಲು ಅಗತ್ಯವಾದ ಬಿಸಿಗದನ್ನು ಇಳಿಸಿ, ಸೆರಗು ಮುಚ್ಚಿದ್ದ ಕೈಯ ಮೇಲೆ ಅದನ್ನು ಇಟ್ಟುಕೊಂಡು ಹಸನ್ಮುಖಿಯಾಗಿ ಅಮ್ಮ ಕುಡಿಯಲು ಕೊಡುತ್ತಿದ್ದರು. ಮಕ್ಕಳಿಗೂ ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು. ನಿತ್ಯ ಈ ಕಾಫಿಯ ಘಮಘಮದ ವಾಸನೆಯನ್ನು ಕೊಂಚವಾದರೂ ಉಳಿಸಿಕೊಂಡ ಅದರ ಚರಟ ಕುದಿಸಿ ಮಾಡಿದ ಕಾಫಿಯ ಸೇವನೆ ನಮಗೆ. ಇವೆಲ್ಲದರ ತಯಾರಿಯೂ ನೆನಪಾಗುತ್ತದೆ. ಕಾಫಿ ಬೀಜವನ್ನು ಬ್ಯಾರಿಯೊಬ್ಬರು ತಿಂಗಳಿಗೊಮ್ಮೆ ನಮಗೆ ತಂದುಕೊಡುತ್ತಿದ್ದರು. ಈ ವಿಶೇಷ ಪದಾರ್ಥಗಳೆಲ್ಲವನ್ನೂ ಕಡವಾಗಿ ನಾವು ಪಡೆಯುವುದು ವರ್ಷಕ್ಕೊಮ್ಮೆ. ಅಂದರೆ ದೀಪಾವಳಿಯಿಂದ ಇನ್ನೊಂದು ದೀಪಾವಳಿಗೆ, ಯುಗಾದಿಯಿಂದ ಇನ್ನೊಂದು ಯುಗಾದಿಗೆ, ಗೌರಿ ಹಬ್ಬದಿಂದ ಇನ್ನೊಂದು ಗೌರಿ ಹಬ್ಬದವರೆಗೆ ಈ ಕಡದ ಅವಧಿ. ನಾವು ಬೆಳದ ಅಡಿಕೆಯನ್ನೋ, ಭತ್ತವನ್ನೋ ಬದಲಿಗೆ ಕೊಟ್ಟು ಕಡವನ್ನು ತೀರಿಸುತ್ತಿದ್ದರು. ಜರಿ ಟೋಪಿ ತೊಟ್ಟ ಬ್ಯಾರಿ ಬಂದಾಗಲೆಲ್ಲಾ ನಮಗೆ ಸಕ್ಕರೆಯಿಂದ ಮಾಡಿದ ಮಿಠಾಯಿ ಪುಕ್ಕಟೆ ಸಿಗುತ್ತಿತ್ತು. ನನ್ನ ಭಯ ನಿವಾರಣೆಗೆಂದು ಎಂದೋ ಒಮ್ಮೆ ಕರಡಿ ಆಡಿಸುವವನು ತಂದ ಕಡುಕಪ್ಪು ಕರಡಿ ಮೇಲೆ ನನ್ನನ್ನು ಕೂರಿಸಿ ಅಂಗಳ ಸುತ್ತಿಸಿದ್ದೂ ನೆನಪಿದೆ.

ಕೈಯಲ್ಲಿ ಕಾಸಾಡದ ಆ ಕಾಲದಲ್ಲಿ ಹಲವು ಸಾರಿ ಮನೆಯಲ್ಲಿ ಎಲ್ಲರಿಗೂ ಕಾಫಿ ಮಾಡುವಷ್ಟು ಅನುಕೂಲ ಇರುತ್ತಿರಲಿಲ್ಲ. ಕೆಲವೊಮ್ಮೆ ಅಮ್ಮ ಸ್ವಲ್ಪ ಕಾಫಿಪುಡಿಯಲ್ಲಿ ಒಂದು ಲೋಟ ಕಾಫಿ ಮಾಡಿ ಅಪ್ಪನಿಗೆ ಕೊಟ್ಟು ಆ ಕಾಫಿ ಮಾಡಿದ ಚರಟದಲ್ಲಿ ನನಗೆ, ತನಗೆ ಮತ್ತು ನನ್ನಜ್ಜನಿಗೆ ಕೊಡುತ್ತಿದ್ದರು. ಅಜ್ಜ ಮನೆಗೆ ಹಿರಿಯರಾದ್ದರಿಂದ 'ನನಗೆ ಚರಟದಲ್ಲಿ ಕಾಫಿಯೋ?' ಅಂತ ಕೇಳಿದ್ದಿದೆ.

ಮನೆಯಲ್ಲಿ ಅಜ್ಜಿಗೂ, ಅಮ್ಮನಿಗೂ ಕಿರಿಕಿರಿಯಾದಾಗ ಅಜ್ಜಯ್ಯ ಸೌದೆ ತರುವ ನೆಪ ಮಾಡಿ ಕತ್ತಿ ಹಿಡಿದು ಕಾಡಿಗೆ ನಡೆದು ಬಿಡುತ್ತಿದ್ದರು. ನಾನೂ ಹಠ ಹಿಡಿದು ಅವರ ಜೊತೆ ಹೋಗುತ್ತಿದ್ದೆ. ಅಮ್ಮನಿಗೆ ನಾನು ಹೀಗೆ ಅಜ್ಜಯ್ಯನ ಜೊತೆ ಪಟ್ಟಾಂಗ ಮಾಡುತ್ತ ಅಲೆಯುವುದು ಇಷ್ಟವಾಗುತ್ತಿರಲಿಲ್ಲ. ಅಂತಹ ಸಮಯದಲ್ಲಿ ಏನೇನೋ ನೆವ ಮಾಡಿಕೊಂಡು ನಾನು ಕಾಡುಹರಟೆಯಲ್ಲಿ ಕಾಲ ಕಳೆಯುತ್ತ ಅಕ್ಷರ ತಿದ್ದುತ್ತಿಲ್ಲವೆಂದು ಅಜ್ಜಯ್ಯನ ಎದುರೇ ಬಯ್ಯುತ್ತಿದ್ದರು.

ಕೃತಿಕಾರರ ಪರಿಚಯ



ಕನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳು, ಚಿಂತಕರು ಹಾಗೂ ವಿಮರ್ಶಕರೆಂದು ಪ್ರಖ್ಯಾತರಾದವರು ಡಾ. ಯು. ಆರ್. ಅನಂತಮೂರ್ತಿಯವರು ಇವರ ಪೂರ್ಣ ಹೆಸರು ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ. ಇವರ ಕಾಲ ಕ್ರಿ. ಶ. 1932-2014. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆ ಗ್ರಾಮದಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಎಂ. ಎ. ಪದವಿ ಪಡೆದು ಇಂಗ್ಲೆಂಡಿನ ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾನಿಲಯದಿಂದ 'ಇಂಗ್ಲಿಷ್ ಮತ್ತು ತೌಲನಿಕ ಸಾಹಿತ್ಯ' ಎಂಬ ವಿಷಯದಲ್ಲಿ ಪಿ. ಎಚ್. ಡಿ. ಪದವಿ ಪಡೆದರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿ ಕೊಟ್ಟಾಯಂ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿಯೂ ಸಹ ಸೇವೆ ಸಲ್ಲಿಸಿದರು. ಇವರ ಪ್ರಮುಖ ಕೃತಿಗಳು ಸಂಸ್ಕಾರ, ಭವ, ಅವಸ್ಥೆ, ಭಾರತೀಪುರ ಮುಂತಾದ ಕಾದಂಬರಿಗಳು, ಆವಾಹನೆ (ನಾಟಕ) ಮೌನಿ, ಪ್ರಶ್ನೆ, ಎಂದೆಂದೂ ಮುಗಿಯದ ಕಥೆ ಕಥಾ ಸಂಕಲನಗಳು, ಮಿಥುನ, ಅಜ್ಜನ ಹೆಗಲ ಸುಕ್ಕುಗಳು ಮುಂತಾದ ಕವನಸಂಕಲನಗಳು ಹೀಗೆ ವಿವಿಧ ಸಾಹಿತ್ಯ ಪ್ರಕಾರದಲ್ಲಿ ನೂರಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಗೌರವ ಡಿ. ಲಿಟ್. ರಾಜ್ಯೋತ್ಸವ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಭೂಷಣ ಪುರಸ್ಕಾರ, 1994 ರಲ್ಲಿ 'ಭಾರತೀಯ ಜ್ಞಾನಪೀಠ ಪ್ರಶಸ್ತಿ' ಪುರಸ್ಕಾರಗಳು ಲಭಿಸಿವೆ. 2002 ರಲ್ಲಿ ತುಮಕೂರಿನಲ್ಲಿ ನಡೆದ 66ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪ್ರಸ್ತುತ ಗದ್ಯಭಾಗವನ್ನು ಯು. ಆರ್. ಅನಂತಮೂರ್ತಿಯವರ 'ಸುರಗಿ' ಎಂಬ ಆತ್ಮಕಥನದಿಂದ ಆಯ್ಕೆಮಾಡಿ ಕೊಳ್ಳಲಾಗಿದೆ.

ಆಶಯ ಭಾವ

'ಮನೆಯೇ ಮೊದಲ ಪಾಠಶಾಲೆ, ಜನನಿತಾನೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರೇ ಧನ್ಯರು'. ಎನ್ನುವ ಮಾತು ಸರ್ವಕಾಲಿಕ ಸತ್ಯ ಹಾಗೂ ನೀತಿಯುಕ್ತ ನುಡಿಯಾಗಿದೆ. ಮಕ್ಕಳ ಬದುಕಿನಲ್ಲಿ ಅಮ್ಮನ ಪಾತ್ರ ಎಷ್ಟು ಮಹತ್ವದ್ದು ಎನ್ನುವುದು ಪ್ರತಿಯೊಬ್ಬರಿಗೂ ವೇದ್ಯವಾಗಿಯೇ ಇರುತ್ತದೆ. ಮಾನವನ ಸಂಸ್ಕಾರಯುತ ಜೀವನ ಆರಂಭವಾಗುವುದೇ ತಾಯಿಯ ಮಡಿಲಿನಲ್ಲಿ. ಆಕೆಯ ನಡೆನುಡಿ ಸಜ್ಜನಿಕೆ ಮಕ್ಕಳ ಬಾಲ್ಯದ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತದೆ. ಅಮ್ಮ ಸಂಸ್ಕಾರವನ್ನು ನೀಡಿದರೆ, ಜನಿಸಿದ ಈ ತಾಯ್ನೆಲ, ಈ ಪರಿಸರವನ್ನಪ್ಪಿ ಬೆಳೆದ ಬಾಲ್ಯದ ನೆನಪುಗಳು ಮಾನವನ ಜೀವನದಲ್ಲಿ

ಅಚ್ಚಳಿಯದ ಮುದ್ರೆಯನ್ನೊತ್ತುತ್ತವೆ. ಈ ಎಲ್ಲಾ ನೆನಪುಗಳ ಬುತ್ತಿಯನ್ನು ಈ ಮೂಲಕ ಕಟ್ಟಿಕೊಡುವುದೇ ಲೇಖಕರ ಆಶಯವಾಗಿದೆ.

ಪದಗಳ ಅರ್ಥ

ಅಂಚು- ದಡ, ತೀರ; ಆತಂಕ- ಭಯ, ಅಡ್ಡಿ; ಕಡ- ಸಾಲ; ಕಾಸು- ಹಣ, ದುಡ್ಡು; ಕೊಂಚ- ಅಲ್ಪ, ಸ್ವಲ್ಪ; ಚರಟ- ಗಸಿ, ಕಾಫಿ ಸೋಸಿದ ನಂತರದ ಉಳಿಕೆ; ಚಿಮಣಿ ದೀಪ- ಸೀಮೆಎಣ್ಣೆ ದೀಪ; ಚೌಲ- ಮುಡಿತೆಗೆಸು, ತಲೆಕೂದಲನ್ನು ತೆಗಿಸುವುದು; ಜೋನಿಬೆಲ್ಲ- ನೀರುಬೆಲ್ಲ; ದೂರ್ವೆ- ಗರಿಕೆ; ದೈನಿಕ- ದಿನನಿತ್ಯ, ಪ್ರತಿದಿನ; ನಸುಕು- ಮುಂಜಾನೆ, ಬೆಳಗಿನ ಸಮಯ; ನಿವಾರಣೆ- ದೂರಮಾಡು, ಹೋಗಲಾಡಿಸು; ನೆವ- ಕಾರಣ, ನೆಪ, ಪಟ್ಟಾಂಗ- ಹರಟೆ, ಮಾತುಕತೆ; ಯಥೇಚ್ಛ- ಬೇಕಾದಷ್ಟು, ಮನಸ್ಸಿಗೆ ಬಂದಷ್ಟು; ಸಂಗತಿ- ವಿಷಯ; ಹಸನ್ಮುಖಿ- ನಗುಮೊಗ

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಬಾಲ್ಯದಲ್ಲಿ ಲೇಖಕರು ಭಯವಾದಾಗ ಯಾವ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು?
2. ಲೇಖಕರ ಮೊದಲ ವಿದ್ಯಾಗುರು ಯಾರು?
3. ಸಣ್ಣ ಕುಳಿಯೊಳಗಿನ ಕಪ್ಪುಹುಳುವನ್ನು ಯಾವ ಹೆಸರಿನಿಂದ ಕರೆಯುತ್ತಾರೆ?
4. ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು?
5. ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಯಾರು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಲೇಖಕರ ಅಕ್ಷರಭ್ಯಾಸ ಆರಂಭವಾದದ್ದು ಹೇಗೆ?
2. ಮಳೆಗಾಲದ ಆರಂಭಕ್ಕೆ ಮುನ್ನ ಮಲೆನಾಡಿನಲ್ಲಿ ಏನೆಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು?
3. ನಸುಕಿನಲ್ಲಿ ಲೇಖಕರಿಗೆ ಖುಷಿ ಕೊಡುತ್ತಿದ್ದ ಸಂಗತಿಗಳಾವುವು?
4. ವಿಶೇಷ ಪದಾರ್ಥಗಳನ್ನು ಕಡವಾಗಿ ಪಡೆಯುತ್ತಿದ್ದ ಹಾಗೂ ತೀರಿಸುತ್ತಿದ್ದ ಬಗೆ ಹೇಗೆ?

III. **ಕೊಟ್ಟಿರುವ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

1. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಯ ಬಗೆ ಹೇಗೆ ವರ್ಣಿಸಲಾಗಿದೆ?
2. 'ಒರಿಜಿನಲ್' ಹಾಗೂ ಚರಟದ ಕಾಫಿಯನ್ನು ಸಿದ್ಧಗೊಳಿಸುತ್ತಿದ್ದ ಬಗೆಯನ್ನು ವಿವರಿಸಿ.

IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣಿ"
2. "ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು"
3. "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"
4. "ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು"
5. "ನನಗೆ ಚರಟದಲ್ಲಿ ಕಾಫಿಯೋ?"

V. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ

1. ಅಧಿಕೃತವಾಗಿ ಲೇಖಕರ ಮೊದಲ ಶಿಕ್ಷಕರು _______. (ಕೃಷ್ಣಪ್ಪಯ್ಯ, ಅಮ್ಮ, ತಂದೆ, ಶೇಷಗಿರಿ)
2. ಮಳೆಗಾಲದಲ್ಲಿ ಮಲೆನಾಡಿನಲ್ಲಿ ಯಥೇಚ್ಛವಾಗಿ ಸಿಗುತ್ತಿದ್ದ ಹಣ್ಣು _______. (ಮಾವಿನಹಣ್ಣು, ಸೀಬೆಹಣ್ಣು, ಹಲಸಿನ ಹಣ್ಣು, ಬಾಳೆಹಣ್ಣು)
3. 'ಪಟ್ಟಾಂಗ' ಈ ಪದದ ಅರ್ಥ _______. (ಒಳ್ಳೆಯಮಾತು, ಹರಟೆ, ಪಟ್ಟಕಟ್ಟುವುದು, ಕೆಟ್ಟಮಾತು)
4. 'ಕಡೆಗೋಲು' ಪದವು ______ ಸಂಧಿಗೆ ಉದಾಹರಣೆಯಾಗಿದೆ. (ಆಗಮಸಂಧಿ, ಗುಣಸಂಧಿ, ಲೋಪಸಂಧಿ, ಆದೇಶಸಂಧಿ)
5. 'ಸಕ್ಕರೆ' ಪದದ ತತ್ಸಮರೂಪ ______ (ಸಕ್ಕರಿ, ಸಕ್ಕಾರಿ, ಶರ್ಕರಾ, ಸರಕಾರಿ)

ಸೈದ್ಧಾಂತಿಕ ಭಾಷಾಭ್ಯಾಸ

ವಾಕ್ಯಪ್ರಭೇದ ಮತ್ತು ಸಮಾಸಗಳ ಸ್ಥೂಲ ಪರಿಚಯಾತ್ಮಕ ವಿವರ

ವಾಕ್ಯಪ್ರಭೇದಗಳು: ವಾಕ್ಯಗಳನ್ನು ಸಾಮಾನ್ಯ, ಸಂಯೋಜಿತ ಮತ್ತು ಮಿಶ್ರವಾಕ್ಯ ಎಂಬುದಾಗಿ ಮೂರು ವಿಭಾಗ ಮಾಡಲಾಗಿದೆ.

ಸಾಮಾನ್ಯವಾಕ್ಯ:

1. ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.

2. ಹತ್ತನೆಯ ಶತಮಾನದವರೆಗೆ ಗಂಗರು ತಲೆಯೆತ್ತಿ ಬಾಳಿದರು.

ಈ ಎರಡೂ ವಾಕ್ಯಗಳು ಒಂದೊಂದು ಪೂರ್ಣ ಕ್ರಿಯಾಪದದೊಡಗೂಡಿ ಸ್ವತಂತ್ರ ವಾಕ್ಯಗಳಾಗಿವೆ. ಹೀಗೆ -ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ವಾಕ್ಯವಾಗಿರುವ ವಾಕ್ಯಗಳೇ ಸಾಮಾನ್ಯವಾಕ್ಯಗಳು.

ಸಂಯೋಜಿತವಾಕ್ಯ: ಪಾಂಡವರ ಯಜ್ಞ ತುರಗ ಮಣಿಪುರವನ್ನು ಪ್ರವೇಶಿಸಿತು; ಆಗ ಬಭ್ರುವಾಹನನು ಅದನ್ನು ಕಟ್ಟಿಹಾಕಿದನು; ಆದ್ದರಿಂದ ಬಭ್ರುವಾಹನನಿಗೂ ಅರ್ಜುನನಿಗೂ ಯುದ್ಧ ನಡೆಯಿತು.

ಇಲ್ಲಿ ಮೂರು ಸ್ವತಂತ್ರ ವಾಕ್ಯಗಳು 'ಆಗ', 'ಆದ್ದರಿಂದ' ಪದಗಳ ಸಹಾಯದಿಂದ ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣಾರ್ಥದ ವಾಕ್ಯವಾಗಿದೆ. ಹೀಗೆ – ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಎರಡು ಅಥವಾ ಹೆಚ್ಚು ಉಪವಾಕ್ಯಗಳು ಸೇರಿ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ.

ಮಿಶ್ರವಾಕ್ಯ: ಗಾಯತ್ರಿ ಗಾಯನಸ್ಪರ್ಧೆಯಲ್ಲಿ ಗೆದ್ದಳಾದರೂ ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗದಿದ್ದಾಗ ಆಕೆ ತುಂಬಾ ನೊಂದುಕೊಂಡಳು.

ಇಲ್ಲಿ 'ಆಕೆ ತುಂಬಾ ನೊಂದುಕೊಂಡಳು' ಎಂಬ ಪ್ರಧಾನ ವಾಕ್ಯಕ್ಕೆ 'ಗಾಯತ್ರಿ ಗಾಯನ ಸ್ಪರ್ಧೆಯಲ್ಲಿ ಗೆದ್ದಳು' 'ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗಲಿಲ್ಲ' ಎಂಬ ಉಪವಾಕ್ಯಗಳು ಅಧೀನವಾಗಿ 'ಮಿಶ್ರವಾಕ್ಯ'ವಾಗಿದೆ. ಹೀಗೆ -ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವೇ ಮಿಶ್ರವಾಕ್ಯ.

ಸಮಾಸ

1. ಜಯಪುರದ ಅರಮನೆ ಸುಂದರವಾಗಿದೆ.
2. ರಸ್ತೆಯ ವಿಸ್ತರಣೆಗಾಗಿ ಹೆದ್ದಾರಿಯ ಬದಿಯಲ್ಲಿರುವ ಮರಗಳನ್ನು ಕಡಿಯಲಾಗಿದೆ.

ಈ ಎರಡು ವಾಕ್ಯಗಳಲ್ಲಿರುವ 'ಅರಮನೆ', 'ಹೆದ್ದಾರಿ' ಎಂಬ ಎರಡು ಪದಗಳನ್ನು ಗಮನಿಸಿದಾಗ 'ಅರಮನೆ' ಎಂಬ ಪದ 'ಅರಸನ ಮನೆ' ಎಂಬ ಅರ್ಥವನ್ನೂ 'ಹೆದ್ದಾರಿ' ಎಂಬ ಪದ 'ಹಿರಿದಾದ ದಾರಿ' ಎಂಬ ಅರ್ಥವನ್ನೂ ಕೊಡುವ ಪದಗಳೆಂದು ತಿಳಿಯುತ್ತದೆ. ಹೀಗೆ

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕನುಸಾರ ಒಟ್ಟು ಸೇರಿ ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದರೆ ಅದು ಲೋಪವಾಗಿ ಒಂದೇ ಪದವಾಗುವುದೇ ಸಮಾಸ.

ಈ ರೀತಿ ಸಮಾಸವಾಗುವಾಗ ಸಂಸ್ಕೃತ ಪದದೊಂದಿಗೆ ಸಂಸ್ಕೃತ ಪದವೇ ಸೇರಬೇಕು. ಕನ್ನಡ ಪದದೊಂದಿಗೆ ಕನ್ನಡ ಪದವೇ ಸೇರಬೇಕು. ಸಂಸ್ಕೃತ ಪದಕ್ಕೆ ಕನ್ನಡ, ಕನ್ನಡ ಪದಕ್ಕೆ ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಬಾರದು. ಒಂದು ವೇಳೆ ಇಂತಹ ಪದಗಳೊಂದಿಗೆ ಸಮಾಸವಾದರೆ ಅದನ್ನು 'ಅರಿಸಮಾಸ' ಎನ್ನುತ್ತಾರೆ. ಆದರೆ ಪೂರ್ವದ ಕವಿಗಳು ಪ್ರಯೋಗಿಸಿದ್ದರೆ, ಬಿರುದಾವಳಿಗಳಾಗಿದ್ದರೆ ಮತ್ತು ಗಮಕ ಅಥವಾ ಕ್ರಿಯಾ ಸಮಾಸಗಳಾಗಿದ್ದರೆ ದೋಷವಿಲ್ಲ.

ಕನ್ನಡ ಭಾಷೆಯಲ್ಲಿ ತತ್ಪುರುಷ, ಕರ್ಮಧಾರಯ, ದ್ವಿಗು, ಅಂಶಿ, ದ್ವಂದ್ವ, ಬಹುವ್ರೀಹಿ, ಕ್ರಿಯಾ ಮತ್ತು ಗಮಕ ಎಂಬ ಎಂಟು ವಿಧದ ಸಮಾಸಗಳು ಬಳಕೆಯಲ್ಲಿವೆ. ಸಮಾಸ ಪದಗಳನ್ನು ಬಿಡಿಸಿ ಬರೆಯುವ ಕ್ರಮವನ್ನು ವಿಗ್ರಹವಾಕ್ಯ ಅಥವಾ ವಿಗ್ರಹಿಸುವುದು ಎನ್ನುತ್ತಾರೆ. ಉದಾ: ತೈಲದ ಬಿಂದುಗಳು = ತೈಲ ಬಿಂದುಗಳು.

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ವಾಕ್ಯ ಪ್ರಭೇದಗಳನ್ನು ವಿವರಿಸಿ.
2. ಸಮಾಸ ಎಂದರೇನು?
3. ಸಮಾಸಗಳಲ್ಲಿ ಎಷ್ಟು ವಿಧ? ಪಟ್ಟಿಮಾಡಿ.

ಪ್ರಾಯೋಗಿಕ ಭಾಷಾಭ್ಯಾಸ

II. ಕೊಟ್ಟಿರುವ ಸಾಮಾನ್ಯ ವಾಕ್ಯಗಳನ್ನು ಸಂಯೋಜಿತ ವಾಕ್ಯವಾಗಿ ಪರಿವರ್ತಿಸಿ ಬರೆಯಿರಿ.

1. ವಾಸುವಿನ ತಲೆಗೆ ಹಾಕಿದ ಎಣ್ಣೆ ಹಣೆಯ ಮೂಲಕ ಇಳಿದು ಕಣ್ಣುಗಳನ್ನು ಪ್ರವೇಶಿಸಿತು.
2. ಅವನ ಕಣ್ಣುಗಳು ಉರಿಯತೊಡಗಿದವು.
3. ಅವನು ಕಣ್ಣುಗಳನ್ನು ಬಟ್ಟೆಯಿಂದ ಉಜ್ಜತೊಡಗಿದನು.

ಪೂರಕ ಓದು:

1. ಯು. ಆರ್. ಅನಂತಮೂರ್ತಿಯವರ 'ಸುರಗಿ' ಆತ್ಮಕಥನವನ್ನು ಓದಿ.
2. ಕುವೆಂಪುರವರ ಆತ್ಮಕಥನ 'ನೆನಪಿನ ದೋಣಿಯಲ್ಲಿ' ಕೃತಿಯನ್ನು ಓದಿ.

3. ಸಪ್ತಾಕ್ಷರಿ ಮಂತ್ರ- ಮುದ್ದಣ

ಪ್ರವೇಶ:

ಕನ್ನಡ ಸಾಹಿತ್ಯವು ಹಂತಹಂತವಾಗಿ ಬದಲಾವಣೆಗೆ ಒಳಪಟ್ಟು ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ರೂಪ ಪರಿವರ್ತನೆ ಪಡೆದುಕೊಂಡಿದೆ. ನಡುಗನ್ನಡ ಸಾಹಿತ್ಯವು ಹಿಂದೆ ಸರಿದು ಹೊಸಗನ್ನಡ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಹೊಸಗನ್ನಡ ಸಾಹಿತ್ಯಕ್ಕೆ ಮುನ್ನುಡಿ ಬರೆದು "ಹೊಸಗನ್ನಡದ ಅರುಣೋದಯದ ಮುಂಗೋಳಿ" ಎಂಬ ಪ್ರಶಂಸೆಗೆ ಭಾಜನರಾಗಿ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸುಭದ್ರ ಸ್ಥಾನ ಪಡೆದ ಕವಿ ಮುದ್ದಣ.

ರಾಮಾಯಣ ಮಹಾ ಕಾವ್ಯದ ಭಾಗವೊಂದರ ಕಥೆಯನ್ನು ಹೇಳ ಹೊರಡುವ ಕವಿ ಕಾವ್ಯದ ಮಧ್ಯದಲ್ಲಿ ತಮ್ಮ ಜೀವನದ ವಾಸ್ತವತೆಯನ್ನು ಬಿಚ್ಚಿಡುವುದು ಒಂದು ವೈಶಿಷ್ಟ್ಯವೇ ಸರಿ. ಇದು ಮುದ್ದಣ ಮನೋರಮೆಯರ ಸಲ್ಲಾಪವೆಂದೇ ಖ್ಯಾತಿ ಪಡೆದಿದೆ. ಕಾವ್ಯ ಧರ್ಮದೊಳಗೆ ಜೀವನ ಧರ್ಮವನ್ನು ಬೆರೆಸಿ ಹೇಳುವ ಕವಿಯ ಜಾಣ್ಮೆಯನ್ನು ಮೆಚ್ಚಲೇಬೇಕು. ಕಿತ್ತು ತಿನ್ನುವ ಬಡತನದ ವಾಸ್ತವ ಚಿತ್ರಣವನ್ನು ಲಘುಹಾಸ್ಯಮಯವಾಗಿಸುವ ಕಲೆಗಾರಿಕೆ ಮುದ್ದಣನಿಗೆ ಸಾಧ್ಯ ಎಂಬುದನ್ನು ಈ ಗದ್ಯಭಾಗದಲ್ಲಿ ಕಾಣಬಹುದಾಗಿದೆ.

ಇಂತು ಬಂದೊದವಿದ ಚಳಿಗಾಲದೊಳ್ ರಾಘವನ ಯಜ್ಞ ತುರಂಗಮಂ ಅರಣ್ಯಕನೆಂಬೊರ್ವ ಕಿತ್ತಡಿಯ ಪುಣ್ಯಾಶ್ರಮಮಂ ಪುಗುತರ್ಪುದುಂ, ಕಂಡು ಶತ್ರುಘ್ನಾದ್ಯರ್ ಮುನಿಯ ದರ್ಶನಕೆಂದೊಳಪೊಕ್ಕು ಮುನಿಗೆರಗಿದರ್. ಆಗಳರಣ್ಯಕನಭ್ಯಾಗತರಂ ಮನ್ನಿಸಿ ಸರ್ವರನಾತಿಥ್ಯದಿಂ ಸತ್ಕರಿಸಿ ಶ್ರೀರಾಮಸತ್ಕಥಾ ವಿನೋದ ಗೋಷ್ಠಿಯೊಳ್...

ಮನೋರಮೆ: ಎನ್ನ ಚನ್ನಿಗ! ಆತಿಥ್ಯಮೆಂದೊಡೇಂ? ಬರಿದೆ ಬಾಯುಪಚಾರಮೆ?

ಮುದ್ದಣ: ಅಲ್ಲಲ್ತು, ಬಾಯ ಉಪಚಾರಮಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರಿತ್ತು ಕುಳ್ಳಿರಿಸಿ ಸವಿಗೂಳನಿಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನಿರ್ದು ನುಡಿದು ನಡೆದು ಮನ್ನಿಪುದು.

ಮನೋರಮೆ: ಅಂತಿರ್ಪುದುಂ, ಶತ್ರುಹನ ಸಾಯಿರ ಸಾಯಿರ ಲೆಕ್ಕದಿನಿವಿರಿದು ಪಡೆಗರಣ್ಯಕಂ ಕೂಳ್ನೀರಿತ್ತು ಸಮ್ಮನಿಸಿದನೆ?

ಮುದ್ದಣ: ಅಪ್ಪುದಪ್ಪುದು. ಅನಿಬರುಮಮಂ ಯಥೇಷ್ಟಂ ಮೃಷ್ಟಾನ್ನ ಭೋಜನದಿಂ ತಣಿಸಿದಂ.



ಮನೋರಮೆ: ಎನಗಿದಚ್ಚರಿ. ಎಂತುಟಾರ್ತಂ?

ಮುದ್ದಣ: ಏಂ! ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿರಿದೆ! ಬೇಡಿದ ಪುರುಳನುರದಿಂ ತಂದೀಗುಂ.

ಮನೋರಮೆ: ಅಂತುಟೇಂ, ಘನಂ! ಆವುದೊ ಮಂತ್ರಂ.

ಮುದ್ದಣ: ಅವುದೇಂ! ಏಕಾಕ್ಷರೀ ದ್ವ್ಯಕ್ಷರೀ ತ್ರ್ಯಕ್ಷರೀ ಚತುರಾಕ್ಷರೀ ಪಂಚಾಕ್ಷರೀ ಷಡಕ್ಷರೀ ಮುಂತಪ್ಪ ಪ್ರಸಿದ್ಧ ಮಂತ್ರಂಗಳೊಳವಲ್ತೆ.

ಮನೋರಮೆ: ಓ! ಇನಿತೊಂದು ಜಪದ ಬಲ್ಮೆ ನೆರಮಿರ್ಪಿನಿಂ ಪೆರತೊಂದರ ಗೊಡವೆಯಿಲ್ಲದಿರ್ಕುಂ ತಾಪಸರ್.

ಮುದ್ದಣ: ಅಪ್ಪುದಪ್ಪುದು: ತಪ್ಪೇಂ?

ಮನೋರಮೆ: ಅಂತದಿರ್ಕೆ. ನಿನ್ನನ್ನರಪ್ಪ ಕಬ್ಬಿಗರ್ ಮನೆವಾಳ್ತಿತಯೊಳಿನಿಸೊಂದುಂ ಗೊಡವೆಗೊಳ್ಳದೆ ಕೆಮ್ಮ ಕೆಮ್ಮನೆ ಪಾಳ್ಗತೆಯ ಕಬ್ಬದೊಳೇವೊಳ್ತುಂ ಬೆಮೆಗೊಂಡಿರ್ಪರಲೇ. ಅವರ್ಗೇಂ ಬಟ್ಟೆಯೊ? ಉಣಲೇಂ, ತಿನಲೇಂ? ಅಂತಿರೊಂದು ಜಪಮಂ ಪಿರಿಯ ತವಸಿಗಳತ್ತ ಣೆನುಪದೇಶಂ ಗೊಂಡೊಡಾಗದೆ!

ಮುದ್ದಣ: (ಮುಗುಳ್ನಗೆಯಿಂ) ಏಂ! ಎಮ್ಮವರೊಂದಿರಕೆ ನಗುವಾ? ಆ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊರತೆಯೊ! ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮುಮನಳಿಯಿಸುವ ಪೊಗಳ್ವ ತೆಗಳ್ವ ಕೊಳಾಳ್ವ ತಾಳ್ವ ತೂಳ್ವ ಪೂಳ್ವ ಪೇಳ್ವ ಬಾಳ್ವ ಸಿಂಗರದ ಬಣ್ಣಗಬ್ಬಿಗರೆಮ್ಮತೆ -ರನನಿನ್ನುಂ ನೀನರಿಯೆಯ್.

ಮನೋರಮೆ: (ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ದಿವರ್ಕುಮೆ?

ಮುದ್ದಣ: ತಡೆಯೇನಳ್ಕೇಂ!

ಮನೋರಮೆ: ನಿನ್ನೊಳಮೊಳವೆ?

ಮುದ್ದಣ: ಎನ್ನೊಳಂತಿದು ಪಾಸುವೊಕ್ಕು.

ಮನೋರಮೆ: ಆ! ನೀನುಂ ಬಲ್ ಮೈಮೆಗಾರಂ. ನಿನಗಾರತ್ತಣಿನೆಂದು ಪದೇಶಮಾಯ್ತು?

ಮುದ್ದಣ: ಗುರುವತ್ತಣಿನಂದೆಳವೆಯೊಳೆ.

ಮನೋರಮೆ: ಎನ್ನೆರೆಯ! ಅದಾವುದೊ ಮಂತ್ರಮೆನ್ನೊಳುಸಿರ?

ಮುದ್ದಣ: ಎಲೆ ಪೆಣ್ಣೆ! ನೀನಾರೊಳಮೆಂದೆಂದಿಂಗುಮುಸಿರಲ್ಬಾರದು, ಜೋಕೆ!

ಮನೋರಮೆ: ಎಂದುಮೆಂತುಮುಸಿರನಾಡೆಂ.

ಮುದ್ದಣ: ಅಂತಾದೊಡಿಂತಿದು, ಕೇಳ್... ಭ... ವ... ಪೆರರೊಳಾಡೆನೆಂಬ ನಂಬುಗೈಯಂ ಪೊಯ್.

ಮನೋರಮೆ: ಇದೆ. ಪಿಡಿ ನಂಬುಗೈಯಂ, ನಿನ್ನಾಣೆ, ಕುಲದೈವದಾಣೆ! ಎಂದುಂ ಪೆರವರೊಳೊರೆಯೆಂ.

ಮುದ್ದಣ: ಉಂ!... ಭವತಿ... ಭಿ... ನೀನೆಂತೊ ಮರವೆಯೊಳ್ ಪೆರರೊಡನುಸಿರ್ದುರ್ ಗುಟ್ಟಂ ಬಿಟ್ಟೊಡೆಮ್ಮನ್ನರ ಬಾಳ್ ಪಾಳಕ್ಕುಂ.


ಮನೋರಮೆ: ಆನೇಂ ಮೋಡೆಯೆ! ಪೋ! ತನ್ನಾಣೆ, ಕಣ್ಣಾಣೆ, ಕೇಳ್ವೆಂ.

ಮುದ್ದಣ: (ಎಕ್ಕಟಿಯೊಳ್) 'ಭವತಿ ಭಿಕ್ಷಾಂ ದೇಹಿ' ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀ ಮಂತ್ರಂ. ಆರೊಳಾನುಮುಸಿರದಿರ್.

ಮನೋರಮೆ: (ಅರೆಮುನಿಸಿಂ) ಪೋ ಮಾಣೆಲೆ ರಮಣ! ನಿನ್ನ ನುಡಿಯಂ ಸಾಜಂ ನಿಕ್ಕುವಮೆಂದೇ ಬಗೆದೆನೀ ತೆರನ ಮಾಟದ ಕವಡುನುಡಿಯ ಕೊಂಕೆಂಬುದನರಿಯದಾದೆಂ. ನೀಂ ಕಬ್ಬಿಗನೊ, ಸ್ಬುವಕಾರನೊ! ನಿನ್ನೀ ಕ್ಬುದ ಸೊಗಸನೆಮ್ಮನ್ನರಪ್ಪ ಜಾಣೆಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ?

ಮುದ್ದಣ: ಸಾಲ್ಗುಮೀಪರಿಹಾಸಂ. ಮುಂಗತೆಯಂ ಕೇಳ್.

ಕೃತಿಕಾರರ ಪರಿಚಯ



ಲಕ್ಷ್ಮೀನಾರಾಯಣಪ್ಪ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ನಂದಳಿಕೆಯ ಶ್ರೀಮಹಾಲಿಂಗೇಶ್ವರ ದೇವಳದಲ್ಲಿ ಮಾಲೆಗಾರರಾಗಿದ್ದ ತಿಮ್ಮಪ್ಪಯ್ಯ ಮತ್ತು ಮಹಾಲಕ್ಷ್ಮಮ್ಮ ದಂಪತಿಗಳ ಮಗ. 1870 ಜನವರಿ 24 ರಂದು ಜನಿಸಿದ ಈತನನ್ನು ತಾಯಿ 'ಮುದ್ದಣ' ಎಂದು ಮುದ್ದಿನಿಂದ ಕರೆಯುತ್ತಿದ್ದಳು. ಹಾಗಾಗಿ 'ಲಕ್ಷ್ಮೀನಾರಾಯಣ' ಎಂದು ನಾಮಕರಣ ಮಾಡಿದ್ದರೂ ಕನ್ನಡನಾಡು ಈತನನ್ನು 'ಮುದ್ದಣ' ಎಂದೇ ಕರೆಯಿತು. ಈತ ನಂದಳಿಕೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಉಡುಪಿಗೆ ಬಂದರೂ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಗದೆ ವ್ಯಾಯಾಮ ಶಿಕ್ಷಕನ ತರಬೇತಿ ಪಡೆದು 1889 ರಲ್ಲಿ ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಾಗಿ ಹತ್ತುರೂಪಾಯಿ ಮಾಸಿಕ ವೇತನ ಪಡೆದು ವೃತ್ತಿ ಜೀವನ ಆರಂಭಿಸಿದನು.

ಅದೃಷ್ಟವಶಾತ್ ಮಳಲಿ ಸುಬ್ಬರಾಯರೆಂಬ ವಿದ್ವಾಂಸರ ಪರಿಚಯವಾಗಿ ಮುದ್ದಣನಲ್ಲಿ ಸಾಹಿತ್ಯಾಸಕ್ತಿ ಬೆಳೆಯಿತು. ತತ್ಪರಿಣಾಮವಾಗಿ 'ರತ್ನಾವತಿಕಲ್ಯಾಣ' ಮತ್ತು 'ಕುಮಾರವಿಜಯ' ಎಂಬ ಯಕ್ಷಗಾನ ಪ್ರಸಂಗಗಳು, ವಾರ್ಧಕ ಷಟ್ಪದಿಯಲ್ಲಿ ರಚಿಸಲ್ಪಟ್ಟ 'ಶ್ರೀರಾಮಪಟ್ಟಾಭಿಷೇಕಂ' ಕಾವ್ಯ, ಹಳಗನ್ನಡ ಶೈಲಿಯಲ್ಲಿ ಬರೆಯಲ್ಪಟ್ಟ 'ಅದ್ಭುತರಾಮಾಯಣ' ಮತ್ತು 'ಶ್ರೀರಾಮಾಶ್ವಮೇಧಂ' ಗದ್ಯಕಾವ್ಯಗಳು ಮುದ್ದಣನಿಂದ ರಚಿತವಾದುವು. ಉಡುಪಿಯಿಂದ ಕುಂದಾಪುರದ ಬೋರ್ಡ್ ಹೈಸ್ಕೂಲಿಗೆ ವರ್ಗಾವಣೆಗೊಂಡು ಕೆಲವು ಸಮಯದ ಬಳಿಕ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿ ಸೇವೆಸಲ್ಲಿಸಿದನು.

'ಹೊಸಗನ್ನಡದ ಅರುಣೋದಯದ ಮುಂಗೋಳಿ' ಎಂಬ ಪ್ರಶಂಸೆಗೆ ಭಾಜನನಾದ ಮುದ್ದಣ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸುಭದ್ರ ಸ್ಥಾನ ಗಳಿಸಿದ್ದಾನೆ. ಒಂದು ಕಡೆ ಕಡುಬಡತನ ಇನ್ನೊಂದು ಕಡೆ ಆಗಿನ ಕಾಲದಲ್ಲಿ ಗುಣಪಡಿಸಲು ಸಾಧ್ಯವಾಗದಿದ್ದ ಕಾಯಿಲೆ-ಇವೆರಡರಿಂದ ಜರ್ಜರಿತನಾದ ಮುದ್ದಣ ಅಲ್ಪಾಯುಷಿಯಾಗಿ 1901ರ ಫೆಬ್ರವರಿ ಹದಿನೈದರಂದು ಇಹಲೋಕ ತ್ಯಜಿಸಿದರು.

ಆಶಯ ಭಾವ

ಎಷ್ಟೇ ಕಷ್ಟಗಳಿದ್ದರೂ ಮನಸ್ಸನ್ನೇ ಸುಡುವ ಚಿಂತೆಯಿದ್ದರೂ ನವಿರಾದ ಹಾಸ್ಯ ಅವುಗಳನ್ನು ಸ್ವಲ್ಪಕಾಲ ಮರೆಯುವಂತೆ ಮಾಡುತ್ತದೆ. 'ನಗು' ಮಾನವನನ್ನು ಗೆಲುವಿನ ಹಾದಿಗೆ ತರುವ ದಿವ್ಯೌಷಧ. 'ಶ್ರೀರಾಮಾಶ್ವಮೇಧ' ಕೃತಿಯಲ್ಲಿ ಮಡದಿ ಮನೋರಮೆ (ನಿಜನಾಮ ಕಮಲಾಬಾಯಿ) ಯೊಡನೆ ಸಂವಾದದಲ್ಲಿ ನಿರತನಾದಾಗ ವ್ಯಕ್ತವಾಗುವ ಮಾತುಗಳು ಮುದ್ದಣನ ಕಷ್ಟ ಜೀವನದ ಪ್ರತೀಕವೇ ಆಗಿವೆ. ಪ್ರಕೃತ ಗದ್ಯಭಾಗದಲ್ಲಿ 'ಸಪ್ತಾಕ್ಷರೀ ಮಂತ್ರದ' ಶ್ರೇಷ್ಠತೆಯ ನೆಪದೊಂದಿಗೆ ತನ್ನ ಹಾಗೂ ಅಂದಿನ ಕವಿಗಳ ದಾರಿದ್ರ್ಯವನ್ನು ಪರೋಕ್ಷವಾಗಿ ಮುದ್ದಣ ವ್ಯಕ್ತಪಡಿಸಿದ್ದಾನೆ. ಹೊರನೋಟಕ್ಕೆ ಕುತೂಹಲಕಾರಿಯೂ ಹಾಸ್ಯಮಯವೂ ಆಗಿದ್ದರೆ ಒಳಗೆ ದಾರುಣವ್ಯಥೆಯ ಕಥೆ ಅಡಗಿಕೊಂಡು ಕರುಣಾರಸ ಅಂತರ್ಗತವಾಗಿ ಹರಿಯುವುದನ್ನು ಇಲ್ಲಿ ಕಾಣಬಹುದು.

'ಸಪ್ತಾಕ್ಷರಿ ಮಂತ್ರ' ಗದ್ಯಭಾಗವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ, 'ಮುದ್ದಣಭಂಡಾರ' -ಸಂಪುಟ ಎರಡು -ಇದರ 'ತ್ರಯೋದಶಾಶ್ವಾಸಂ-ಅರಣ್ಯಕ ಮುನಿದರ್ಶನಂ' (ಪುಟ-201-204) ಭಾಗದಿಂದ ಆರಿಸಿ ಸಂಪಾದಿಸಿ ನಿಗದಿಪಡಿಸಲಾಗಿದೆ.

ಪೂರ್ವ ಕಥೆ

ಶ್ರೀರಾಮನು ರಾವಣಾದಿಗಳನ್ನು ಸಂಹರಿಸಿ ಹರಿಭಕ್ತನೂ ರಾವಣನ ಸೋದರನೂ ಆದ ವಿಭೀಷಣನಿಗೆ ಲಂಕೆಯ ಪಟ್ಟಕಟ್ಟಿ ಸೀತಾ ಸಮೇತ ಅಯೋಧ್ಯೆಗೆ ಬಂದು ರಾಜ್ಯಭಾರ ಮಾಡುತ್ತಿದ್ದನು. ಹೀಗೆ ಹಲವು ವರ್ಷಗಳು ಕಳೆಯುತ್ತಿರಲು ಸೀತೆ ಗರ್ಭಿಣಿಯಾದಳು. ಅದೊಂದು ದಿನ ಸೀತೆಯೊಡನೆ ಶ್ರೀರಾಮಚಂದ್ರನು ರಾಣೀವಾಸದ ಮೊಗಸಾಲೆಯಲ್ಲಿ ಕುಳಿತು ಸಲ್ಲಾಪಗೈಯುತ್ತಿರುವಾಗ ಸೀತೆ ತನ್ನಮನದ ಬೇಸರ ಕಳೆಯಲೋಸುಗ ಕಾಡಿನ ಋಷಿಯಾಶ್ರಮಕ್ಕೆ ಹೋಗಿಬರಬೇಕೆಂಬ ಆಸೆಯನ್ನು ಪ್ರಕಟಿಸಿದಳು. ಇದಕ್ಕೊಪ್ಪಿದ ಶ್ರೀರಾಮ ಆದಷ್ಟು ಬೇಗ ಲಕ್ಷ್ಮಣನ ಮೂಲಕ ವ್ಯವಸ್ಥೆ ಮಾಡುವೆನೆಂಬ ಭರವಸೆ ನೀಡಿದ. ಅದೇ ದಿನ ರಾತ್ರಿ ಪ್ರಜೆಯೊಬ್ಬ ಆಡಿದ ಮಾತನ್ನು ಬೇಹುಗಾರರಿಂದ ತಿಳಿದ ರಾಮ, ಸೀತೆ ನಿಷ್ಕಳಂಕಿನಿ ಎಂದು ತಿಳಿದಿದ್ದರೂ ಪ್ರಜಾಭಿಪ್ರಾಯಕ್ಕೆ ಮನ್ನಣೆ ನೀಡಬೇಕಾದುದು ರಾಜನ ಆದ್ಯಕರ್ತವ್ಯ ಎಂಬ ದೃಷ್ಟಿಯಿಂದ ಆಕೆಯನ್ನು ತೊರೆಯಲು ನಿರ್ಧರಿಸಿದ. ರಾಜಾಜ್ಞೆಯನ್ನು ಮೀರಲಾರದ ಲಕ್ಷ್ಮಣ ಋಷ್ಯಾಶ್ರಮದರ್ಶನದ ನೆಪವೊಡ್ಡಿ ಸೀತೆಯನ್ನು ಕರೆದೊಯ್ದು ಗೊಂಡಾರಣ್ಯದಲ್ಲಿ ಬಿಟ್ಟುಬಂದ.

ಇತ್ತ ರಾಜಾರಾಮನೆನಿಸಿಕೊಂಡ ಶ್ರೀರಾಮ ಸೀತಾಪರಿತ್ಯಾಗದಿಂದ ವೈಯಕ್ತಿಕವಾಗಿ ನೊಂದಿದ್ದರೂ ರಾಜ್ಯಭಾರದಲ್ಲಿ ಎಳ್ಳಷ್ಟೂ ಅಪಚಾರ ಎಸಗದೆ ಪ್ರಜಾಪಾಲನೆಯಲ್ಲಿ ತೊಡಗಿದ್ದ. ಅದೊಂದು ದಿನ ಅಗಸ್ತ್ಯಮಹರ್ಷಿಗಳು ಶಿಷ್ಯರೊಂದಿಗೆ ಅಯೋಧ್ಯೆಗೆ ಬಂದಾಗ ಅವರನ್ನು ಗೌರವಾದರಗಳಿಂದ ಬರ ಮಾಡಿಕೊಂಡ ರಾಮ ಋಷಿಪರಿವಾರವನ್ನು ಷೋಡಶೋಪಚಾರದಿಂದ ಸತ್ಕರಿಸಿದ. ತನ್ನಿಂದ್ ಹತನಾದ ರಾವಣ ಬ್ರಹ್ಮಮಾನಸ ಪುತ್ರ ಪುಲಸ್ತ್ಯರ ಮಗನಾದ ವಿಶ್ವವಸುವಿನ ಮಗನೆಂದೂ ವೇದ ಪಾರಂಗತನೆಂದೂ ಅಗಸ್ತ್ಯರಿಂದ

ಕೇಳಿತಿಳಿದ ರಾಮ, ರಾವಣನ ಹತ್ಯೆಯಿಂದ ತನಗೆ ಬ್ರಹ್ಮಹತ್ಯಾ ದೋಷ ಪ್ರಾಪ್ತಿಯಾಯಿತೆಂದು ದುಃಖಿತನಾದ. "ಪಾಪಿಗಳ ಪಾಪನಾಶ ಮಾಡಬಲ್ಲ ನಿನಗೆಂತಹ ಪಾಪವಯ್ಯಾ, ದುಷ್ಟಸಂಹಾರಕ್ಕಾಗಿ ಧರೆಗಿಳಿದು ನಿನ್ನ ಕರ್ತವ್ಯವನ್ನು ಮಾಡಿರುವ ನೀನು ಅಂಜಬೇಕಿಲ್ಲ" ಎಂದು ಅಗಸ್ತ್ಯರು ಸಮಾಧಾನಪಡಿಸಿದರೂ ರಾಮ ಒಪ್ಪಲಿಲ್ಲ. ಅಶ್ವಮೇಧವನ್ನು ಮಾಡಿದರೆ ಬ್ರಹ್ಮಹತ್ಯಾದೋಷ ನಿವಾರಣೆಯಾಗುವುದೆಂದು ಅಗಸ್ತ್ಯರು ಹೇಳಿದ ಮೇರೆಗೆ ರಾಮನು ಅಶ್ವಮೇಧ ಕೈಗೊಳ್ಳಲು ನಿರ್ಧರಿಸಿದ.

ಯಜ್ಞಾಶ್ವದ ಬೆಂಗಾವಲಿಗೆ ಶತ್ರುಘ್ನನ ಮುಂದಾಳತ್ವದಲ್ಲಿ ಜಾಂಬವ, ಹನುಮಂತ, ಸುಗ್ರೀವಾದಿ ಕಪಿವೀರರು ಹಾಗೂ ಅಯೋಧ್ಯೆಯ ಸೈನ್ಯ ಹೊರಟಿತು. ಯಜ್ಞಾಶ್ವ ತನ್ನಿಚ್ಛಾನುಸಾರ ನಾನಾ ಕಡೆಗಳಲ್ಲಿ ಸಂಚರಿಸುತ್ತಿರುವಾಗ ಕೆಲವು ರಾಜರು ಇದು ರಾಮನ ಯಜ್ಞಾಶ್ವವೆಂದು ತಿಳಿದ ತಕ್ಷಣ ಕಪ್ಪಕಾಣಿಕೆ ನೀಡಿ ತಾವೂ ಅಶ್ವದ ಬೆಂಗಾವಲಿಗೆ ಹೊರಟರು. ಕೆಲವರು ಅಶ್ವವನ್ನು ಕಟ್ಟಿ ಕದನಕ್ಕಿಳಿದು ಸೋತು ಶರಣಾದರು. ಹೀಗೆ ಸಂಚರಿಸುತ್ತಾ ಚಳಿಗಾಲದಲ್ಲಿ ಒಂದು ದಿನ, ಯಜ್ಞಾಶ್ವ ಅರಣ್ಯಕಮುನಿಯ ಆಶ್ರಮವನ್ನು ಹೊಕ್ಕಿತು. ವಿಷಯ ತಿಳಿದ ಶತ್ರುಘ್ನಾದ್ಯರು ಮುನಿಯ ದರ್ಶನ ಮಾಡಿ ಆಶೀರ್ವಾದ ಪಡೆಯುವ ಸಲುವಾಗಿ ಆಶ್ರಮವನ್ನು ಪ್ರವೇಶಿಸಿ ವಂದಿಸಿದರು. ತಮ್ಮಾಶ್ರಮಕ್ಕೆ ಬಂದ ಶತ್ರುಘ್ನ ಹಾಗೂ ಅವನ ಪರಿವಾರವನ್ನು ಅರಣ್ಯಕ ಆಶೀರ್ವದಿಸಿ ಸತ್ಕರಿಸಿದ.

ಅದುವರೆಗೆ ರಾಮಾಶ್ವಮೇಧದ ಕತೆಯನ್ನು ಮುದ್ದಣನಿಂದ ಕೇಳುತ್ತಿದ್ದ ಮನೋರಮೆಗೆ ಸಂದೇಹವೊಂದು ಮೂಡಿತು. ಆ ಸಂದೇಹ ಯಾವುದು? ಮುದ್ದಣ ಅದನ್ನು ಹೇಗೆ ಪರಿಹರಿಸಿದ? ಇದರ ಒಳಗುಟ್ಟೇನು? ಎಂಬುದೇ ಪಠ್ಯಭಾಗದ ಸಾರ.

ಪದ ವಿಂಗಡಣೆ

ಇಂತು ಬಂದು + ಒದವಿದ ಚಳಿಗಾಲದೊಳ್ ರಾಘವನ ಯಜ್ಞ ತುರಂಗಮಂ ಅರಣ್ಯಕನ್ + ಎಂಬ + ಒರ್ವ ಕಿತ್ತಡಿಯ ಪುಣ್ಯ + ಆಶ್ರಮಮಂ ಪುಗುತರ್ಪುದುಂ;

ಕಂಡು ಶತ್ರುಘ್ನ + ಆದ್ಯರ್ ಮುನಿಯ ದರ್ಶನಕೆ + ಎಂದು + ಒಳಪೊಕ್ಕು ಮುನಿಗೆ + ಎರ(ರ)ಗಿದರ್.

ಆಗಳ್ + ಅರಣ್ಯಕನ್ + ಅಭ್ಯಾಗತರಂ ಮನ್ನಿಸಿ ಸರ್ವರಂ + ಆತಿಥ್ಯದಿಂ ಸತ್ಕರಿಸಿ ಶ್ರೀರಾಮ ಸತ್ಕಥಾ ವಿನೋದ ಗೋಷ್ಠಿಯೊಳ್...

ಮನೋರಮೆ: ಎನ್ನ ಚನ್ನಿಗ! ಅತಿಥ್ಯಂ + ಎಂದೊಡೆ + ಏಂ? ಬರಿ(ರಿ)ದೆ ಬಾಯ +ಉಪಚಾರಮೆ?

ಮುದ್ದಣ: ಅಲ್ತು + ಅಲ್ತು, ಬಾಯ ಉಪಚಾರಂ + ಅಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರು + ಇತ್ತು ಕುಳ್ಳಿರಿಸಿ ಸವಿ + ಕೂಳ(ಳ)ನ್ + ಇಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನೆ + ಇರ್ದು ನುಡಿದು ನಡೆದು ಮನ್ನಿಪುದು.

ಮನೋರಮೆ: ಅಂತೆ + ಇರ್ಪುದುಂ, ಶತ್ರುಹನ ಸಾಯಿರ ಸಾಯಿರ ಲೆಕ್ಕದಿ + ಇನಿ + ಪಿರಿದು ಪಡೆಗೆ + ಅರಣ್ಯಕಂ ಕೂಳ್(ಳ್) + ನೀರು + ಇತ್ತು ಸಮ್ಮನಿಸಿದನೆ?

ಮುದ್ದಣ: ಅಪ್ಪುದು + ಅಪ್ಪುದು. ಅನಿಬರುಮಂ ಯಥಾ + ಇಷ್ಟಂ ಮೃಷ್ಟ + ಅನ್ನ ಭೋಜನದಿಂ ತಣಿಸಿದಂ.

ಮನೋರಮೆ: ಎನಗೆ + ಇದು + ಅಚ್ಚರಿ ಎಂತುಟು + ಆರ್ತಂ?

ಮುದ್ದಣ: ಏಂ! ಮುನಿಗಳ + ಒಂದು ಜಪದ ತಪದ ಮಂತ್ರದ ಬಲ್ಮೆ + ಏಂ ಕಿರಿ(ರಿ)ದೆ! ಬೇಡಿದ ಪುರುಳಂ + ಉರ(ರ)ದಿಂ ತಂದು + ಈಗುಂ.

ಮನೋರಮೆ: ಅಂತುಟು + ಏಂ, ಘನಂ! ಆವುದೊ ಮಂತ್ರಂ?

ಮುದ್ದಣ: ಆವುದು + ಏಂ! ಏಕ + ಅಕ್ಷರೀ ದ್ವಿ + ಅಕ್ಷರೀ ತ್ರಿ + ಅಕ್ಷರೀ ಚತುರ್ + ಅಕ್ಷರೀ ಪಂಚ + ಅಕ್ಷರೀ ಷಟ್ + ಅಕ್ಷರೀ ಮುಂತೆ + ಅಪ್ಪ ಪ್ರಸಿದ್ಧ ಮಂತ್ರಂಗಳ್ + ಒಳವು + ಅಲ್ತೆ.

ಮನೋರಮೆ: ಓ! ಇನಿತು + ಒಂದು ಜಪದ ಬಲ್ಮೆ ನೆರಮ್ + ಇರ್ಪಿನಿಂ ಪೆರ(ರ)ತು + ಒಂದರ(ರ ಗೊಡವೆ + ಇಲ್ಲದೆ + ಇರ್ಕುಂ ತಾಪಸರ್.

ಮುದ್ದಣ: ಅಪ್ಪುದು + ಅಪ್ಪುದು; ತಪ್ಪು + ಏಂ?

ಮನೋರಮೆ: ಅಂತೆ + ಅದು + ಇರ್ಕೆ. ನಿನ್ನ + ಅನ್ನರ್ + ಅಪ್ಪ ಕಬ್ಬಿಗರ್ ಮನೆವಾಳ್ತಿತ(ಳ್ತಿ) ಯೊಳ್ + ಇನಿಸು + ಒಂದುಂ ಗೊಡವೆ + ಕೊಳ್ಳದೆ ಕಮ್ಮಕಮ್ಮನೆ ಪಾಳ್(ಳ್) + ಕತೆಯ ಕಬ್ಬದೊಳ್ ಏ + ಪರೆಳ್ತುಂ(ಳ್ತುಂ) ಬೆಮೆಗೊಂಡು + ಇರ್ಪರ್+ ಅಲೇ. ಅವರ್ಗೆ + ಏಂ ಬಟ್ಟೆಯೊ? ಉಣಲ್ + ಏಂ, ತಿನಲ್ + ಏಂ? ಅಂತೆ+ ಇರೆ + ಒಂದು ಜಪಮಂ ಪಿರಿಯ + ತವಸಿಗಳ + ಅತ್ತಣಿಂ + ಉಪದೇಶಂ + ಕೊಂಡೊಡೆ + ಆಗದೆ!

ಮುದ್ದಣ: (ಮುಗುಳ್ನಗೆ + ಇಂ) ಏಂ + ಎಮ್ಮ + ಅವರ + ಒಂದು + ಇರಕೆ ನಗುವಾ? ಆ! ಎಮ್ಮ + ಅನ್ನರ್ + ಅಪ್ಪ ಕಬ್ಬಿಗರ್ಗೆ ಏಂ ಕೊರ(ರ)ತೆಯೊ! ತಮ್ಮ + ಒಂದೆ ನುಡಿಯ ಬಲ್ಪಿಂ ಮೂಜಗಮುಮಂ + ಅಳಿ(ಳಿ)ಯಿಸುವ ಪೊಗಳ್ವ(ಳ್ವ), ತೆಗಳ್ವ(ಳ್ವ), ಕೊಳ್ + ಆಳ್ವ, ತಾಳ್ವ, ತೂಳ್ವ, ಪೂಳ್ವ(ಳ್ವ), ಪೇಳ್ವ(ಳ್ವ), ಬಾಳ್ವ(ಳ್ವ), ಸಿಂಗರದ ಬಣ್ಣ + ಕಬ್ಬಿಗರ್ + ಎಮ್ಮ ತೆರನಂ + ಇನ್ನುಂ ನೀನ್ + ಅರಿ(ರಿ)ಯೆಯ್.

ಮನೋರಮೆ: (ಬಿಸವಂದಂ+ಕೊಂಡು) ನಿಮ್ಮ + ಅವರ್ಗಮ್ + ಅಂತೆ + ಇರೆ ಮಂತ್ರಂ ಸಿದ್ಧಿ + ಅರ್ಕುಮೆ?

ಮುದ್ದಣ: ತಡೆ + ಏಂ + ಅಳ್ಕು + ಏಂ?

ಮನೋರಮೆ: ನಿನ್ನ + ಒಳಮ್ + ಒಳವೆ?

ಮುದ್ದಣ: ಎನ್ನೊಳ್ + ಅಂತು + ಇದು ಪಾಸು + ಪೊಕ್ಕು.

ಮನೋರಮೆ: ಆ! ನೀನುಂ ಬಲ್ ಮೈಮೆಗಾರಂ(ರಂ) ನಿನಗೆ + ಆರ + ಅತ್ತಣಿಂ + ಎಂದು ಉಪದೇಶಂ + ಆಯ್ತು?

ಮುದ್ದಣ: ಗುರು + ಅತ್ತಣಿಂ + ಅಂದೆ + ಎಳವೆಯೊಳೆ

ಮನೋರಮೆ: ಎನ್ನ + ಎರೆ(ರೆ)ಯ! ಅದು + ಆವುದೊ ಮಂತ್ರಮ್ + ಎನ್ನೊಳ್ + ಉಸಿರ?

ಮುದ್ದಣ: ಎಲೆ ಪೆಣ್ಣೆ! ನೀನು + ಆರೊಳಂ + ಎಂದು + ಎಂದಿಂಗುಂ + ಉಸಿರಲ್ + ಬಾರದು, ಜೋಕೆ!

ಮನೋರಮೆ: ಎಂದುಂ + ಎಂತುಂ + ಉಸಿರಂ + ಆಡೆಂ

ಮುದ್ದಣ: ಅಂತು + ಆದೊಡೆ + ಇಂತು + ಇದು, ಕೇಳ್... ಭ ... ವ... ಪೆರ(ರ) ರೊಳ್ + ಆಡೆನ್ + ಎಂಬ ನಂಬುಗೈಯಂ ಪೊಯ್

ಮನೋರಮೆ: ಇದೆ ಪಿಡಿ ನಂಬುಗೈಯಂ, ನಿನ್ನ + ಆಣೆ, ಕುಲದೈವದ + ಆಣೆ! ಎಂದುಂ ಪೆರ(ರ) ವರೊಳ್ + ಒರೆಯೆಂ

ಮುದ್ದಣ: ಉಂ!... ಭವತಿ... ಭಿ... ನೀನ್ + ಎಂತೊ ಮರ(ರ)ವೆಯೊಳ್ ಪೆರ(ರ) ರೊಡಂ+ ಉಸಿರ್ದು ಗುಟ್ಟಂ ಬಿಟ್ಟೊಡೆ + ಎಮ್ಮನ್ನರ ಬಾಳ್(ಳ್) ಪಾಳ್(ಳ್) + ಅಕ್ಕುಂ

ಮನೋರಮೆ: ಆನ್ + ಏಂ ಮೋಡೆಯೆ ! ಪೋ ! ತನ್ನ + ಆಣೆ, ಕಣ್ಣ + ಆಣೆ ಕೇಳ್ವೆಂ

ಮುದ್ದಣ: ‘ಭವತಿ ಭಿಕ್ಷಾಂ ದೇಹಿ’ ಎಂಬುದು + ಇದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತ + ಅಕ್ಷರೀ ಮಂತ್ರಂ. ಆರೊಳ್ + ಆನುಂ + ಉಸಿರದಿರ್

ಮನೋರಮೆ: ಪೋ ಮಾಣ್ + ಎಲೆ ರಮಣ! ನಿನ್ನ ನುಡಿಯಂ ಸಾಜಂ ನಿಕ್ಕುವಂ + ಎಂದೇ ಬಗೆದೆಂ ಈ ತೆರ(ರ)ನ ಮಾಟದ ಕವಡು ನುಡಿಯ ಕೊಂಕು + ಎಂಬುದನ್ + ಅರಿಯದೆ + ಆದೆಂ. ನೀಂ ಕಬ್ಬಿಗನೊ, ಸಬ್ಬವಕಾರ(ರ)ನೊ? ನಿನ್ನ + ಈ ಕಬ್ಬದ ಸೊಗಸಂ + ಎಮ್ಮ + ಅನ್ನರ್ + ಅಪ್ಪ ಜಾಣೆಲಿ + ಪೆಣ್ಗಳೆ ಕೊಂಡಾಡುವರ್ + ಅಲ್ಲದೆ + ಬಲ್ಲರ್ + ಏನ್ + ಒಲ್ವರೇ?

ಮುದ್ದಣ: ಸಾಲ್ಗುಂ + ಈ ಪರಿಹಾಸಂ. ಮುಂ + ಕತೆಯಂ ಕೇಳ್

ಪದಗಳ ಅರ್ಥ

ಅಂತುಟು- ಅಷ್ಟು, ಹಾಗೆ; ಅನ್ನರ್- ಅಂತಹವರು; ಅಭ್ಯಾಗತರು- ತಾವಾಗಿಯೇ ಬಂದವರು; ಅಲೇ- ಅಲ್ಲವೇ; ಅಲ್ತು- ಅಲ್ಲ; ಅಲ್ತೆ- ಅಲ್ಲವೆ; ಅಳಿ- ನಾಶ; ಆದ್ಯರ್- ಮೊದಲಾದವರು;ಆರ್ತ-ಸಮರ್ಥ; ಇಂತು-ಹೀಗೆ; ಇನಿತು- ಇಷ್ಟು; ಇರಕೆ-ಇರುವಿಕೆಗೆ; ಇರ್ಕುಂ-ಇರುವರು; ಇರ್ಕೆ- ಇರಲಿ; ಈಗುಂ- ಕೊಡುವುದು, ಕೊಡಬಲ್ಲುದು; ಉರದಿ- ಕೂಡಲೆ, ತಕ್ಷಣ; ಉಸಿರು- ಹೇಳು; ಎಂತುಟು- ಹೇಗೆ; ಎರಗು- ನಮಸ್ಕರಿಸು; ಎರೆಯ- ಒಡೆಯ, ಪ್ರಿಯ; ಎಳವೆ- ಬಾಲ್ಯ; ಏಂ- ಏನು; ಏಕ- ಒಂದು; ಒದವಿದ- ಒದಗಿದ; ಒರೆ- ಹೇಳು; ಒಲ್ವರೇ- ಮೆಚ್ಚುವರೇ; ಒಳವು- ಇರುವುವು; ಒಳವೆ- ಇರುವುದೇ; ಕಬ್ಬ- ಕಾವ್ಯ; ಕವಡು- ಕಪಟ; ಕಿತ್ತಡಿ- ತಪಸ್ವಿ; ಕೆಮ್ಮನೆ- ಸುಮ್ಮನೆ; ಕೊಳ್- ಖರೀದಿಸು, ಬೆಲೆಕೊಟ್ಟು ತೆಗೆದುಕೊ, ಕೊಂಡುಕೊ; ಗನ- ಘನ, ಶ್ರೇಷ್ಠ; ಗೋಷ್ಠಿ- ಮಾತುಕತೆ, ಸಂಭಾಷಣೆ, ಕಥಾಲಾಪ; ಚತುರ್- ನಾಲ್ಕು; ಚೆನ್ನಿಗ-ಚೆಲುವ; ಜಾಣಿಲಿ- ಜಾಣ್ಮೆ ಇಲ್ಲದ; ತಣಿಸಿದಂ- ತೃಪ್ತಿಪಡಿಸಿದನು; ತಾಳ್ವ-ಅನುಭವಿಸುವ; ತುರಂಗ- ತುರಗ, ಕುದುರೆ, ಅಶ್ವ; ತೂಳ್ವ- ನಾಶಪಡಿಸುವ; ತೆರ-ಅವಕಾಶ, ಸಾಮರ್ಥ;ತ್ರಿ- ಮೂರು; ದ್ವಿ- ಎರಡು; ನಂಬುಗೆ- ಭರವಸೆ; ನಿಕ್ಕುವ-ನಿಶ್ಚಯ; ನಿನ್ನೊಳಮ್- ನಿನ್ನಲ್ಲಿಯೂ; ನೆರಮ್- ಸಹಾಯ; ಪಂಚ- ಐದು; ಪರಿಹಾಸ- ಚೇಷ್ಟೆ ವಿನೋದ; ಪಾಸುವೊಕ್ಕು- ಹಾಸುಹೊಕ್ಕು; ಪುಗುತರ್ಪುದುಂ- ಪ್ರವೇಶಿಸುವುದು, ಪ್ರವೇಶಿಸಿತು; ಪುರುಳಂ- ದ್ರವ್ಯವನ್ನು; ಪೂಳ್ವ-ಹುಗಿಯುವ, ಹೂಳುವ; ಪೆರ್ಮೆ- ಹೆಮ್ಮೆ; ಪೆರ- ಇತರ; ಪೇಳ್ವ- ಆಜ್ಞಾಪಿಸುವ; ಪೊಯ್- ಕೊಡು; ಬಟ್ಟೆ- ದಾರಿ; ಬಲ್ಪು- ಸಾಮರ್ಥ; ಬಲ್ಮೆ- ಬಲುಮೆ, ಶಕ್ತಿ;ಬಾವನ್ನ-ಶ್ರೀಗಂಧ; ಬಾಳ್ವ- ಬಾಳಿಸುವ, ಉಳಿಸುವ; ಬೆಮೆಗೊಂಡು-ಭ್ರಮೆಗೊಂಡು, ಆಸೆಪಟ್ಟು; ಭವತಿ- ಪೂಜ್ಯಳೇ; ಮನೆವಾಳ್ತೆ- ತನ್ ಸಂಸಾರ; ಮನ್ನಿಸಿ-ಗೌರವಿಸಿ; ಮಾಣ್- ಬಿಡು; ಮುಂ- ಮುಂದಿನ; ಮುಂತಪ್ಪ- ಮೊದಲಾದ; ಮೃಷ್ಟ- ರಸವತ್ತಾದ, ರುಚಿಯಾದ; ಮೈಮೆಗಾರ-ಶ್ರೇಷ್ಠ, ಸಮರ್ಥ; ಮೋಡೆ- ಮೂಢೆ; ಯಥೇಷ್ಟ- ಬೇಕಾದಷ್ಟು; ವಿನೋದ- ಆನಂದ, ಉತ್ಸಾಹ, ಸಂಭ್ರಮ; ಷಟ್- ಆರು; ಸಬ್ಬವಕಾರ- ಹಾಸ್ಯಗಾರ; ಸಾಯಿರ- ಸಾವಿರ; ಸಿಂಗರದ- ಸೊಬಗಿನ, ಭೂಷಣ ಪ್ರಾಯವಾದ; ಸಿದ್ಧಿ- ಕೈವಶಮಾಡಿಕೊಳ್ಳುವಿಕೆ, ಅತಿಮಾನುಷ ಶಕ್ತಿ.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ರಾಘವನ ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತು?
2. ಮನೋರಮೆಯಲ್ಲಿ ಮೂಡಿದ ಸಂದೇಹವೇನು?
3. ಮುನಿಗಳಲ್ಲಿರುವ ಮಂತ್ರದ ಶಕ್ತಿ ಯಾವುದು?
4. ತಪಸ್ವಿಗಳಿಗೆ ಬೇರೆ ಗೊಡವೆ ಇಲ್ಲದಿರಲು ಕಾರಣವೇನು?

5. ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರೇನು?

II.ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕ ಹೇಗೆ ಸತ್ಕರಿಸಿದನು?
ಗಳಿಗೆ ಒಲಿದಿರುವ ಮಂತ್ರದ ಮಹಿಮೆಯೇನು?

ದ್ದಣನಿಗೆ ಒಲಿದ ಮಂತ್ರದ ಬಗ್ಗೆ ಮನೋರಮೆಯ ಪ್ರತಿಕ್ರಿಯೆ ಏನು?

III. **ಕೊಟ್ಟಿರುವ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

ಮುದ್ದಣನು ಪರಿಹಾಸ ಮಾಡಿದನೆಂದು ಮನೋರಮೆಯು ಹೇಳಲು ಕಾರಣವೇನು?
ಮುದ್ದಣನಿಗೆ ಒಲಿದ ಮಂತ್ರವನ್ನು ತಿಳಿದುಕೊಳ್ಳುವ ವಿಚಾರದಲ್ಲಿ ಗಂಡ-ಹೆಂಡತಿಯರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

IV. **ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ಶತ್ರುಘ್ನಾದ್ಯರನ್ನು ಅರಣ್ಯಕನು ಸತ್ಕರಿಸಿದ ವಿಚಾರದಲ್ಲಿ ಮುದ್ದಣ ಮನೋರಮೆಯರ ಮಧ್ಯೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
2. 'ರಾಮಾಶ್ವಮೇಧ' ಕೃತಿಯಲ್ಲಿ ಮುದ್ದಣ ಪರೋಕ್ಷವಾಗಿ ತನ್ನ ಬಾಳಿನ ಕತೆಯನ್ನು ಬಿಚ್ಚಿಟ್ಟಿದ್ದಾನೆ ಎಂಬುದನ್ನು 'ಸಪ್ತಾಕ್ಷರಿ ಮಂತ್ರ' ಪಾಠದ ಆಧಾರದಿಂದ ಸಮರ್ಥಿಸಿ.

V. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಎನಗಿದಚ್ಚರಿ ಎಂತುಟಾರ್ತಂ"
2. "ಅಪ್ಪುದಪ್ಪುದು ತಪ್ಪೇಂ"
3. "ಎಮ್ಮವರೊಂದಿರಕೆ ನಗುವ?"
4. "ಸಾಲ್ಗುಮೀ ಪರಿಹಾಸಂ"

VI. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

1. ಮೃಷ್ಟಾನ್ನ: ಸವರ್ಣದೀರ್ಘ ಸಂಧಿ :: ಒಡನಿರ್ದ: _______
2. ಕಾವ್ಯ: ಕಬ್ಬ :: ಆಶ್ಚರ್ಯ: ________
3. ಮನ್ನಿಸಿ : ಗೌರವಿಸಿ :: ಬಾವನ್ನ: _______
4. ಕುವೆಂಪು : ಕುಪ್ಪಳಿ :: ಮುದ್ದಣ: _______

ಸೈದ್ಧಾಂತಿಕ ಭಾಷಾಭ್ಯಾಸ

ಸಮಾಸ ಸ್ಥೂಲ ಪರಿಚಯಾತ್ಮಕ ವಿವರ

1. **ತತ್ಪುರುಷ ಸಮಾಸ:**

ಬೆಟ್ಟದ + ತಾವರೆ > ಬೆಟ್ಟದಾವರೆ (ಷಷ್ಠೀ ತತ್ಪುರುಷ)

ವಯಸ್ಸಿನಿಂದ + ವೃದ್ಧ > ವಯೋವೃದ್ಧ (ತೃತೀಯಾ ತತ್ಪುರುಷ)

ಹಗಲಿನಲ್ಲಿ + ಕನಸು > ಹಗಲುಗನಸು (ಸಪ್ತಮೀ ತತ್ಪುರುಷ)

ಕೊಟ್ಟಿರುವ ಪದಗಳನ್ನು ಗಮನಿಸಿದಾಗ ಎರಡೆರಡು ಪದಗಳು ಸೇರಿ ಒಂದು ಪದವಾಗಿರುವುದು, ಪೂರ್ವಪದದ ಅಂತ್ಯದಲ್ಲಿ ವಿಭಕ್ತಿಪ್ರತ್ಯಯವಿದ್ದು ಸಮಾಸವಾಗುವಾಗ ಆ ಪ್ರತ್ಯಯಗಳು ಲೋಪವಾಗಿರುವುದು ಕಂಡುಬರುತ್ತದೆ. ಯಾವ ವಿಭಕ್ತಿಪ್ರತ್ಯಯ ಲೋಪವಾಗಿದೆಯೋ ಅದರ ಆಧಾರದಿಂದ ಸಮಾಸವನ್ನು ಹೆಸರಿಸುವರು. ಹೀಗೆ -ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು ಪೂರ್ವಪದದ ಅಂತ್ಯದಲ್ಲಿರುವ ವಿಭಕ್ತಿಪ್ರತ್ಯಯ ಸಮಾಸವಾಗುವಾಗ ಲೋಪವಾದರೆ ಅದೇ ತತ್ಪುರುಷ ಸಮಾಸ. ಇದರಲ್ಲಿ ಉತ್ತರಪದದ ಅರ್ಥ ಪ್ರಧಾನ.

2. **ಕರ್ಮಧಾರಯ ಸಮಾಸ:**

ಹಿರಿದು + ಮರ > ಹೆಮ್ಮರ

ಮೆಲ್ಲಿತು + ನುಡಿ > ಮೆಲ್ನುಡಿ

ದಿವ್ಯವಾದ + ಪ್ರಕಾಶ > ದಿವ್ಯಪ್ರಕಾಶ

ಇಲ್ಲಿ ಹಿರಿದು, ಮರ, ಮೆಲ್ಲಿತು, ನುಡಿ ಎಂಬ ನಾಲ್ಕು ಪದಗಳು ಕನ್ನಡದವು. ದಿವ್ಯ, ಪ್ರಕಾಶ ಎಂಬ ಎರಡು ಪದಗಳು ಸಂಸ್ಕೃತ ಪದಗಳು. ಮೂರೂ ಸಮಾಸಗಳ ಪೂರ್ವಪದಗಳು ವಿಶೇಷಣಗಳಾಗಿವೆ. 'ದಿವ್ಯ' ಸಂಸ್ಕೃತ ಪದವಾದ ಕಾರಣ ಅರ್ಥ ಸ್ಪಷ್ಟತೆಗಾಗಿ 'ಆದ' ಎಂಬ ಪದ ಪೂರ್ವಪದಕ್ಕೆ ಸೇರಿ 'ದಿವ್ಯವಾದ' ಎಂಬ ಪದ ರಚನೆಯಾಗಿದೆ. ಕನ್ನಡಪದಗಳಲ್ಲಿ ಹೀಗಿರುವುದಿಲ್ಲ. ಹೀಗೆ –ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ-ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರಯ ಸಮಾಸ. ಇದರಲ್ಲಿ ಉತ್ತರ ಪದದ ಅರ್ಥವೇ ಪ್ರಧಾನ.

ಕರ್ಮಧಾರಯ ಸಮಾಸದಲ್ಲಿ ವಿಶೇಷಣ ಪೂರ್ವಪದ ಕರ್ಮಧಾರಯ, ಉಪಮಾನ ಪೂರ್ವಪದ ಅಥವಾ ಉಪಮಾನ ಪರಪದ ಕರ್ಮಧಾರಯ, ಸಂಭಾವನಾ

ಪೂರ್ವಪದ ಕರ್ಮಧಾರಯ, ಅವಧಾರಣಾ ಪೂರ್ವಪದ ಕರ್ಮಧಾರಯ ಸಮಾಸ ಎಂಬ ನಾಲ್ಕು ವಿಧಗಳಿವೆ.

3. **ದ್ವಿಗು ಸಮಾಸ:**

ಮೂರು + ಮಡಿ > ಮುಮ್ಮಡಿ
ನಾಲ್ಕು + ದೆಸೆ > ನಾಲ್ದೆಸೆ
ಪಂಚಗಳಾದ + ಇಂದ್ರಿಯ > ಪಂಚೇಂದ್ರಿಯ

ಈ ಮೂರು ಸಮಾಸಗಳಲ್ಲಿ ಪೂರ್ವಪದ ಸಂಖ್ಯಾವಾಚಕಗಳಾಗಿವೆ. ಮೂರನೆಯದಾದ ಪಂಚೇಂದ್ರಿಯ ಎಂಬ ಪದದಲ್ಲಿ ಎರಡೂ ಪದಗಳು ಸಂಸ್ಕೃತವಾದುದರಿಂದ ಆದ ಎಂಬ ಪದ ಪೂರ್ವಪದದೊಂದಿಗೆ ಸೇರಿಕೊಂಡಿದೆ. ಹೀಗೆ -ಪೂರ್ವಪದ ಸಂಖ್ಯಾವಾಚಕವಾಗಿದ್ದು ಉತ್ತರಪದ ನಾಮಪದವಾಗಿದ್ದರೆ ಅದು ದ್ವಿಗು ಸಮಾಸ.

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ತತ್ಪುರುಷ ಸಮಾಸ ಎಂದರೇನು?
2. ಕರ್ಮಧಾರಯ ಸಮಾಸದ ವಿಧಗಳಾವುವು?
3. ದ್ವಿಗು ಸಮಾಸ ಎಂದರೇನು? ಉದಾಹರಣೆ ಕೊಡಿ.

ಪ್ರಾಯೋಗಿಕ ಭಾಷಾಭ್ಯಾಸ

II. ಕೊಟ್ಟಿರುವ ಸಮಾಸಪದಗಳನ್ನು ವಿಗ್ರಹಿಸಿ, ಸಮಾಸವನ್ನು ಹೆಸರಿಸಿ.

ಚಳಿಗಾಲ , ಯಜ್ಞತುರಂಗ, ಬಾಯುಪಚಾರ, ಸವಿಗೂಳು, ಮೃಷ್ಟಾನ್ನ

ಏಕಾಕ್ಷರೀ , ಪಂಚಾಕ್ಷರೀ, ಮೂಜಗ, ಸಪ್ತಾಕ್ಷರೀ

ಪೂರಕ ಓದು:

ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿದ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮುದ್ರಿಸಿರುವ ಮುದ್ದಣಭಂಡಾರ -ಸಂಪುಟ ಒಂದು ಮತ್ತು ಎರಡು ಕೃತಿಯನ್ನು ಗಮನಿಸಿ.

15. ಪದ್ಯ ಭಾಗ - 1. ಕನ್ನಡಿಗರ ತಾಯಿ- ರಾಷ್ಟ್ರಕವಿ ಎಂ. ಗೋವಿಂದಪೈ

ಪ್ರವೇಶ:

ಜಗತ್ತಿನಲ್ಲಿರುವ ಎಲ್ಲಾ ಭಾಷೆಗಳಲ್ಲಿಯೂ ನಾಡು-ನುಡಿಯ ಮೇಲಿನ ಅಭಿಮಾನವು ಆಯಾಯ ಭಾಷೆಯ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಅಭಿವ್ಯಕ್ತಗೊಂಡಿದೆ. ಇವು ಜನಮಾನಸದ ಅಮೃತಧಾರೆಗಳಾಗಿವೆ. ನಾಡು-ನುಡಿಯ ಆತ್ಮಾಭಿಮಾನದಿಂದ ಕೂಡಿದ ದೇಶಾಭಿಮಾನವು ನಾಡಿನ ಏಳಿಗೆಗಾಗಿ ದುಡಿಯುವಂತೆ ನಮ್ಮೆಲ್ಲರನ್ನು ಪ್ರೇರೇಪಿಸುತ್ತವೆ. ಭವ್ಯ ಪರಂಪರೆಯುಳ್ಳ ಕರುನಾಡು ಅನೇಕ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಕಾಲದಲ್ಲಿ ಕರ್ನಾಟಕದ ಏಕೀಕರಣದ ಕನಸನ್ನು ಕಂಡವರು ಅನೇಕರು. ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಉದಯವಾಗಲಿ ಚೆಲುವ ಕನ್ನಡ ನಾಡು, ಬಾರಿಸು ಕನ್ನಡ ಡಿಂಡಿಮವ, ಹಚ್ಚೇವು ಕನ್ನಡದ ದೀಪ ಎಂದೆಲ್ಲ ಅನೇಕರು ನಾಡು ನುಡಿಯ ಶ್ರೇಷ್ಠತೆ, ಪಾವಿತ್ರತೆಯನ್ನು ಸಾರುವ ಮೂಲಕ ನವೋದಯ ಸಾಹಿತ್ಯಕ್ಕೆ ನಾಂದಿ ಹಾಡಿದರು. ಜೊತೆಗೆ ಕನ್ನಡಿಗರನ್ನು ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದರು. ಈ ನಿಟ್ಟಿನಲ್ಲಿ ಮೂಡಿಬಂದ ಕವನಗಳಲ್ಲಿ ಇದು ಒಂದಾಗಿದೆ.

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ!
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ!
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮ ನಾಳ್ವೆ,
ನೀನೆ ಕಣಾ ನಮ್ಮ ಬಾಳ್ವೆ,
ನಿನ್ನ ಮರೆಯಲೆಮ್ಮವು, ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು.

ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ,
ತೆನೆಯ ಕೆನೆಯ ಗಾಳಿಯೊ,
ಖಗಮೃಗೋರಗಾಳಿಯೊ,
ನದಿ ನಗರ ನಗಾಳಿಯೊ!
ಇಲ್ಲಿಲ್ಲದುದುಳಿದುದೆ?
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ?



ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ,
ಶರ್ವ ಪಂಪ ರನ್ನರ, ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ,
ಪುರಂದರ ವರೇಣ್ಯರ, ತಾಯೆ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!


ಹಳೆಯ ಬೀಡ ಬೇಲನಾಡ ಮಾಡಮೆನಿತೊ ಸುಂದರಂ!
ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ!
ಇಲ್ಲಿಲ್ಲದ ಶಿಲ್ಪಮಿಲ್ಲ;
ನಿನ್ನ ಕಲ್ಲೆ ನುಡಿವುದಲ್ಲ!
ಹಿಂಗತೆಯಿನಿವಾಲ ಸೊಲ್ಲ
ನೆಮ್ಮತೃಷೆಗೆ ದಕ್ಕಿಸು!
ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು!

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ!
ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂ ತೀಡಿದನ್ನ,
ಸುರಭಿ ಎಲ್ಲಿ? ನೀನದನ್ನ
ನವಶಕ್ತಿಯಿನೆಬ್ಬಿಸು-
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು

ನಮ್ಮೆದೆಯಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲಸು,
ನಮ್ಮ ಮನಮನೊಂದೆ ಕಲಸು!
ಇದನೊಂದನೆ ಕೋರುವೆ!

ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ?

ಕೃತಿಕಾರರ ಪರಿಚಯ



ರಾಷ್ಟ್ರಕವಿ ಎಂ. ಗೋವಿಂದ ಪೈ ಅವರು ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ 23-03-1883 ರಲ್ಲಿ ಜನಿಸಿದರು. ತಂದೆ ಸಾಹುಕಾರ ತಿಮ್ಮಪ್ಪೈ, ತಾಯಿ ದೇವಕಿಯಮ್ಮ. ಬಿ. ಎ. ಪದವಿಯನ್ನು ಪಡೆದಿದ್ದ ಗೋವಿಂದ ಪೈ ಅವರು ದೇಶೀ ಭಾಷೆಗಳಲ್ಲಲ್ಲದೆ ವಿದೇಶಿ ಭಾಷೆಗಳ ಪಾಂಡಿತ್ಯ ಉಳ್ಳವರಾಗಿದ್ದರು. ಪ್ರಾಸ ಬಿಟ್ಟು ಪದ್ಯ ರಚಿಸಿದ ಮೊದಲ ಕವಿ ಎಂಬ ಹೆಗ್ಗಳಿಕೆಗೂ ಪಾತ್ರರಾದವರು. ಸಂಶೋಧಕ, ವಿಮರ್ಶಕ, ಅನುವಾದಕರಾಗಿಯೂ ಜನಪ್ರಿಯರಾದ ರಾಷ್ಟ್ರಕವಿ ಗೋವಿಂದ ಪೈ ಅವರ (ಸುವಾಸಿನಿ) ಮೊದಲ ಕವಿತೆ 1900 ರಲ್ಲಿ ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾಯಿತು. ಅವರ ಕವನ ಸಂಕಲನಗಳು ಇಂತಿವೆ. ಗಿಳಿವಿಂಡು, ನಂದಾದೀಪ ಮೊದಲಾದವು. ನವೀನ ಚಂದ್ರಸೇನರ ಬಂಗಾಳಿ ಕೃಷ್ಣ ಚರಿತೆಯ ಗದ್ಯಾನುವಾದ, ‘ಸಿಂಗಾಲ ಸುತ್ತ’ ಬೌದ್ಧ ಸೂತ್ರಗಳ ಕನ್ನಡ ಅನುವಾದ.

ಅಲ್ಲದೇ 35 ವೃತ್ತಗಳುಳ್ಳ ಪ್ರಾಸ ರಹಿತ ಗೊಮ್ಮಟ ಜಿನಸ್ತುತಿಯನ್ನು ರಚಿಸಿ ಪ್ರಕಟಿಸಿದರು. ರವೀಂದ್ರನಾಥ ಠಾಕೂರ್, ಅಹಮ್ಮದ್ ಇಕ್ಬಾಲ್, ಉಮರ್ ಖಯ್ಯಾಂನ ರುಬಾಯಿಗಳನ್ನು ಭಾಷಾಂತರಿಸಿದ್ದಾರೆ. ವೈಶಾಖಿ ಮತ್ತು ಗೊಲ್ಗೊಥಾ ಖಂಡಕಾವ್ಯಗಳನ್ನು ಪ್ರಕಟಿಸಿದ್ದಾರೆ.

ಜಪಾನಿನ ನೋ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿರುವರಲ್ಲದೇ ಚಿತ್ರಭಾನು, ಹೆಬ್ಬೆರಳು, ಪಾರ್ಶ್ವನಾಥ ತೀರ್ಥಂಕರ ಚರಿತೆ, ಬಾಹುಬಲಿ ಗೊಮ್ಮಟೇಶ್ವರ ಚರಿತೆ, ಭಗವಾನ್ ಬುದ್ಧ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಜೀವಿತಾವಧಿಯನ್ನು ಸಂಶೋಧನೆ, ಸಾಹಿತ್ಯಕ್ಕಾಗಿ ಮೀಸಲಿಟ್ಟಿದ್ದ ಅವರಿಗೆ 1949 ರಲ್ಲಿ ಮದ್ರಾಸ್ ಸರ್ಕಾರ ರಾಷ್ಟ್ರಕವಿ ಬಿರುದು ನೀಡಿ ಗೌರವಿಸಿದೆ. ಇವರು ಕನ್ನಡದ ಮೊದಲ ರಾಷ್ಟ್ರಕವಿ ಹೆಗ್ಗಳಿಕೆಗೆ ಪಾತ್ರರಾದವರು. ಹೊಗಳಿಕೆ ಮತ್ತು ಪ್ರಚಾರಕ್ಕೆ ಹಾತೊರೆಯದ ಇವರು 1950 ರಲ್ಲಿ ಬೊಂಬಾಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳದ ಅಧ್ಯಕ್ಷತೆವಹಿಸಿದ್ದರು. 06-09-1963 ರಲ್ಲಿ ಗೋವಿಂದ ಪೈ ಅವರು ದೈವಾಧೀನರಾದರು.

ಪ್ರಸ್ತುತ ಪದ್ಯವನ್ನು ಎನ್. ಎಸ್. ರಘುನಾಥ್ ಅವರು ಸಂಪಾದಿಸಿರುವ ಶತಮಾನದ ಮಕ್ಕಳ ಸಾಹಿತ್ಯ ಸಂಕಲನದಿಂದ ಆರಿಸಿ ಸಂಪಾದಿಸಿ ನಿಗದಿಪಡಿಸಿದೆ.

ಆಶಯ ಭಾವ

ಇದು ಕರ್ನಾಟಕ ಏಕೀಕರಣದ ಪೂರ್ವದಲ್ಲಿ ಕನ್ನಡತಾಯಿಯನ್ನು ಸ್ತುತಿಸಿ ಬರೆದ ಕವನ. ಕನ್ನಡತಾಯಿ ತನ್ನ ಮುಖವನ್ನು ತೋರುವ ಮೂಲಕ ಕನ್ನಡದ ಮಕ್ಕಳನ್ನು ಒಂದಾಗಿಸಬೇಕು ಎನ್ನುವುದು ಪದ್ಯದ ಮುಖ್ಯ ಆಶಯ. ಕನ್ನಡನಾಡಿನಲ್ಲಿ ಎಲ್ಲಾ ಸಂಪತ್ತು ಇದೆ. ತಾಯಿಯ ಮುಖ ಕಂಡಾಗ ಅದೆಲ್ಲವೂ ಗೋಚರವಾಗುತ್ತದೆ. ಹೀಗೆ ಗೋಚರಿಸಿದಾಗ ಮಾತ್ರ ಕನ್ನಡ ತಾಯಿಯ ಕೀರ್ತಿ ಜಗತ್ತಿನಾದ್ಯಂತ ಪಸರಿಸಲು ಸಾಧ್ಯ. ಅದಕ್ಕಾಗಿ ಕನ್ನಡತಾಯಿ ಎಲ್ಲರ ನಡೆ-ನುಡಿ, ಆಚಾರ-ವಿಚಾರಗಳಲ್ಲಿ ನೆಲೆಯಾಗಬೇಕು. ಕನ್ನಡ ತಾಯಿ ಜನ್ಮದಾತೆಗೆ ಸಮನಾಗಿರುವುದರಿಂದ ಅವಳ ಹರಕೆ-ಹಾರೈಕೆ ನಮಗೆ ಶ್ರೀರಕ್ಷೆ. ಕನ್ನಡಿಗರಿಗೆ ಕನ್ನಡವೇ ಉಸಿರು, ಕನ್ನಡಿಗರ ಧಮನಿಧಮನಿಗಳಲ್ಲಿಯೂ ಕನ್ನಡವೇ ಉಸಿರಾಗಬೇಕು. ಕನ್ನಡ ನಾಡು ನುಡಿಯ ಶ್ರೇಷ್ಠತೆ, ಭವ್ಯಪರಂಪರೆ, ಇತಿಹಾಸ, ಪ್ರಾಕೃತಿಕ, ಸಾಹಿತ್ಯಿಕ, ವಾಸ್ತುಶಿಲ್ಪಗಳ ಭವ್ಯತೆಯಿಂದ ಜಗತ್ತಿನೆಲ್ಲಡೆ ಹರಡಬೇಕೆಂಬುದು ಕವಿಯ ಆಶಯವಾಗಿದೆ.

ಪದಗಳ ಅರ್ಥ

ಆಳ್ವೆ- ಆಳುವೆ; ಒಸಗೆ- ಸಂತೋಷ, ಶುಭವಾರ್ತೆ; ಕಾರಕಳ- ಕಾರ್ಕಳ (ಉಡುಪಿ ಜಿಲ್ಲೆಯ ಒಂದು ತಾಲೂಕು ಕೇಂದ್ರ); ಕೆನೆ- ಸಾರ, ತಿರುಳು; ತಾಳ್ವೆ- ಸಹಿಸುವೆ; ತೃಷೆ- ಬಾಯಾರಿಕೆ; ದಿವಂ- ಆಕಾಶ; ನಗಾಳಿ- ಪರ್ವತಗಳ ಸಮೂಹ; ನಿಡುಕರು- ನಿಡಿದಾಗಿ ನಿಂತಿರುವ (ನಿಡು ನಿಂದಿರುವ) ಗೊಮ್ಮಟ ಮೂರ್ತಿ; ಬಸಿರು- ಗರ್ಭ, ಗರ್ಭಾಶಯ; ಬಿಳಿಯ ಕೊಳ- ಬೆಳಗೊಳ, ಶ್ರವಣಬೆಳಗೊಳ; ಬೇಲನಾಡು- ಬೇಲೂರು; ಮೊಗ- ಮುಖ; ಲತೆ- ಬಳ್ಳಿ; ಶರ್ವ-ನೃಪತುಂಗನ ಮತ್ತೊಂದು ಹೆಸರು; ಸುರಭಿ- ಸುಗಂಧ, ಸುವಾಸನೆ;

ಟಿಪ್ಪಣಿ

ನಗಾಳಿ: ನಗ- ಪರ್ವತ; ಆಳಿ- ಮೂಹ-ಪರ್ವತಗಳ ಸಮೂಹ

ಖಗ: ಖ- ಆಕಾಶ; ಗ- ಗಮಿಸುವುದು (ಸಂಚರಿಸುವುದು) ಆಕಾಶದಲ್ಲಿ ಸಂಚರಿಸುವುದು- ಪಕ್ಷಿ

ಖಗಮೃಗೋರಗಾಳಿ: ಖಗ- ಪಕ್ಷಿ; ಮೃಗ- ಪ್ರಾಣಿ; ಉರಗ- ಹಾವು; ಆಳಿ- ಸಮೂಹ; ಪ್ರಾಣಿ, ಪಕ್ಷಿ, ಹಾವುಗಳ ಸಮೂಹ.

ಕೊಂಡಕುಂದವರ್ಯ: ಜೈನಧರ್ಮದಲ್ಲಿ ದಿಗಂಬರ- ಶ್ವೇತಾಂಬರ ಎಂಬ ಸಂಪ್ರದಾಯ ಭೇದಗಳು ಹುಟ್ಟುವ ಮೊದಲು ಜೈನಧರ್ಮವು ಅರ್ಹಂತ, ಅನೇಕಾಂತ ಎಂಬಿವೇ ಮೊದಲಾದ ಹೆಸರುಗಳಿಂದ ಪ್ರಸಿದ್ಧವಾಗಿತ್ತು. ವಿಕ್ರಮ ಶಕದ 136ನೆಯ ವರ್ಷದಲ್ಲಿ ಅಂದರೆ ಕ್ರಿ. ಶ. 80-81 ರಲ್ಲಿ ಅದು ದಿಗಂಬರ- ಶ್ವೇತಾಂಬರ ಸಂಪ್ರದಾಯಗಳೆಂದು ಕವಲಾಗುತ್ತಲೇ ದಿಗಂಬರ ಸಂಪ್ರದಾಯಕ್ಕೆ ಮೂಲ ಸಂಘವೆಂದು ಹೆಸರಾಯಿತು. ಪದ್ಮನಂದಿ ಎಂಬ ಮೊದಲನೆಯ ಹೆಸರುಳ್ಳ ಕೊಂಡಕುಂದಾಚಾರ್ಯನು ಈ ಮೂಲಸಂಘದ ಮುಂದಾಳೆಂದೂ ಒಂದು ಗಣದ ಒಡೆಯನೆಂದೂ ಕಂಡುಬರುತ್ತದೆ.

ಹಿಂಗತೆಯಿನಿವಾಲ ಸೊಲ್ಲ: ಹಿಂಗತೆ-ಹಿನ್ನೆಲೆಯ ಕತೆ (ಬೇಲೂರು, ಹಳೆಬೀಡು ಇತ್ಯಾದಿ ಶಿಲ್ಪಕಲೆಗಳ ಹಿಂದೆ ಇರುವ ಕತೆ) ಇನಿದು-ಇನಿದಾದ, ಸವಿಯಾದ, ರುಚಿಯಾದ, ಪಾಲು-ಹಾಲು; ಸೊಲ್ಲು- ಮಾತು; ಹಿನ್ನೆಲೆಯ ಕಥೆ ಸವಿಯಾದ ಹಾಲಿನಂತಿರುವ ಮಾತುಗಳಿಂದ ಕೂಡಿದೆ.

ಎಮ್ಮ ತೃಷೆಗೆ ದಕ್ಕಿಸು: ಎಮ್ಮ- ನಮ್ಮ; ತೃಷೆ- ದಾಹ, ಬಾಯಾರಿಕೆ; ದಕ್ಕಿಸು- ನೀಡು; ಕರ್ನಾಟಕದ ಶಿಲ್ಪಕಲೆಯ ಇತಿಹಾಸವನ್ನು ತಿಳಿದುಕೊಳ್ಳಬೇಕೆಂಬ ದಾಹವುಳ್ಳ (ಬಯಕೆವುಳ್ಳ) ನಮಗೆ ನೀಡು.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ನಮ್ಮನ್ನು ಆಳುವವಳು ಯಾರು?
2. ಲತೆ ಯಾವುದನೆಲ್ಲಾ ನೀಡುತ್ತದೆ?
3. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?
4. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?
5. ಕನ್ನಡಿಗರ ಪಾಡು ಏನು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು?
2. ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು?
3. ಕನ್ನಡದ ಹೆಸರನ್ನು ಹೇಗೆ ಹಬ್ಬಿಸಬೇಕೆಂದು ಕವಿ ಆಶಿಸುತ್ತಾರೆ?

III. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ.

1. ಕನ್ನಡ ತಾಯಿಯನ್ನು ಮರೆಯಲು ಸಾಧ್ಯವಿಲ್ಲ ಏಕೆ?
2. ಕವಿ ಕನ್ನಡ ತಾಯಿಯಲ್ಲಿ ಏನೆಂದು ಕೋರುತ್ತಾರೆ?
3. ಗೋವಿಂದ ಪೈ ಅವರ ಪ್ರಮುಖ ಕೃತಿಗಳಾವುವು?

IV. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. ಕನ್ನಡಿಗರ ತಾಯಿ ಮೊಗ ತೋರಬೇಕೆಂದು ಕವಿ ಏಕೆ ಬಯಸುತ್ತಾರೆ?
2. ಕನ್ನಡ ನಾಡಿನ ಕವಿ ಹಾಗೂ ಕಲೆಯ ಮಹತ್ವವೇನು? ವಿವರಿಸಿ

V. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಖಗ ಮೃಗೋರಗಾಳಿಯೋ"
2. "ನಿನ್ನ ಕಲ್ಲೆ ನುಡಿವುದಲ್ಲ!"
3. "ನಮ್ಮ ಮನಮನೊಂದೆ ಕಲಸು!"

VI. ಹೊಂದಿಸಿ ಬರೆಯಿರಿ.

ಅ	**ಬ**
1. ಬೇಲನಾಡು	a. ಬಾಹುಬಲಿ
2. ಶರ್ವ	b. ಖಂಡಕಾವ್ಯ
3. ಗೊಲ್ಗೊಥಾ	c. ಕವನಸಂಕಲನ
4. ಗಿಳಿವಿಂಡು	d. ಹಳೆಬೀಡು
	e. ಬೇಲೂರು
	f. ನೃಪತುಂಗ

VII. ಬಿಟ್ಟ ಸ್ಥಳ ತುಂಬಿ.

1. ಹರಸು ತಾಯೆ _______ ಕಾಯೆ

2. ಹಾಲು ಹರಿವ _______ ಭೂಮಿಗಿಳಿದುದೆ?

3. ಜೈನರಾದ ಪೂಜ್ಯಪಾದ _______.
4. _______ ಸೇಡು ನಮ್ಮ ಪಾಡು

ಪಠ್ಯಾಧಾರ ಚಟುವಟಿಕೆ

I. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.

1. ಜೈನರಾದ _______ ವಿದ್ಯಾರಣ್ಯರ! (ಏಳು ಸಾಲು)

II. ಕವಿತೆಯಲ್ಲಿ ಬರುವ ಮಹಾತ್ಮರ ಭಾವಚಿತ್ರಗಳನ್ನು ಸಂಗ್ರಹಿಸಿ.

ಪೂರಕ ಓದು:


ರಾಷ್ಟ್ರಕವಿ ಎಂ. ಗೋವಿಂದ ಪೈ ಅವರ ಗಿಳಿವಿಂಡು ಕವನ ಸಂಕಲನದ ಕವಿತೆಗಳನ್ನು ಕಲಿಯಿರಿ.

2. ಸಣ್ಣ ಸಂಗತಿ- ಕೆ. ಎಸ್. ನರಸಿಂಹಸ್ವಾಮಿ

ಪ್ರವೇಶ:

ಕನ್ನಡ ಸಾಹಿತ್ಯವು ಆಧುನಿಕ ಕಾವ್ಯ ಪರಂಪರೆಯಲ್ಲಿ ಹೊಸ ಹೊಸ ಪ್ರಯೋಗಶೀಲತೆಗೆ ಒಳಪಟ್ಟು ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯಗಳೆಂಬ ವಿವಿಧ ಮಜಲುಗಳಾದವು. ಪ್ರತಿಯೊಬ್ಬ ಕವಿಯೂ ಸಹ ಜೀವನ ದೃಷ್ಟಿ, ಸಾಮಾಜಿಕ ಸೂಕ್ಷ್ಮತೆಗಳನ್ನರಿತಾಗ ತಮ್ಮ ತಮ್ಮ ಅನುಭವ ಕಲ್ಪನೆಗಳಿಗೆ ಧ್ವನಿಕೊಡುವ ಕಾಯಕದಲ್ಲಿ ತೊಡಗುತ್ತಾರೆ. ಇದರಿಂದಾಗಿ ಆಧುನಿಕ ಕಾವ್ಯಗಳಲ್ಲಿ ಹೊಸತನ ಕಾಣಿಸಿಕೊಂಡಿದೆ. ಈ ಪ್ರಕಾರಗಳಲ್ಲಿ ಪ್ರಸ್ತುತ ಕವನವೊಂದಾಗಿದೆ.

ನಟ್ಟಿರುಳ ಕರಿಮುಗಿಲ ನೀರ್-ತುಂಬಿಗಳ ನಡುವೆ
ಹುಣ್ಣಿಮೆಯ ಕಣ್ಣ ತೆರೆದಿದೆ. ತಾರೆ ಬಂದಿವೆ
ಬಾನ ಬೀದಿಗೆ. ಅತ್ತ ಹಿಡಿದ ಸೋನೆಯ ಶ್ರುತಿಗೆ
ಗಾಳಿಯೇ ಹಾಡುತಿದೆ. ಇತ್ತ ಈ ಮನೆಯೊಳಗೆ



ಪುಟ್ಟ ಮಗುವೊಂದು ಮಂಚದ ಬಳಿಯ ತೊಟ್ಟಿಲಲಿ
ಕಣ್ಣರ್ಧ ಮುಚ್ಚಿ ಮಲಗಿದೆ, ಅದೂ ಬರಿಮೈಲಿ!
ನಿದ್ದೆಗಣ್ಣಿನಲೆ ಪಕ್ಕದ ತಾಯಿ ಕೈ ನೀಡಿ
ಮತ್ತೆ ಹೊದಿಕೆಯನು ಸರಿಪಡಿಸುವಳು. ಮಗು ತಿರುಗಿ

ಹೊದಿಕೆಯನೆ ಕಿತ್ತೆಸೆದು ಮಲಗುವುದು ಬರಿ ಮೈಲಿ;

ಸಣ್ಣಗಿದೆ ದೀಪ ಎಲ್ಲೋ ಒಂದು ಮೂಲೆಯಲಿ.
ಇದು ಸರಿಯೆ? ತಪ್ಪೆ? ಉತ್ತರವಿಲ್ಲ. ದೆಸೆ ದೆಸೆಗೆ
ಎಲ್ಲ ಮಲಗಿಹರು ಮಾತಾಡದೆಯೆ, ನೋಡದೆಯೆ.
ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ;
ಅದನು ಲೆಕ್ಕಿಸದೆ ಮಗು ಹೊದಿಕೆಯನು ಒದೆಯುತಿದೆ.

ಕೃತಿಕಾರರ ಪರಿಚಯ



ಆಧುನಿಕ ಕಾವ್ಯ ಸಂದರ್ಭದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಕೆ. ಎಸ್. ನರಸಿಂಹಸ್ವಾಮಿ ಅವರು 26-01-1915 ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ ಜನಿಸಿದರು. ಇವರ ಮೊದಲ ಕವನ ಸಂಕಲನ ಮೈಸೂರು ಮಲ್ಲಿಗೆ 1943 ರಲ್ಲಿ ಪ್ರಕಟವಾಯಿತು. ಇವರು ಶಿಲಾಲತೆ, ಐರಾವತ, ನವಪಲ್ಲವ, ಇರುವಂತಿಗೆ, ದೀಪದ ಮಲ್ಲಿ, ಮನೆಯಿಂದ ಮನೆಗೆ, ತೆರೆದ ಬಾಗಿಲು ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. 1977 ರಲ್ಲಿ ಇವರ ತೆರೆದ ಬಾಗಿಲು ಎಂಬ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 1990ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ ದುಂಡು ಮಲ್ಲಿಗೆ ಕವನ ಸಂಕಲನಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ. ಇವರನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರೇಮಕವಿ ಎಂದೇ ಗುರುತಿಸಿದೆ. 2004ರಲ್ಲಿ ದೈವಾಧೀನರಾದರು.

ಆಶಯ ಭಾವ

ಸಣ್ಣ ಸಂಗತಿ ಕವನದಲ್ಲಿ ಕವಿ ತಾಯ ಪಕ್ಕದಲ್ಲಿ ಮಲಗಿರುವ ಮಗು ನಟ್ಟಿರುಳು ತನ್ನ ಹೊದಿಕೆಯನ್ನು ಕಿತ್ತೆಸದಾಗ, ಮತ್ತೆ ಮತ್ತೆ ತಾಯಿಯ ಕೈ ಮಗುವಿನ ಹೊದಿಕೆಯನ್ನು ಸರಿಪಡಿಸುವ ಸಣ್ಣ ಸಂಗತಿಯೊಂದನ್ನು ಪ್ರಕೃತಿಯ ನೀರು ತುಂಬಿರುವ ಕರಿಮುಗಿಲು, ಆಕಾಶಕ್ಕೆ ಹುಣ್ಣಿಮೆಯ ಕಣ್ಣುತೆರದ, ಬಾನ ಬೀದಿಗೆ ತಾರೆ ಬಂದಿವೆ, ಸೋನೆಯ ಶ್ರುತಿಗೆ ಗಾಳಿಯೇ ಹಾಡುವ-ಮೊದಲಾದ ಪ್ರಾಕೃತಿಕ ಚೌಕಟ್ಟಿನೊಳಗಿನ ದೊಡ್ಡ ಘಟನೆಗಳೊಂದಿಗೆ ಹೋಲಿಸಿ ವರ್ಣಿಸಲಾಗಿದೆ. ಈ ಸಣ್ಣಸಂಗತಿ ವಾಸ್ತವವಾಗಿ ಸದಾಕಾಲ ಕಾಪಾಡುವ ಕರುಣೆಯೊಂದರ ಸಂಕೇತವಾಗಿದೆ. ಹಗಲಿರುಳೆನ್ನದೆ ಸದಾ ತನ್ನ ಮಗುವಿನ ಆರೈಕೆಯಲ್ಲಿ ತನ್ನ ತಾಯ್ತನದ ಸಾರ್ಥಕ್ಯ ಪಡೆಯುವ ತಾಯಿಯ ಹೃದಯದ ತುಡಿತ-ಮಿಡಿತಗಳ ಗಹನವಾದ ತತ್ವದ ಸಂಕೇತವಾಗಿದೆ. ಹೆಣ್ಣಿನ ಜನ್ಮ ಸಾರ್ಥಕ್ಯವನ್ನು ಪಡೆಯುವುದು ಹಾಗೂ ಜೀವನ ಪರಿಪೂರ್ಣಗೊಳ್ಳುವುದು ಆಕೆಯ ತಾಯ್ತನದಲ್ಲಿ. ಆ ಮಗುವಿನ ಆರೈಕೆ-ಪೋಷಣೆ, ಲಾಲನೆ-ಪಾಲನೆಗಳಲ್ಲಿಯೇ ತನ್ನೆಲ್ಲ ಸುಖ ಸಂತೋಷಗಳನ್ನು ಕಾಣುತ್ತಾಳೆ. ಹಾಗೂ ತನ್ನ ನೋವು, ಸಂಕಟಗಳನ್ನು ಮರೆಯುತ್ತಾಳೆ. ಹಗಲಿರುಳೆನ್ನದೆ ತನ್ನ ಮಗುವಿನ ಸಂರಕ್ಷಣೆಯನ್ನು ಮಾಡುವ ತಾಯಿ ಹೃದಯದ ಮಿಡಿತವನ್ನು ಪ್ರಕೃತಿಯ ಸನ್ನಿವೇಶಗಳಿಗೆ ಹೋಲಿಸಿರುವುದು ಸಹೃದಯರ ಮನದಲ್ಲಿ ಸದಾ ನಿಲ್ಲುತ್ತದೆ.

ಪ್ರಕೃತ '**ಸಣ್ಣ ಸಂಗತಿ**' ಈ ಕವನವನ್ನು **ಕೆ. ಎಸ್. ನರಸಿಂಹಸ್ವಾಮಿ** ಅವರ 'ಇರುವಂತಿಗೆ' ಕವನಸಂಗ್ರಹದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಪದಗಳ ಅರ್ಥ

ಕರಿಮುಗಿಲು- ಕಪ್ಪಾದ ಮೋಡ; ತಾರೆ- ನಕ್ಷತ್ರ; ದೆಸೆ- ದಿಕ್ಕು; ನಟ್ಟಿರುಳು- ನಡು ಇರುಳು, ಮಧ್ಯರಾತ್ರಿ; ಪೊರೆ- ಆರೈಕೆ, ರಕ್ಷಣೆ; ಬಾನು- ಆಕಾಶ; ಲೆಕ್ಕಿಸದೆ- ಗಮನಿಸದೆ, ಲೆಕ್ಕಕ್ಕೆ ಪರಿಗಣಿಸದೆ; ಸೋನೆ- ತುಂತುರು ಮಳೆ, ಜಿಡಿಮಳೆ;

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಹುಣ್ಣಿಮೆಯ ಕಣ್ಣು ಎಲ್ಲಿ ತೆರೆದಿದೆ?
2. ಪುಟ್ಟ ಮಗುವು ತೊಟ್ಟಿಲಲ್ಲಿ ಹೇಗೆ ಮಲಗಿದೆ?
3. ಮೂಲೆಯಲ್ಲಿ ಇರುವುದೇನು?
4. ನಿದ್ದೆ ಎಚ್ಚರಗಳಲ್ಲಿ ಯಾವ ಕೈ ದುಡಿಯುತಿದೆ?
5. ಯಾವುದನ್ನು ಲೆಕ್ಕಿಸದೆ ಮಗು ಹೊದಿಕೆಯನ್ನು ಒದೆಯುತಿದೆ?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ತಾಯಿ ತನ್ನ ಮಗುವಿನ ಆರೈಕೆಯನ್ನು ಹೇಗೆ ಮಾಡುತ್ತಾಳೆ ವಿವರಿಸಿ.
2. ಕವಿ ಯಾವ ಸಣ್ಣ ಸಂಗತಿಯನ್ನು ಈ ಕವನದಲ್ಲಿ ವಿವರಿಸಿದ್ದಾರೆ?
3. ಈ ಕವನದಲ್ಲಿ ಕವಿ ನೀಡಿರುವ ಪ್ರಾಕೃತಿಕ ಘಟನೆಗಳನ್ನು ತಿಳಿಸಿ.

III. ಈ ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ತಾರೆ ಬಂದಿವೆ ಬಾನ ಬೀದಿಗೆ."
2. "ತಾಯಿ ಕೈನೀಡಿ ಮತ್ತೆ ಹೊದಿಕೆಯನು ಸರಿಪಡಿಸುವಳು."
3. "ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ."

IV. ಕೊಟ್ಟಿರುವ ಪ್ರಶ್ನೆಗೆ ಏಳೆಂಟು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿ ಯಾವ ಸಣ್ಣ ಸಂಗತಿಯೊಂದನ್ನು ಪ್ರಕೃತಿಯ ಘಟನೆಗಳೊಂದಿಗೆ ಹೋಲಿಕೆ ಮಾಡಿದ್ದಾರೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಸೈದ್ಧಾಂತಿಕ ಭಾಷಾಭ್ಯಾಸ

ಛಂದಸ್ಸು: ಪರಿಚಯಾತ್ಮಕ ವಿವರ.

ಕಾವ್ಯವನ್ನು ಗದ್ಯ, ಪದ್ಯ ಮತ್ತು ಚಂಪೂ ಎಂದು ಮೂರು ವಿಭಾಗ ಮಾಡಲಾಗಿದೆ. ಚಂಪೂ ಕಾವ್ಯ ಗದ್ಯಪದ್ಯ ಮಿಶ್ರಿತ ಶೈಲಿಯಾಗಿರುವುದರಿಂದ ಪ್ರಧಾನವಾಗಿ ಗದ್ಯ ಮತ್ತು ಪದ್ಯ ಎಂಬೆರಡೇ ವಿಭಾಗಗಳೆಂದೂ ಹೇಳಬಹುದು.

ಪದ್ಯಗಳನ್ನು ರಚಿಸುವಾಗ ನಿರ್ದಿಷ್ಟ ನಿಯಮಗಳನ್ನು ಅನುಸರಿಸಲಾಗುವುದು. ಅದೇ ಛಂದಸ್ಸು. ವ್ಯಾಕರಣಶಾಸ್ತ್ರವು ಗದ್ಯ ಮತ್ತು ಪದ್ಯ ಎರಡಕ್ಕೂ ಸಂಬಂಧಿಸಿದ್ದು. ಛಂದಶ್ಶಾಸ್ತ್ರವು ಪದ್ಯಕ್ಕೆ ಮಾತ್ರ ಸೀಮಿತವಾದುದು.

ಆಧುನಿಕ ಕನ್ನಡ ಕಾವ್ಯಗಳಲ್ಲಿ ಛಂದಸ್ಸು ಹೆಚ್ಚು ಬಳಕೆಯಾಗುತ್ತಿಲ್ಲ. ಆದರೆ ಕಾವ್ಯ ಪರಂಪರೆಯಲ್ಲಿ ಛಂದಸ್ಸಿಗೆ ವಿಶೇಷ ಮಹತ್ವವಿದೆ. ಇಲ್ಲಿ ಕೊಟ್ಟಿರುವ ಮೂರು ಕಾರಣಗಳಿಂದಾಗಿ ಛಂದಸ್ಸಿಗೆ ಗುರುತರವಾದ ಮಹತ್ವವುಂಟು.

1. ಹಿಂದಿನ ಕಾವ್ಯಗಳ ಲಕ್ಷಣ ತಿಳಿಯಲು
2. ಛಂದಸ್ಸನ್ನು ಕಡೆಗಣಿಸಿದ್ದರ ಔಚಿತ್ಯದ ಬಗ್ಗೆ ಮರು ಚಿಂತಿಸಲು
3. ಛಂದಸ್ಸಿನ ಹೊಸ ಬಗೆಯ ಪ್ರಯೋಗಗಳನ್ನು ಅರಿಯಲು

ಒಂದು ಗೊತ್ತಾದ ಸಾಲುಗಳ (ಪಾದಗಳ) ನಿಯಮ ಅನುಸರಿಸಿ ಬರೆದವುಗಳೇ ಪದ್ಯಗಳು. ಮೂರು ಪಾದಗಳ ಪದ್ಯವನ್ನು ತ್ರಿಪದಿ ಎಂತಲೂ ನಾಲ್ಕು ಪಾದಗಳ ಪದ್ಯವನ್ನು ಚೌಪದಿ ಎಂತಲೂ ಆರುಪಾದಗಳ ಪದ್ಯವನ್ನು ಷಟ್ಪದಿ ಎಂತಲೂ ಇತ್ತೀಚಿನ ಹದಿನಾಲ್ಕು ಪಾದಗಳ ಪದ್ಯವನ್ನು ಅಷ್ಟಷಟ್ಪದಿ (ಸುನೀತ/ ಸಾನೆಟ್) ಎಂತಲೂ ಕರೆಯುವರು. ಹಾಗಾಗಿ ಪದ್ಯ ಎಂಬುದು ನಿರ್ದಿಷ್ಟ ಸಂಖ್ಯೆಯ ಪಾದಗಳಿಂದ ಕೂಡಿರಬೇಕು. ಪದ್ಯದ ಪ್ರತಿಯೊಂದು ಪಾದ ಪ್ರಾಸ, ಯತಿ ಮತ್ತು ಗಣಗಳ ನಿಯಮದಿಂದ ಕೂಡಿರುತ್ತದೆ. ಆದುದರಿಂದ ಪದ್ಯವನ್ನು ರಚಿಸಲು ಬೇಕಾದ ನಿರ್ದಿಷ್ಟ ಪಾದಗಳ ಬಗ್ಗೆ ಮತ್ತು ಪ್ರತಿ ಪಾದದಲ್ಲಿ ಇರಬೇಕಾದ ಪ್ರಾಸ, ಯತಿ, ಗಣಗಳ ಬಗ್ಗೆ ತಿಳಿಸುವ ಶಾಸ್ತ್ರವೇ ಛಂದಸ್ಸು.

ಪ್ರಾಸ: ಗುರು ಹಿರಿಯರ ಅರಿಯದವನ ಅರಿವದೇತಕೆ

ಪರ ಹಿತಾರ್ಥಕಿಲ್ಲದವನ ಶರೀರವೇತಕೆ

ಹರಿಯ ಪೂಜೆ ಮಾಡದವನ ಜನುಮವೇತಕೆ

ಸೇರಿದವರ ಹೊರೆಯದಂಥ ದೊರೆಯು ಏತಕೆ

ಈ ಪದ್ಯವನ್ನು ಗಮನಿಸಿದಾಗ ಪ್ರತಿ ಸಾಲಿನ ಎರಡನೆಯ ಅಕ್ಷರದಲ್ಲಿರುವ ವ್ಯಂಜನಾಕ್ಷರ ಒಂದೇ ಆಗಿದೆ. ಅದೇ ರೀತಿ ಪ್ರತಿ ಸಾಲಿನ ಕೊನೆಯ ವ್ಯಂಜನವೂ ಒಂದೇ ಆಗಿದೆ. ಹೀಗೆ -ಪದ್ಯದ ಪ್ರತಿಯೊಂದು ಪಾದದ ಎರಡನೆಯ ಅಕ್ಷರದಲ್ಲಿ ಅಥವಾ ಪ್ರತಿಸಾಲಿನ ಕೊನೆಯ ಅಕ್ಷರದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದೇ ಪ್ರಾಸ.

ಪ್ರತಿಸಾಲಿನ ಎರಡನೆಯ ಅಕ್ಷರ ಪ್ರಾಸವಾಗಿದ್ದರೆ ಆದಿಪ್ರಾಸ ಎಂತಲೂ ಅಂತ್ಯದಲ್ಲಿ ಬರುವ ಪ್ರಾಸವನ್ನು ಅಂತ್ಯಪ್ರಾಸ ಎಂತಲೂ (ಹೆಚ್ಚಾಗಿ ರಗಳೆ ಛಂದಸ್ಸಿನಲ್ಲಿ ಕಾಣಬಹುದು) ಮಧ್ಯದಲ್ಲಿ ಬರುವ ಪ್ರಾಸವನ್ನು ಒಳಪ್ರಾಸ ಅಥವಾ ಮಧ್ಯಪ್ರಾಸ ಎಂತಲೂ ಕರೆಯುವರು.

ಯತಿ: ಪದ್ಯವನ್ನು ವಾಚಿಸುವಾಗ ಅರ್ಥಕ್ಕೆ ಲೋಪವಾಗದಂತೆ ನಿಲ್ಲಿಸುವ ಸ್ಥಳವನ್ನು ಯತಿ ಎನ್ನುವರು. ಯತಿ ಎಂಬುದು ಸಂಸ್ಕೃತ ಕಾವ್ಯಗಳಲ್ಲಿ ಬಳಕೆಯಾದಷ್ಟು ಕನ್ನಡದಲ್ಲಿ ಬಳಕೆಯಾಗಿಲ್ಲ.

ಗಣ: ಗಣ ಎಂದರೆ ಗುಂಪು ಎಂದರ್ಥ. ಪದ್ಯದ ಪ್ರತಿಸಾಲಿನ ಅಕ್ಷರ ಅಥವಾ ಮಾತ್ರೆ ಅಥವಾ ಅಂಶಗಳ ಗುಂಪೇ ಗಣ. ಮಾತ್ರೆಗಳ ಲೆಕ್ಕಾಚಾರದಿಂದ ಗುಂಪು ಮಾಡಿದರೆ ಮಾತ್ರಾಗಣ ಎಂತಲೂ ಅಕ್ಷರಗಳ ಲೆಕ್ಕಾಚಾರದಿಂದ ಗುಂಪು ಮಾಡಿದರೆ ಅಕ್ಷರಗಣ ಎಂತಲೂ ಅಂಶಗಳ ಆಧಾರದಿಂದ ಗುಂಪು ಮಾಡಿದರೆ ಅಂಶಗಣ ಎಂತಲೂ ಕರೆಯುವರು.

ಅಭ್ಯಾಸ ಚಟುವಟಿಕೆ

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಛಂದಸ್ಸು ಎಂದರೇನು?
2. ಪ್ರಾಸ ಎಂದರೇನು? ಅದರ ವಿಧಗಳಾವುವು?
3. ಗಣ ಎಂದರೇನು? ವಿವರಿಸಿ.

ಪಠ್ಯಾಧಾರಿತ ಚಟುವಟಿಕೆ

I. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.

1. ಪುಟ್ಟ ಮಗುವೊಂದು ________ ಮಗು ತಿರುಗಿ. (ನಾಲ್ಕು ಸಾಲು)

ಪೂರಕ ಓದು:

ಕೆ. ಎಸ್. ನ. ಮತ್ತು ಇತರ ಕವಿಗಳ ವಾತ್ಸಲ್ಯಗೀತೆಗಳನ್ನು ಸಂಗ್ರಹಿಸಿ ಓದಿರಿ.

3. ಗೆಳೆತನ- ಚೆನ್ನವೀರ ಕಣವಿ


ಪ್ರವೇಶ:

ಆಧುನಿಕ ಕಾವ್ಯದಲ್ಲಿ ಕವಿಯ ದೃಷ್ಟಿಕೋನ ಬಹಳ ವಿಸ್ತಾರವನ್ನು ಪಡೆದುಕೊಂಡಿದೆ. ಕವಿ ಸಾಹಿತ್ಯಕ ಕಟ್ಟುಪಾಡುಗಳಿಂದ ಹೊರಬಂದು ಸ್ವಚ್ಛಂದ ಹರಿವಿನ ಪ್ರವಾಹದಲ್ಲಿ ಕಂಡಿದ್ದೆಲ್ಲವನ್ನು 'ನವನವೋನ್ಮೇಷ ಶಾಲಿನಿ' ಯನ್ನಾಗಿಸಿ ಹೊಸ ಹುಟ್ಟಿಗೆ ಕಾರಣನಾಗಿದ್ದಾನೆ. ಈ ಕಾವ್ಯ ಪರಂಪರೆಯಲ್ಲಿ ಬಂದ ಕವಿಗಳಲ್ಲಿ ಚನ್ನವೀರ ಕಣವಿಯವರು ಒಬ್ಬರು.

ಇಂದು ಇಡೀ ಜಗತ್ತು ಭಯ, ಆತಂಕ, ಭಯೋತ್ಪಾದನೆಯ ಕರಿನೆರಳಿಗೆ ಸಿಲುಕಿ ನರಳುತ್ತಿದೆ. ವಿಶ್ವವನ್ನೆಲ್ಲ ಒಗ್ಗೂಡಿಸಲು ಇರುವ ಏಕಮಾತ್ರ ಸಾಧನ ಸ್ನೇಹ ಸಂಬಂಧಗಳು ಮಾತ್ರ. ಗೆಳೆತನವು ಪ್ರತಿಯೊಬ್ಬ ಮಾನವನ ಹೃದಯದ ಮಿಡಿತವಾಗಿದೆ. ಜನ್ಮನೀಡಿದ ತಂದೆ-ತಾಯಿಯರನ್ನು ಮೀರಿಸಿದ ಬಾಂಧವ್ಯ ಗೆಳತನದ್ದು. ಇದಕ್ಕೆ ಪುರಾಣ ಇತಿಹಾಸಗಳ ಹಿನ್ನಲೆಯಿದೆ. ಕೃಷ್ಣ-ಸುಧಾಮ, ಕರ್ಣದುರ್ಯೋಧನ, ಚಂದನದಾಸ-ಅಮಾತ್ಯ ರಾಕ್ಷಸರವರ ನಿದರ್ಶನಗಳು ಪುರಾಣ ಇತಿಹಾಸದ್ದು ಹಾಗೂ ವೈಯಕ್ತಿಕ ಬದುಕಿನ ಪ್ರತಿಬಿಂಬಗಳಾಗಿವೆ. ಗೆಳತನಕ್ಕೆ ಮೇಲು-ಕೀಳುಗಳಾಗಲಿ, ಹೆಣ್ಣು ಗಂಡೆಂಬ ತಾರತಮ್ಯವಾಗಲಿ ಇಲ್ಲ. ಸ್ನೇಹ-ಬಾಂಧವ್ಯಗಳು ವೈಯಕ್ತಿಕ ನೆಲೆಗಟ್ಟನ್ನು ಮೀರಿ ವಿಶ್ವವನ್ನೇ ಒಗ್ಗೂಡಿಸುವ ಏಕಮಂತ್ರವಾಗಿದೆ.

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ,
ತಣ್ಣೆಳಲ ತಂಪಿನಲಿ ತಂಗಿರುವೆನು;
ಜೀವನದನಂತ ದುರ್ಭರ ಬವಣೆ ನೋವುಗಳ,
ಕಾವುಗಳ ಮೌನದಲಿ ನುಂಗಿರುವೆನು,
ಗೆಳೆತನವೆ ಇಹಲೋಕಕಿರುವ ಅಮೃತ
ಅದನುಳಿದರೇನಿಹುದು-ಜೀವನ್ಮೃತ!

ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ,
ಮೇಲು ಕೀಳುಗಳೆಂಬ ಭೇದವಿಲ್ಲ,
ಅಹಮಿಕೆಯ ನೆವಮಿಲ್ಲ ದ್ವೇಷ ಗುಣಮಣಮಿಲ್ಲ,
ಸಣ್ಣತನ ಸಂಕೋಚ ಮೊದಲಿಗಿಲ್ಲ,
ಮನವು ಬಾನಗಲ, ಎದೆ ತಿಳಿಗೊಳದೊಲು
ಭಾವ ಶುದ್ಧ ಸ್ಫಟಿಕ-ಬೆಳದಿಂಗಳು!



ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆನುಡಿ ಕೇಳಿರುವೆನು.
ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡ ಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

ಹೇಗೊ ಹೇಗೋ ಹೆಗಲುಗೊಟ್ಟು ಬಂದಿಹ ಕೂರ್ಪು
ಆಗು ಹೋಗುಗಳಿಂಗೆ ಬಾಗದಂತೆ,
ಸುಖಕೆ ಸಂತಸಬಟ್ಟು ದುಃಖದಲಿ ಸಹಭಾಗಿ-
ಯಾಗೆ ಜೀವನ ರಸದ ಪಾಕದಂತೆ-
ಸರಸವಿರಸವನೆಲ್ಲ ಅಪ್ಪುಕಯ್ದು
ಬಾಳುವರು ಗಂಧದೊಲು ಜೀವ ತೆಯ್ದು!

ಕೃತಿಕಾರರ ಪರಿಚಯ



ಕನ್ನಡದ ಪ್ರಮುಖ ಕವಿಗಳಲ್ಲಿ ಚೆನ್ನವೀರ ಕಣವಿ (1928) ಒಬ್ಬರು. ಗದಗ ಜಿಲ್ಲೆಯ ಹೊಂಬಳದವರು. ನವೋದಯ ಮತ್ತು ನವ್ಯ ಮಾರ್ಗಗಳ ಸಮನ್ವಯ ಸಾಧಿಸಿದ ಕವಿಯೆಂದೇ ಪ್ರಸಿದ್ಧರು. ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣೆ ಮತ್ತು ವ್ಯಾಸಂಗ ವಿಸ್ತರಣ ವಿಭಾಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

ಆಕಾಶಬುಟ್ಟಿ, ಭಾವಜೀವಿ, ಮಧುಚಂದ್ರ, ದೀಪಧಾರಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಕಾವ್ಯಾಕ್ಷಿ, ಚಿರಂತನ ದಾಹ ಇವರ ಪ್ರಮುಖ ಕವನ ಸಂಕಲನಗಳು. ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, 1981 ರಲ್ಲಿ ಜೀವಧ್ವನಿ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿವೆ. 1996 ರಲ್ಲಿ ಹಾಸನದಲ್ಲಿ ನಡೆದ 65 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಗೆಳೆತನ ಕವನವನ್ನು ಚೆನ್ನವೀರ ಕಣವಿ ಅವರ ಆಕಾಶಬುಟ್ಟಿ ಕವನ ಸಂಕಲನ (ಪುಟ 35-36) ದಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

ಆಶಯ ಭಾವ

ಕವನದಲ್ಲಿ ಗೆಳೆತನ, ಅದರ ಸವಿ, ಮಹತ್ವ ಹಾಗೂ ಅನ್ಯೋನ್ಯತೆಯ ಬಗ್ಗೆ ತಾತ್ವಿಕ ನೆಲೆಯಲ್ಲಿ ಪ್ರಸ್ತಾಪಿಸಿದ್ದಾರೆ. ಗೆಳೆತನಕ್ಕೆ ಪೌರಾಣಿಕ, ಐತಿಹಾಸಿಕ ಹಾಗೂ ಸಮಕಾಲೀನ ಬದುಕಿನಲ್ಲಿ ಮಿಗಿಲಾದ ಸ್ಥಾನವಿರುವುದನ್ನು ತಿಳಿಸಿಕೊಟ್ಟಿದ್ದಾರೆ. ಆಧುನಿಕ ಪ್ರಪಂಚದಲ್ಲಿ ಗೆಳೆತನ ವೈಯಕ್ತಿಕ ನೆಲೆಯಿಂದ ವಿಶ್ವಸಾಮರಸ್ಯದ ನೆಲೆಗೆ ಧಾವಿಸುತ್ತಿರುವ ಸಂದರ್ಭದಲ್ಲಿ ಈ ಕವಿತೆ ಮಹತ್ವವನ್ನು ಪಡೆದಿದೆ. ಇದೇ ಕವಿತೆಯ ಆಂತರ್ಯಭಾವ.

ಪದಗಳ ಅರ್ಥ

ಅಪ್ಪುಕಯ್- ಒಪ್ಪಿಕೊಳ್ಳು, ಸ್ವೀಕರಿಸ; ಅಹಮಿಕೆ- ಅಹಂಕಾರ; ಇಹಲೋಕ- ಭೂಲೋಕ; ಕೂರ್ಪು- ಒಲವು, ಪ್ರೀತಿ; ಚಂಚಲತೆ- ಸ್ಥಿರವಲ್ಲದ; ಜೀವನ್ಮೃತ-ಬದುಕಿದ್ದೂ ಸತ್ತಂತಿರುವ; ತಂಗು- ಇಳಿದುಕೋ, ಬೀಡುಬಿಡು; ದುರ್ಭರ- ತಾಳಲಾಗದ; ದೋಷ- ತಪ್ಪು, ಕುಂದುಕೊರತೆ; ನುಡಿ- ಮಾತು; ನೆವ- ಕಾರಣ; ಪಸರಿಸು- ಹರಡು, ವಿಸ್ತರಿಸು;ಬವಣೆ- ಕಷ್ಟ; ಬಾಗು- ಮಣಿ, ಬಗ್ಗು, ಶರಣಾಗು; ಮಿಗಿಲು- ಶ್ರೇಷ್ಠ; ರಸಪಾಕ- ರುಚಿಯಾದ ಅಡುಗೆ; ವಂಚನೆ- ಮೋಸ; ಹದ- ಪಕ್ವತೆ, ಸರಿಯಾದ ಸ್ಥಿತಿ.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಕವಿ ಎಲ್ಲಿ ತಂಗಿದ್ದಾರೆ?
2. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ?
3. ಗೆಳೆತನದ ಮನಸ್ಸಿನ ಭಾವನೆ ಹೇಗಿದೆ?
4. ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ?
2. ಗೆಳೆತನದ ಶುಚಿರುಚಿ ಎಂಥದ್ದು?
3. ಜೀವನ ರಸಪಾಕವಾಗುವುದು ಹೇಗೆ?

III. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು-ಐದು ವಾಕ್ಯಗಳಲ್ಲಿ ಉತ್ತರಿಸಿ.

1. ಗೆಳೆತನ ಇಹಲೋಕಕಿರುವ ಅಮೃತ ಹೇಗೆ? ತಿಳಿಸಿ.
2. ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ? ವಿವರಿಸಿ
3. ಗೆಳೆಯರು ಹೇಗೆ ಬಾಳುತ್ತಾರೆ?

IV. ಕೊಟ್ಟಿರುವ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. ಗೆಳೆತನದ ಮಹತ್ವವನ್ನು ಕಣವಿ ಅವರು ಹೇಗೆ ತಿಳಿಸಿದ್ದಾರೆ?

V. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. “ಅದನುಳಿದರೇನಿಹುದ- ಜೀವನ್ಮೃತ!”
2. “ಭಾವ ಶುದ್ಧ ಸ್ಫಟಿಕ- ಬೆಳದಿಂಗಳು!”

3. “ಕಂಡ ಕಂಡವರೇನು ಬಲ್ಲರಿದನು”
4. “ಬಾಳುವರು ಗಂಧದೊಲು ಜೀವ ತೆಯ್ದು!”

VI. ಗುಂಪಿಗೆ ಸೇರದ ಪದವನ್ನು ಗುರುತಿಸಿ.

1. ಹೆಗಲುಗೊಟ್ಟು, ಸಂತಸಬಟ್ಟು, ಉಂಡವನು, ತಿಳಿಗೊಳ
2. ಲೋಕ, ಅಮೃತ, ಎದೆ, ಸಾಹಸ
3. ಭಾವಜೀವಿ, ಕಾವ್ಯಾಕ್ಷಿ, ದೀಪಧಾರಿ, ಜೀವಧ್ವನಿ
4. ಬಾನು, ಆಕಾಶ, ಭಾನು, ಗಗನ

ಪಠ್ಯಾಧಾರಿತ ಚಟುವಟಿಕೆ

ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.

1. ಉಪ್ಪಿಗಿಂತಲು ರುಚಿಯು ________ ಇದರ ಹದನು (ಆರು ಸಾಲು)

ಪೂರಕ ಓದು:

ಭಾರತೀಯ ವಿದ್ಯಾಭವನದ ಭಾರತ ಭಾರತಿ ಪುಸ್ತಕಮಾಲೆಯ ಕೃಷ್ಣ-ಕುಚೇಲರ ಸ್ನೇಹ ಕತೆಯನ್ನು ಓದಿ.

18. 4. ಭರವಸೆ- ಬಿ. ಟಿ. ಲಲಿತಾನಾಯಕ್

ಪ್ರವೇಶ: ಆಧುನಿಕ ಕನ್ನಡ ಕಾವ್ಯ ಮಹತ್ವದ ಘಟ್ಟಗಳಲ್ಲಿ ದಲಿತ-ಬಂಡಾಯ ಸಾಹಿತ್ಯ ಚಳುವಳಿಯೂ ಒಂದು. ಈ ಸಾಹಿತ್ಯವು ಚಳುವಳಿಯ ಅರ್ಥದಲ್ಲಿ ಅನ್ವರ್ಥವಾಗಿ ರೂಪುಗೊಂಡಿದ್ದು, ಏಕಕಾಲದಲ್ಲಿ ಸಾಹಿತ್ಯ ಮತ್ತು ಸಂಘಟನೆಯ ಸ್ವರೂಪವನ್ನು ತಾಳಿ ಮಹತ್ವದ ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಸಮಾಜದಲ್ಲಿ ಶೋಷಿತರ ಪರವಾದ ನಿಲುವುಗಳನ್ನು ಬಂಡಾಯ ಸಾಹಿತ್ಯದಲ್ಲಿ ಕಾಣಬಹುದು. ಈ ಸಾಹಿತ್ಯವು ಸಾಮಾಜಿಕ ಅಸಮಾನತೆ, ಶೋಷಣೆಯ ಪ್ರತಿಭಟನೆಯ ವಿಷಯವನ್ನು ಒಳಗೊಂಡಿದೆ. ಶೋಷಣೆ ಎನ್ನುವುದು ಕೇವಲ ಮನುಕುಲಕ್ಕೆ ಮಾತ್ರ ಸೀಮಿತವಾಗಿರದೆ ಮಾನವರಿಂದ ಪ್ರಕೃತಿಯ ಮೇಲಾಗುವ ದೌರ್ಜನ್ಯ, ಇದರಿಂದಾಗುವ ಪರಿಣಾಮಗಳ ಬಗೆಯೂ ಸಹ ಮಾರ್ಮಿಕವಾಗಿ ಈ ಸಾಹಿತ್ಯ ಪ್ರಕಾರದಲ್ಲಿ ಚಿತ್ರಿತವಾಗುತ್ತಿದೆ.

ಪ್ರಕೃತ ಕವನದಲ್ಲಿ ಕೃತಕತೆಯ ಜಾಲಕ್ಕೆ ಸಿಲುಕಿ ಸ್ವಾರ್ಥಿಯಾದ ಮಾನವನು ನಿಸರ್ಗದ ನೈಜತೆಗೆ ಹೇಗೆ ವಿನಾಶಕಾರಿಯಾಗಿದ್ದಾನೆ ಎಂಬ ಪ್ರತಿಭಟನೆಯನ್ನು ವ್ಯಕ್ತಪಡಿಸಲಾಗಿದೆ. ನಿತ್ಯನೂತನೆಯಾದ ಈ ಭೂಮಿ ಬರಡಲ್ಲ, ಇವೆಲ್ಲವನ್ನು ಮೀರಿ ತನ್ನ ಅಮೃತತ್ವದ ಗುಣದ ಮೂಲಕ ಪ್ರೇಮದ ಒರತೆಯನ್ನು ಹರಿಸಿ ಜೀವ ಸಂಜೀವಿನಿಯಾಗುವ ಗುಣವಿದೆ ಎಂಬ ಭರವಸೆಯನ್ನು ಇಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.



ಅರಳಿ ಮಲ್ಲಿಗೆ ಮೊಗ್ಗು ಸುತ್ತ ಗಂಧವ ಚೆಲ್ಲಿ
ವಸಂತನಾಗಮನ ಸಾರಿದಾಗ
ಮಾಮರದ ರೆಂಬೆಯಲಿ ಕುಳಿತಿದ್ದ ಕೋಗಿಲೆಯು
ಬೆರೆಸಿತದರೊಳಗೊಂದು ಕುಕಿಲರಾಗ

ಬಳುಕಾಡಿ ಮಲ್ಲಿಗೆಯು ಕೋಗಿಲೆಯ ಕರೆದಿತ್ತು;
“ಪ್ರಿಯ ಗೆಳತಿ ಹಾಡೊಂದ ಹಾಡೇ
ಬಾನಸಂಚಾರಿಣಿಯೆ ಅನುಭವದ ಹೊನ್ನಣಿಯೆ

ಲೋಕವಾರ್ತೆಯದೇನು ಅರುಹೆ"

"ಏನೆಂದು ಹಾಡಲಿ ನಾನು ಏನ ಅರುಹಲಿ ಚೆಲುವೆ
ಬಣ್ಣ ಬೆಡಗಿನ ಮಾತನರಿಯೆ
ಕೃತಕತೆಯ ಜಾಲದಲಿ ಸಿಲುಕಿಕೊಂಡಿದೆ ಜಗವು
ನೈಜತೆಗೆ ಇಲ್ಲ ಬೆಲೆಯು

ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದ ಮನುಜ
ಸ್ವಾರ್ಥದಲಿ ಮುಳುಗಿಹನು ಪೂರ
ಭಿತ್ತಿಯಲಿ ಬಿಡಿಸುವನು ಗಿಡಬಳ್ಳಿ ಚಿತ್ತಾರ
ಮರೆತೇಬಿಟ್ಟಿಹನು ಮಣ್ಣ ಸೊಗಡ

ಮಾವು ಮಲ್ಲಿಗೆ ಭ್ರಮರ ಮತ್ತದರ ಝೇಂಕಾರ
ಕವಿ ಕಲ್ಪನೆಯ ಗಾನಲಹರಿ
ನಲುಗದಿರು ಇದ ಕೇಳಿ ಬರಡಲ್ಲ ಈ ಬುವಿಯು
ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ"

ಕಾರರ ಪರಿಚಯ



ಶ್ರೀಮತಿ ಬಿ. ಟಿ. ಲಲಿತಾನಾಯಕ್ ಅವರು ಚಿಕ್ಕಮಗಳೂರು ಜಿಲ್ಲೆಯ ತಂಗಲಿ ತಾಂಡ್ಯದಲ್ಲಿ 04-04-1945ರಲ್ಲಿ ಜನಿಸಿದರು. ಬಂಡಾಯ ಹಾಗೂ ಸ್ತ್ರೀ ಸಂವೇದನೆಯ ಬರೆಹಗಳ ಮೂಲಕ ಖ್ಯಾತರಾದ ಇವರು ಹಲವಾರು ಮೌಲಿಕ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಚಂದ್ರ ಪರಾಭವ, ಭಟ್ಟನ ಕನಸು, ನೆಲೆಬೆಲೆ, ನಂ ರೂಪ್ಲಿ, ಗತಿ, ಹಬ್ಬ ಮತ್ತು ಬಲಿ, ಇದೇ ಕೂಗು ಮತ್ತೆ ಮತ್ತೆ, ದೇವದುರ್ಗ ತಾಲೂಕು ದರ್ಶನ, ಒಡಲ ಬೇಗೆ

ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳ ಕತೆ, ರೇಡಿಯೋ ನಾಟಕಗಳನ್ನೂ ರಚಿಸಿರುವರು. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯೆಯಾಗಿಯೂ ಕರ್ನಾಟಕ ಸರಕಾರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿಯೂ ಕಾರ್ಯ ನಿರ್ವಹಿಸಿರುವರು.

ಆಶಯ ಭಾವ

ಜಗತ್ತಿನ ತಲ್ಲಣಗಳನ್ನು ಮಲ್ಲಿಗೆ ಮತ್ತು ಕೋಗಿಲೆಯ ಸಂಭಾಷಣೆಯ ಮೂಲಕ ವ್ಯಕ್ತಪಡಿಸಿದೆ ಕವನ ಭರವಸೆ. ಲೋಕವಾರ್ತೆಯನ್ನು ನುಡಿಯುವ ಕೋಗಿಲೆಯ ಧ್ವನಿಯಲ್ಲಿರುವ ನಿರಾಸೆ, ಅವಾಸ್ತವಿಕ ಬದುಕಿನ ಬಗೆಗಿನ ವಿಷಾದ ಈ ಕವನದ ಒಡಲು. ಇಲ್ಲಿ ಪ್ರಕೃತಿಯ ನೈಜತೆಗೆ ಮನುಷ್ಯನ ಸ್ವಾರ್ಥ ಹೇಗೆ ದಕ್ಕೆಯಾಗುತ್ತಿದೆ ಎಂಬ ಆತಂಕವಿದೆ. ಈ ಮಣ್ಣಿನ ಗುಣವನ್ನು ಬಿಟ್ಟು ಭ್ರಮೆಯಲ್ಲಿ ಮುಳುಗಿರುವ ವ್ಯಕ್ತಿಯ ಬಗ್ಗೆ ಇಲ್ಲಿ ಸುಪ್ತ ಪ್ರತಿಭಟನೆ ಇದೆ. ಆದರೆ ಅದೇ ಪ್ರತಿಭಟನೆಯ ಕೊನೆಯಲ್ಲಿ ಆಶಾವಾದದ ಸಾಂತ್ವನವಿದೆ. ಈ ಭೂಮಿ ಬರಡಲ್ಲ. ಅಮರ ಪ್ರೇಮದ ಒರತೆ ಎನ್ನುವ ಮೂಲಕ ಭೂಮಿಯ ಸಂಜೀವಿನೀ ಗುಣವನ್ನು ಪ್ರಕೃತ ಕವಿತೆಯಲ್ಲಿ ಎತ್ತಿ ಹಿಡಿಯಲಾಗಿದೆ. ಅದೇ ಕವಿತೆಯ ಆಶಯ ದನಿ.

ಪ್ರಸ್ತುತ ಕವನವನ್ನು **ಬಿ. ಟಿ. ಲಲಿತಾ ನಾಯಕ್** ಅವರ ಬಿದಿರು ಮೆಳೆ ಕಂಟಿಯಲಿ ಕವನ ಸಂಕಲನ (ಪುಟ 121-22) ದಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

ಪದಗಳ ಅರ್ಥ

ಅರುಹು- ತಿಳಿಸು, ಹೇಳು; ಕುಕಿಲು- ಕೋಗಿಲೆಯ ಕೂಗು; ಕೃತಕತೆ- ಅಸಹಜತೆ ಮೋಸ; ಚಿತ್ತಾರ- ಚಿತ್ರ; ಜಾಲ- ಗುಂಪು, ಸಮೂಹ; ಪೂರ- ಪೂರ್ತಿಯಾಗಿ; ಬರಡು- ನಿಸ್ಸಾರ; ಬಾನ ಸಂಚಾರಿಣಿ- ಆಕಾಶದಲ್ಲಿ ಸಂಚರಿಸುವ; ಭಿತ್ತಿ- ಗೋಡೆ; ಭ್ರಮರ-ದುಂಬಿ; ಮಾಮರ- ಮಾವಿನಮರ; ಮೊಗ್ಗು- ಅರಳದೇ ಇರುವ ಹೂ; ಸೊಗಡು- ಕಂಪು, ವಾಸನೆ; ಹೊನ್ನಗಣಿ- ಚಿನ್ನದಗಣಿ

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಕೋಗಿಲೆ ಕುಕಿಲರಾಗವನ್ನು ಯಾವಾಗ ಬೆರೆಸಿತು?
2. ಮನುಷ್ಯ ಸ್ವಭಾವದ ಬಗ್ಗೆ ಕವಯಿತ್ರಿಯ ಅಭಿಪ್ರಾಯವೇನು?
3. ಕನ್ನಡ ಸಾರಸ್ವತ ಲೋಕಕ್ಕೆ ಬಿ. ಟಿ. ಲಲಿತಾನಾಯಕ್ ಅವರ ಕೊಡುಗೆ ಏನು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಮಲ್ಲಿಗೆ ಕೋಗಿಲೆಯನ್ನು ಕರೆದು ಏನು ಹೇಳಿತು?
2. ಮಲ್ಲಿಗೆಯ ಕೋರಿಕೆಗೆ ಕೋಗಿಲೆ ಪ್ರಕೃತಿಯ ಬಗ್ಗೆ ಏನೆಂದು ಉತ್ತರ ನೀಡಿತು?
3. ಕೋಗಿಲೆಯ ಆಶಾವಾದವೇನು?

III. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. ಮಲ್ಲಿಗೆ ಮತ್ತು ಕೋಗಿಲೆಯ ಸಂಭಾಷಣೆಯನ್ನು ಬರೆಯಿರಿ
2. ಕೋಗಿಲೆ ತಿಳಿಸಿದ ಲೋಕವಾರ್ತೆ ಏನು? ವಿವರಿಸಿ

IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಬೆರೆಸಿತದರೊಳಗೊಂದು ಕುಕಿಲರಾಗ"
2. "ನೈಜತೆಗೆ ಇಲ್ಲ ಬೆಲೆಯು"
3. "ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ"

V. ಹೊಂದಿಸಿ ಬರೆಯಿರಿ.

ಅ	**ಬ**
1. ಬಾನಸಂಚಾರಿಣಿ	a. ಝೇಂಕಾರ
2. ಭಿತ್ತಿ	b. ನೈಜತೆ
3. ಭ್ರಮರ	c. ಕವಿಕಲ್ಪನೆ
4. ಕೃತಕತೆ	d. ಕೋಗಿಲೆ
5. ಗಾನಲಹರಿ	e. ಗೋಡೆ
	f. ಸಿರಿಮುಡಿ

ಪೂರಕ ಓದು:

ಬಿ. ಟಿ. ಲಲಿತಾನಾಯಕ್ ಅವರ ಬಿದಿರುಮೆಳೆ ಕಂಟಿಯಲಿ ಕವನ ಸಂಕಲನದ ಇತರ ಕವಿತೆಗಳನ್ನು ಓದಿ.

5. ವಚನಾಮೃತ

ಪ್ರವೇಶ:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 12ನೆಯ ಶತಮಾನ ಅತ್ಯಮೂಲ್ಯವಾದುದು. ಪಾಂಡಿತ್ಯಯುಕ್ತವಾಗಿದ್ದ ಸಾಹಿತ್ಯ ಜನಸಾಮಾನ್ಯರ ದನಿಯಾಗಿ, ಶ್ರೀಸಾಮಾನ್ಯನ ಬದುಕು ಬವಣೆಯ ಪ್ರತಿನಿಧಿಯಾಗಿ ಸಾಮಾಜಿಕ, ಸಾಹಿತ್ಯಿಕ ಕ್ರಾಂತಿಯನ್ನುಂಟು ಮಾಡಿದ್ದು ವಚನಸಾಹಿತ್ಯ. ಶರಣರ ಈ ಸಾಹಿತ್ಯ ವಿಶ್ವಕ್ಕೆ ಮಾದರಿ ಮತ್ತು ಸಾಮಾಜಿಕ ಸಮಾನತೆಗೆ ಹಿಡಿದ ಕೈಗನ್ನಡಿಯಾಗಿದೆ. ‘ಅರಿತರೆ ಶರಣ ಮರೆತರೆ ಮಾನವ’ ಎಂಬುದು ಶರಣ ತತ್ವದ ಮಹಾವಾಕ್ಯ. ‘ಶ್ರೀಸಾಮಾನ್ಯರು ಮಹಾಜ್ಞಾನವನ್ನರಿತಾಗ ನಿತ್ಯ ಮುಕ್ತನಾಗುತ್ತಾನೆ’ ಎಂಬ ಶರಣರ ಮಾತುಗಳು, ವಚನ, ಸೂಳ್ನುಡಿಗಳು ಸಾಮಾನ್ಯರನ್ನು ದೈವತ್ವಕ್ಕೆ ಏರಿಸುತ್ತವೆ. ತಮ್ಮ ಕಾಯಕ ನಿಷ್ಠೆಯಮೂಲಕ ಸಾಮಾಜಿಕ ಜಾಗೃತಿಯನ್ನುಂಟುಮಾಡಲು ಗಂಡು ಹೆಣ್ಣೆಂಬ ಭೇದಭಾವವಿಲ್ಲದೆ, ಮೇಲುಕೀಳೆಂಬ ತಾರತಮ್ಯವಿಲ್ಲದೆ ಶಿವಶರಣರು ತಮ್ಮ ಇಷ್ಟದೇವರ ಹೆಸರನ್ನೇ ಅಂಕಿತವಾಗಿಸಿ ವಚನಗಳನ್ನು ರಚಿಸಿದ್ದಾರೆ. ಇಂತಹ ವಚನಗಳ ಅಮೃತವನ್ನುಣಿಸುವ, ಪರಿಚಯಿಸುವ ಉದ್ದೇಶದಿಂದ ಈ ವಚನಗಳನ್ನು ಅಳವಡಿಸಲಾಗಿದೆ.

ಕೃತಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ
ದ್ವಾಪರಯುಗದಲ್ಲಿ ಶ್ರೀಗುರುವು ಶಿಷ್ಯಂಗೆ ಝಂಕಿಸಿ ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ
ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ನಾ ಬೆರಗಾದೆನು. -**ಅಲ್ಲಮಪ್ರಭು**

ಕಾಯಕದಲ್ಲಿ ನಿರತನಾಡೆ
ಗುರುದರ್ಶನವಾದಡೂ ಮರೆಯಬೇಕು;
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು -**ಆಯ್ದಕ್ಕಿ ಮಾರಯ್ಯ**

ಕಾಗೆಯಮರಿ ಕೋಗಿಲೆಯಾಗಬಲ್ಲುದೆ?
ಆಡಿನಮರಿ ಆನೆಯಾಗಬಲ್ಲದೆ?
ಸೀಳ(ಳು) ನಾಯಿ ಸಿಂಹದ ಮರಿಯಾಗಬಲ್ಲುದೆ?
ಅರಿವು ಆಚಾರ ಸಮ್ಯಜ್ಞಾನವನರಿಯದೆ
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ. -**ಅಮುಗೆರಾಯಮ್ಮ**

ಮನವ ಗೆದ್ದೆಹನೆಂದು, ತನುವ ಕರಗಿಸಿ ಕಾಯವ ಮರುಗಿಸಿ,
ನಿದ್ರೆಯ ಕೆಡಿಸಿ ವಿದ್ಯೆಯ ಕಲಿತಿಹನೆಂಬ ಬುದ್ಧಿಹೀನರಿರಾ ನೀವು ಕೇಳಿರೋ
ನಮ್ಮ ಶರಣರು ಮನವನೆಂತು ಗೆದ್ದಿಹರೆಂದಡೆ
ಕಾಮ ಕ್ರೋಧವ ನೀಗಿ, ಲೋಭ ಮೋಹ ಮದಮತ್ಸರವ ಛೇದಿಸಿ,
ಆಸೆ ರೋಷವಳಿದು, ಜಗದ ಪಾಶವ ಬಿಟ್ಟು,
ಆ ಮರುಗಿಸುವ ಕಾಯಕವನೆ ಪ್ರಸಾದ ಕಾಯಕವ ಮಾಡಿ ಸಲಹಿದರು
ಕೆಡಿಸುವ ನಿದ್ರೆಯೆನೆ ಯೋಗ ಸಮಾಧಿಯ ಮಾಡಿ,
ಸುಖವನೇಡಿಸಿ ಜಗವನೆ ಗೆದ್ದ ಶರಣರ ಬುದ್ಧಿಹೀನರೆತ್ತ ಬಲ್ಲರೊ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ? -**ಶಿವಶರಣೆ ಲಿಂಗಮ್ಮ**

ಕೃತಿಕಾರರ ಪರಿಚಯ



ಅಲ್ಲಮಪ್ರಭು: ಅಲ್ಲಮಪ್ರಭು 12ನೇ ಶತಮಾನದ ಪ್ರಸಿದ್ಧ ಚಿಂತಕ, ತತ್ವಜ್ಞಾನಿ, ಶಿವಶರಣ ಮತ್ತು ವಚನಕಾರ. ಈತನು ಜನಿಸಿದ್ದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ. ಈತನ ತಂದೆ ನಿರಹಂಕಾರ ಮತ್ತು ತಾಯಿ ಸುಜ್ಞಾನಿ. ಈತ ಕಲ್ಯಾಣದಲ್ಲಿ ಬಸವಣ್ಣ ಸ್ಥಾಪಿಸಿದ 'ಶೂನ್ಯ ಪೀಠ'ದ ಅಧ್ಯಕ್ಷನಾಗಿ ಅನೇಕರಿಗೆ ಮಾರ್ಗದರ್ಶನ ನೀಡಿದವನು. ಅವನು ಒಬ್ಬ ಅನುಭಾವಿ. ಸತ್ಯಶೋಧನೆಯೇ ಅವನಜೀವನದ ಪರಮ

ಗುರಿಯಾಗಿತ್ತು. ಅವನ ವಚನಗಳು ಬೆರಗು ಮತ್ತು ಬೆಡಗಿನಿಂದ ಕೂಡಿವೆ. 'ಗುಹೇಶ್ವರಾ' ಎಂಬುದು ಈತನ ವಚನಗಳ ಅಂಕಿತ.

ಆಶಯ ಭಾವ

ತಂದೆ, ತಾಯಿ, ಗುರುಗಳಿಗೆ ದೈವತ್ವದ ಸ್ಥಾನ ಮಾನ ನೀಡಿರುವ ಸಂಸ್ಕೃತಿ ನಮ್ಮದು. ಗುರುವಿನ ಸ್ಥಾನ ಬಹಳ ಪವಿತ್ರವಾದದ್ದು. ಗುರುವಿಗೆ ಸೃಷ್ಟಿ, ಸ್ಥಿತಿ, ಲಯಕಾರಕರಾದ ಬ್ರಹ್ಮ, ವಿಷ್ಣು, ಮಹೇಶ್ವರರ ಸ್ಥಾನವನ್ನು ನೀಡಿ ಗೌರವಿಸಲಾಗಿದೆ. ಏಕೆಂದರೆ ಶಿಷ್ಯನಿಗೆ ಸಂಸ್ಕಾರ, ವಿದ್ಯೆ ವಿನಯ ಹಾಗೂ ಬದುಕಿನ ಮಾರ್ಗವನ್ನು ನೀಡುವವನು ಗುರು. ಪರಿವರ್ತನೆ ಜಗದ ನಿಯಮ. ಕಾಲಗತಿಯಲ್ಲಿ ಎಲ್ಲವೂ ಪರಿವರ್ತನೆಗೊಳಪಡುತ್ತದೆ ಎಂಬುದನ್ನು ಗುರುವಿನ ಸ್ಥಾನ ಹಾಗೂ ಶಿಷ್ಯನ ಕಲಿಕಾ ಪ್ರವೃತ್ತಿಗಳು ನಾಲ್ಕು ಯುಗಗಳಲ್ಲಿ ಹೇಗೆ ಪರಿವರ್ತನೆಯಾಗಿದೆ ಎಂಬುದನ್ನು ಮಾರ್ಮಿಕವಾಗಿ ಈ ವಚನದಲ್ಲಿ ಬಿಂಬಿತವಾಗಿದೆ.


ಆಯ್ದಕ್ಕಿ ಮಾರಯ್ಯ: ಈತನ ಕಾಲ ಕ್ರಿ. ಶ. ಸು 1160. ಶಿವಶರಣ ಹಾಗೂ ವಚನಕಾರ, ರಾಯಚೂರು ಜಿಲ್ಲೆಯ ಅಮರೇಶ್ವರದ ಆಯ್ದಕ್ಕಿ ಲಕ್ಕಮ್ಮನ ಪತಿ. ಆಯ್ದಕ್ಕಿಮಾರಯ್ಯ ಎಂದೇ ಪ್ರಸಿದ್ಧ. ಈವರೆಗೆ ಈತನ ಸುಮಾರು 32 ವಚನಗಳು ದೊರೆತಿವೆ. ಎಂಥ ಪರಿಸ್ಥಿತಿ ಎದುರಾದರು ಕಾಯಕವ ಬಿಡದೆ ಮಾಡಬೇಕು, ಕಾಯಕ ಮಾಡಿ ಬದುಕಬೇಕು, ಯಾಚನೆ ಮಾಡಬಾರದು ಹಾಗೂ ಕೂಡಿಡಬಾರದು ಎಂದು ಹೇಳುವ ಮೂಲಕ ಕಾಯಕಬದುಕಿನ ಮಹತ್ವವನ್ನು ಸಾರಿದ್ದಾರೆ. ಇಂತಹ ಆದರ್ಶವನ್ನು ಹೊಂದಿರುವ ಈತನ ಅಂಕಿತ 'ಅಮರೇಶ್ವರಲಿಂಗ' ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದುತಂದು ದಾಸೋಹ ಮಾಡುವುದೇ ಅವರ ಕಾಯಕವಾಗಿತ್ತು.



ಆಶಯ ಭಾವ

ಕಾಯಕವೇ ಕೈಲಾಸ ಎಂದು ಹೇಳುವ ಮೂಲಕ ಬಸವಣ್ಣ ಅವರು ಹೇಳಿದ ಕಾಯಕದ ಮಹತ್ವ ಆಯ್ದಕ್ಕಿಮಾರಯ್ಯ ಅವರ ವಚನಗಳಲ್ಲೂ ವ್ಯಕ್ತವಾಗಿದೆ. ಮನುಷ್ಯನಿಗೆ ಕಾಯಕವೇ ಮುಖ್ಯ. ಕಾಯಕದಲ್ಲೇ ಸರ್ವಸ್ವವನ್ನೂ ಕಾಣಬಹುದು. ಇದು ಶ್ರೇಷ್ಠ ಹಾಗೂ ಸಾರ್ವಕಾಲಿಕ ಸತ್ಯ. ಕರ್ತವ್ಯ ನಿಷ್ಠೆ ಮತ್ತು ಬದ್ಧತೆಯನ್ನು ಸಾರುವ ಈ ವಚನ ಇಂದಿಗೂ ಪ್ರಸ್ತುತ.

ಅಮುಗೆರಾಯಮ್ಮ: ಈಕೆಯ ಕಾಲ ಕ್ರಿ. ಶ. ಸುಮಾರು 1160. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಈಕೆ ಸೊನ್ನಲಿಗೆಯವಳು (ಈಗ ಸೊಲ್ಲಾಪುರ), ಪತಿ ಅಮುಗೆ ದೇವಯ್ಯ. ನೇಯ್ಗೆ ಇವರ ಕಾಯಕ. ಈಕೆಯ ಅಂಕಿತನಾಮ ‘ಅಮುಗೇಶ್ವರ’. ತಮ್ಮ ವೈಚಾರಿಕ ಪ್ರಖರತೆ ಹಾಗೂ ಸಾಮಾಜಿಕ ಕಳಕಳಿಯಿಂದ ಜೀವನವನ್ನು ವಿಭಿನ್ನ ದೃಷ್ಟಿಕೋನದಿಂದ ದರ್ಶಿಸಿ, ಚಿಂತನಗೈದು ವಚನ ರಚನೆಯ ಮಹಾಕಾಯಕವನ್ನು ರೂಢಿಸಿಕೊಂಡವರು. ಗಂಡು ಹೆಣ್ಣೆಂಬ ಸಾಂಪ್ರದಾಯಿಕ ವರ್ಗೀಕರಣದ ಚೌಕಟ್ಟಿನಿಂದ ಹೊರಬಂದು ಸಮಾನತೆಯ ತತ್ವದ ಆಧಾರದಿಂದ ತನ್ನ ಧೋರಣೆಯ ಛಾಪನ್ನು ವಚನಗಳಲ್ಲಿ ಮೂಡಿಸಿದ್ದಾಳೆ.




ಆಶಯ ಭಾವ

ಪ್ರಕೃತಿಯಲ್ಲಿರುವ ಪ್ರಾಣಿ ಪಕ್ಷಿಗಳಲ್ಲಿ ವಿಶೇಷ ಗುಣಗಳು ಸಹಜವಾಗಿರುತ್ತವೆ. ಆದರೆ ಮಾನ ಹೊಂದಿರುವ ವಿಶೇಷ ಗುಣವನ್ನು ಇತರ ಪ್ರಾಣಿ ಪಕ್ಷಿಗಳು ಅನುಕರಿಸಲು ಸಾಧ್ಯವಿಲ್ಲ ಆದರಿಂದಾಗಿ ಮಾನವ ಅರಿವು, ಆಚಾರ, ಸಮ್ಯಜ್ಞಾನ ಇವುಗಳಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದೆಂಬುದನ್ನು ಅಮುಗೆರಾಯಮ್ಮ ಈ ವಚನದ ಮೂಲಕ ಸ್ಪಷ್ಟಪಡಿಸಿದ್ದಾಳೆ.

ಶಿವಶರಣೆ ಲಿಂಗಮ್ಮ:

ಈಕೆಯ ಕಾಲ ಕ್ರಿ. ಶ. ಸುಮಾರು 1160. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಕ್ಷೌರಿಕ ವೃತ್ತಿಯ ಹಡಪದ ಅಪ್ಪಣ್ಣನವರ ಧರ್ಮಪತ್ನಿ. ಈಕೆಯ ಅಂಕಿತನಾಮ 'ಅಪ್ಪಣ್ಣಪ್ರಿಯ ಚನ್ನಬಸವಣ್ಣ' ಎಂಬುದು. ವ್ಯಕ್ತಿಯ ಹುಟ್ಟಿಗೂ ಅವನ ಸಾಧಿಸುವ ಸಾಧನೆಗೂ ಏನೇನು ಸಂಬಂಧವಿಲ್ಲ ಎಂಬುದನ್ನು ನಿರೂಪಿಸಿದವಳು. ಈಕೆಯ ವಚನಗಳಲ್ಲಿ ಬೋಧನೆಯ ಧಾಟಿ, ಕಂಡದರ್ಶನ, ಬೀರಿದ ಬೆಳಕು, ಏರಿದ ನಿಲುವು, ಸಾಧಕರಿಗೂ ಸಾಮಾನ್ಯರಿಗೂ ಶರಣರಿಗೂ ಇರುವ ವ್ಯತ್ಯಾಸವನ್ನು ತಿಳಿಸಿದ್ದಾಳೆ. ಎಲ್ಲೆಡೆಗೂ ಹರಿದಾಡುವ ಮನಸ್ಸಿನ್ನು ಸ್ವೇಚ್ಛೆಯಾಗಿ ಹರಿಯಲು ಬಿಡದೆ ಬಯಲಲ್ಲಿ ಓಡಾಡುವ ಶರಣರ ಪಾದದಲ್ಲಿ ಬೆರೆಯಬೇಕೆನ್ನುವವಳು.



ಆಶಯ ಭಾವ

ವಿದ್ಯೆ ಸಾಧಕನ ಸೊತ್ತು. ವಿದ್ಯೆವಿಹೀನನ ಬದುಕು ನಿರರ್ಥಕವೆಂಬುದು ಸರ್ವೇಸಾಮಾನ್ಯವಾದ ಅಭಿಪ್ರಾಯ. ಆದರೆ ವಿದ್ಯೆಯನ್ನು ಗಳಿಸಲು ನಡೆಸುವ ಕಸರತ್ತು, ಪರಿಶ್ರಮಗಳು, ವಿದ್ಯೆ ವಿನಯವನ್ನು ತಂದು ಕೊಡದೆ ಸಂಪಾದನೆಗೆ ದಾರಿಯಾಗಿರುವುದನ್ನು ನೆನೆದರೆ ವಿಷಾದವಾಗುತ್ತದೆ. ಆದರೆ ಅಂದೇ ನಮ್ಮ ಶಿವಶರಣರು ಜೀವನವೆಂಬ ಪಾಠಶಾಲೆಯಲ್ಲಿ ಅರಿಷಡ್ವರ್ಗಗಳನ್ನು ನಿಗ್ರಹಿಸಿ ತಮ್ಮ ತಮ್ಮ ಕಾಯದ ಮೂಲಕ ನಿತ್ಯ ಸುಖಿಗಳಾಗಿ ಜೀವನವನ್ನು ಸಾರ್ಥಕಗೊಳಿಸಿಕೊಂಡ ರೀತಿಯನ್ನು ತಮ್ಮ ಈ ವಚನದಲ್ಲಿ ಮಾರ್ಮಿಕವಾಗಿ ತಿಳಿಸಲಾಗಿದೆ.

ಪ್ರಸ್ತುತ ಆರಿಸಿ ನಿಗದಿ ಪಡಿಸಿರುವ ವಚನಗಳನ್ನು ಎಂ. ಎಂ. ಕಲಬುರ್ಗಿ ಅವರು ಸಂಪಾದಿಸಿ ಪ್ರಕಟಿಸಿರುವ 'ಸಮಗ್ರ ವಚನ ಸಂಪುಟ' ಗಳಿಂದ ಆಯ್ದುಕೊಂಡಿದೆ.

ಪದಗಳ ಅರ್ಥ

1. ಬಡಿದು- ಹೊಡೆತಕೊಡು, ಹೊಡೆ; ಪ್ರಸಾದ- ಅನುಗ್ರಹ, ಹರ್ಷ; ಝುಂಕಿಸು- ಗದರಿಸು, ಬೆದರಿಸು; ವಂದಿಸು- ನಮಸ್ಕರಿಸು;ಬೆರಗು- ಆಶ್ಚರ್ಯ, ಅಚ್ಚರಿ; ಕಟ್ಟಳೆ- ಪದ್ಧತಿ,

ನಿಯಮ, ಅಪ್ಪಣೆ;

2. ಕಾಯಕ- ಕಾರ್ಯ, ಕೆಲಸ, ಉದ್ಯೋಗ; ಜಂಗಮ- ಚಲನಶೀಲ, ಲೋಕಸಂಚಾರಿ, ವೀರಶೈವ ಧರ್ಮಾನುಸಾರ ವಿರಕ್ತ. ಹಂಗು- ಋಣ;

3. ಅರಿವು- ತಿಳಿವಳಿಕೆ, ಜ್ಞಾನ; ಸೀಳುನಾಯಿ- ಕಾಡುನಾಯಿ; ಆಚಾರ- ಒಳ್ಳೆಯ ನಡತೆ; ನಾಮ- ಹೆಸರು; ಗಾವಿಲ- ಹೆಡ್ಡ, ಗಾಂಪ;
4. ತನು- ಕಾಯ, ದೇಹ, ಶರೀರ; ಮರುಗಿಸು- ದುಃಖಪಡು; ಕಾಮ- ಬಯಕೆ; ಕ್ರೋಧ- ಸಿಟ್ಟು, ಕೋಪ; ಲೋಭ- ಅತಿಯಾಸೆ; ಮೋಹ- ಮಮತೆ, ಭ್ರಾಂತಿ; ಮದ- ಗರ್ವ, ಸೊಕ್ಕು, ಅಮಲು; ಮತ್ಸರ- ಅಸೂಯೆ, ಹೊಟ್ಟೆಕಿಚ್ಚು; ಭೇದಿಸು- ಬೇರ್ಪಡಿಸು, ತುಂಡರಿಸು; ರೋಷ- ಸಿಟ್ಟು, ಕೋಪ; ಪಾಶ- ಬಂಧನ, ಕಟ್ಟುಪಾಡು; ಸಲಹು- ಕಾಪಾಡು, ರಕ್ಷಿಸು;

ಟಿಪ್ಪಣಿ

ಸಮ್ಯಜ್ಞಾನ: ಸುಜ್ಞಾನ, ಒಳ್ಳೆಯ ತಿಳುವಳಿಕೆ, ಸದಾಚಾರ, (ಜೈನಧರ್ಮದಲ್ಲಿ ರತ್ನತ್ರಯಗಳೆಂದು ಕರೆಯುವ ಸಮ್ಯಜ್ಞಾನ, ಸಮ್ಯಕ್‌ದರ್ಶನ ಹಾಗೂ ಸಮ್ಯಕ್ ಚಾರಿತ್ರಗಳಲ್ಲಿ ಒಂದು.)

ಜಂಗಮ: ವೀರಶೈವ ಧರ್ಮದ ಅಷ್ಟಾವರಣಗಳಲ್ಲಿ ಒಂದು. ಗುರು ಮತ್ತು ಲಿಂಗ್ ಈ ಎರಡರ ಅನುಭಾವ ಶಿವ ಸ್ವರೂಪಿಯೇ ಜಂಗಮ.

ಪ್ರಸಾದ: ವೀರಶೈವ ಧರ್ಮದ ಅಷ್ಟಾವರಣಗಳಲ್ಲಿ ಒಂದು. ಪೃಥ್ವಿ ತತ್ವದ ಶುದ್ಧಿಯನ್ನುಂಟು ಮಾಡುವುದೇ ಪ್ರಸಾದ.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಹೇಗೆ ಬುದ್ಧಿಯನ್ನು ಹೇಳಬೇಕಿದೆ?
2. ಕಾಯಕದಲಿ ನಿರತನಾದವನು ಯಾವುದನ್ನು ಮರೆಯಬೇಕು?

3. ಆಯ್ದಕ್ಕಿ ಮಾರಯ್ಯನ ಪ್ರಕಾರ ಕೈಲಾಸ ಯಾವುದು?
4. ಕಾಗೆಯು ಏನಾಗಲು ಸಾಧ್ಯವಿಲ್ಲ?

5. ಯಾರ ಮುಖವನ್ನು ನೋಡಲಾಗದು?
6. ಶರಣರು ಕೆಡಿಸುವ ನಿದ್ದೆಯನ್ನು ಹೇಗೆ ಗೆದ್ದಿದ್ದಾರೆ?

II.ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಶ್ರೀಗುರುವು ಶಿಷ್ಯರಿಗೆ ಬುದ್ಧಿ ಕಲಿಸುವುದು ಕಾಲಕಟ್ಟಳೆಗೆ ಹೇಗೆ ಒಳಪಟ್ಟಿದೆ? ವಿವರಿಸಿ.
2. ಆಯ್ದಕ್ಕಿ ಮಾರಯ್ಯನು ಕಾಯಕದ ಮಹತ್ವವನ್ನು ಹೇಗೆ ನಿರೂಪಿಸಿದ್ದಾನೆ?
3. ಅರಿವು, ಆಚಾರ, ಸಮ್ಯಜ್ಞಾನದ ಬಗ್ಗೆ ಅಮುಗೆರಾಯಮ್ಮನ ಅನಿಸಿಕೆ ಏನು?
4. ಬುದ್ಧಿ ಹೀನರು ಹೇಗೆ ವಿದ್ಯೆಯನ್ನು ಸಂಪಾದಿಸುತ್ತಾರೆ?
5. ಶಿವಶರಣರು ಜಗವನ್ನೇ ಗೆದ್ದಿಹ ವಿಚಾರದಲ್ಲಿ ಲಿಂಗಮ್ಮನ ಅನಿಸಿಕೆಯೇನು?

III. ಕೊಟ್ಟಿರುವ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. ವಚನಾಮೃತದಲ್ಲಿ ವ್ಯಕ್ತವಾಗಿರುವ 'ಕಾಯಕ ತತ್ವದ' ಮಹತ್ವವನ್ನು ವಿವರಿಸಿ.

IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆ"
2. "ನಾಮವನೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು"
3. "ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು"
4. "ಕಾಯಕವನೆ ಪ್ರಸಾದ ಕಾಯಕ ಮಾಡಿ ಸಲಹಿದರು"

V. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರ ಪದವನ್ನು ಆರಿಸಿ ಬರೆಯಿರಿ.

1. ತ್ರೇತಾಯುಗದಲ್ಲಿ ಶ್ರೀಗುರುವು ಶಿಷ್ಯನಿಗೆ ಬುದ್ಧಿಯನ್ನು ಕಲಿಸುತ್ತಿದ್ದ ಇದಾಗಿತ್ತು:
   ಅ) ಬಡಿದು
   ಆ) ಬೈದು
   ಇ) ವಂದಿಸಿ
   ಈ) ಝಂಕಿಸಿ

2. ಆಯ್ದಕ್ಕಿ ಮಾರಯ್ಯನ ಅಂಕಿತ ನಾಮ:
   ಅ) ಗುಹೇಶ್ವರ
   ಆ) ಅಮುಗೇಶ್ವರ
   ಇ) ಅಮರೇಶ್ವರಲಿಂಗ
   ಈ) ಅಪ್ಪಣ್ಣಪ್ರಿಯ.

3. 'ಕೋಗಿಲೆ' ಪದದ ತದ್ಭವ ರೂಪ:
   ಅ) ಕೋಕಿಲ

ಆ) ಸಂಕಿಲಾ
ಇ) ಕೋಕಿಲೆ
ಈ) ಕೊಕಿಲಾ

4. 'ಜಂಗಮ' ಪದದ ವಿರುದ್ಧಾರ್ಥಕ ಪದ:
ಅ) ವಿರಕ್ತಿ
ಆ) ವಿದ್ವಾಂಶ
ಇ) ಗುರು
ಈ) ಸ್ಥಾವರ

5. "ತನುವ ಕರಗಿಸಿ ಕಾಯ ಮರುಗಿಸಿ ವಿದ್ಯೆಯನ್ನು ಕಲಿತಿಹೆ" ಎನ್ನುವವರು:
ಅ) ಶಿವಶರಣರು
ಆ) ಬುದ್ಧಿಹೀನರು
ಇ) ಸಾಮಾನ್ಯರು
ಈ) ವಿದ್ಯಾರ್ಥಿಗಳು

VI. ಗುಂಪಿಗೆ ಸೇರದ ಪದಗಳನ್ನು ಆಯ್ದು ಬರೆಯಿರಿ.

1. ಆನೆ, ಗಜ, ಹಯ, ಕರಿ
2. ಬಸವಣ್ಣ, ಕನಕದಾಸರು, ಅಲ್ಲಮಪ್ರಭು, ಅಮುಗೆ ರಾಯಮ್ಮ
3. ಕಾಮ, ಕ್ರೋಧ, ಧನ, ಲೋಭ
4. ದ್ವಾಪರಯುಗ, ಕೃತಯುಗ, ಸುವರ್ಣಯುಗ, ಕಲಿಯುಗ
5. ತನು, ದೇಹ, ಮಾಯ, ಕಾಯ

ಚಟುವಟಿಕೆ

1. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.

1. ಆಯ್ದುಕ್ಕಿಮಾರಯ್ಯನವರ ವಚನಗಳ ಮೊದಲ ನಾಲ್ಕು ಸಾಲುಗಳು.

   (ಕಾಯಕದಲ್ಲಿ ________ ಹರಿಯಬೇಕು.)

2. ಅಮುಗೆ ರಾಯಮ್ಮನವರ ವಚನಗಳ ಮೊದಲ ನಾಲ್ಕು ಸಾಲುಗಳು.

   (ಕಾಗೆಯಮರಿ ________ ಸಮ್ಯಜ್ಞಾನವನರಿಯದೆ)

ಪೂರಕ ಓದು:

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಸಮಗ್ರ ವಚನ ಸಂಪುಟದಲ್ಲಿರುವ ಕೆಲವು ಜನಪ್ರಿಯ ವಚನಗಳನ್ನು ಸಂಗ್ರಹಿಸಿ.

20. ಸೋಮೇಶ್ವರಶತಕ -ಪುಲಿಗೆರೆ ಸೋಮನಾಥ

ಪ್ರವೇಶ:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶತಕ ಸಾಹಿತ್ಯ ವಿಶೇಷತೆಯಿಂದ ಕೂಡಿದ್ದು. ಈ ಪ್ರಕಾರದಲ್ಲಿ ಕೃತಿ ರಚನೆ ಮಾಡಿರುವ ಕವಿ ಸೋಮನಾಥ. ಈತನ ಕೃತಿ ಸೋಮೇಶ್ವರ ಶತಕವೆಂದೇ ಪ್ರಸಿದ್ಧಿಪಡೆದಿದೆ. ಸೋಮೇಶ್ವರ ಶತಕವು ಕನ್ನಡ ನಾಡಿನ ಜನಪದ ಕಾವ್ಯವೆಂಬಂತೆ ಜನಮನದಲ್ಲಿ ನೆಲೆಸಿರುವ ಕಾವ್ಯ. ನೀತಿ ಬೋಧಕವಾದ ಈ ಕಾವ್ಯವು ಇಂದಿಗೂ ಅನುಕರಣೀಯವಾದುದ್ದಾಗಿದೆ. "ಮಾತೃದೇವೋಭವ ಪಿತೃದೇವೋಭವ ಆಚಾರ್ಯ ದೇವೋಭವ" ಎಂಬುದು ನಮ್ಮೆಲ್ಲ ಧರ್ಮಗಳ ಮೂಲ ಮಂತ್ರ.

ಇವರೆಲ್ಲರೂ ತಮ್ಮ ತಮ್ಮ ಕರ್ತವ್ಯಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿಷ್ಠೆಯಿಂದ ಮಾಡಲೇಬೇಕು. ರಾಜ್ಯವಾಳುವ್ ರಾಜನಾಗಲಿ, ಮಂತ್ರಿಯಾಗಲಿ, ರಕ್ಷಕರಾದ ಭಟರಾಗಲಿ ಇದರಿಂದ ಹೊರತಾಗುವುದಿಲ್ಲ. ಈ ಕರ್ತವ್ಯ ಪ್ರಜ್ಞೆಯೇ ದೈವತ್ವದ ಸ್ಥಾನ-ಮಾನ ಪಡೆಯಲು ಸಾಧ್ಯವಾಗುತ್ತದೆ. ದೈವದ ಅನುಗ್ರಹವು ಸ್ವಾಭಾವಿಕವಾಗಿ ಏನೆಲ್ಲ ಪರಿವರ್ತನೆಗೆ ಕಾರಣವಾಗುತ್ತದೆ. ಎಂಬುದನ್ನು ಮನೋಜ್ಞವಾಗಿ ಈ ಶತಕದಲ್ಲಿ ವಿವರಿಸಲಾಗಿರುವುದರಿಂದ ಇಂದಿಗೂ ಪ್ರಸ್ತುತವಾಗಿದೆ.

ಹಿತವಂ ತೋರುವನಾತ್ಮಬಂಧು ಪೊರೆವಾತಂ ತಂದೆ ಸದ್ಧರ್ಮದಾ,
ಸತಿಯೇ ಸರ್ವಕೆ ಸಾಧನಂ ಕಲಿಸಿದಾತಂ ವರ್ಣಮಾತ್ರಂ ಗುರು.
ಶ್ರುತಿಮಾರ್ಗಂ ಬಿಡದಾತ ಸುವ್ರತಿ ಮಹಾ ಸದ್ವಿದ್ಯೆಯೇ ಪುಣ್ಯದಂ,
ಸುತನೇ ಸದ್ಗತಿದಾತನೈ ಹರಹರಾ ಶ್ರೀಚೆನ್ನಸೋಮೇಶ್ವರಾ.

ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ,

ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ.

ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ,

ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ.

ಅತಿ ಗಂಭೀರನುದಾರ ಧೀರನು ಮಹಾ ಸಂಪನ್ನ ಸತ್ಪಾತ್ರನೂ,

ರ್ಜಿತ ನಾನಾಲಿಪಿಭಾಷೆಯೊಳ್ ಪರಿಚಿತಂ ಲಂಚಕ್ಕೆ ಕೈನೀಡದಂ.
ವ್ರತ ಸದ್ಧರ್ಮ ವಿಚಾರಶಾಲಿ ಚತುರೋಪಾಯಂಗಳಂ ಬಲ್ಲವಂ,

ಪತಿಕಾರ್ಯಂ ವರ ಮಂತ್ರಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ.

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧಭೀಜಂ ಕೆಲಂ,
ಸಿಡಿದುಂ ಪೆರ್ಮರನಾಗದೇ ಎಳಗರುಂ ಎತ್ತಾಗದೇ ಲೋಕದೊಳ್.
ಮಿಡಿ ಪಣ್ಣಾಗದೆ ದೈವನೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ,

ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚೆನ್ನಸೋಮೇಶ್ವರಾ.

ಕೃತಿಕಾರರ ಪರಿಚಯ

ಪುಲಿಗೆರೆ ಸೋಮನಾಥ (ಕ್ರಿ. ಶ. ಸುಮಾರು 1299) ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪುಲಿಗೆರೆಯವನು. ಪುಲಿಗೆರೆ ಸೋಮನಾಥನೆಂದೇ ಪ್ರಸಿದ್ಧಿ. ಕನ್ನಡ, ಸಂಸ್ಕೃತ ಭಾಷೆಪಂಡಿತನಾದ ಈತನ ಅಂಕಿತ ಹರಹರಾ ಶ್ರೀ ಚನ್ನಸೋಮೇಶ್ವರಾ. ಕನ್ನಡ ರತ್ನಕರಂಡಕ ಕಾವ್ಯವನ್ನು ಚಂಪುವಿನಲ್ಲಿಯೂ ಸೋಮೇಶ್ವರ ಶತಕನ್ನು ವೃತ್ತ ಛಂದಸ್ಸಿನಲ್ಲಿಯೂ ರಚಿಸಿದ್ದಾನೆ.

ಪ್ರಕೃತ ಚೌಪದಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಸಂಪಾದಿಸಿರುವ ಸೋಮೇಶ್ವರ ಶತಕ ಕೃತಿಯಿಂದ ಆಯ್ಕೆಮಾಡಿ ಕೊಳ್ಳಲಾಗಿದೆ.

ಆಶಯ ಭಾವ

ಸಮಾಜದ ಅವಿಭಾಜ್ಯ ಅಂಗವಾದ ತಂದೆ, ತಾಯಿ, ಮಗ, ಪತ್ನಿ, ಗುರುಗಳ ಜವಾಬ್ದಾರಿಗಳನ್ನು, ದ್ವಿಜ, ರಾಜ, ಮಂತ್ರಿ, ಭಟ ಮೊದಲಾದವರ ಕರ್ತವ್ಯಗಳನ್ನು ಈ ನೀತಿ ಶತಕದಲ್ಲಿ ಮಾರ್ಮಿಕವಾಗಿ ಹೇಳಲಾಗಿದೆ. ನಿಜವಾದ ಮಂತ್ರಿಗೆ ಇರಬೇಕಾದ ಲಕ್ಷಣ, ದೇವರ ಅನುಗ್ರದಿಂದ ಕಾಲಾನುಕ್ರಮದಲ್ಲಿ ಸ್ವಾಭಾವಿಕವಾಗಿ ಆಗುವ ಬದಲಾವಣೆಗಳ ಬಗ್ಗೆಯೂ ವಿವರಿಸಲಾಗಿದೆ. ಈ ಮೂಲಕ ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳನ್ನರಿತಾಗ ಸುಖೀಸಮಾಜದ ನಿರ್ಮಾಣವಾಗುತ್ತದೆಂಬುದು ಈ ನೀತಿ ಶತಕದ ಆಶಯ.

ಪದಗಳ ಅರ್ಥ

ಆತ್ಮ- ತನ್ನ; ಉಡುರಾಜ- ನಕ್ಷತ್ರಾಧಿಪತಿ, ಚಂದ್ರ; ಊರ್ಜಿತ- ರೂಢಿಯಲ್ಲಿರುವ; ಒಲ್ಮೆ- ಪ್ರೀತಿ;ಕೆಲ- ಕೆಲವು; ಕೈಯಾಸೆ- ಲಂಚ, ಆಮಿಷ; ಚತುರೋಪಾಯ- ಸಾಮ, ದಾನ; ದ್ವಿಜ- ಬ್ರಾಹ್ಮಣ;ನ್ಯಗ್ರೋಧ- ಆಲದಮರ; ಪತಿಕಾರ್ಯ- ಸ್ವಾಮಿಕಾರ್ಯ, (ಆಸಕ್ತನಾದವನು); ಪಾಲಿಸು- ಕಾಪಾಡು, ಸಲಹು; ಪೆರ್ಚು- ಹೆಚ್ಚು, ವೃದ್ಧಿಸು; ಪೆರ್ಮರ- ದೊಡ್ಡಮರ; ಪೊರೆ- ಕಾಪಾಡು; ಬಲ್ಲಿದ-ಬಲಿಷ್ಠ, ಹಣವಂತ; ಭಜಕ- ಪೂಜಿಸುವವನು; ಭಟ- ಸೈನಿಕ,ಭೇದ, ದಂಡಗಳು; ಮಿಡಿ- ಹೀಚು; ವರ್ಣ- ಅಕ್ಷರ; ವ್ರತಿ- ನಿಯಮವುಳ್ಳವನು; ವ್ರತಿ- ಮುನಿ, ತಪಸ್ವಿ ಶ್ರುತಿ-ವೇದ; ಸಂಪನ್ನ- ಗುಣಶಾಲಿ; ಸಾಧನ- ಸಹಾಯ.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ನಿಜವಾದ ಬಂಧು ಯಾರು?
2. ಧಾರ್ಮಿಕನೆಂದು ಯಾರನ್ನು ಕರೆಯಲಾಗಿದೆ?
3. ರಾಜನಾದವನ ಕರ್ತವ್ಯವೇನು?
4. ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?
5. ಪುಲಿಗೆರೆ ಸೋಮನಾಥನ ಅಂಕಿತನಾಮವೇನು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ

1. ಸುವ್ರತಿ ಹಾಗೂ ಸುತನ ಬಗೆಗೆ ಕವಿ ಏನು ಹೇಳಿದ್ದಾನೆ?
2. ಭಟ ಮತ್ತು ದ್ವಿಜರ ಲಕ್ಷಣಗಳೇನು?

III. ಕೊಟ್ಟಿರುವ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.

1. ಶ್ರೇಷ್ಠ ಮಂತ್ರಿಯಲ್ಲಿರಬೇಕಾದ ಲಕ್ಷಣಗಳೇನು?
2. ಬಡವ ಬಲ್ಲಿದನಾಗುವನು ಎಂಬುದಕ್ಕೆ ಕವಿ ನೀಡಿರುವ ನಿದರ್ಶನಗಳಾವುವು?

IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. “ಸದ್ಧರ್ಮದಾ ಸತಿಯೋ ಸರ್ವಕೆ ಸಾಧನಂ”
2. “ಅತಿ ಗಂಭೀರನುದಾರ ಧೀರನು”
3. “ಉಡುರಾಜ ಕಳೆಗುಂದಿ ಪೆರ್ಚದಿಹನೆ”

V. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

1. ಮಿಡಿ: ಪಣ್ಣಾಗದೇ :: ಎಳಗರು: _______.
2. ನ್ಯಗ್ರೋಧ: ಆಲದ ಮರ :: ಉಡುರಾಜ: _______.
3. ಭಕ್ತಿಯುಳ್ಳ: ಆಗಮಸಂದಿ :: ಕಳೆಗುಂದು: _______.
4. ಧರ್ಮ: ಅಧರ್ಮ :: ಬಡವ: _______.
5. ಕಾರ್ಯ: ಕಜ್ಜ :: ಭಕ್ತಿ: _______.

ಸೈದ್ಧಾಂತಿಕ ಭಾಷಾಭ್ಯಾಸ

ಅಲಂಕಾರ: ಪರಿಚಯಾತ್ಮಕ ವಿವರ

ಮನುಷ್ಯ ತನ್ನ ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ವೈವಿಧ್ಯಪೂರ್ಣ ಬಟ್ಟೆ, ಆಭರಣ ಇತ್ಯಾದಿ ಸೌಂದರ್ಯ ಸಾಧನಗಳನ್ನು ಬಳಸುತ್ತಾನೆ. ಹೀಗೆ ಅಲಂಕಾರ ಮಾಡಿಕೊಂಡ ವ್ಯಕ್ತಿ ಇತರರಿಂದ ಆಕರ್ಷಿಸಲ್ಪಡುತ್ತಾನೆ. ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅಲಂಕಾರ ಮಾಡಿಕೊಂಡಂತೆ ಮನುಷ್ಯ ತನ್ನ ಮಾತೂ ಇತರರಿಗೆ ಇಂಪಾಗಿ ಕೇಳುವಂತೆ ಮಾಡುವ ಸಲುವಾಗಿ ಚಮತ್ಕಾರದಿಂದ ಮಾತನಾಡುತ್ತಾನೆ. ಹಾಗಾಗಿ -ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಚಮತ್ಕಾರಿಕ ಮಾತುಗಳೇ ಅಲಂಕಾರ. ಅಲಂಕಾರದಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂಬ ಎರಡು ವಿಧಗಳಿವೆ.

ಶಬ್ದಾಂಕಾರ: ಶಬ್ದಗಳ ಜೋಡಣೆಯ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಿದರೆ ಅದನ್ನು ಶಬ್ದಾಲಂಕಾರ ಎನ್ನುತ್ತಾರೆ. ಇದರಲ್ಲಿ ಅನುಪ್ರಾಸ, ಯಮಕ ಮತ್ತು ಚಿತ್ರ ಕವಿತ್ವ ಎಂದು ಪ್ರಧಾನವಾಗಿ ಮೂರು ವಿಧಗಳಿವೆ. ಅನುಪ್ರಾಸವನ್ನು ವೃತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂದು ವಿಭಾಗಿಸಲಾಗಿದೆ.

ಅರ್ಥಾಲಂಕಾರ: ಕಾವ್ಯದಲ್ಲಿ ಬಳಸಲಾದ ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಾದರೆ ಅದನ್ನು ಅರ್ಥಾಲಂಕಾರ ಎನ್ನುತ್ತಾರೆ. ಇದರಲ್ಲಿ ನೂರಕ್ಕೂ ಮಿಕ್ಕಿದ ಅಲಂಕಾರಗಳಿವೆ. ಇವುಗಳಲ್ಲಿ ಬರುವ ಉಪಮೇಯ ಉಪಮಾನ ಗಳ ಸಹಾಯದಿಂದ ಅದು ಯಾವ ಅಲಂಕಾರ ಎಂದು ನಿರ್ಧರಿಸಲಾಗುವುದು.

ಉಪಮೇಯ: ಉಪಮೇಯವನ್ನು ವರ್ಣ್ಯ ಎಂತಲೂ ಕರೆಯುವರು. ಆಲಂಕಾರಿಕ ವಾಕ್ಯದಲ್ಲಿ ಯಾವ ವಸ್ತುವನ್ನು ಕುರಿತು ವರ್ಣಿಸಲಾಗುತ್ತದೆಯೋ. ಅದೇ ವರ್ಣ್ಯ ಅಥವಾ ಉಪಮೇಯ.

ಉಪಮಾನ: ಉಪಮಾನವನ್ನು ಅವರ್ಣ್ಯ ಎಂತಲೂ ಕರೆಯುವರುಯಾವ ವಸ್ತುವನ್ನು ಆಧರಿಸಿ ಅಥವಾ ಮಾನವಾಗಿಟ್ಟುಕೊಂಡು ವರ್ಣಿಸಲಾಗುತ್ತದೆಯೋ ಅದೇ ಅವರ್ಣ್ಯ ಅಥವಾ ಉಪಮಾನ.

ಉಪಮಾಲಂಕಾರ: ಉಪಮಾ ಎಂದರೆ ಹೋಲಿಕೆ ಎಂದರ್ಥ. ಯಾವ ಅಲಂಕಾರದಲ್ಲಿ ಉಪಮೇಯ ಉಪಮಾನಗಳೊಳಗೆ ಉಪಮಾ (ಹೋಲಿಕೆ) ಇರುತ್ತದೆಯೋ ಆ ಅಲಂಕಾರವೇ ಉಪಮಾಲಂಕಾರ.

ಉದಾ: ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು. ಇಲ್ಲಿ ಮನೋರಮೆಯ ಹಣೆ ಅರ್ಧಚಂದ್ರಾಕೃತಿಯಲ್ಲಿದೆ ಎಂದು ಹೇಳುವ ಬದಲಿಗೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು, ಎಂದು ಹೇಳಲಾಗಿದೆ.

1. ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ ಮನೋರಮೆಯ ಹಣೆ ಎಂಬುದು ಉಪಮೇಯವಾಯ್ತು.

2. ಬಾಲಚಂದ್ರನನ್ನು ಆಧಾರವಾಗಿಟ್ಟುಕೊಂಡು ಮನೋರಮೆಯ ಹಣೆಯನ್ನು ವರ್ಣಿಸುತ್ತಿರು ವುದರಿಂದ ಬಾಲಚಂದ್ರ ಎಂಬುದು ಉಪಮಾನವಾಯ್ತು.

3. ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳುವಂತಹ ಅಂತೆ, ವೋಲ್, ವೊಲ್ ಮುಂತಾದ ಪದಗಳೇ ವಾಚಕ ಪದಗಳು. ಇಲ್ಲಿ ಅಂತೆ, ಎಂಬುದು ವಾಚಕ ಪದ.
4. ಉಪಮೇಯಕ್ಕೂ ಉಪಮಾನಕ್ಕೂ ಸಮಾನವಾಗಿ ಹೊಂದಿಕೆಯಾಗುವ ಕ್ರಿಯಾಪದವೇ ಸಮಾನಧರ್ಮ. ಇಲ್ಲಿ ಆಕರ್ಷಣೀಯವಾಗಿತ್ತು ಎಂಬುದು ಸಮಾನಧರ್ಮ.

5. ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳಿರುವುದರಿಂದ ಇದು ಉಪಮಾಲಂಕಾರ.

ಉಪಮಾಲಂಕಾರದಲ್ಲಿ ಪೂರ್ಣೋಪಮಾಲಂಕಾರ, ಲುಪ್ತೋಪಮಾಲಂಕಾರ ಎಂಬ ಎರಡು ವಿಧಗಳಿವೆ.

ಪೂರ್ಣೋಪಮಾಲಂಕಾರ: ಯಾವ ಉಪಮಾಲಂಕಾರದಲ್ಲಿ ಉಪಮೇಯ, ಉಪಮಾನ, ವಾಚಕ ಪದ, ಸಮಾನಧರ್ಮ ಎಂಬ ನಾಲ್ಕು ಅಂಶಗಳು ಇರುತ್ತವೆಯೋ ಅದೇ ಪೂರ್ಣೋಪಮಾಲಂಕಾರ.

ಉದಾ: ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತಕುಲದ ನೂರ್ವೈವರು ಬಾಲಕರು ಬಿದ್ದರು.

ಉಪಮೇಯ: ಭರತಕುಲದ ನೂರ್ವೆವರು ಬಾಲಕರು

ಉಪಮಾನ: ಬಿರುಗಾಳಿಗೆ ತುತ್ತಾದ ಮರಗಿಡಗಳು

ವಾಚಕಪದ: ಅಂತೆ

ಸಮಾನಧರ್ಮ: ಬೀಳುವುದು

ಅಲಂಕಾರ: ಉಪಮಾಲಂಕಾರ (ಪೂರ್ಣೋಪಮಾಲಂಕಾರ)

ಸಮನ್ವಯ: ಉಪಮೇಯವಾದ ಭರತಕುಲದ ನೂರೈವರು ಬಾಲಕರು ಬಿದ್ದಿರುವುದನ್ನು ಉಪಮಾನ ವಾದ ಬಿರುಗಾಳಿಗೆ ತುತ್ತಾದ ಮರಗಿಡಗಳಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರ.

ಈ ಆಲಂಕಾರದಲ್ಲಿ ಉಪಮೇಯ, ಉಪಮಾನ, ವಾಚಕಪದ, ಸಮಾನಧರ್ಮ ಎಂಬ ನಾಲ್ಕು ಅಂಶಗಳಿರುವುದರಿಂದ ಇದು ಪೂರ್ಣೋಪಮಾಲಂಕಾರವೂ ಹೌದು.

ಲುಪ್ತೋಪಮಾಲಂಕಾರ: ಇದು ಉಪಮಾಲಂಕಾರದ ಇನ್ನೊಂದು ಪ್ರಭೇದ. ಪೂರ್ಣೋಪ ಮಾಲಂಕಾರವಾಗಬೇಕಾದರೆ ಇರಬೇಕಾದ ನಾಲ್ಕು ಅಂಶಗಳಲ್ಲಿ ಯಾವುದಾದರೂ ಅಂಶ ಇಲ್ಲವಾದರೆ ಅದು ಲುಪ್ತೋಪಮಾಲಂಕಾರವಾಗುತ್ತದೆ. ಯಾವ ಅಂಶ ಲುಪ್ತವಾಗಿದೆಯೋ ಅದೇ ಹೆಸರಿನಿಂದ ಆ ಅಲಂಕಾರವನ್ನು ಕರೆಯಲಾಗುತ್ತದೆ. ಅಂದರೆ ಉಪಮೇಯ ಇಲ್ಲವಾದರೆ ಅದು ಉಪಮೇಯ ಲುಪ್ತೋಮಾಲಂಕಾರ. ಹಾಗೆಯೇ ಉಪಮಾನಲುಪ್ತೋಪಮಾಲಂಕಾರ, ವಾಚಕಲುಪ್ತೋಪಮಾಲಂಕಾರ, ಧರ್ಮಲುಪ್ತೋಪಮಾಲಂಕಾರ, ವಾಚಕಧರ್ಮಲು ಪ್ತೋಪಮಾಲಂಕಾರ ಇತ್ಯಾದಿ ಲುಪ್ತೋಪಮಾಲಂಕಾರಗಳಿವೆ.

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಅಲಂಕಾರ ಎಂದರೇನು?
2. ಉಪಮಾಲಂಕಾರ ಎಂದರೇನು? ನಿದರ್ಶನ ಸಹಿತ ವಿವರಿಸಿ.
3. ಪೂರ್ಣೋಪಮಾಲಂಕಾರ ಎಂದರೇನು? ವಿವರಣೆ ನೀಡಿ.

ಪ್ರಾಯೋಗಿಕ ಭಾಷಾಭ್ಯಾಸ

I. ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯ ಮಾಡಿ.

1. ಮನೋರಮೆಯ ಮುಖ ಕಮಲದಂತೆ ಅರಳಿತು.

2. ಗೀಜಗನ ಗೂಡುಗಳು ತೂಗಿನ ತೊಟ್ಟಿಲಿನಂತೆ ತೂಗುತ್ತಿದ್ದವು.

II. 'ಸೋಮೇಶ್ವರ ಶತಕ' ಪದ್ಯದಲ್ಲಿ ಬಂದಿರುವ ಪ್ರಾಸ ಯಾವುದು?

ಪಠ್ಯಾಧಾರಿತ ಚಟುವಟಿಕೆ

ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.

ಪ್ರಜೆಯಂ ಪಾಲಿಸ ________ಶ್ರೀ ಚೆನ್ನ ಸೋಮೇಶ್ವರ

ಪೂರಕ ಓದು:

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಸಮಗ್ರ ವಚನ ಸಂಪುಟದಲ್ಲಿರುವ ಕೆಲವು ಜನಪ್ರಿಯ ವಚನಗಳನ್ನು ಸಂಗ್ರಹಿಸಿ.

7. ಜೀವನ ದರ್ಶನ

ಪ್ರವೇಶ:

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 15-16 ನೆಯ ಶತಮಾನದಲ್ಲಿ ಜ್ಞಾನ ಮತ್ತು ಭಕ್ತಿಯ ಮೂಲಕ ಮುಕ್ತಿಯೆನ್ನು ಕಾಣಬಯಸಿ, ವಿಷ್ಣುವನ್ನು ಆರಾಧ್ಯ ದೈವನನ್ನಾಗಿಸಿಕೊಂಡು, ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸುಧಾರಣೆಗಾಗಿ ಶ್ರಮಿಸಿದ ಸಾಹಿತ್ಯ ಪ್ರಕಾರವೇ ದಾಸ ಸಾಹಿತ್ಯ. ದಾಸ ಸಾಹಿತ್ಯವನ್ನು ದಾಸವಾಙ್ಮಯ, ಹರಿದಾಸ ಸಾಹಿತ್ಯವೆಂತಲೂ ಕರೆಯುತ್ತಾರೆ. 'ದಾಸ' ಎಂದರೆ 'ಸೇವಕ' ಎಂದರ್ಥ. ಶ್ರೀಹರಿಯಲ್ಲಿ ಭಕ್ತಿಯನ್ನಿಟ್ಟು, ಮನಸ್ಸನ್ನು ನಿರ್ಮಲಮಾಡಿಕೊಂಡು, ತ್ಯಾಗ ಜೀವನ ನಡೆಸುತ್ತಾ, ಹರಿನಾಮ ಜಪಿಸುತ್ತಾ ರಚಿಸಿದ ಸಾಹಿತ್ಯ ಇದಾಗಿದೆ.

ಈ ಸಾಹಿತ್ಯ ಪ್ರಕಾರದಲ್ಲಿ ಬರುವ ನರಹರಿತೀರ್ಥರು, ಶ್ರೀಪಾದರಾಜರು, ವ್ಯಾಸರು, ವಿಜಯದಾಸರು, ಕನಕ-ಪುರಂದರದಾಸರು, ರಾಘವೇಂದ್ರತೀರ್ಥರೇ ಮೊದಲಾದವರು. ಭಕ್ತಿ-ಆಧ್ಯಾತ್ಮಿಕ ವಿಷಯಗಳನ್ನು ಸುಂದರ ಕಾವ್ಯವನ್ನಾಗಿಸುವ ಮೂಲಕ ಕೀರ್ತನೆಗಳು, ಉಗಾಭೋಗ, ಸುಳಾದಿ, ಮುಂಡಿಗೆ ಮೊದಲಾದ ರಚನೆಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ, ಕೆಲವನ್ನು ಪರಿಚಯಾತ್ಮಕವಾಗಿ ನೀಡಲಾಗಿದೆ.

ಭಕ್ತಿ ಬೇಕು ವಿರಕ್ತಿ ಬೇಕು ಸರ್ವ,
ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ,

ಸತಿ ಅನುಕೂಲ ಬೇಕು ಸುತನಲ್ಲಿ ಗುಣಬೇಕು,
ಮತಿವಂತನಾಗಬೇಕು ಮತ ಒಂದಾಗಬೇಕು.

ಜಪದ ಜಾಣುವೆ ಬೇಕು ತಪದ ನೇಮವೆ ಬೇಕು,
ಉಪವಾಸ ವ್ರತ ಬೇಕು ಉಪಶಾಂತವಿರಬೇಕು,

ಸುಸಂಗ ಹಿಡಿಯಲೆಬೇಕು ದುಸ್ಸಂಗ ಬಿಡಬೇಕು,
ರಂಗವಿಠಲನ್ನ ಬಿಡದೆ ನೆರೆ ನಂಬಿರಬೇಕು. -**ಶ್ರೀಪಾದರಾಜರು**

ಈತನೀಗ ನಮ್ಮ ದೇವನು,
ಪ್ರೀತಿಯಿಂದಲಿ ಸ್ಮರಿಸುವವರ, ಪಾತಕಗಳ ಪರಿಹರಿಪ

ಅಕ್ರೂರನ ಪ್ರೀತನೀತ ಶಂಖಚಕ್ರ ಧರಿಸಿದಾತ,
ನಕ್ರಬಾಧೆಯ ತರಿದು ತನ್ನ ಭಕ್ತರನ್ನು ಕಾಯಿದಾತ,

ಅಜಮಿಳನ ಸಲಹಿದಾತ ವ್ರಜದಗೋವು ಕಾಯಿದಾತ,
ಭಜಿಸುವವರ ಬಿಡನು ಪ್ರೀತತ್ರಿಜಗದೊಳಗೆ ಮೆರವದಾತ.

ಸಕಲ ಗುಣ ಪೂರ್ಣನೀತ ಸಕಲ ದೋಷ ದೂರನೀತ,
ಸಕಲಾನಂದ ಪೂರ್ಣನೀತ, ಭಕುತಿ ಮಂತ್ರಕೊಲಿವದಾತ

ಅನಾಥ ಬಾಂಧವನೀತ ಅನಾದಿ ಕಾಲದವನಾತ,
ಅನಾದಿ ಮೊರೆಯ ಕೇಳಿ ಆ ನಿಮಿಷದೊಳು ಒದಗಿದಾತ,

ಕಮಲಮುಖಿಯ ರಮಣನೀತ ಕಮಲಾಸನಜನಕನೀತ,
ಕಮಲಾಕ್ಷ ಗೋಪಾಲವಿಠಲ ಹೃತ್ ಕಮಲದೊಳು ನಿಲುವದಾತ.
-**ಗೋಪಾಲದಾಸರು**

ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ,
ನಾದಮೂರ್ತಿ ಮೋದದಿಂದ ನಿನ್ನ ಪಾದ ಭಜಿಸುವೆ

ಜ್ಞಾನವೆಂಬೊ ನವರತ್ನದ ಮಂಟಪದ ಮಧ್ಯದಲ್ಲಿ,
ಗಾನಲೋಲನ ಕುಳ್ಳಿರಿಸಿ ಧ್ಯಾನದಿಂದ ಭಜಿಸುವೆ,

ಭಕ್ತಿರಸವೆಂಬ ಮುತ್ತು ಮಾಣಿಕ್ಯದ ಹರಿವಾಣದಿ
ಮುಕ್ತನಾಗಬೇಕುಯೆಂದು ಮುತ್ತಿನಾರತಿ ಎತ್ತುವೆ

ನಿನ್ನ ನಾಮ ಬಿಡುವನಲ್ಲ ಎನ್ನ ನೀನು ಬಿಡಲು ಸಲ್ಲ,
ಘನ ಮಹಿಮ ವಿಜಯವಿಠಲ ಕೇಳೊ ನಿನ್ನ ಭಕ್ತರ ಸೊಲ್ಲ -**ವಿಜಯದಾಸರು**

ಕೃತಿಕಾರರ ಪರಿಚಯ

ಶ್ರೀ ಪಾದರಾಜ: ದಾಸಶ್ರೇಷ್ಠರಲ್ಲೊಬ್ಬರು. ಕಾಲ ಕ್ರಿ. ಶ. ಸುಮಾರು 1404 ರಿಂದ 1502. ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ. ದ್ವೈತ ತತ್ವದ ಪ್ರತಿಪಾದಕರು ಹಾಗೂ ಆದ್ಯ ಕೀರ್ತನಕಾರರು. ಚನ್ನಪಟ್ಟಣ ತಾಲೂಕಿನ ಅಬ್ಬೂರು ಗ್ರಾಮದಲ್ಲಿ ಹುಟ್ಟಿದವರು. ತಂದೆ

ಶೇಷಗಿರಿಯಪ್ಪ, ತಾಯಿ ಗಿರಿಯಮ್ಮ. ಶ್ರೀರಂಗ ಕ್ಷೇತ್ರದ ಶ್ರೀ ಸ್ವರ್ಣವರ್ಣತೀರ್ಥರಿಂದ ಸಂನ್ಯಾಸ ದೀಕ್ಷೆ ಪಡೆದು ಅಲ್ಲಿಯೇ ಪೀಠಾಧಿಪತಿಗಳಾಗಿದ್ದು; ತದನಂತರ ಕೋಲಾರ ಜಿಲ್ಲೆಯ ಮುಳಬಾಗಿಲಿನ ನರಸಿಂಹತೀರ್ಥದಲ್ಲಿ ನೆಲೆಸಿ ಬೃಂದಾವನಸ್ಥರಾದರು. ಇವರ ಅಂಕಿತ ಶ್ರೀರಂಗವಿಠಲ. ಇವರ ಶಿಷ್ಯರಲ್ಲಿ ಪ್ರಮುಖರು ಶ್ರೀವ್ಯಾಸರಾಯರು. ಶ್ರೀಪಾದರಾಜ ಅವರ 82 ಕೀರ್ತನೆಗಳು, 3 ಸುಳಾದಿಗಳು, 15 ಉಗಾಭೋಗಗಳು, 1 ದಂಡಕವು ಲಭ್ಯವಾಗಿವೆ. ಮಾನವನ ಜೀವನದ ಮುಖ್ಯ ಗುರಿ ಮುಕ್ತಿ ಸಂಪಾದನೆ. ಹರಿದಾಸರು ಭಕ್ತಿಯ ಮೂಲಕ ಮುಕ್ತಿ ಪಡೆಯುವ ಮಾರ್ಗವನ್ನು ತೋರಿದರು.
ಆಶಯ ಭಾವ

ಪ್ರಕೃತ ಪದ್ಯದಲ್ಲಿ ಮುಕ್ತಿಯನ್ನು ಬಯಸುವವರಿಗೆ ವಾತಾವರಣ ಹೇಗೆ ಅನುಕೂಲವಾಗಿರಬೇಕು ಎಂಬ ಚಿತ್ರಣವಿದೆ. ಇವರ ಕೀರ್ತನೆಗಳಲ್ಲಿ ಆತ್ಮಶೋಧನೆ, ಭಗವಂತನ ಆರಾಧನೆ, ದ್ವೈತ ತತ್ತ್ವಪ್ರತಿಪಾದನೆ ಮತ್ತು ಲೋಕನೀತಿ, ನೀತಿಬೋಧನೆಗಳು ಅಡಕವಾಗಿವೆ. 'ಕಂಗಳಿದ್ಯಾತಕೋ ಕಾವೇರಿರಂಗನ ನೋಡದ' ಕೀರ್ತನೆ ಜನಪ್ರಿಯವಾದದ್ದು. ಶ್ರೀಯುತರ ಕೀರ್ತನೆಗಳಲ್ಲಿ ದೇಸಿಯತೆಯ ಸೊಗಡಿದೆ.

ಗೋಪಾಲದಾಸರು: ಇವರ ಕಾಲ ಕ್ರಿ. ಶ. 1721. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರುಕಲ್ಲಿನಲ್ಲಿ ಜನಿಸಿದರು. ತಂದೆ ಮುರಾರಿ, ತಾಯಿ ವೆಂಕಮ್ಮ, ಗುರುಗಳು ವಿಜಯದಾಸರು. ಇವರದು ಸಾಮಾನ್ಯವಾದ ರೈತ ಕುಟುಂಬ. ದಾಸರ ಮೊದಲ ಹೆಸರು ಬಾಗಣ್ಣ. ತುಂಬಾ ಬಡತನದಲ್ಲಿದ್ದ ಇವರು ಜ್ಯೋತಿಷ್ಯವನ್ನು ಹೇಳುತ್ತಾ ಜೀವನ ನಿರ್ವಹಣೆ ಮಾಡುತ್ತಿದ್ದರು. ಇವರ ಅಂಕಿತನಾಮ ಗೋಪಾಲವಿಠಲ. ಇವರ 96 ಕೀರ್ತನೆಗಳು, 70 ಸುಳಾದಿಗಳು, 21 ಉಗಾಭೋಗಗಳು ಉಪಲಬ್ಧವಾಗಿವೆ.

ಆಶಯ ಭಾವ

ದೇವರು ಭಕ್ತ ಪರಾಧೀನ. ಅನಾಥರಕ್ಷಕ. ಭಕ್ತರು ಅಚಲವಾದ ದೃಢಭಕ್ತಿಯಿಂದ ಮೊರೆಯಿಟ್ಟರೆ ಅವರ ಸಂಕಷ್ಟಗಳನ್ನು ಪರಿಹರಿಸುತ್ತಾನೆ. ಪಾತಕಗಳನ್ನು ಮಾಡಿದರು ಸಹ ಪ್ರೀತಿಯಿಂದ ಕರೆದರೆ ಬಂದು ಸಂಕಷ್ಟಗಳನ್ನು ನಿವಾರಿಸುವ ಗುಣ ಈ ಪರಮಾತ್ಮನದು. ಆದುದರಿಂದ ಆ ಭಗವಂತನ್ನು ಹೃದಯಕಮಲದಲ್ಲಿಟ್ಟು ಆರಾಧಿಸಬೇಕು. ನಂಬಿಕೆಟ್ಟವರಿಲ್ಲ. ನಂಬಿಕೆ, ಪ್ರೀತಿ, ದೃಢಸಂಕಲ್ಪಗಳು ಸದಾ ಅಚಲವಾಗಿರಬೇಕು ಎಂದು ತಮ್ಮ ಈ ಕೀರ್ತನೆಯಲ್ಲಿ ದಾಸರು ಸ್ತುತಿಸಿದ್ದಾರೆ.

ವಿಜಯದಾಸರು: ಇವರ ಕಾಲ ಕ್ರಿ. ಶ. ಸುಮಾರು (1682-1755) ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚೇಕನಪರಿವಿಯಲ್ಲಿ ಜನಿಸಿದರು. ಮೊದಲಿನ ಹೆಸರು ದಾಸಪ್ಪ. ತಂದೆ ಶ್ರೀನಿವಾಸ ತಾಯಿ ಕೂಸಮ್ಮ ದಂಪತಿಗಳ ಮಗನೇ ವಿಜಯದಾಸರು. ತುಂಬಾ ಬಡತನವನ್ನು ಅನುಭವಿಸುತ್ತಿದ್ದ ಕುಟುಂಬ ಇವರದು. ಕಾಶಿಯಲ್ಲಿ ನಾಲ್ಕುವರ್ಷಗಳು

ಸಂಸ್ಕೃತ ಅಧ್ಯಯನ ಮಾಡುತ್ತಾರೆ. ಪುರಂದರದಾಸರು ಇವರಿಗೆ ದೀಕ್ಷೆಯಿತ್ತ ಗುರುಗಳು. ಇವರ ಅಂಕಿತನಾಮ ವಿಜಯವಿಠಲ.

ಆಶಯ ಭಾವ

ಮಾನವನ ಜನ್ಮದ ಸಾರ್ಥಕತೆ ಮುಕ್ತಿಗಳಿಸುವಲ್ಲಿ ಇದೆ. ಇಹಲೋಕದಿಂದ ಮುಕ್ತನಾಗಲು ಸದ ಹರಿ ನಾಮಸ್ಮರಣೆ ಮಾಡಬೇಕು. ಅಚಲವಾದ ದೃಢ ಭಕ್ತಿಯಿಂದ ದೈವ ಸಾಕ್ಷಾತ್ಕಾರವಾಗುತ್ತದೆ. ಭಕ್ತಿ-ಭಕ್ತ ಒಂದಾದಾಗ ಮಾತ್ರ ಮುಕ್ತಿ ಸಾಧ್ಯವೆಂದು, ಈ ಪ್ರಕೃತ ಕೀರ್ತನೆಯಲ್ಲಿ ವ್ಯಕ್ತವಾಗಿದೆ.

ಪ್ರಸ್ತುತ 'ಜೀವನ ದರ್ಶನ' ಪದ್ಯದಲ್ಲಿರುವ ದಾಸರ ಕೀರ್ತನೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರು ಪ್ರಕಟಿಸಿರುವ 'ಸಮಗ್ರ ದಾಸ ಸಾಹಿತ್ಯ ಸಂಪುಟ' ಗಳಿಂದ ಆಯ್ದು ನಿಗದಿಪಡಿಸಿದೆ.

ಪದಗಳ ಅರ್ಥ

1. ವಿರಕ್ತಿ- ವೈರಾಗ್ಯ, ಆಸೆ ಆಮಿಷಗಳಿಗೆ ಒಳಗಾಗದಿರುವುದು; ಮುಕ್ತಿ- ಬಿಡುಗಡೆ; ಸತಿ- ಹೆಂಡತಿ; ಸುತ- ಮಗ; ಮತ- ಅಭಿಪ್ರಾಯ, ಗುರಿ; ಜಾಣುವೆ-ಜಾಣ್ಮೆ, ಬುದ್ದಿವಂತಿಕೆ; ಉಪಶಾಂತ- ನೆಮ್ಮದಿ, ಸಮಾಧಾನ; ಸುಸಂಗ- ಒಳ್ಳೆಯವರ ಸ್ನೇಹ; ದುಸ್ಸಂಗಿ- ಕೆಟ್ಟವರ ಸಹವಾಸ; ನೆರೆ- ಪೂರ್ಣ;

2. ಪಾತಕ- ಪಾಪ, ಕೆಟ್ಟಕೆಲಸ; ನಕ್ರ- ಮೊಸಳೆ; ಬಾಧೆ- ನೋವು, ಸಂಕಟ; ವ್ರಜ-ಗುಂಪು, ಹಿಂಡು;ತ್ರಿಜಗ- ಮೂರುಲೋಕ (ದೇವಲೋಕ, ಭೂಲೋಕ, ಪಾತಾಳಲೋಕ) ಅನಾಥ- ದಿಕ್ಕಿಲ್ಲದ, ತಬ್ಬಲಿ; ಮೊರೆ- ಆಶ್ರಯ; ರಮಣ- ಗಂಡ, ಯಜಮಾನ; ಕಮಲಮುಖಿ- ಲಕ್ಷ್ಮೀ.

3. ಸದಾ- ಯಾವಾಗಲು, ಸತತ; ಮೋದ- ಆನಂದ, ಸಂತೋಷ; ಲೋಲ- ಆಸಕ್ತನಾದವ, ವಿಲಾಸಪ್ರಿಯ; ಹರಿವಾಣ- ಅಗಲವಾದ ತಟ್ಟೆ; ಘನ-ಶ್ರೇಷ್ಠ;

ಟಿಪ್ಪಣಿ

1. **ಹಲಾಧರಾನುಜ:** 'ಹಲಾ' ಎಂದರೆ ನೇಗಿಲು, 'ಧರ' ಎಂದರೆ ಧರಿಸಿದವನು, ಹಲಾಯುಧವನ್ನು ಹೊಂದಿದವನು ಬಲರಾಮ. ಅನುಜ ಎಂದರೆ ತಮ್ಮ ಎಂದರ್ಥ. ಬಲರಾಮನ ತಮ್ಮ ಶ್ರೀಕೃಷ್ಣ.
2. **ಅಜಮಿಳ:** ಕನ್ಯಾಕುಬ್ಜದಲ್ಲಿದ್ದ ಒಬ್ಬ ಬ್ರಾಹ್ಮಣ. ಈತ ಮಾತಾಪಿತೃಗಳನ್ನೂ, ಧರ್ಮಪತ್ನಿಯನ್ನೂ ಪರಿತ್ಯಾಗಮಾಡಿ, ಶೂದ್ರಸ್ತ್ರೀ ಸಂಪರ್ಕ ಮೊದಲಾದ ಅನೇಕ ದುರಾಚಾರಗಳಿಂದ ಪತಿತನಾಗಿದ್ದರೂ ಪ್ರಾಣಬಿಡುವ ಸಮಯದಲ್ಲಿ ತನ್ನ ಮಗನಾದ ನಾರಾಯಣನೆಂಬುವನನ್ನು ಕರೆದು ನಾರಾಯಣ ಸ್ಮರಣ ಮಹಿಮೆಯಿಂದ ದಿವ್ಯಗತಿಯನ್ನು ಪಡೆದನು.

3. **ನವರತ್ನ:** ಒಂಬತ್ತು ರತ್ನಗಳು: ಮುತ್ತು, ಮಾಣಿಕ್ಯ, ವೈಢೂರ್ಯ, ಗೋಮೇಧಿಕ, ವಜ್ರ, ಹವಳ, ಮರಕತ, ಪುಷ್ಯರಾಗ (ಪದ್ಮರಾಗ), ನೀಲ.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ವ್ಯಕ್ತಿಯು ಮುಕ್ತಿ ಪಡೆಯಲು ಏನು ಮಾಡಬೇಕು?
2. ಸುತರಲ್ಲಿ ಎಂಥಹ ಗುಣವಿರಬೇಕು?
3. ದೇವನು ಯಾರ ಪಾತಕಗಳನ್ನು ಪರಿಹರಿಸುವವನು?
4. ದೇವನು ಯಾವ ಮಂತ್ರಕ್ಕೆ ಒಲಿಯುವನು?
5. ಸದಾ ಹೃದಯದಲ್ಲಿ ವಾಸಮಾಡುವವನು ಯಾರು?

II. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ.

1. ಮುಕ್ತಿ ಪಡೆಯಲು ಹೇಗೆ ನಡೆದುಕೊಳ್ಳಬೇಕು?
2. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸಿದರೆಂದು ಗೋಪಾಲದಾಸರು ಹೇಳಿದ್ದಾರೆ?
3. ಮುಕ್ತರಾಗಲು ಏನು ಮಾಡಬೇಕೆಂದು ವಿಜಯದಾಸರು ಹೇಳಿದ್ದಾರೆ?

III. ಕೊಟ್ಟಿರುವ ಪ್ರಶ್ನೆಗಳಿಗೆ ಐದು ಆರು ವಾಕ್ಯದಲ್ಲಿ ಉತ್ತರಿಸಿ.

1. ಶ್ರೀಪಾದರು ನೀಡಿರುವ ಜೀವನ ಸಂದೇಶ ತಿಳಿಸಿ.
2. ಗೋಪಾಲದಾಸರು ದೇವರು ಭಕ್ತಪ್ರಿಯ ಎಂಬುದನ್ನು ಹೇಗೆ ವಿವರಿಸಿ.

IV. ಸಂದರ್ಭಸಹಿತ ಸಾರ್ಸ್ವವನ್ನು ವಿವರಿಸಿ.

1. "ಸುಸಂಗ ಹಿಡಿಯಲೆಬೇಕು ದುಸ್ಸಂಗ ಬಿಡಬೇಕು"
2. "ಅನಾದಿ ಮೊರೆಯ ಕೇಳಿ ಅನಿಮಿದೊಳು ಒದಗಿದಾತ"
3. "ನಿನ್ನನಾನು ಬಿಡುವನಲ್ಲ ಎನ್ನ ನೀನು ಬಿಡಲು ಸಲ್ಲ"

V. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

1. ಶ್ರೀಪಾದರು: ಅಬ್ಬೂರು :: ಗೋಪಾಲದಾಸರು: ________.
2. ಜ್ಞಾನವೆಂಬೋ: ನವರತ್ನ :: ಭಕ್ತಿರಸವೆಂಬೋ: ________.
3. ಹೃದಯ: ಎದೆ :: ಜ್ಞಾನ: ________.

4. ಗೋಪಾಲದಾಸರು: ಗೋಪಾಲವಿಠಲ :: ವಿಜಯದಾಸರು: _______.
5. ಮೋದ: ಆನಂದ :: ರಮಣ: _______.

ಪ್ರಾಯೋಗಿಕ ಭಾಷಾಭ್ಯಾಸ

1. **ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

   ಸತಿ, ನಕ್ರ, ರಮಣ, ಪಾತಕ, ಮೋದ, ಅನಾಥ

2. **ಕೊಟ್ಟಿರುವ ಪದಗಳಿಗೆ ತದ್ಭವ ರೂಪ ಬರೆಯಿರಿ.**

   ಮುಕ್ತಿ, ಹೃದಯ, ಪಕ್ಷಿ, ಹಗೆ, ಶ್ರೀ, ಮುಕ್ತ, ಮಾಣಿಕ್ಯ

ಪಠ್ಯಾಧಾರಿತ ಚಟುವಟಿಕೆ

ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.

1. ಶ್ರೀಪಾದರಾಜರ ಕೀರ್ತನೆಯಲ್ಲಿನ ಎರಡು ಮತ್ತು ಮೂರನೆ ಚರಣದ (ಸತಿ ಅನುಕೂಲ _______ ಉಪಶಾಂತವಿರಬೇಕು) ನಾಲ್ಕು ಸಾಲುಗಳು.
2. ವಿಜಯದಾಸರ ಕೀರ್ತನೆಯ ಮೊದಲೆರಡು ಚರಣ (ಜ್ಞಾನವೆಂಬೋ _______ ಮುತ್ತಿನಾರತಿಯೆತ್ತುವೆ) ನಾಲ್ಕು ಸಾಲುಗಳು.

ಪೂರಕ ಓದು:

1. ಡಾ. ಜಿ ವರದರಾಜರಾವ್ ಅವರು ಸಂಪಾದಿಸಿರುವ ಶ್ರೀಪಾದರಾಜರ ಕೃತಿಗಳು ಪುಸ್ತಕವನ್ನು ಓದಿರಿ.
2. ಕಾವ್ಯಪ್ರೇಮಿಯವರು ಸಂಪಾದಿಸಿರುವ ‘ವಿಜಯದಾಸರ ಹಾಡುಗಳು’ ಪುಸ್ತಕವನ್ನು ಓದಿರಿ.
3. ಡಾ. ಟಿ. ಎಸ್. ನಾಗರತ್ನರವರು ಸಂಪಾದಿಸಿರುವ ಶ್ರೀ ಗೋಪಾಲದಾಸರ ಕೃತಿಗಳು ಪುಸ್ತಕವನ್ನು ಓದಿರಿ.

8. ರಾಮಧಾನ್ಯ ಚರಿತೆ -ಕನಕದಾಸರು

ಪ್ರವೇಶ:

ಸಾಹಿತ್ಯವು ಸಾಮಾಜಿಕ ವ್ಯವಸ್ಥೆಯ ಕೈಗನ್ನಡಿಯಾಗಿದೆ. ಈ ಕಾರಣದಿಂದಾಗಿ ಸಮಾಜ ಸುಧಾರಣೆಯಲ್ಲಿ ಸಾಹಿತ್ಯ ಪ್ರಮುಖ ಪಾತ್ರ ವಹಿಸುತ್ತದೆ. ಸಾಹಿತ್ಯದ ಮೂಲಕ ಸಮಾಜದ ಓರೆ-ಕೋರೆಗಳನ್ನು ತಿದ್ದಿ ತೀಡಬೇಕೆಂಬ ಆಶಯವೂ ಇದೆ. ಈ ನಿಟ್ಟಿನಲ್ಲಿ 15-16 ನೇ ಶತಮಾನದಲ್ಲಿ ಮೂಡಿಬಂದ ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸುಧಾರಣಾ ಸಾಹಿತ್ಯ ಪ್ರಕಾರವೇ ದಾಸಸಾಹಿತ್ಯ. ಈ ಶತಮಾನದಲ್ಲಿ ವ್ಯಾಸರಾದಿಯಾಗಿ ಪುರಂದರದಾಸರು, ಕನಕದಾಸರು, ವಿಜಯದಾಸರು ಮೊದಲಾದವರು ಹರಿದಾಸ ಪರಂಪರೆಯನ್ನು ಹುಟ್ಟುಹಾಕಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ್ದಾರೆ.

ರಾಮಧಾನ್ಯ ಚರಿತೆಯು ಅತ್ಯಂತ ಚರ್ಚಿತವಾದ ಕೃತಿ. ಇದಕ್ಕೆ ಕಾರಣ ಇದರಲ್ಲಿ ಬರುವ ವ್ರಿಹಿ (ಭತ್ತ) ಹಾಗೂ ನರೆದಲಗ (ರಾಗಿ)ಗಳ ಸಂವಾದ ಜಾತಿಗಳ ನಡುವಿನ ವಿಷಮತೆಯನ್ನೂ, ಬಂಡಾಯದ ಧ್ವನಿಯಾಗಿಯೂ, ಶ್ರೀಮಂತ ಬಡವರ ಪ್ರತಿನಿಧಿಗಳಾಗಿ ಮತ್ತು ಸಂಸ್ಕೃತ ಕನ್ನಡ ಭಾಷೆಗಳ ವಾದವಾಗಿಯೂ ನೋಡುವುದರಿಂದ ಈ ಕೃತಿಗೆ ಹೆಚ್ಚಿನ ಹೆಗ್ಗಳಿಕೆ ಇದೆ. ಭತ್ತ ಮತ್ತು ರಾಗಿಗಳ ಜಗಳ, ಇದು ಪರಿಹಾರಗೊಂಡ ರೀತಿಯನ್ನು ಇಲ್ಲಿ ನಿರೂಪಿಸಲಾಗಿದೆ.

ಕೆಲರು ಗೋದಿಯ ಸಾಮೆಯನು ಕೆಲ
ಕೆಲರು ನವಣೆಯ ಕಂಬು ಜೋಳವ
ಕೆಲವು ಹಾರಕವೆಂದು ಕೆಲವರು ನೆಲ್ಲನತಿಶಯುವ
ಕೆಲರು ನರೆದಲೆಗನನು ಪತಿಕರಿ
ಸಲದ ನೋಡಿದ ನೃಪತಿಯದರೊಳು
ಹಲವು ಮತವೇಕೊಂದನೇ ಪೇಳೆನಲು ಗೌತಮನು.

ದಾಶರಥಿ ಚಿತ್ತೈಸು ನಮ್ಮಯ
ದೇಶಕತಿಶಯ ನರೆದಲೆಗನೇ
ವಾಸಿಯುಳ್ಳವನೀತ ಮಿಕ್ಕಿನ ಧಾನ್ಯವೇಕೆನಲು,
ಲೇಸನಾಡಿದೆ ಮುನಿಪ ಗೌತಮ
ದೋಷರಹಿತನು ಪಕ್ಷಪಾತವ
ನೀಸು ಪರಿಯಲಿ ಮಾಡುವರೆ ಶಿವಯೆಂದನಾವ್ರಿಹಿಗ.



ಎಲ್ಲ ಧರ್ಮದ ಸಾರವನು ನೀವ್
ಬಲ್ಲಿರರಿಯಿರೆ ಎಲ್ಲರನು ನೀ
ವಿಲ್ಲಿ ನುಡಿವ ಉಪೇಕ್ಷೆಯುಂಟೇ ಸಾಕದಂತಿರಲಿ
ನೆಲ್ಲು ನಾನಿರೆ ಗೋದಿ ಮೊದಲಾ
ದೆಲ್ಲ ಧಾನ್ಯಗಳಿರಲು ಇದರಲಿ
ಬಲ್ಲಿದನು ನರೆದಲೆಗನೆಂಬುದಿದಾವ ಮತವೆಂದ.

ಏನೆಲವೊ ನರೆದಲಗ ನೀನು ಸ
ಮಾನನೇ ಎನಗಿಲ್ಲಿ ನಮ್ಮನು
ದಾನವಾಂತಕ ಬಲ್ಲನಿಬ್ಬರ ಹೆಚ್ಚು ಕುಂದುಗಳ
ಜಾನಕೀ ಪತಿ ಸನಿಹದಲಿ ಕುಲ
ಹೀನ ನೀನು ಪ್ರತಿಷ್ಠ ಸುಡು ಮತಿ
ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ.

ಕ್ಷಿತಿಯಮರರುಪನಯನದಲಿ ಸು
ವ್ರತ ಸುಭೋಜನ ಪರಮ ಮಂತ್ರಾ
ಕ್ಷತೆಗಳಲಿ ಶುಭಶೋಭನದಲಾರತಿಗೆ ಹಿರಿಯರಲಿ
ಕ್ರತುಗಳೆಡೆಯೊಳಗರಮನೆಯಲಿ
ಪ್ರತಿದಿನವು ರಂಜಿಸುತ ದೇವರಿ
ಗತಿಶಯದ ನೈವೇದ್ಯ ತಾನಿಹೆನೆಂದನಾ ವ್ರಿಹಿಗ

ಸತ್ವಹೀನನು ಬಡವರನು ಕ
ಣ್ಣೆತ್ತಿನೋಡೆ ಧನಾಢ್ಯರನು, ಬೆಂ
ಬತ್ತಿ ನಡೆವ ಅಪೇಕ್ಷೆನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ

ಪತ್ರ ನೀನಹೆ ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕರವೆಂದ.

ಮಳೆದೆಗೆದು ಬೆಳೆಯಡಗಿ ಕ್ಷಾಮದ
ವಿಲಯಕಾಲದೊಳನ್ನವಿಲ್ಲದೆ
ಅಳಿವ ಪ್ರಾಣಿಗಳಾದರಿಸಿ ಸಲಹುವೆನು ಜಗವರಿಯೆ
ಎಲವೊ ನೀನೆಲ್ಲಿಹೆಯೊ ನಿನ್ನಯ
ಬಳಗವದು ತಾನೆಲ್ಲಿಹುದು ಈ
ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ.

ಮಸೆದುದಿತ್ತಂಡಕ್ಕೆ ಮತ್ಸರ
ಪಿಸುಣ ಬಲರತಿ ನಿಷ್ಠುರರು ವಾ
ದಿಸಲು ಕಂಡನು ನೃಪತಿ ಮನದಲಿ ನೋಡಿ ನಸುನಗುತ
ಹಿಸುಣರಿವದಿರ ಮತ್ಸರವ ಮಾ
ಣಿಸುವ ಹದನೇನೆನುತ ಯೋಚಿಸಿ
ದ ಸುರ ಮುನಿಪರ ನೋಡೆ ಗೌತಮ ಮುನಿಪನಿಂತೆಂದ.

ಅರಸುಗಳು ನಾವೆಲ್ಲ ಭೂಮೀ
ಸುರರುನೆರೆದಿಹ, ದಾನವರು ವಾ
ನರರು ನಮಗೀ ನ್ಯಾಯವನು ಪರಿಹರಿಸಲಳವಲ್ಲ
ಕರಸುವೆವು ಹರಿಹರವಿರಂಚಾ
ಧ್ವರನಯೋಧ್ಯೆಗೆ ಅವರ ಗುಣವಾ
ಧರಿಸಿ ಪೇಳ್ವರು ನಯದೊಳೆಂದನುರಾಮ ನಸುನಗುತ.

ಪರಮ ಧಾನ್ಯದೊಳಿಬ್ಬರೇ ಇವ
ರಿರಲಿ ಸೆರೆಯೊಳಗಾರು ತಿಂಗಳು
ಹಿರಿದು ಕಿರಿದೆಂಬಿವರ ಪೌರುಷವರಿಯಬಹುದಿನ್ನು
ಪುರಕೆ ಗಮನಿಸಿ ನಾವು ನಿಮ್ಮನು
ಕರೆಸುವೆವು ಕೇಳೆನುತಯೋಧ್ಯಾ
ಪುರಿಗೆ ಪಯಣವ ಮಾಡಹೇಳಿದನಾವಿಭೀಷಣಗೆ.

ಕೃತಿಕಾರರ ಪರಿಚಯ



ಸಂತ ಕವಿ, ಹರಿದಾಸ ಪರಂಪರೆಯ ಮತ್ತು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರೆಸಿದ ಖ್ಯಾತಿಗೆ ಭಾಜನರಾದವರು ಕನಕದಾಸರು. ಇವರ ಮೊದಲ ಹೆಸರು ತಿಮ್ಮಪ್ಪನಾಯಕನೆಂದು. ಇವರು ಕಾಲ ಕ್ರಿ. ಶ. 1508. ಜನ್ಮಸ್ಥಳ ಹಾವೇರಿ ಜಿಲ್ಲೆಯ ಬಾಡ ಗ್ರಾಮದವರು. ತಂದೆ ಬೀರಪ್ಪ ಹಾಗೂ ತಾಯಿ ಬಚ್ಚಮ್ಮ. ಇವರ ಆರಾಧ್ಯ ದೈವ ಹಾಗೂ ಅಂಕಿತನಾಮ ಕಾಗಿನೆಲೆ ಆದಿಕೇಶವ. ವಿಜಯನಗರ ಸಾಮ್ರಾಜ್ಯದಲ್ಲಿ ಸಣ್ಣ ಮಂಡಲವೊಂದರ ಡಣ್ಣಾಯಕರಾಗಿದ್ದ ತಿಮ್ಮಪ್ಪನಾಯಕನಿಗೆ ಕೊಪ್ಪರಿಗೆ ಹೊನ್ನು ದೊರೆತು ಈ ಬಂಗಾರವನ್ನೆಲ್ಲ ಬಡವರಿಗೆ ದಾನಮಾಡಿ ವೈರಾಗ್ಯ ಹೊಂದಿ ಕನಕದಾಸರಾದರು. ಇವರ ವಿಶಿಷ್ಟ ಗುಣಗಳಾದ ಭಕ್ತಿ, ವೈರಾಗ್ಯ, ಕಾವ್ಯ ರಚನಾ ಗುಣಗಳು ವ್ಯಾಸರಾಯರ ಶಿಷ್ಯರಾಗುವಂತೆ ಮಾಡಿತು. ಇವರು ರಚಿಸಿರುವ ಕೃತಿಗಳು ಹರಿಭಕ್ತಿಸಾರ, ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ಮತ್ತು ನಳಚರಿತ್ರೆ. ಇವಲ್ಲದೆ ನೂರಾರು ಕೀರ್ತನೆಗಳು, ಉಗಾಭೋಗ, ಸುಳಾಧಿಗಳು ಮತ್ತು ಮಂಡಿಗೆಗಳನ್ನು ರಚಿಸಿದ್ದಾರೆ.

ಆಶಯ ಭಾವ

ಪ್ರತಿಯೊಂದು ಜೀವಿಯ ಬದುಕಿಗೆ ಅತ್ಯಗತ್ಯವಾಗಿರುವ ವಸ್ತುಗಳಲ್ಲಿ ಆಹಾರವು ಒಂದು. ಆಹಾರವಿಲ್ಲದೇ ಯಾವುದೇ ಜೀವಿಯು ಬದುಕಲಾರದು. ಇಂಥಹ ಆಹಾರ ಧಾನ್ಯಗಳ ಮಹತ್ವವನ್ನು ತಿಳಿಸುವ ಮೂಲಕ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಪರಂಪರೆಯನ್ನು ಇಲ್ಲಿ ಮಾರ್ಮಿಕವಾಗಿ ಬಿಂಬಿತವಾಗಿದೆ. ರಾಮಧಾನ್ಯ ಚರಿತ್ರೆ ನರೆದಲಗ (ರಾಗಿ) ವ್ರಿಹಿ (ಭತ್ತ) ಯರ ನಡುವಿನ ಜಗಳದ ಕಥೆ ಹಾಗೂ ಪರಿಹಾರಗೊಂಡ ರೀತಿಯ ನಿರೂಪಣೆ ಇದರ ಕಥಾವಸ್ತು. ಇದು ಪುರಾಣಗಳಲ್ಲಿ ಮತ್ತು ಸಾಮಾಜಿಕ ವಸ್ತುಗಳ ರೂಪಕ ವಿಧಾನದಲ್ಲಿ ಸಹಜವಾಗಿ ಮಿಳಿತಗೊಂಡಿದೆ. ಇಲ್ಲಿಯ ಪಾತ್ರಗಳು ಪ್ರಾಣಿಗಳು ಅಥವಾ ಮಾನವರಲ್ಲ. ಧಾನ್ಯ, ಜೀವ ಬೀಜಗಳಾಗಿವೆ.

ಧನಿಕರ ಆಹಾರವೆನಿಸಿದ ಭತ್ತ ಹಾಗೂ ಕೆಳವರ್ಗದ ಆಹಾರ ದಾನ್ಯವೆನಿಸಿದ ರಾಗಿಯ ನಡುವಿನ ಸಂಭಾಷಣೆಯ ಮೂಲಕ ರಾಗಿ ಹೇಗೆ ತನ್ನ ಔಚಿತ್ಯವನ್ನು ಸಾಬೀತು ಪಡಿಸುತ್ತದೆ ಹಾಗೂ ರಾಮಧಾನ್ಯವೆಂಬ ಹೆಸರು ಪಡೆಯುತ್ತದೆ ಎಂಬುದನ್ನು ನಾಟಕೀಯವಾಗಿ ಈ ಕೃತಿಯಲ್ಲಿ ನಿರೂಪಿತವಾಗಿದೆ. ಕನಕದಾಸರು ರಾಗಿಯ ನೆಪ ಹಿಡಿದು ತಮ್ಮ ಆತ್ಮಚರಿತ್ರೆಯನ್ನು ಹೇಳುತ್ತಿರುವಂತೆ ತೋರುತ್ತದೆ. ವ್ರಿಹಿ (ಭತ್ತ) ಹಾಗೂ ನರೆದಲಗ (ರಾಗಿ) ಯ ನಡುವಿನ ಸಂಭಾಷಣೆಯು ಕನಕದಾಸರ ಸೃಜನಶೀಲತೆ, ಅತಿಶಯವನ್ನು ಸಾರುತ್ತದೆ. ರಾಮಧಾನ್ಯ ಚರಿತ್ರೆ ಈ ಕೃತಿಯು ಬಂಡಾಯ ಸಾಹಿತ್ಯದ ಬೇರು ಹಾಗೂ ನವ್ಯೋತ್ತರದ ಸೂರು ಎಂದರೆ ತಪ್ಪಾಗಲಾರದು.

ಡಾ. ಸಾ. ಶಿ. ಮರುಳಯ್ಯ ಅವರು ಸಂಪಾದಿಸಿರುವ ಕನಕದಾಸರ ಕಾವ್ಯಭಾಗ-1 ಕೃತಿಯಿಂದ ಆಯ್ದು ನಿಗದಿಪಡಿಸಿದೆ. (ಕನಕ ಸಾಹಿತ್ಯ ದರ್ಶನ ಸಂಪುಟ-2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.)

ಪೂರ್ವ ಕಥೆ:

ಧರ್ಮರಾಯನು ತಮ್ಮಂದಿರನೊಡಗೂಡಿ ಹದಿನಾಲ್ಕು ವರ್ಷ ವನವಾಸಕ್ಕಾಗಿ ಕಾಮ್ಯಕದಲ್ಲಿರುವ ಸಂದರ್ಭ. ಶಾಂಡಿಲ್ಯ ಮುನಿಗಳು ತಮ್ಮ ಮುನಿಪರಿವಾರದೊಂದಿಗೆ ಆಗಮಿಸುತ್ತಾರೆ. ಧರ್ಮಜನು ಯಥಾರ್ಥವಾಗಿ ಸತ್ಕರಿಸುತ್ತಾನೆ. ಅರಣ್ಯವಾಸದ ಕ್ಲೇಶ ಸಂಕಷ್ಟಗಳ ಪರಿಹಾರಾರ್ಥಕವಾಗಿ ಶಾಂಡಿಲ್ಯಮುನಿಗಳು ಶ್ರೀರಾಮಚಂದ್ರನ ಚರಿತ್ರೆಯನ್ನು ನರೆದಲಗ (ರಾಗಿ) ಮತ್ತು ವ್ರೀಹಿ(ಭತ್ತ)ಯರ ಕಥೆಯನ್ನು ವಿವರಿಸುತ್ತಾರೆ. ರಾಮನ ಜನನದಿಂದ ಆರಂಭಿಸಿ, ರಾವಣ ಸಂಹಾರಿಸಿ, ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿ ದಾನವ ವಾನರ ಮುಖ್ಯರನ್ನು ಕೂಡಿಕೊಂಡು ಅಯೋಧ್ಯಾ ಅಭಿಮುಖವಾಗಿ ಪ್ರಯಾಣ ಬೆಳೆಸುತ್ತಾನೆ. ಪ್ರಯಾಣ ಕಾಲದಲ್ಲಿ ಸೀತೆಗೆ ರಮಣೀಯ ದೃಶ್ಯಗಳನ್ನು ತೋರಿಸುತ್ತಾ, ಋಷಿಗಳನ್ನು ಸಂದರ್ಶಿಸಿ ಅವರ ಆಶೀರ್ವಾದ ಪಡೆಯುತ್ತಾ ಮುಂದುವರೆಯುತ್ತಾನೆ. ಗೌತಮ ಮುನಿಯ ಆಶ್ರಮದಲ್ಲಿ ಬೆಲ್ಲ, ಸಕ್ಕರೆ, ಜೇನುತುಪ್ಪದ ರಸಾಯನಗಳು ಹಾಗೂ ವಿವಿಧ ಧಾನ್ಯಗಳಿಂದ ತಯಾರಿಸಿದ ಭಕ್ಷಗಳ ಸಮಾರಾಧನೆ ಯಾಗುತ್ತದೆ. ಈ ಭಕ್ಷ್ಯಗಳ ರುಚಿ ತಾರತಮ್ಯದ ಬಗೆಗೆ ಮಾತುಕತೆಯಾಗುತ್ತದೆ. ಶ್ರೀರಾಮ ಹನುಮಂತನೊಡನೆ ಈ ವಿಷಯವನ್ನು ಪ್ರಸ್ತಾಪಿಸಿದಾಗ, ಅವನು ಎನಗೆ ಸವಿಯುವುದಿನ್ನು ಧಾನ್ಯದ ತನುವನೀಕ್ಷಿಸಬೇಕು ದೇವರು ತರಿಸಿ ಎಂದು ಕೇಳಿಕೊಳ್ಳುತ್ತಾನೆ. ಗೌತಮನು ಧಾನ್ಯಗಳನ್ನು ತರಿಸುತ್ತಾನೆ. ಧಾನ್ಯಗಳ ಶ್ರೇಷ್ಠತೆಯ ಬಗ್ಗೆ ಚರ್ಚಿತವಾಗುತ್ತದೆ.

ಪದವಿಂಗಡಣಾ ಓದು

1. ಕೆಲರು ಗೋದಿಯ ಸಾಮೆಯನು ಕೆಲ ಕೆಲರು ನವಣೆಯ ಕಂಬು ಜೋಳವ ಕೆಲವು ಹಾರಕ + ಎಂದು ಕೆಲವರು ನೆಲ್ಲನು + ಅತಿಶಯವ ಕೆಲವರು ನರೆದಲಗನನು ಪತಿಕರಿಸಲು + ಅದ ನೋಡಿದ ನೃಪತಿಯು + ಅದರೊಳು ಹಲವು ಮತವು + ಏಕೆ + ಒಂದನೇ ಪೇಳು + ಎನಲು ಗೌತಮನು.

2. ದಾಶರಥಿ ಚಿತ್ತೈಸು ನಮ್ಮಯ ದೇಶಕೆ + ಅತಿಶಯ ನರೆದಲಗನೇ ವಾಸಿ + ಉಳ್ಳವನು + ಈತ ಮಿಕ್ಕಿನ ಧಾನ್ಯವು + ಏಕೆ + ಎನಲು ಲೇಸನು + ಆಡಿದೆ ಮುನಿಪ ಗೌತಮ ದೋಷರಹಿತನು ಪಕ್ಷಪಾತವನು + ಈಸು ಪರಿಯಲಿ ಮಾಡುವರೆ ಶಿವ + ಎಂದನು ಆ ವ್ರೀಹಿಗ.

3. ಎಲ್ಲ ಧರ್ಮದ ಸಾರವನು ನೀವ್ ಬಲ್ಲಿರಿ ಅರಿಯಿರೆ ಎಲ್ಲರನು ನೀವು + ಇಲ್ಲಿ ನುಡಿವ ಉಪೇಕ್ಷೆ + ಉಂಟೇ ಸಾಕು + ಅದಂತಿರಲಿ ನೆಲ್ಲು ನಾನು + ಇರೆ ಗೋದಿ ಮೊದಲಾದ + ಎಲ್ಲ ಧಾನ್ಯಗಳು + ಇರಲು ಇದರಲಿ ಬಲ್ಲಿದನು ನರೆದಲಗನು + ಎಂಬುದು + ಇದು + ಆವ ಮತ + ಎಂದ.

4. ಏನು + ಎಲವೊ ನರೆದಲಗ ನೀನು ಸಮಾನನೇ ಎನಗೆ + ಇಲ್ಲಿ ನಮ್ಮನು ದಾನವಂತಕ ಬಲ್ಲನು + ಇಬ್ಬರ ಹೆಚ್ಚು ಕುಂದುಗಳ ಜಾನಕೀ ಪತಿ ಸನ್ನಿಹದಲಿ ಕುಲಹೀನ ನೀನು ಪ್ರತಿಷ್ಠ ಸುಡು ಮತಿಹೀನ ನೀನು + ಎಂದು + ಎನುತ ಖತಿಯಲಿ ಬೈದು ಭಂಗಿಸಿದ.

5. ಕ್ಷಿತಿಯಮರರ + ಉಪನಯನದಲಿ ಸುವ್ರತ ಸುಭೋಜನ ಪರಮ ಮಂತ್ರಾಕ್ಷತೆಗಳಲಿ ಶುಭ ಶೋಭನದಲಿ + ಆರತಿಗೆ ಹಿರಿಯರಲಿ ಕ್ರತುಗಳ + ಎಡೆಯ + ಒಳಗೆ + ಅರಮನೆಯಲಿ ಪ್ರತಿ ದಿನವು ರಂಜಿಸುತ ದೇವರಿಗೆ + ಅತಿಶಯದ ನೈವೇದ್ಯ ತಾನು + ಇಹೆನು + ಎಂದನು + ಆ ವ್ರಿಹಿಗ.

6. ಸತ್ವಹೀನನು ಬಡವರನು ಕಣ್ಣೆತ್ತಿ ನೋಡೆ ಧನಾಢ್ಯರನು ಬೆಂಬತ್ತಿ ನಡೆವ ಅಪೇಕ್ಷೆ ನಿನ್ನದು ಹೇಳಲು + ಏನು + ಅದನು ಹೆತ್ತ ಬಾಣಂತಿಯರು ರೋಗಿಗೆ ಪತ್ಯ ನೀನು + ಇಹೆ ಹೆಣದ ಬಾಯಿಗೆ ತುತ್ತು ನೀನು + ಇಹೆ ನಿನ್ನ ಜನ್ಮ ನಿರರ್ಥಕರವು + ಎಂದ.

7. ಮಳೆ + ತೆಗೆದು ಬೆಳೆಯು + ಅಡಗಿ ಕ್ಷಾಮದ ವಿಲಯ ಕಾಲದೊಳ್ + ಅನ್ನ + ಇಲ್ಲದೆ ಅಳಿವ ಪ್ರಾಣಿಗಳ + ಆದರಿಸಿ ಸಲಹುವೆನು ಜಗವು + ಅರಿಯೆ ಎಲವೊ ನೀನು + ಎಲ್ಲಿ + ಇಹೆಯೊ ನಿನ್ನಯ ಬಳಗವದು ತಾನು + ಎಲ್ಲಿ + ಇಹುದು ಈ ಹಲವು ಹುಲು ಧಾನ್ಯಗಳು + ಎನಗೆ ಸರಿದೊರೆಯೆ ಕೇಳು + ಎಂದ.

8. ಮಸೆದುದು + ಇತ್ತಂಡಕ್ಕೆ ಮತ್ಸರ ಪಿಸುಣ ಬಲರು + ಅತಿ ನಿಷ್ಠುರರು ವಾದಿಸಲು ಕಂಡನು ನೃಪತಿ ಮನದಲಿ ನೋಡಿ ನಸು ನಗುತ ಹಿಸುಣರ್ + ಇವದಿರ ಮತ್ಸರವ ಮಾಣಿಸುವ ಹದನ + ಏನು + ಎನುತ ಯೋಚಿಸಿದ ಸುರ ಮುನಿಪರ ನೋಡೆ ಗೌತಮ ಮುನಿಪನು + ಇಂತು + ಎಂದ.

9. ಅರಸುಗಳು ನಾವೆಲ್ಲ ಭೂಮೀ ಸುರರು ನೆರೆದಿಹ ದಾನವರು ವಾನನರು ನಮಗೆ + ಈ ನ್ಯಾಯವನು ಪರಿಹರಿಸಲು + ಅಳವಲ್ಲ ಕರಸುವೆವು ಹರಿ ಹರ ವಿರಂಚಿ + ಆದ್ಯರನು + ಅಯೋಧ್ಯೆಗೆ ಅವರ ಗುಣವ + ಆಧರಿಸಿ ಪೇಳ್ವರು ನಯದೊಳ್ + ಎಂದನು ರಾಮ ನಸು ನಗುತ.

10. ಪರಮ ಧಾನ್ಯದೊಳ್ + ಇಬ್ಬರೇ ಇವರು + ಇರಲಿ ಸೆರೆಯೊಳಗೆ + ಆರು ತಿಂಗಳು ಹಿರಿದು ಕಿರಿದು + ಎಂಬ + ಇವರ ಪೌರುಷವ + ಅರಿಯಬಹುದು + ಇನ್ನು ಪುರಕೆ ಗಮನಿಸಿ ನಾವು ನಿಮ್ಮನು ಕರೆಸುವೆವು ಕೇಳು + ಎನುತ + ಅಯೋಧ್ಯಾಪುರಿಗೆ ಪಯಣವ ಮಾಡ ಹೇಳಿದನು + ಆ + ವಿಭೀಷಣಗೆ.

ಪದಗಳ ಅರ್ಥ

ಕ್ರತು- ಯಾಗ, ಯಜ್ಞ; ಕ್ಷಿತಿಯಮರರು- ಬ್ರಾಹ್ಮಣರು; ಖತಿ- ಕೋಪ, ದುಃಖ, ಅಳಲು; ನೆರೆದಲೆ- ರಾಗಿ; ನೆಲ್ಲು- ಭತ್ತ; ಪಕ್ಷಪಾತ- ಭೇದಭಾವ; ಪತಿಕರಿಸಲು- ಅಂಗೀಕರಿಸಲು; ಪಿಸುಣ- ಚಾಡಿಕೋರ, ನೀಚ;ಪ್ರತಿಷ್ಠೆ- ಗರ್ವ; ವಿರಂಚಿ- ಬ್ರಹ್ಮ, ಅಜ; ವ್ರಿಹಿಕ- ಭತ್ತ; ಹದನು- ರೀತಿ, ಕ್ರಮ; ಹಿಸುಣ- ಕುತ್ಸಿತ ಬುದ್ಧಿಯುವ

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ದೇಶಕೆ ಅತಿಶಯವಾದ ಧಾನ್ಯ ಯಾವುದು?
2. ವ್ರಿಹಿ ಯಾರ ಬಾಯಿಗೆ ತುತ್ತು ಎಂದು ಹೇಳಿದೆ?
3. ದಾಶರಥಿ ಎಂದರೆ ಯಾರು?
4. ನರೆದಲಗ ಯಾರನ್ನು ಆದರಿಸಿ ಸಲಹುತ್ತದೆ?
5. ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?
6. ಸೆರೆಗೆ ಯಾರು ಯಾರನ್ನು ಹಾಕಲಾಗುತ್ತದೆ?

II. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಶ್ರೇಷ್ಠವೆಂದು ಹೇಳಲಾಗಿರುವ ಧಾನ್ಯಗಳಾವುವು?
2. ಗೌತಮರು ನರೆದಲಗನೆ ಶ್ರೇಷ್ಠವೆನ್ನಲು ವ್ರಿಹಿಯು ಹೇಳಿದ್ದೇನು?
3. ವ್ರಿಹಿಯನ್ನು ಯಾವಯಾವ ಮಂಗಳ ಕಾರ್ಯಗಳಲ್ಲಿ ಬಳಸಲಾಗುತ್ತದೆ?
4. ನರೆದಲಗನು ವ್ರಿಹಿಯನ್ನು ಏನೆಂದು ಹೀಯಾಳಿಸಿತು?
5. ಶ್ರೀರಾಮನು ಧಾನ್ಯಗಳ ವಿಚಾರದಲ್ಲಿ ಕೈಗೊಂಡ ತೀರ್ಮಾನವೇನು?

III. ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ.

1. ಶ್ರೀರಾಮನು ನರೆದಲಗ ಹಾಗೂ ವ್ರಿಹಿಯನ್ನು ಸೆರಮನೆಗೆ ಹಾಕಲು ಕಾರಣವೇನು?

2. ನರೆದಲಗ ಹಾಗೂ ವ್ರಿಹಿಗಳ ನಡುವೆ ನಡೆದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

IV. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ನಮ್ಮಯ ದೇಶಕತಿಶಯ ನರೆದಲಗ"
2. "ಕುಲಹೀನ ನೀನು ಪ್ರತಿಷ್ಠ ಸುಡು ಮತಿಹೀನ ನೀನು"
3. "ವಿಲಯಕಾಲದೊಳನ್ನವಿಲ್ಲದೆ ಅಳಿವ ಪ್ರಾಣಿಗಳಾಧರಿಸಿ ಸಲಹುವೆ"
4. "ಇವರಿರಲಿ ಸೆರೆಯೊಳಗಾರು ತಿಂಗಳು"

V. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

1. ಪುರಂದರದಾಸರು: ಪುರಂದರವಿಠಲ :: ಕನಕದಾಸರು: _______.
2. ವ್ರಿಹಿ: ಭತ್ತ :: ನರೆದಲಗ: _______.
3. ಬಾಣಂತಿಯರಿಗೆ: ಪಥ್ಯ :: ಹೆಣದ ಬಾಯಿಗೆ: _______.
4. ಕ್ಷಿತಿ: ಭೂಮಿ :: ವಿರಂಚಿ: _______.
5. ಸೆರೆಯೊಳಗೆ: ಆಗಮಸಂಧಿ :: ತಾನೆಲ್ಲಿ: _______.

VI. ಗುಂಪಿಗೆ ಸೇರದ ಪದಗಳನ್ನು ಆಯ್ದು ಬರೆಯಿರಿ.

1. ಹರಿಭಕ್ತಸಾರ, ರಾಮಧಾನ್ಯಚರಿತ್ರೆ, ರಾಮಾಶ್ವವಮೇಧ, ನಳಚರಿತ್ರೆ
2. ಕನಕದಾಸರು, ಪುರಂದರದಾಸರು, ವ್ಯಾಸರಾಯರು, ಬಸವಣ್ಣ.
3. ವ್ರಿಹಿ, ಗೋಧಿ, ನೆಲ್ಲು, ಭತ್ತ
4. ಗುಣಸಂಧಿ, ಲೋಪಸಂಧಿ, ಆಗಮಸಂಧಿ, ಆದೇಶಸಂಧಿ.

ಸೈದ್ಧಾಂತಿಕ ಭಾಷಾಭ್ಯಾಸ

ಮಾತ್ರಾಗಣ: ಪರಿಚಯಾತ್ಮಕ ವಿವರ

ಮಾತ್ರೆ: ಛಂದಶ್ಶಾಸ್ತ್ರದಲ್ಲಿ ಮಾತ್ರೆ, ಎಂದರೆ ಕಾಲವನ್ನು ಅಳೆಯುವ ಮಾನ. ಒಂದು ಹ್ರಸ್ವ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವೇ ಒಂದು ಮಾತ್ರಾಕಾಲ. ಮಾತ್ರೆಗಳಲ್ಲಿ

ಲಘು ಮತ್ತು ಗುರು ಎಂಬ ಎರಡು ವಿಧಗಳಿವೆ. ಲಘುವನ್ನು ‘U’ ಎಂತಲೂ ಗುರುವನ್ನು ‘__’ ಎಂತಲೂ ಗುರುತಿಸಲಾಗುವುದು.

ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಲಘು. ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಗುರು.

ಗುರು ಎನಿಸುವ ಅಕ್ಷರಗಳು:

1. ದೀರ್ಘಾಕ್ಷರಗಳು	__ U	__U U
	ಕಾ ಲು	ಆ ಗ ಸ
2. ಸಂಯುಕ್ತಾಕ್ಷರದ ಹಿಂದಿನ ಅಕ್ಷರ	__ U U	__ U U
	ಅ ಕ್ಷ ರ	ಭ ಕ್ಷ ಣೆ
3. ಅನುಸ್ವಾರ, ವಿಸರ್ಗಗಳಿಂದ ಕೂಡಿರುವ ಅಕ್ಷರ	__ UU	__ U
	ಬಂದನು	ದುಃಖ

ವ್ಯಂಜನಾಕ್ಷರದ ಹಿಂದಿನ ಅಕ್ಷರ	UU__	U U__
	ಬರುವಳ್	ಮರಗಳ್
ಐ, ಔ ಸಹಿತವಾದ ಅಕ್ಷರ	__ U	__ U U
	ಗೈಮೆ	ಔ ಷ ಧ

ಷಟ್ಪದಿಯ ಮೂರು ಮತ್ತು ಆರನೆಯ ಪಾದಗಳ ಕೊನೆಯ ಅಕ್ಷರ:

ಈ ಅಕ್ಷರಗಳು ಒಂದು ಮಾತ್ರಾ ಲಕ್ಷಣ ಕೂಡಿದ್ದರೂ ಹಾಡುವಾಗ ಎರಡು ಮಾತ್ರಾಕಾಲಗಳಲ್ಲಿ ಉಚ್ಚರಿಸಲ್ಪಡುತ್ತವೆ ಹಾಗಾಗಿ ಈ ಅಕ್ಷರಗಳು ಗುರು ಎನಿಸಿಕೊಳ್ಳುವ ಯಾವುದೇ ಲಕ್ಷಣಗಳನ್ನು ಪಡೆಯದಿದ್ದರೂ ಗುರುವಾಗಿಯೇ ಪರಿಗಣಿಸಲ್ಪಡುತ್ತವೆ.

4 — — ಕಾ ವೇ	4 U — U ರಿ ಯಿಂದ	4 — — ಮಾ ಗೋ		
4 — U U ದಾ ವ ರಿ	4 U U — ವ ರ ಮಿ	4 U — U ರ್ದ ನಾ ಡು	4 — — ದಾ ಕ	4 U U — ನ್ನ ಡ ದೊಳ್
4 — U U ಭಾ ವಿ ಸಿ	4 U U U U ದ ಜ ನ ಪ	4 — U U ದಂ ವ ಸ		
4 — U U ಧಾ ವ ಳ	4 U U — ಯ ವಿ ಲೀ	4 U U U U ನ ವಿ ಶ ದ	4 U U U U ವಿ ಷ ಯ ವಿ	4 — — ಶೇ ಷ

ಮಾತ್ರಾಗಣ: ಮಾತ್ರೆಗಳ ಆಧಾರದಿಂದ ಗಣವಿಭಾಗ ಮಾಡಲಾಗುವ ಮಾತ್ರಾಗಣದಲ್ಲಿ ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ ಮತ್ತು ಐದು ಮಾತ್ರೆಯ ಗಣ ಎಂಬುದಾಗಿ ಮೂರು ವಿಧಗಳಿವೆ. ಕಂದ, ಷಟ್ಪದಿ, ರಗಳೆ ಛಂದಸ್ಸುಗಳು ಮಾತ್ರಾಗಣ ಆಧಾರಿತ ಛಂದಸ್ಸುಗಳು.

ಕಂದ: ಮಾತ್ರಾಗಣ ಆಧಾರಿತ ಛಂದಸ್ಸುಗಳಲ್ಲಿ ಕಂದ ಕೂಡಾ ಒಂದು. ಇದು ಚೌಪದಿಯಾಗಿರುತ್ತದೆ. ಕೊಟ್ಟಿರುವ ಪದ್ಯದ ಆಧಾರದಿಂದ ಇದರ ಲಕ್ಷಣಗಳನ್ನು ತಿಳಿದುಕೊಳ್ಳಬಹುದು.

ಈ ಪದ್ಯದಲ್ಲಿ ನಾಲ್ಕು ಪಾದಗಳಿವೆ. ಒಂದು ಮತ್ತು ಮೂರನೆಯ ಪಾದಗಳಲ್ಲಿ ತಲಾ ಹನ್ನೆರಡು ಮಾತ್ರೆಗಳಿವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ತಲಾ ಇಪ್ಪತ್ತು ಮಾತ್ರೆಗಳಿವೆ. ಒಂದು ಮತ್ತು ಮೂರನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಪರಸ್ಪರ ಸಮವಾಗಿವೆ. ಹಾಗೆಯೇ ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿವೆ. ಹಾಗಾಗಿ ಮೊದಲೆರಡು ಪಾದಗಳನ್ನು ಪೂರ್ವಾರ್ಧ ಎಂತಲೂ ಮೂರು ಮತ್ತು ನಾಲ್ಕನೆಯ ಪಾದಗಳನ್ನು ಉತ್ತರಾರ್ಧವೆಂತಲೂ ಕರೆಯಬಹುದು. ಪ್ರತಿಪಾದಗಳೂ ತಲಾ ನಾಲ್ಕು ಮಾತ್ರೆಗಳ ಗಣದಂತೆ ವಿಭಾಗಿಸಲ್ಪಟ್ಟಿವೆ.

ಲಕ್ಷಣ:

1. ನಾಲ್ಕು ಪಾದಗಳಿರಬೇಕು.
2. ಒಂದು ಮತ್ತು ಮೂರನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಮೂರು ಮೂರು ಗಣಗಳಿರಬೇಕು.
3. ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಐದೈದು ಗಣಗಳಿರಬೇಕು.
4. ಪ್ರತಿ ಪಾದವೂ ಆದಿಪ್ರಾಸದಿಂದ ಕೂಡಿರಬೇಕು.

ಷಟ್ಪದಿ: ಆರು ಪಾದಗಳಿಂದ ಕೂಡಿರುವ ಪದ್ಯವೇ ಷಟ್ಪದಿ. ಷಟ್ಪದಿಯಲ್ಲಿ ಶರ, ಕುಸುಮ, ಭೋಗ, ಭಾಮಿನಿ, ವಾರ್ಧಕ, ಪರಿವರ್ಧಿನಿ ಎಂಬ ಆರು ವಿಧಗಳಿವೆ. ಭಾಮಿನಿ ಷಟ್ಪದಿ ಇಂತಿದೆ:

3 U U U ಕ್ಷಿ ತಿ ಯ	4 U U U U ಮ ರ ರು ಪ	3 U U U ನ ಯ ನ	4 U U __ ದ ಲಿ ಸು			
3 U U U ವ್ರ ತ ಸು	4 __ U U ಭೋ ಜ ನ	3 U U U ಪ ರ ಮ	4 __ __ ಮಂ ತ್ರಾ			

3 U U U ಕ್ಷ ತೆ ಗ	4 U U U U ಳ ಲಿ ಶು ಭ	3 _ U ಶೋ ಭ	4 U U _ ನ ದ ಲಾ	3 U U U ರ ತಿ ಗೆ	4 U U U U ಹಿ ರಿ ಯ ರ	ಗು __ ಲಿ
3 U U U ಕ್ರ ತು ಗ	4 U U U U ಳೆ ಡೆ ಯೊ ಳ	3 U U U ಗ ರ ಮ	4 U U __ ನೆ ಯ ಲಿ			
3 U U U ಪ್ರ ತಿ ದಿ	4 U U ನ ವು	3 __ ರಂ	4 U U U ಜಿ ಸು ತ	__ U U ದೇ ವ ರಿ		
3 U U U ಗ ತಿ ಶ	4 U U __ ಯ ದ ನೈ	3 __ U ವೇ ದ್ಯ	4 __ U U ತಾ ನಿ ಹೆ	3 __ U ನೆಂ ದ	4 __ U U ನಾ ವ್ರಿ ಹಿ	ಗು __ ಗ

ಈ ಪದ್ಯದಲ್ಲಿ ಆರು ಪಾದಗಳಿವೆ. ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳಲ್ಲಿ ತಲಾ 14 ಮಾತ್ರೆಗಳಿವೆ. ಮೂರು ಮತ್ತು ಆರನೆಯ ಪಾದಗಳಲ್ಲಿ ತಲಾ 21 ಮಾತ್ರೆ ಮತ್ತು ಒಂದು ಗುರು ಇದೆ. ಮಾತ್ರಾಸಂಖ್ಯೆಯ ಆಧಾರದಿಂದ ನೋಡಿದಾಗ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಒಂದಕ್ಕೊಂದು ಸಮ. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮ. ಹಾಗಾಗಿ ಒಂದು, ಎರಡು ಮತ್ತು ಮೂರನೆಯ ಪಾದಗಳನ್ನು ಪೂರ್ವಾರ್ಧವೆಂತಲೂ ನಾಲ್ಕು, ಐದು ಮತ್ತು ಆರನೆಯ ಪಾದಗಳನ್ನು ಉತ್ತರಾರ್ಧವೆಂತಲೂ ಕರೆಯಬಹುದು. ಪ್ರತಿಪಾದಗಳ ಮಾತ್ರೆಗಳನ್ನು ಮೂರರ ಅನಂತರ ನಾಲ್ಕು ಮಾತ್ರೆಗಳ ಗಣಗಳಂತೆ ವಿಭಾಗಿಸಲಾಗಿದೆ. ಮೂರು ಮತ್ತು ಆರನೆಯ ಪಾದದ ಕೊನೆಯ ಅಕ್ಷರವನ್ನು ಗಣಕ್ಕೆ ಗಣಿಸಲಾಗಿಲ್ಲ.

ಲಕ್ಷಣ:

1. ಆರು ಪಾದಗಳಿರಬೇಕು.

2. ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಪರಸ್ಪರ ಸಮವಾಗಿದ್ದು ಮೂರು ಮಾತ್ರೆಗಳ ಅನಂತರ ನಾಲ್ಕು ಮಾತ್ರೆಗಳ ತಲಾ ಎರಡೆರಡು ಗಣಗಳಿರಬೇಕು. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮವಾಗಿದ್ದು ಮೂರು ಮಾತ್ರೆಗಳ ಅನಂತರ ನಾಲ್ಕು ಮಾತ್ರೆಗಳ ತಲಾ ಮೂರು ಮೂರು ಗಣಗಳು ಮತ್ತು ಒಂದು ಗುರು ಇರಬೇಕು.

3. ಪ್ರತಿಪಾದವೂ ಆದಿಪ್ರಾಸದಿಂದ ಕೂಡಿರಬೇಕು.

ಅಭ್ಯಾಸ ಚಟುವಟಿಕೆ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಮಾತ್ರೆ ಎಂದರೇನು? ಉದಾಹರಣೆ ಸಹಿತ ವಿವರಿಸಿ.
2. ಮಾತ್ರಾಗಣ ಎಂದರೇನು? ಅದರ ವಿಧಗಳಾವುವು? -ತಿಳಿಸಿ
3. ಕಂದಪದ್ಯದ ಲಕ್ಷಣಗಳೇನು?
4. ಷಟ್ಪದಿ ಎಂದರೇನು? ಭಾಮಿನಿ ಷಟ್ಪದಿಯ ಲಕ್ಷಣಗಳೇನು?

ಪ್ರಾಯೋಗಿಕ ಭಾಷಾಭ್ಯಾಸ

1. 'ರಾಮಧಾನ್ಯ ಚರಿತೆ' ಪದ್ಯದ ಮೊದಲನೆಯ (ಕೆಲರು _______ ಗೌತಮನು) ಚರಣಕ್ಕೆಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ.

ಪಠ್ಯಾಧಾರ ಚಟುವಟಿಕೆ

1. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.

1. 'ರಾಮಧಾನ್ಯ ಚರಿತೆ' ಪದ್ಯದ ಏಳನೆಯ ಚರಣ (ಮಳೆತೆಗೆದು _______ ಸರಿದೊರೆಯೆ ಕೇಳೆಂದ) ವನ್ನು ಕಂಠಪಾಠ ಮಾಡಿ.

ಪೂರಕ ಓದು:

2. ಕನಕದಾಸರು ರಚಿಸಿರುವ ರಾಮಧಾನ್ಯ ಚರಿತೆಯನ್ನು ಓದಿರಿ.

23. ಪಠ್ಯ ಪೂರಕ ಅಧ್ಯಯನ 1. ಕಟ್ಟುವೆವು ನಾವು -ಎಂ. ಗೋಪಾಲಕೃಷ್ಣ ಅಡಿಗ

ಕಟ್ಟುವೆವು ನಾವು ಹೊಸ ನಾಡೊಂದನು,
ರಸದ ಬೀಡೊಂದನು.
ಹೊಸನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ,
ಉತ್ಸಾಹಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು!

ನಮ್ಮೆದೆಯ ಕನಸುಗಳೇ ಕಾಮಧೇನು
ಆದಾವು, ಕರೆದಾವು ವಾಂಛಿತವನು;
ಕರೆವ ಕೈಗಿಹುದದೋ ಕನಸುಗಳ ಹರಕೆ;
ಗುರಿ ತಪ್ಪದೊಮ್ಮುಖದ ಬಯಕೆ ಬೆಂಬಲಕೆ!

ಜಾತಿಮತಭೇದಗಳ ಕಂದಕವು ಸುತ್ತಲೂ,
ದುರ್ಭೇದ್ಯವೆನೆ ಕೋಟೆಕೊತ್ತಲಗಳು;
ರೂಢಿರಾಕ್ಷಸನರಸುಗೈಯುವನು, ತೋಳ್ತಟ್ಟಿ
ತೊಡೆತಟ್ಟಿ ಕರೆಯುವನು ಸಂಗ್ರಾಮಕೆ!

ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು,


ನಮ್ಮ ಸಾವೇ ನೋವೆ ಹೊಸ ನಾಡ ತೊಟ್ಟಿಲು
ಆದಾವು; ಅಂಜುವೆದೆ ನಮ್ಮದಲ್ಲ;
ಸೋಲುಬಗೆ ವೀರನಿಗೆ ಸಲ್ಲ, ಹೊಲ್ಲ!

ಎಡರುಗಳ ಕಡಲುಗಳನೀಸಿ ಬರುವೆವು, ಘೋರ
ನೈರಾಶ್ಯದಗ್ನಿಮುಖದಲ್ಲು ಕೂಡ
ಹೊಕ್ಕು ಹೊರಡುವೆವೆಲ್ಲ ತೊಡುಕುಗಳ ಒಡಕುಗಳ
ಬಿಡಿಸಿ, ಇಡಿಗೊಳಿಸಿ ಕಟ್ಟುವೆವು ನಾಡ!

ಉತ್ಸಾಹ ಉದ್ವೇಗ ಉದ್ರೇಕಗಳ ವೀರ
ಯುವಜನದ ನಾಡ ಗುಡಿಯು;
ಅದರ ಹಾರಾಟಕ್ಕೆ ಬಾನೆ ಗಡಿಯು;
ಬರಲು ಬಿಡೆವೆಂದಿಗೂ ಅದಕೆ ತಡೆಯು!
ತಡೆವವರು ಬನ್ನಿರೋ, ಹೊಡೆವವರು ಬನ್ನಿರೋ,
ಕೆಡೆನುಡಿವ ಕೆಡೆಬಗೆವ ಕೆಡಕು ಜನರೇ ಬನ್ನಿ!
ಕೊಟ್ಟೆವಿದೊ ವೀಳೆಯವನು;
ನಿಮ್ಮೆಲ್ಲರನು ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸ ನಾಡೊಂದನು, ಸುಖದ ಬೀಡೊಂದನು.



ಕೃತಿಕಾರರ ಪರಿಚಯ



ಕನ್ನಡ ನಾಡಿನ ಪ್ರಮುಖ ನವ್ಯ ಕವಿಗಳಲ್ಲಿ ಒಬ್ಬರೆನಿಸಿದವರು ಎಂ. ಗೋಪಾಲಕೃಷ್ಣ ಅಡಿಗರು. ಇವರು ಕುಂದಾಪುರ ತಾಲ್ಲೂಕು ಕೆರ್ಗಾಲು ಗ್ರಾಮದ ಮೊಗೇರಿ ಎಂಬಲ್ಲಿ 18-02-1918 ರಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ. ಎ. ಆನರ್ಸ್ ಪದವಿಯನ್ನು ಹಾಗೂ ನಾಗಪುರ ವಿಶ್ವವಿದ್ಯಾಲಯಲ್ಲಿ ಇಂಗ್ಲಿಷ್ ಎಂ. ಎ. ಪದವಿ ಪಡೆದು ಹೈಸ್ಕೂಲು ಅಧ್ಯಾಪಕರಾಗಿ, ಇಂಗ್ಲಿಷ್ ಉಪನ್ಯಾಸಕರಾಗಿ, ಪ್ರೊಫೆಸರ್ ಮತ್ತು ಪ್ರಿನ್ಸಿಪಲ್‌ರಾಗಿ ಕಾರ್ಯನಿರ್ವಹಿಸಿದರು. ಬೆಂಗಳೂರಿನಲ್ಲಿ ನಿವೃತ್ತ ಜೀವನ ಕಳೆದ ಅಡಿಗರು 04-11-1992ರಲ್ಲಿ ನಿಧನರಾದರು. ಇವರು ಭಾವತರಂಗ, ಕಟ್ಟುವೆವು ನಾವು, ನಡೆದುಬಂದ ದಾರಿ, ಚಂಡೆಮದ್ದಳೆ, ಭೂಮಿಗೀತ, ಆಕಾಶದೀಪ, ಅನಾಥೆ, ಹುಲಿರಾಯ ಮತ್ತು ಇತರ ಕಥೆಗಳು ಮೊದಲಾದವು ಅಡಿಗರ ಮುಖ್ಯ ಕೃತಿಗಳು. ಇವರಿಗೆ ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ

ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಬೀರ್ ಸಮ್ಮಾನ್ ಪ್ರಶಸ್ತಿ, 1993 ರಲ್ಲಿ ಮರಣೋತ್ತರ ಪಂಪಪ್ರಶಸ್ತಿಗಳು ಸಂದಿವೆ.

ಅಭ್ಯಾಸ

I.ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಯಾವುದು ಬತ್ತಿಹೋಗುವ ಮುನ್ನ ಹೊಸನಾಡೊಂದನ್ನು ಕಟ್ಟಬೇಕು?
2. ನಮ್ಮೆದೆಯ ಕಾಮಧೇನು ಯಾವುದು?
3. ನಮ್ಮ ಸುತ್ತಲೂ ಇರುವ ಕಂದಕಗಳಾವುವು?
4. ಕೋಟೆಗೋಡೆಗೆ ಮೆಟ್ಟಿಲುಗಳು ಯಾವುದು?
5. ಕವಿ ಯಾರಿಗೆ ವೀಳೆಯವನು ಕೊಡುವೆನೆಂದಿದ್ದಾರೆ?
6. ಹೊಸನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?

24. 2. ಸಾರ್ಥಕ -ದಿನಕರ ದೇಸಾಯಿ

ನನ್ನ ದೇಹದ ಬೂದಿ -ಗಾಳಿಯಲಿ ತೂರಿಬಿಡಿ,
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ;
ಬೂದಿ-ಗೊಬ್ಬರದಿಂದ ತೆನೆಯೊಂದು ನೆಗೆದುಬರೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ.

ನನ್ನ ದೇಹದ ಬೂದಿ-ಹೊಳೆಯಲ್ಲಿ ಹರಿಯ ಬಿಡಿ
ತೇಲಿ ಬೀಳಲಿ ಮೀನ ಬಾಯಿಯಲ್ಲಿ;
ಮುಷ್ಟಿಬೂದಿಯ ತಿಂದು -ಪುಷ್ಟವಾಗಲು ಮೀನು
ಧನ್ಯವಾಯಿತು ಹುಟ್ಟು ಸಾವಿನಲ್ಲಿ.

ನನ್ನ ದೇಹದ ಬೂದಿ-ಕೊಳದಲ್ಲಿ ಬೀಗಿ ಬಿಡಿ
ತಾವರೆಯು ದಿನದಿನವೂ ಅರಳುವಲ್ಲಿ;
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ.

ಸತ್ತಮೇಲಾದರೂ ದೇಹ ಸೇವೆಗೆ ನಿಲಲಿ,
ಇಂದಿಗೀ ನರಜನ್ಮ ಸೇವೆಯೆಂದು
ತನ್ನ ಸಾರ್ಥವ ನೆನೆದು ವ್ಯರ್ಥವಾಗಿದೆ ದೇಹ,
ನಿಜಸೇವೆ ಗೈಯಲಿಕೆ ಬರಲಿ ಮುಂದು.

ಕೃತಿಕಾರರ ಪರಿಚಯ



ಹೊಸಗನ್ನಡ ಸಾಹಿತ್ಯದಲ್ಲಿ ಚುಟುಕು ಬ್ರಹ್ಮನೆಂದು ಪ್ರಖ್ಯಾತರಾದವರು ದಿನಕರ ದೇಸಾಯಿಯವರು. ಕಾಲ ಕ್ರಿ. ಶ. 1909. ಇವರು ಉತ್ತರ ಕನ್ನಡ ಜಿಲ್ಲೆ ಅಂಕೊಲ ತಾಲ್ಲೂಕಿನ ಅಲಗೇರಿ ಎಂಬ ಪುಟ್ಟ ಹಳ್ಳಿಯವರು. ತಂದೆ ದತ್ತಾತ್ರೇಯ ದೇಸಾಯಿ ಶಾಲಾ ಮಾಸ್ತರು. ತಾಯಿ ಅಂಬಿಕಾ. ಮೈಸೂರಿನಲ್ಲಿ ಬಿ. ಎ. ಪದವಿಯನ್ನು ಪಡೆದ ಇವರು ಮುಂಬೈನ ಸೈಂಟ್ ಝೇವಿಯರ್ ಕಾಲೇಜಿನಲ್ಲಿ ಎಂ. ಎ. ಪದವಿಯನ್ನು ಪಡೆದರು. ವಿವಿಧ ಸಂಘಟನೆಗಳ ಸಂಘಟಕರಾಗಿ, ಪತ್ರಿಕಾವರದಿಗಾರರಾಗಿ, ಸಂಸದರಾಗಿ ದುಡಿದು ನವೆಂಬರ್ 6, 1982 ರಲ್ಲಿ ಇಹಲೋಕ ತ್ಯಜಿಸಿದರು. ಇವರ ಪ್ರಮುಖ ಕೃತಿಗಳು ಹೂಗೊಂಚಲು, ತರುಣರ ದಸರೆ, ಕಡಲ ಕನ್ನಡ, ದಿನಕರನ ಚೌಪದಿ, ನಾಕಂಡ ಪಡುವಣ (ಪ್ರವಾಸ ಸಾಹಿತ್ಯ) ಹೀಗೆ 12 ಕೃತಿಗಳನ್ನು ರಚಿಸಿದ್ದಾರೆ. ಇವರ ದಿನಕರನ ಚೌಪದಿ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ?
2. ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಯಾರಿಗೆ ಸಿಗುತ್ತದೆ?
3. ದೇಹ ಏಕೆ ವ್ಯರ್ಥವಾಗಿದೆ?
4. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? -ವಿವರಿಸಿ.
5. ಸಾರ್ಥಕ ಪದ್ಯದ ಯಾವ ಅಂಶಗಳನ್ನು ನೀವು ಮೆಚ್ಚುವಿರಿ?

25. 3. ಆಹುತಿ -ಕೊಡಗಿನ ಗೌರಮ್ಮ

ನಾನು ಎಂ. ಎ. ಪಾಸಾಗಿದ್ದೆ. ನನ್ನ ತಂದೆತಾಯಿಯವರು ನನಗೆ ಮದುವೆ ಮಾಡಬೇಕೆಂದು ಹೆಣ್ಣು ಹುಡುಕುತ್ತಿದ್ದರು. ಅಂತೂ ಕಡೆಗೆ ಹುಡುಗಿಯೂ ನಿಶ್ಚಯವಾದಳು. ನಮ್ಮ ಮನೆಯಿಂದ ಹನ್ನೆರಡು ಮೈಲಿ ದೂರದಲ್ಲಿದ್ದ ಒಂದು ಹಳ್ಳಿಯಲ್ಲಿ ಅವಳ ಮನೆ. ಅವಳಿಗೂ ತಂದೆ ತಾಯಿ ಇದ್ದರು. ಆದರೆ ಅವರು ಬಹಳ ಬಡವರಂತೆ. ನನಗೇನೋ ಐಶ್ವರ್ಯವಂತರ ಅಳಿಯನಾಗಬೇಕೆಂದು ಬಹಳ ಆಸೆಯಿತ್ತು. ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರನಾಗಬೇಕೆಂದು ಬಲವಾದ ಇಚ್ಛೆ. ಇಂಗ್ಲೆಂಡಿಗೆ ಹೋಗಬೇಕಾದರೆ ಹಣಬೇಕು. ನನಗಾಗಿ ತುಂಬಾ ಹಣ ಖರ್ಚು ಮಾಡುವಷ್ಟು ಅನುಕೂಲವು ನನ್ನ ತಂದೆಗಿರಲಿಲ್ಲ. ಐಶ್ವರ್ಯವಂತರ ಅಳಿಯನಾದರೆ ನಾನು ಇಂಗ್ಲೆಂಡಿಗೆ ಸುಲಭವಾಗಿ ಹೋಗಬಹುದಾಗಿತ್ತು. ಆದುದರಿಂದ ಆ ಬಡವರ ಹುಡುಗಿಯನ್ನು ಮದುವೆಯಾಗಲು ನನಗೆ ಮನಸ್ಸಿರಲಿಲ್ಲ.

ನನ್ನ ತಂಗಿ ವಿಜಯ. ಆಕೆಯನ್ನು ನಾನು ‘ವಿ’ ಎಂದು ಕರೆಯುತ್ತಿದ್ದೆ. ಆಕೆ ಅಣ್ಣಾ ‘ಆ ಹುಡುಗಿಯನ್ನು ಮದುವೆಯಾಗಲು ಒಪ್ಪಿಗೆಯೇ ಎಂದು ಅಪ್ಪ ಕೇಳಿದರೆ ಏನು ಎನ್ನುತ್ತೀ’ ಎಂದಳು. ನಾನೆಂದೆ ‘ನಾನು ಅವಳನ್ನು ನೋಡಿಯೇ ಇಲ್ಲ, ನಾನು ಏನೆಂದು ಉತ್ತರ ಕೊಡಲಿ?’ ಆಗ ವಿಜಯ ಎಂದಳು, ‘ಅಣ್ಣ ನಾನು ಅವಳನ್ನು ನೋಡಿರುವೆ. ಅವಳು ಎಲ್ಲಾ ತರದಲ್ಲೂ ನಿನಗೆ ಯೋಗ್ಯಳಾಗಿದ್ದಾಳೆ. ಓದು ಬರೆಹ ಗೊತ್ತಿದೆ. ನೋಡುವುದಕ್ಕೆ ಅತಿ ಚೆಲುವೆ’. ನಾನಾಗ ಕೇಳಿದೆ: ‘ವರದಕ್ಷಿಣೆ ಎಷ್ಟು ಕೊಡುತ್ತಾರೆ?’

ವಿಜಯ ಹೇಳಿದಳು: ‘ಅಣ್ಣ, ಅಪ್ಪನಿಗೆ ವರದಕ್ಷಿಣೆಯನ್ನು ತೆಗೆದುಕೊಳ್ಳಲಿಕ್ಕೆ ಇಷ್ಟ ಇಲ್ಲ. ಅವರು ಬಹಳ ಬಡವರು ಆದರೆ ಹುಡುಗಿ ರತಿದೇವಿಯಂತೆ ಇದ್ದಾಳೆ. ಅವರೇ ಐನೂರು ರೂಪಾಯಿ ಕೊಡುವೆವೆಂದು ಹೇಳಿದ್ದಾರೆ. ಅದನ್ನು ತೆಗೆದು ಕೊಳ್ಳುವುದಕ್ಕೂ ಅಪ್ಪನಿಗೆ ಒಪ್ಪಿಗೆ ಇಲ್ಲ’. ನಾನು ಹೇಳಿದೆ: ‘ವಿ, ನನಗೆ ಲಂಡನ್ನಿಗೆ ಹೋಗಿ ಲಾ ಕಲಿಯಬೇಕೆಂದು ಇಚ್ಛೆಯಿದೆ. ಅದಕ್ಕಾಗುವ ಖರ್ಚನ್ನು ಕೊಡುವುದಾದರೆ ಮಾತ್ರ ನಾನು ಆ ಹುಡುಗಿಯನ್ನು ಮದುವೆಯಾಗುತ್ತೇನೆ. ಇಲ್ಲದಿದ್ದರೆ ಇಲ್ಲ’ ಆಗ ವಿಜಯ: ‘ಅಣ್ಣ, ನೀನು ಎಂ. ಎ. ಪದವೀಧರ, ನಿನ್ನ ಬಾಯಿಂದ ಇಂತಹ ಮಾತು ಹೊರಡಬಹುದೇ? ನಿನ್ನನ್ನು ನೀನು ಮಾರಿಕೊಳ್ಳ ಬಯಸುವಿಯೇಕೆ?’ ಎಂದು ಸ್ವಲ್ಪ ಕೋಪದಿಂದಲೇ ಹೇಳಿ ಒಳಗೆ ಹೊರಟುಹೋದಳು.

ಜಪಮಾಡಿ ಹೊರಗೆ ಬಂದು ಕುಳಿತಿದ್ದ ನನ್ನ ತಂದೆಯೂ ಜಪ ತೀರಿಸಿ ಹೊರಗೆ ಬಂದರು. ನೀನು ವಿಜಯಳ ಹತ್ತಿರ ಮುಂದೆ ಓದಿನ ಖರ್ಚಿಗೆ ಹಣ ಕೊಟ್ಟರೆ ಮದುವೆಯಾಗುತ್ತೇನೆ ಎಂದೆಯಂತೆ. ಅವರು ಬಡವರು. ಆರೇಳು ಹೆಣ್ಣು ಮಕ್ಕಳು ಇದ್ದಾರೆ. ಎಲ್ಲಿಂದ ತಾನೆ ಹಣ ತರಬಲ್ಲರು? ಹುಡುಗಿ ಲಕ್ಷಣವಾಗಿದ್ದಾಳೆ. ನೀನು ದೊಡ್ಡವರ ಅಳಿಯನಾಗಿ ಲಂಡನ್ನಿಗೆ ಹೋಗುವುದಕ್ಕೆ ನನಗೆ ಒಪ್ಪಿಗೆ ಇಲ್ಲ. ಈ ಹುಡುಗಿಯನ್ನು

ಮದುವೆಯಾದರೆ ಇಲ್ಲೇ ಲಾ ಓದುವ ಖರ್ಚನ್ನು ಹೇಗಾದರು ಮಾಡಿ ನಾನು ಕೊಡುತ್ತೇನೆಂದು ಹೇಳಿ ಒಳಗೆ ಹೊರಟು ಹೋದರು.

ಅಂದಿನ ರಾತ್ರಿ ಎಲ್ಲರೂ ಮಲಗಿದ ಮೇಲೆ ನಾನು ಹೊರಗೆ ಹೊರಟೆ. ನನ್ನ ಮನಸ್ಸು ಸಿಟ್ಟಿನಿಂದ ಚಂಚಲವಾಗಿತ್ತು. ಆ ಹುಡುಗಿಯನ್ನು ಮದುವೆಯಾಗುವ ಇಚ್ಛೆ ನನಗೆ ಸ್ವಲ್ಪವೂ ಇರಲಿಲ್ಲ. ತಂದೆಯಿದಿರು ನಿಂತು ಹಾಗೆ ಹೇಳುವ ಧೈರ್ಯ ನನಗಿರಲಿಲ್ಲ. ಆದುದರಿಂದ ಅಂದಿನ ರಾತ್ರಿಯೇ ಮನೆ ಬಿಟ್ಟುಹೊರಟೆ. ನಮ್ಮ ಹಳ್ಳಿಯಿಂದ ರೈಲ್ವೆ ನಿಲ್ದಾಣಕ್ಕೆ ಬಂದು ರೈಲು ಹೊರಡಲು ಹತ್ತು ನಿಮಿಷವಿದ್ದ ಕಾರಣ ಮದರಾಸಿಗೆ ಒಂದು ಟಿಕೆಟ್ಟನ್ನು ತೆಗೆದುಕೊಂಡು ಒಂದು ಕಂಪಾರ್ಟಮೆಂಟಿನಲ್ಲಿ ಹೋಗಿ ಕುಳಿತೆ. ನಾನು ಕುಳಿತಲ್ಲಿ ಬೇರೆ ಯಾರು ಇರಲಿಲ್ಲ. ಮುಂದೇನು ಗತಿಯೇನೆಂದು ಆಲೋಚಿಸುತ್ತ ಕುಳಿತಿದ್ದಂತೆಯೇ ನಿದ್ರೆ ಬಂದು ಬಿಟ್ಟಿತ್ತು. ಏನೋ ಶಬ್ದವಾದಂತಾಗಿ ಕಣ್ಣು ತೆರೆದು ನೋಡಿದೆ. ನನ್ನಿದಿರು ಒಬ್ಬ ಮುದುಕ ಕುಳಿತಿದ್ದನು. ಮುದುಕನಾದರೂ ಹುಡುಗನಂತೆ ಡ್ರೆಸ್ ಮಾಡಿಕೊಂಡಿದ್ದ. ನೋಡಿದ ಕೂಡಲೇ ಮುದುಕನೆಂದು ಗೊತ್ತಾಗುತ್ತಿರಲಿಲ್ಲ. ಅವನು ಹಣವಂತನಾಗಿರಬೇಕೆಂದು ಅವನ ವೇಷಭೂಷಣಗಳಿಂದ ವ್ಯಕ್ತವಾಗುತ್ತಿತ್ತು. ಅವನು ನನ್ನನ್ನೇ ನೋಡುತ್ತಾ ಕುಳಿತಿದ್ದರೂ ಮಾತನಾಡುವಂತೆ ತೋರಲಿಲ್ಲ. ನಾನೇ ಮಾತನಾಡಬೇಕಾಗಿ ಬಂತು. ‘ಸ್ವಾಮಿ ದಯಮಾಡಿ ಗಂಟೆ ಎಷ್ಟೆಂದು ಹೇಳುವಿರಾ?’ ಎಂದು ಕೇಳಿದೆ. ಅವನು ಕೈಗಡಿಯಾರವನ್ನು ನೋಡಿ ‘ಎರಡು ಗಂಟೆಗೆ ಹತ್ತು ನಿಮಿಷವಿದೆ’ ಎಂದ. ಆ ಮುದುಕ ತುಂಬಾ ಮಾತುಗಾರ. ಅವನು ಮಾತಿಗೆ ಪ್ರಾರಂಭಿಸಿದ. ಅಂತೂ ಮದರಾಸಿಗೆ ತಲುಪುವಷ್ಟರಲ್ಲೇ ನಾವಿಬ್ಬರೂ ಸ್ನೇಹಿತರಾಗಿಬಿಟ್ಟೆವು.

ಆ ಮುದುಕ ಒಬ್ಬ ರತ್ನದ ವ್ಯಾಪಾರಿ. ನಾನು ಯಾರೆಂದು ಕೇಳಿದ್ದಕ್ಕೆ-ನಾನೊಬ್ಬ ಬಡವರ ಮಗನೆಂದೂ ಎಂ. ಎ. ಪಾಸಾಗಿದೆಯೆಂದೂ ಕೆಲಸ ಹುಡುಕುವ ಸಲುವಾಗಿ ಮದರಾಸಿಗೆ ಹೊರಟಿದ್ದೇನೆಂದೂ ಹೇಳಿದೆ. ಕೆಲಸವೇನು ಸಿಕ್ಕದಿದ್ದರೆ ಬಂದು ತನ್ನನ್ನು ಕಾಣಬೇಕೆಂದು ಹೇಳಿದ. ಅಷ್ಟು ಹೊತ್ತಿಗಾಗಲೇ ಮದರಾಸು ತಲುಪಿದೆವು. ನಾನು ಓದುವಾಗ ವಾಸವಿದ್ದ ವೈ. ಎಂ. ಸಿ. ಎ. ಗೇ ಹೋಗಿ ಅಲ್ಲಿದ್ದ ಸ್ನೇಹಿತರ ಜೊತೆಯಲ್ಲಿ ಉಳಿದೆ.

ಮರುದಿನದಿಂದ ಕೆಲಸ ಹುಡುಕಲು ಪ್ರಾರಂಭಿಸಿ ಎಲ್ಲಿಯೂ ಕೆಲಸ ಸಿಗದೇ ಕೈಯಲ್ಲಿದ್ದ ಕೆಲವು ರೂಪಾಯಿಗಳು ಖರ್ಚಾಗಿದ್ದವು. ಊಟಕ್ಕೆ ತೊಂದರೆಯಾದಾಗ ಬೇರೇನೂ ದಿಕ್ಕು ತೋಚದೇ, ರೈಲಿನಲ್ಲಿ ಸ್ನೇಹಿತನಾದ ಆ ಮುದುಕನ ಮನೆಗೆ ಹೋದೆ. ದೇವರ ದಯೆಯಿಂದ ಅವರು ಮನೆಯಲ್ಲಿದ್ದರು. ಮಾತುಕತೆಯ ಬಳಿಕ ಕೆಲಸ ಸಿಗಲಿಲ್ಲವೆಂದವನಿಗೆ ಗೊತ್ತಾಯಿತು. ಅವನಿಗೊಬ್ಬ ಮಗಳೂ ದೂರ ಸಂಬಂಧದ ಸೊಸೆಯೂ ಇದ್ದರು. ಅವರಿಬ್ಬರಿಗೂ ಪಾಠ ಹೇಳಿಕೊಡಲು ಆಗುತ್ತದೆಯೇ ಎಂದು ನನ್ನನ್ನು ಕೇಳಿದ. ಏನೂ ಕೆಲಸವಿಲ್ಲದ ನನಗೆ ಅದೇ ಬಲು ದೊಡ್ಡ ಕೆಲಸವಾಯಿತು. ಮರುದಿನದಿಂದ ಪಾಠ ಹೇಳಲು ಉಪಕ್ರಮಿಸಿದೆ. ಮಗಳ ಹೆಸರು ಸೀತೆ, ಶಾಂತಿ ಎಂದು ಸೊಸೆಯ ಹೆಸರು.

ನಾನು ಪಾಠ ಹೇಳಲು ಮೊದಲು ಮಾಡಿ ಆರು ತಿಂಗಳುಗಳು ಸಂದಿದ್ದವು. ಹುಡುಗಿಯರಿಬ್ಬರೂ ಚೆನ್ನಾಗಿಯೇ ಪಾಠ ಕಲಿಯುತ್ತಿದ್ದರು. ಆದರೆ, ಶಾಂತಿಯಷ್ಟು

ಚುರುಕಾಗಿ ಸೀತೆ ಕಲಿಯುತ್ತಿರಲಿಲ್ಲ. ಶಾಂತಿಯ ಸೌಂದರ್ಯ, ಸೌಂದರ್ಯವನ್ನಾವರಿಸಿದ್ದ ದುಃಖ, ವಿದ್ಯೆಗಳಲ್ಲಿ ಅವಳಿಗಿದ್ದ ಅಭಿರುಚಿ ಮಿತವಾದ ಮಾತು ಇವೆಲ್ಲವೂ ಸೇರಿ ನನ್ನ ಮನಸ್ಸನ್ನು ಅವಳೆಡೆಗೆ ಎಳೆಯತೊಡಗಿದವು. ಅವಳ ತಂದೆ ತಾಯಿಯರು ಅಷ್ಟೇನೂ ಅನುಕೂಲಸ್ಥರಾಗಿರಲಿಲ್ಲ. ಮಗಳ ಮದುವೆಗೆ ಬಹಳ ಪ್ರಯತ್ನ ಮಾಡುತ್ತಿದ್ದರು. ಬಡತನದ ದೆಸೆಯಿಂದ ವರದಕ್ಷಿಣೆ ಕೊಡಲಾರದೆ ಇನ್ನೂ ಮದುವೆಯಾಗಿರಲಿಲ್ಲ. ನನಗಂತು ಯಾವಾಗಲೂ ಶಾಂತಿಯ ಜಪವೇ ಆಯಿತು. ಮದುವೆಯಾದರೆ ಅವಳನ್ನು ಮದುವೆಯಾಗಬೇಕೆನಿಸಿತು; ಅವಳನ್ನು ಮದುವೆಯಾದರೆ ಲಂಡನ್ನಿಗೆ ಹೋಗಲಾಗುತ್ತಿರಲಿಲ್ಲ. ಆದುದರಿಂದ ಅವರನ್ನು ಮರೆಯಲು ಪ್ರಯತ್ನಿಸತೊಡಗಿದೆ. ಎಷ್ಟೆಷ್ಟೂ ಪ್ರಯತ್ನಿಸಿದರೂ ಅವಳ ಸದ್ಗುಣಗಳು ನನ್ ಮನಸ್ಸನ್ನು ಅವಳೆಡೆಗೆ ಎಳೆಯತೊಡಗಿದವು. ನಾನು ಸೀತೆಯನ್ನು ಮದುವೆಯಾಗಬಹುದಿತ್ತು ಎಷ್ಟೋ ಸಾರಿ ಅವಳ ತಂದೆ ನನ್ನನ್ನು ಹಾಸ್ಯಕ್ಕಾಗಿ 'ಅಳಿಯ' ಎಂದು ಕರೆಯುತ್ತಿದ್ದರು. ನಾನು ಅವರ ಅಳಿಯನಾದರೆ ಲಂಡನ್ನಿಗೆ ಹೋಗಬಹುದಿತ್ತು. ಆದರೆ ಎಂದಿನಿಂದ ಶಾಂತಿಯನ್ನು ಪ್ರೀತಿಸತೊಡಗಿದೆನೋ ಅಂದಿನಿಂದ ಹಣಕ್ಕಾಗಿ ಪ್ರೇಮವನ್ನು ಬಲಿಕೊಡಬಾರದೆಂದು ನನ್ನ ಮನಸ್ಸು ಹೇಳುತಲಿತ್ತು.

ಒಂಬತ್ತು ಗಂಟೆಯಾಗಿತ್ತು ನಾನು ಪಾಠದ ಕೋಣೆಯಲ್ಲಿ ಕುಳಿತು ನನ್ನ ಶಿಷ್ಯೆಯರಿಬ್ಬರನ್ನು ಇದಿರು ನೋಡುತ್ತಿದ್ದೆ. ಬಾಗಿಲ ತೆರೆದ ಶಬ್ದವಾಯಿತು. ತೆರೆದ ಬಾಗಿಲಿನಿಂದ ಒಳಗೆ ಹೊಕ್ಕಳು ಸೀತೆ. ಶಾಂತಿಯ ಸುಳಿವಿಲ್ಲ. ಅವಳನ್ನು ಕಾಣದೆ ಮನಸ್ಸಿಗೆ ವಿಷಾದವಾಯಿತು. ಆದರೆ ಕೇಳುವ ಮೊದಲೇ ಅವಳೇ 'ನೋಡಿ ಮೇಷ್ಟ್ರೆ ನಿನ್ನೆ ರಾತ್ರಿಯೇ ಶಾಂತಿಯ ತಂದೆ ಬಂದು ಅವಳನ್ನು ಊರಿಗೆ ಕರೆದುಕೊಂಡು ಹೋದರು. ಯಾಕೆಂತ ಗೊತ್ತಿದೆಯೇ? ಮದುವೆಗೆ?' ಎಂದಳು.

ಆಗ ನನಗೆ ತಿಳಿಯಿತು. ಶಾಂತಿ ಇಲ್ಲದೆ ನಾನು ಬದುಕಲಾರೆನೆಂದು. ಮೊದಲೇ ಅವಳ ತಂದೆತಾಯಿಯರನ್ನು ಕೇಳದಿದ್ದುದಕ್ಕಾಗಿ ನನ್ನನ್ನು ನಾನೆ ಹಳಿದುಕೊಂಡೆ. ಹಣದಾಸೆಯಿಂದ ನನ್ನ ಜೀವನವನ್ನು ನಾನೇ ಮಣ್ಣುಗೂಡಿಸಿಕೊಂಡ ಮೇಲೆ ಗೊತ್ತಾಯಿತು. ಶಾಂತಿ ವಿಹೀನ ಪ್ರಪಂಚದಲ್ಲಿ ಜೀವಿಸುವುದು ಅಸಾಧ್ಯವೆಂದು. ಶಾಂತಿಯನ್ನು ಕಳೆದುಕೊಂಡು ಅಂದಿನ ದಿನವನ್ನೆಲ್ಲ ಅಶಾಂತಿಯಲ್ಲಿ ಕಳೆದನು. ಮರುದಿನ ಪಾಠದ ಹೊತ್ತಿನಲ್ಲಿ ಸೀತೆ ನನಗೊಂದು ಕಾಗದ ತೋರಿಸಿದಳು. ಶಾಂತಿಯ ಕಾಗದವನ್ನು ಓದಿದೆ. ವರದಕ್ಷಿಣೆಯನ್ನು ಕೊಡಲಾರದ ತಂದೆತಾಯಿಯರು ನಾಲ್ಕು ಜನ ಮೊಮ್ಮಕ್ಕಳಿರುವ ಮುದುಕನನ್ನು ಮದುವೆಯಾಗಲಾರದೆ ಆತ್ಮಹತ್ಯೆಮಾಡಿಕೊಂಡದ್ದನ್ನು ಓದಿ, ಶಾಂತಿಯಂತಹ ಸ್ವರ್ಣಪುತ್ಥಳಿಯನ್ನು ಕೊಡುವುದೂ ಅಲ್ಲದೆ ಅವಳೊಡನೆ ವರದಕ್ಷಿಣೆಯನ್ನು ಕೊಡಬೇಕೆಂದು ಕೇಳಿದ ನೀಚನನ್ನು ಶಪಿಸಿದೆ. ಹಿಂದೊಂದು ಬಾರಿ ನಾನು ಬಡವರ ಹುಡುಗಿಯನ್ನು ಮದುವೆಯಾಗಲು ತಿರಸ್ಕರಿಸಿದ್ದುದು ದುಃಖದ ಭರದಲ್ಲಿ ಮರೆತೇ ಹೋಗಿತ್ತು. ವಿಧಿಯನ್ನು ದೂರುವ ಬದಲು ನಾನೇ ನನ್ನ ದುರಾಶೆಯನ್ನು ಬಿಟ್ಟು ಶಾಂತಿಯನ್ನು ಮದುವೆಯಾಗಿದ್ದರೆ ಆ ಮುದ್ದು ಬಾಲೆ ಈಗ ಸುಖವಾಗಿರುತ್ತಿದ್ದಳು. ನನ್ನ ತಪ್ಪಿಗಾಗಿ ನನ್ನನ್ನು ನಾನೆ ಜರಿದುಕೊಂಡೆ. ವರದಕ್ಷಿಣೆ ಎಂಬ ಪಿಶಾಚಿಯು ಅದೆಷ್ಟು

ಸುಕುಮಾರಿಯರನ್ನು ಬಲಿ ತೆಗೆದುಕೊಳ್ಳುವುದೋ ದೇವರೇ ಬಲ್ಲ! ಆದರೆ ನನ್ನ ಶಾಂತಿಯನ್ನು ಅದು ಬಲಿತೆಗೆದುಕೊಂಡ ಮೇಲೆ ನನಗದರ ನಿಜಸ್ವರೂಪ ಗೊತ್ತಾಯಿತು.

ಅಂದಿನ ರಾತ್ರಿಯೇ ಊರಿಗೆ ಹೊರಟೆ. ಮರುದಿನ ಬೆಳಗಿನ ಹೊತ್ತಿನಲ್ಲಿ ಮನೆಗೆ ತಲುಪಿದೆ. ನಾನು ಹೋಗುವಾಗ ಅಮ್ಮ ಅಂಗಳ ಸಾರಿಸಿ ರಂಗವಲ್ಲಿ ಇಡುತ್ತಿದ್ದಳು. ನನ್ನ ತಂದೆಯೂ 'ವಿ' ಯೂ ಒಳಗಿದ್ದರು. ಅಮ್ಮನೊಡನೆ ಮಾತನಾಡಿ ಒಳಗೆ ಹೋದೆ. ನಾನು ಅಲ್ಲಿ ನಿಲ್ಲದೆ ನನ್ನ ಕೋಣೆಗೆ ಹೋದೆ. ಅಲ್ಲಿ ವಿಜಯ ಒಂದು ಚಿತ್ರವನ್ನು ನೋಡುತ್ತಾ ನಿಂತಿದ್ದಳು. ನನ್ನನ್ನು ಕಂಡು ಆ ಚಿತ್ರವನ್ನು ಬಚ್ಚಿಟ್ಟಳು. ಆಗವಳು ತಾನು ನೋಡುತ್ತಿದ್ದ ಪೇಪರನ್ನು ನನ್ನೆದುರು ಎಳೆದು 'ನೋಡುತ್ತಿದ್ದುದು ನೀನು ಕೊಂದ ಹುಡುಗಿಯನ್ನು' ಎಂದಳು. ನನಗೆ ಬಹಳ ಆಶ್ಚರ್ಯವಾಯಿತು. ಪತ್ರಿಕೆಯನ್ನು ಆತುರದಿಂದ ತೆಗೆದು ನೋಡಿದೆ. ಶಾಂತಿಯ ಚಿತ್ರ. -ಅದರ ಕೆಳಗಡೆ ವರದಕ್ಷಿಣೆಗೆ ಆಹುತಿ. ಶಾಂತಿಯೇ ನಾನು ಮೊದಲು ಕೈಬಿಟ್ಟ ಕನ್ಯೆ? ಈಗ ಏನು ಪ್ರಯೋಜನ!

ಕೃತಿಕಾರರ ಪರಿಚಯ



ಕೊಡಗಿನ ಗೌರಮ್ಮನವರು ಕನ್ನಡದ ಪ್ರಥಮ ಕತೆಗಾರ್ತಿ ಎಂದು ಹೆಸರಾಗಿದ್ದಾರೆ. ಇವರು 1912 ಮಾರ್ಚ್ 3ರಂದು ಮಡಿಕೇರಿಯಲ್ಲಿ ಜನಿಸಿದರು. ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಕೊಡಗಿನಲ್ಲಿ ಪ್ರವಾಸ ಕೈಗೊಂಡಾಗ ಅವರನ್ನು ತಮ್ಮ ಮನೆಗೆ ಬರಮಾಡಿಕೊಂಡು ತಮ್ಮ ಆಭರಣಗಳನ್ನೆಲ್ಲ ದಾನ ನೀಡಿದರು. ಗೌರಮ್ಮನವರು ಮಿಸೆಸ್ ಟಿ. ಜಿ. ಕೃಷ್ಣ ಎನ್ನುವ ಹೆಸರಿನಲ್ಲಿ ಕತೆಗಳನ್ನು ಬರೆದಿದ್ದಾರೆ. ಕಂಬನಿ, ಚಿಗುರು ಹಾಗೂ ಗೌರಮ್ಮನ ಕತೆಗಳು ಅವರ ಕಥಾ ಸಂಕಲನಗಳು.

ಅಭ್ಯಾಸ

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗವೇನು?
2. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಏಕೆ ಬಂದನು?

3. ಮುದುಕನ ಮಗಳು ಮತ್ತು ಸೊಸೆಯ ಹೆಸರೇನು?

4. ವರದಕ್ಷಿಣೆಯ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿದೆ?
5. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣಗಳೇನು?

6. ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ ಏನು ಹೇಳಿದಳು?

26. 4. ಮಗಳಿಗೆ ಬರೆದ ಪತ್ರ

ಮೂಲ: ಜವಹರಲಾಲ್ ನೆಹರು

ಅನುವಾದ: ತಿ. ತಾ. ಶರ್ಮ, ಸಿದ್ದನಹಳ್ಳಿ ಕೃಷ್ಣಶರ್ಮ

ಇಂದಿರಾ ಪ್ರಿಯದರ್ಶಿನಿಗೆ,
ಸೆಂಟ್ರಲ್ ಜೈಲ್, ನೈನಿ.
ಅವಳು ಹುಟ್ಟಿದ ಹಬ್ಬದ ದಿನ
26.10.1930

ನಿನ್ನ ಹುಟ್ಟಿದ ಹಬ್ಬದ ದಿನ ಆಶೀರ್ವಾದಗಳನ್ನು, ಉಡುಗೊರೆಗಳನ್ನು ಪಡೆಯುವುದು ನಿನ್ನ ಅಭ್ಯಾಸ. ಆಶೀರ್ವಾದಗಳಿಗೇನು ಕಡಿಮೆ; ಬೇಕಾದಷ್ಟನ್ನು ಕಳಿಸುತ್ತೇನೆ. ಆದರೆ ನೈನಿ ಸೆರೆಮನೆಯಿಂದ ನಾನು ನಿನಗೇನು ಬಹುಮಾನ ಕಳಿಸಲಿ, ಹೇಳು? ನನ್ನ ಬಹುಮಾನಗಳು ನಿಸ್ಸಾರ, ನಿರ್ಘನ. ಯಕ್ಷಿಣಿಯೋ, ಕಿನ್ನರಿಯೋ ನೀಡುವ -ಕೋಟೆಯ ಗೋಡೆಗಳಂತಿರುವ ಸೆರೆಮನೆಯ ಗೋಡೆಗಳು ಸಹ ತಡೆಯಲಾರದ – ಗಾಳಿಯ, ಮನಸ್ಸಿನ, ನಿರಾಕಾರದ ವಸ್ತುವದು.

ಪ್ರಿಯ! ನೀ ಚೆನ್ನಾಗಿ ಬಲ್ಲೆ; ಉಪದೇಶ ಮಾಡುವುದೆನಗೆ ಇಷ್ಟವಿಲ್ಲ; ಬುದ್ಧಿವಾದ ಕೊಡುವುದೆಂದರೆ ನನಗೆ ಬೇಸರ. ಯಾವಾಗಲಾದರೂ ಹಾಗೆ ಮಾಡಬೇಕೆಂಬಾಸೆಯಾದಾಗಲೆಲ್ಲ ನಾನೆಂದೋ ಓದಿದ "ಬಹಳ ಬುದ್ಧಿವಂತ"ನ ಕತೆ ನೆನಪಿಗೆ ಬರುತ್ತದೆ. ಜ್ಞಾನಾರ್ಜನೆಗಾಗಿ, ವಿವೇಕಸಾಧನೆಗಾಗಿ ಚೀನಾದೇಶದಿಂದ ಪ್ರಯಾಣಿಕನೊಬ್ಬ ಬಂದ ಭರತ ಖಂಡಕ್ಕೆ, ಹಿಯಾನ್‌ತ್ಸಾಂಗ್ ಎಂಬುದವನ ಹೆಸರು. ಉತ್ತರ ಮೇರುಗಿರಿಗಳೇನು, ಮರುಭೂಮಿಗಳೇನು; ಅವುಗಳನ್ನೆಲ್ಲ ದಾಟಿ ಬಂದ; ಅವನ ಜ್ಞಾನದಾಹವಂತಹುದು! ಭಾರತದಲ್ಲವನು ಬಹುಕಾಲವಿದ್ದ; ಇದ್ದಷ್ಟುಕಾಲ ನಲಂದಾ ಎಂಬ ಮಹಾಘಟಿಕಾಸ್ಥಾನದಲ್ಲಿ ತಾನು ಕಲಿತ, ಪರರಿಗೂ ಕಲಿಸಿದ. ನಲಂದಾ ಆಗ ಪಾಟಲೀಪುತ್ರದ ಬಳಿ ಇತ್ತು ಈಗ ಅದನ್ನು ಪಾಟ್ನಾ ಎಂದು ಕರೆಯುವರು. ಹಿಯಾನ್‌ತ್ಸಾಂಗನು ವಿದ್ಯಾಪಾರಂಗತನಾದ 'ಧರ್ಮಜ್ಞ ಚಕ್ರೇಶ್ವರ' ನೆಂಬ ಬಿರುದನ್ನು ಪಡೆದ. ಅವನು ಆಸೇತು ಹಿಮಾಚಲ ಪ್ರವಾಸಮಾಡಿದ; ದೇಶವನ್ನೆಲ್ಲ ನೋಡಿದ. ಪೂರ್ವಕಾಲದಲ್ಲಿ ಈ ದೇಶದಲ್ಲಿ ವಾಸವಾಗಿದ್ದ ಜೀವನವನ್ನೆಲ್ಲ ಗ್ರಹಿಸಿದ. ಆಮೇಲೆ ತನ್ನ ಪ್ರವಾಸ ಕುರಿತೊಂದು ಪುಸ್ತಕವನ್ನು ಬರೆದ. ನನ್ನ ಮನಸಿಗೆ ಬಂದ ಕತೆ ಈ ಪುಸ್ತಕದಲ್ಲಿದೆ. ದಕ್ಷಿಣ ದೇಶದಿಂದ ಕರ್ಣಸುವರ್ಣವೆಂಬ ನಗರಕ್ಕೆ ಒಬ್ಬ ಬಂದನಂತೆ, ಬಿಹಾರದಲ್ಲಿ ಈಗ ಭಾಗಲ್ಪುರವೆಂಬ ಊರಿದೆಯಲ್ಲ; ಅದರ ಬಳಿ ಇತ್ತಂತೆ ನಗರ. ಈ ಮನುಷ್ಯ ತನ್ನ ನಡುವಿಗೆ ತಾಮ್ರದ ಹಲಗೆಗಳನ್ನು ಬಿಗಿದಿದ್ದನಂತೆ. ತಲೆಯ ಮೇಲೊಂದು ಉರಿಯುವ ಪಂಜನ್ನು ಹೊತ್ತಿದ್ದನಂತೆ. ಶೋಭಾಯಮಾನವಾದ


ಮುಖಮುದ್ರೆ, ಗಂಭೀರವಾದ ಗತಿ; ಕೈಲಿ ಕಟ್ಟಿಗೆ ಹಿಡಿದು, ಈ ವಿಚಿತ್ರ ವೇಷಧಾರಿ ಲೋಕಸಂಚಾರ ಮಾಡುತ್ತಿದ್ದಾನೆ. 'ಇದೇನು ವೇಷ'ವೆಂದು ಯಾರಾದರೂ ಕೇಳಿದರೆ "ನನ್ನ ಜ್ಞಾನವಷ್ಟಿದೆ. ಈ ತಾಮ್ರದ ರೇಕುಗಳನ್ನು ಬಿಗಿಸ ದೆಹೋದೆನಾದರೆ ನನ್ನ ಹೊಟ್ಟೆ ಬಿರಿದೀತು. ನನ್ನ ಸುತ್ತ ಸುಳಿವ ಅಜ್ಞಾನಿಗಳ ಕಂಡೆನಗೆ 'ಅಯ್ಯೋ' ಅನಿಸುತ್ತದೆ. ಅವರೆಲ್ಲ ಕತ್ತಲೆಯಲ್ಲಿ ತಡವಿ ಆಡುತ್ತಿದ್ದಾರೆ. ಅವರಿಗಾಗಿ ನಾ ನನ್ನ ನೆತ್ತಿಯಮೇಲೆ ದೀಪ ಹೊತ್ತಿದ್ದೇನೆ" ಅನ್ನುವನು.

ಈ ಲೋಕ ವಿಸ್ತಾರ. ನಮ್ಮ ಈ ಲೋಕದಿಂದಾಚೆ ಅತ್ಯಾಶ್ಚರ್ಯಕರವಾದ, ದೃಗ್ಗೋಚರವಲ್ಲದ ಲೋಕಗಳೆಷ್ಟೋ. ಅಹಂಕಾರಿಯಂತೆ ನಾವೆಲ್ಲ ಜ್ಞಾನಭಂಡಾರಗಳು, ನಾವು ತಿಳಿದುಕೊಳ್ಳ ಬೇಕಾದದ್ದೇನೂ ಇಲ್ಲವೆಂಬ ಭಯದ ಕಲ್ಪನೆಗೆ ಕಾರಣವಿಲ್ಲ. ಅಂತಹವರು ಹೊಸ ವಿಷಯಗಳನ್ನು ತಿಳಿದುಕೊಳ್ಳುವುದರಿಂದಾಗುವ, ಶೋಧನೆಯಿಂದಾಗುವ ಆನಂದವನ್ನೇನು ಬಲ್ಲರು? ಆ ಮಹಾ ಸಾಹಸದ ಸುಖ ಅವರಿಗೇನು ಗೊತ್ತು?

ನೀನು ಹುಟ್ಟಿದ್ದು 1917 ನೆಯ ವರ್ಷ. ಇತಿಹಾಸದೊಳಗದು ಮಹಾ ವರ್ಷ. ಆ ವರ್ಷ ಮಹಾನಾಯಕನೊಬ್ಬ ಬಂದ. ಬಡವರೆಂದರೆ, ನೋವು ತಿನ್ನುವವರೆಂದರೆ ಆತನ ಹೃದಯ ಪೂರ್ಣ ಪ್ರೇಮಪಾತ್ರ. ಆತನ ಸಹಾನುಭೂತಿ ಅತ್ಯಪೂರ್ವ. ಆತ ಬಂದು ತನ್ನ ಜನರಿಗೆಲ್ಲ "ಇತಿಹಾಸದಲ್ಲಿ ಉತ್ಕೃಷ್ಟವೂ, ಅಚಂದ್ರಾರ್ಕಸ್ಥಾಯಿಯೂ ಆದ ಅಧ್ಯಾಯವನ್ನು ಬರೆಯಿರಿ" ಎಂದು ಹೇಳಿ ಅವರ ಕೈಯಿಂದ ಬರೆಯಿಸಿದ. ನೀನು ಹುಟ್ಟಿದ ತಿಂಗಳಲ್ಲೇ ಲೆನಿನ್ ಮಹಾವಿಪ್ಲವ ಕಾರ್ಯವನ್ನಾರಂಭಿಸಿದ್ದು; ಆರಂಭಿಸಿ ರಾಷ್ಯಾಸೈಬೀರಿಯಾ ದೇಶಗಳ ರೂಪುರೇಖೆಗಳನ್ನೇ ಪರಿವರ್ತನಗೊಳಿಸಿಬಿಟ್ಟ. ಇಂದು ಭಾರತದಲ್ಲಿ ಮತ್ತೊಬ್ಬ ಮಹಾನಾಯಕ ಬಂದ; ಕಷ್ಟನಿಷ್ಠುರಗಳಿಗೆ ಸಿಕ್ಕಿದವರೆಂದರೆ ಆತನ ಪ್ರೇಮ ಅಪಾರ; ಅವರಿಗೆ ಸಹಾಯಮಾಡಲು ಉಗ್ರ ಆವೇಶದ ಆತುರ ಅವನಿಗೆ. ಆತ ನಮ್ಮ ಜನರಿಗೆಲ್ಲ ಮಹಾತ್ಕಾರ್ಯ ಸಾಧನೆಮಾಡಲೂ, ಗಂಭೀರ ಬಲಿದಾನಮಾಡಲು ಸ್ಫೂರ್ತಿಕೊಡುತ್ತಿದ್ದಾನೆ, ಬಲಿದಾನಮಾಡಿ ನಾವು ಸ್ವಾತಂತ್ರ್ಯಪಡೆಯಬೇಕು, ಹಸಿವಿನಿಂದ ಕೊರಗುತ್ತಿರುವವರು, ಬಡವರು, ಅನ್ಯಾಯಕ್ಕೆ ತುತ್ತಾದವರೇ ಮೊದಲಾದವರ ದುಃಖದ ಭಾರವಿಳಿಸಬೇಕು; ಇದು ಆತನಾಸೆ. ಬಾಪೂಜಿ ಈಗ ಸೆರೆಮನೆಯಲ್ಲಿದ್ದಾರೆ. ಆದರೇನು? ಅವರ ಸಂದೇಶದ ಯಕ್ಷಿಣಿಯು ಕೋಟ್ಯನುಕೋಟಿ ಭಾರತೀಯರ ಹೃದಯಗಳನ್ನು ಸೂರೆಗೊಂಡಿದೆ. ಗಂಡಸರು, ಹೆಂಗಸರು, ಮಕ್ಕಳು ಸಹ ತಮ್ಮ ಮುರುಕು ಗುಡಿಸಲುಗಳಿಂದ ಹೊರಬಿದ್ದು ಸ್ವಾತಂತ್ರ್ಯಸೈನಿಕರಾಗಿದ್ದಾರೆ. ಭಾರತದಲ್ಲಿ ನಾವಿಂದು ಚರಿತ್ರೆಯನ್ನು ನಿರ್ಮಿಸುತ್ತಿದ್ದೇವೆ. ನಾನು ನೀನು ಎಂಥಹ ಭಾಗ್ಯಶಾಲಿಗಳು, ನಡೆಯುತ್ತಿರುವುದನ್ನೆಲ್ಲ ನಮ್ಮ ಕಣ್ಣಾರೆ ನೋಡುತ್ತಿದ್ದೇವೆ. ಈ ಮಹಾನಾಟಕದಲ್ಲಿ ನಾನು ಸಹ ಕೊಂಚ ಪಾತ್ರವಹಿಸುತ್ತಿದ್ದೇನೆ. ಈ ಮಹೋದ್ಯಮದಲ್ಲಿ ಯಾವುದೇ ಪಾತ್ರ ದೊರೆಯಲಿ ಅಪಕೀರ್ತಿ ಬರುವಂಥಹ ಕಾರ್ಯವೊಂದನ್ನು, ಜನರಿಗೆ ಅವಮಾನವಾಗುವಂಥಹ ಕೆಲಸವೊಂದನ್ನು ನಾವು ಮಾಡಲಾಗದು. ನಾವು ಭಾರತದ ಯೋಧರೆನಿಸುವುದಾದರೆ. ಭಾರತದ ಮಾನ ಮರ್ಯಾದೆ ನಮ್ಮ ಕೈಯಲ್ಲಿದೆ ಆ ಮಾನ ಮರ್ಯಾದೆಯೂ ಪವಿತ್ರವಾದ ಧರ್ಮಸ್ಥೇಯ.

ಸರಿಯಾವುದು, ತಪ್ಪು ಯಾವುದೆಂದು ನಿರ್ಣಯಮಾಡುವುದು ಸುಲಭವಲ್ಲ. ನೀನು ರಹಸ್ಯದಲ್ಲಿ ಒಂದನ್ನೂ ಮಾಡಬೇಡ; ಮರೆಮಾಡಬೇಕೆಂದೆನಿಸುವ ಯಾವ ಕಾರ್ಯಕ್ಕೂ ಕೈಹಾಕಬೇಡ. ತೆರೆಯಮರೆಯಲ್ಲಿ ಕೆಲಸಮಾಡಬೇಕೆಂದು ನಿನಗೆ ಅನಿಸಿದರೆ ಭಯವಿದೆ ಎಂದರ್ಥ. ಭಯವು ಒಳ್ಳೆಯದಲ್ಲ; ನಿನಗೆ ಯೋಗ್ಯವಾದುದ್ದಲ.್ಲ ನಿರ್ಭಯವಾಗಿರು, ಆಗಬೇಕಾದುದ್ದೆಲ್ಲ ಆಗುತ್ತದೆ; ನಡೆಯಬೇಕಾದುದ್ದೆಲ್ಲ ನಡೆಯುತ್ತದೆ. ನೀನು ಧೈರ್ಯಶಾಲಿಯಾದರೆ ನಿನಗೆ ಭಯವಾಗುವುದಿಲ್ಲ. ತಲೆತಗ್ಗಿಸುವಂಥಹ ಕೆಲಸ ಮಾಡುವುದಿಲ್ಲ. ರಹಸ್ಯದಲ್ಲಿ ಒಂದು ಕೆಲಸವೂ ಬೇಡ; ಕಣ್ಮರೆಯ ಕೆಲಸ ಬೇಡವೇಬೇಡ. ಏಕಾಂತವಿರಲಿ, ಇರಬೇಕು; ಏಕಾಂತಕ್ಕೂ ರಹಸ್ಯಕ್ಕೂ ವ್ಯತ್ಯಾಸವಿದೆ. ಪ್ರಿಯಾ! ನೀನು ಹಾಗೇ ಮಾಡಿದ್ದಾದರೆ ನೀನು ಜ್ಯೋತಿಯ ಮಗುವೆನಿಸುವೆ. ಏನೇಬಂದೊದಗಲಿ ನಿರ್ಭಯಳೆನಿಸುವೆ, ನಿರ್ಮಲೆ ಎನಿಸುವೆ, ನಿಶ್ಚಲಳೆನಿಸುವೆ. ಮಗೂ, ಇಂದಿಗಿಷ್ಟು ಸಾಕು. ನೀನು ದೊಡ್ಡವಳಾಗಿ ವೀರರಮಣಿಯೆನಿಸು; ಭಾರತಮಾತೆಯ ಸೇವೆ ಸಲಿಸು. ಪೂರ್ಣವಾತ್ಸಲ್ಯದಿಂದ ಹರಸುವೆನು.

ಕೃತಿಕಾರರ ಪರಿಚಯ



ಭಾರತದ ಪ್ರಥಮ ಪ್ರಧಾನಿಗಳಾದ ಜವಹರಲಾಲ್ ನೆಹರುರವರು ತಮ್ಮ "ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟ್ರಿ" (Glimpses of world History) ಎಂಬ ಕೃತಿಯನ್ನು ಭಾರತದ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಬಂಧಿಯಾಗಿ ಬೇರೆಬೇರೆ ಸೆರೆಮನೆಗಳಲ್ಲಿ ವಾಸಮಾಡುವ ಸಂದರ್ಭದಲ್ಲಿ ತಮ್ಮ ಮಗಳಿಗೆ ಪತ್ರರೂಪದಲ್ಲಿ ಪ್ರಪಂಚದ ಇತಿಹಾಸ ಹಾಗೂ ಮಹಾನ್ ನಾಯಕರ ಪರಿಚಯವನ್ನು ಮಾಡಿಕೊಡುವ ಪ್ರಯತ್ನವಿದು. ಈ ಎಲ್ಲಾ ಪತ್ರಗಳನ್ನು ಸಂಗ್ರಹಿಸಿದ ಇವರ ತಂಗಿ ವಿಜಯಲಕ್ಷ್ಮಿ ಪಂಡಿತ್‌ರವರು ಪುಸ್ತಕರೂಪದಲ್ಲಿ ಪ್ರಕಟಿಸಿದರು. ಈ ಕೃತಿಯನ್ನು ತಿರುಮಲೆ ತಾತಾಚಾರ್ಯ ಶರ್ಮ ಅವರು ಹಾಗೂ ಸಿದ್ಧವನಹಳ್ಳಿ ಕೃಷ್ಣಶರ್ಮರವರು "ಜಗತ್ ಕಥಾವಲ್ಲರಿ" ಎಂಬ ಕೃತಿಯಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.


ಅಭ್ಯಾಸ

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಈ ಪತ್ರವನ್ನು ನೆಹರುರವರು ಯಾರಿಗೆ ಬರೆದಿದ್ದಾರೆ?
2. ಹೂಯಾನ್‌ತ್ಸಾಂಗ್ ಭರತಖಂಡಕ್ಕೆ ಏಕೆ ಬಂದನು?
3. ನಲಂದ ವಿಶ್ವವಿದ್ಯಾನಿಲಯವು ಎಲ್ಲಿತ್ತು?
4. ದಕ್ಷಿಣ ದೇಶದಿಂದ ಬಂದ ಯಾತ್ರಿಕ 'ಅವನ ವೇಷದ ಬಗ್ಗೆ ಏನು ಹೇಳುತ್ತಿದ್ದ?
5. ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ?
6. ತೆರೆಮರೆಯಲ್ಲಿ ಕೆಲಸ ಮಾಡಿದರೆ ಯಾವ ಅರ್ಥ ಬರುತ್ತದೆ?

27. 5. ಆಟೋರಿಕ್ಷಾದ ರಸಪ್ರಸಂಗಗಳು -ಎಚ್. ನರಸಿಂಹಯ್ಯ

ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದೇ ಒಂದು ಪ್ರಯಾಸದ ಕೆಲಸ. ಕಾರ್ ಇರುವ ಕೆಲವೇ ಮಂದಿಗೆ, ಸ್ಕೂಟರಿರುವ ಸಾಕಷ್ಟು ಮಂದಿಗೆ ಇದೇನು ಅಂತಹ ಸಮಸ್ಯೆ ಅಲ್ಲ. ಆದರೆ ನನ್ನಂತಹವನಿಗೆ ಇದೊಂದು ತಾಪತ್ರಯದ ಕೆಲಸ. ಸಮೀಪದ ಸ್ಥಳಗಳಿಗೆ ಹೋಗುವಾಗ ನಾನು ಸಾಮಾನ್ಯವಾಗಿ ನಡೆದೇ ಹೋಗುತ್ತೇನೆ. ಸಾಕಷ್ಟು ಕಾಲಾವಕಾಶ ಇಲ್ಲದೇ ಹೋದರೆ ನನಗಿರುವ ಮಾರ್ಗಗಳು ಎರಡು. ಒಂದು ಬಸ್ ಅಥವಾ ಆಟೋರಿಕ್ಷಾ. ಬಸ್‌ಗಳ ಟೈಮ್ ಅನಿಶ್ಚಿತ ಹಾಗೂ ತುಂಬಾ ಕಾಯಬೇಕಾಗಿದ್ದು ಆ ನೂಕುನುಗ್ಗಲಲ್ಲಿ ಬಸ್ ಸಂಚಾರ ಬಹಳ ದುಸ್ತರ.



ಇನ್ನು ಉಳಿದಿರುವುದು ಒಂದೇ ಮಾರ್ಗ ಆಟೋರಿಕ್ಷಾ. ನನಗೆ ಆಟೋರಿಕ್ಷಾ ಕಂಡರೆ ತುಂಬಾ ಭಯ. ಅವು ಪಾದರಸದಂತೆ ಚಲಿಸುತ್ತವೆ. ಆದರೆ ಒಂದು ವ್ಯತ್ಯಾಸ. ಪಾದರಸ ತಗ್ಗಿದ್ದ ಕಡೆ ಹೋಗುತ್ತೆ, ಆಟೋರಿಕ್ಷಾಕ್ಕೆ ಅಂತಹ ಸೀಮಿತ ಅಭ್ಯಾಸ, ಉದ್ದೇಶವಿಲ್ಲ. ತಗ್ಗು ಉಬ್ಬುಗಳ ಭೇದಭಾವವಿಲ್ಲದೆ, ಲಂಗುಲಗಾಮಿಲ್ಲದ ಕುದುರೆಯಂತೆ ಧಾವಿಸುತ್ತದೆ.

ನನಗೆ ಜೀವದ ಮೇಲೆ ತುಂಬಾ ಆಸೆ. ಬಹಳ ವರ್ಷ ಆರೋಗ್ಯವಾಗಿ ಬದುಕಬೇಕೆಂಬ ಹಂಬಲ ಚಪಲ. ಆಟೋರಿಕ್ಷಾ ಪ್ರಯಾಣದಿಂದ ಎರಡು ವಿಧವಾದ ಅಪಘಾತಗಳಾಗಬಹುದು. ಮೊದಲನೆಯದಾಗಿ ಕೈಕಾಲು ಮುರಿಯಬಹುದು. ಎರಡನೆಯದಾಗಿ ಅಲ್ಲಿಯೇ ಕೊನೆಯ ಉಸಿರೆಳೆಯಬಹುದು. ಬಹು ವರ್ಷ ಬದುಕಬೇಕೆಂಬ ಉತ್ಕಟ ಆಸೆ ಇದ್ದರೂ, ಕೈಕಾಲು ಮುರಿದುಕೊಂಡು ಮೂಳೆ ವೈದ್ಯರ ಕೈಗೆ ಸಿಕ್ಕಿ ದೇಹದಲ್ಲಿ ನಟ್ಟೂ, ಬೋಲ್ಟೂ ಹಾಕಿಸಿಕೊಂಡು ಬದುಕುವುದಕ್ಕಿಂತ ಅಲ್ಲಿಯೇ ಭಗವಂತನ ಪಾದಾರವಿಂದವನ್ನು ಸೇರುವುದೇ ಲೇಸು ಎಂದು ನನ್ನ ಅಭಿಪ್ರಾಯ. ಇದೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಅಪಘಾತಗಳಿಂದ ಪಾರಾಗಲು ನನಗೆ ತೋಚಿದ

ಎಲ್ಲಾ ಮುಂಜಾಗ್ರತೆ ಕ್ರಮಗಳನ್ನೂ ತೆಗೆದುಕೊಳ್ಳುತ್ತೇನೆ. ಆಟೋರಿಕ್ಷಾ ಪ್ರಯಾಣ ನನಗೆ ವಿಧವಿಧವಾದ ಅನುಭವಗಳನ್ನು ತಂದುಕೊಡುತ್ತದೆ.

ಆಟೋರಿಕ್ಷಾ ಹತ್ತುವುದಕ್ಕಿಂತ ಮುಂಚೆ "ಸ್ವಲ್ಪ ನಿಧಾನವಾಗಿ ಓಡಿಸಪ್ಪ, ಇನ್ನೂ 50 ಪೈಸೆ ಜಾಸ್ತಿ ಕೊಡುತ್ತೇನೆ. ನನಗೆ ವಯಸ್ಸಾಗಿದೆ, ಎತ್ತಿಹಾಕುವುದನ್ನು ತಡೆದುಕೊಳ್ಳಲು ಆಗುವುದಿಲ್ಲ" ಅಂತ ಒಮ್ಮೆ ಅಂದೆ. "ರೀ ಸ್ವಾಮಿ, ಸುಮ್ಮನೆ ಕುಳಿತುಕೊಳ್ಳಿ, ನಿಮ್ಮಂತವರಿಂದಲೇ ಆಕ್ಸಿಡೆಂಟ್ ಆಗುವುದು. ಹತ್ತುವುದಕ್ಕಿಂತ ಮುಂಚೇನೆ ಅಪಶಕುನ" ಎಂದು ಸಿಡುಕಿ ಗಾಡಿ ಸ್ಟಾರ್ಟ್ ಮಾಡಿದ. ಇನ್ನೊಂದು ಸಲ ಇನ್ನೊಬ್ಬ ಚಾಲಕ "ಸ್ವಾಮಿ ನಿಶ್ಚಿಂತೆಯಾಗಿ ಕುಳಿತುಕೊಳ್ಳಿ, ಏನು ಭಯಪಡಬೇಡಿ. ಆಗೋದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ಎಲ್ಲಾ ಹಣೇಬರಹ. ಹೋಗಬೇಕೂಂತ ಇದ್ದರೆ ಎಷ್ಟೇ ನಿಧಾನವಾಗಿ ಓಡಿಸಿದರೂ ಅನಾಹುತ ಆಗೇ ಆಗುತ್ತದೆ. ಮನೆಯಲ್ಲಿ ಮಲಗಿದ್ದಾಗ ಆಯುಸ್ಸು ಮುಗಿದರೆ ಹಾಗೇ ಹೋಗುತ್ತದೆ." ಎಂದು ನಿರರ್ಗಳವಾಗಿ ಈ ಧರ್ಮಭೂಮಿಯ ಸಂಜಾತರಲ್ಲಿ ರಕ್ತಗತವಾಗಿರುವ ಕರ್ಮಸಿದ್ಧಾಂತವನ್ನು ಬೋಧಿಸಲು ಮೊದಲು ಮಾಡಿದ. ಅಪಘಾತಕ್ಕೆ ನಾವಾಗಲೀ, ವೇಗವಾಗಲೀ ಕಾರಣವಲ್ಲ. ಇದೆಲ್ಲಾ ವಿಧಿಲಿಖಿತ ಎಂಬ ಅಪಾಯ ಸಿದ್ಧಾಂತವನ್ನು ಕೇಳಿ ನನಗೆ ಇನ್ನೂ ಭಯವಾಯಿತು. ಈ ವೇದಾಂತಿಯ ಹಿಡಿತದಿಂದ ಕ್ಷೇಮವಾಗಿ ಪಾರಾದರೆ ಪುನರ್ಜನ್ಮ ಬಂದ ಹಾಗೆ ಎಂದುಕೊಂಡು ಇನ್ನು ಹೆಚ್ಚು ಮಾತಾಡದೆ ಜೀವವನ್ನು ಕೈಲಿ ಹಿಡಿದುಕೊಂಡು ಕುಳಿತುಕೊಂಡೆ.

ಮತ್ತೊಬ್ಬ ಆಟೋರಿಕ್ಷಾ ಚಾಲಕ "ಅಯ್ಯೋ! ಕುಳಿತುಕೊಳ್ಳಿ ಸ್ವಾಮಿ. ನಿಮಗೆ ಒಬ್ಬರಿಗೇನೆ ಜೀವದ ಮೇಲೆ ಆಸೆ ಇದೆ ಎಂದು ತಿಳಿದುಕೊಳ್ಳಬೇಡಿ. ನಮಗೂ ಇದೆ. ನಮಗೂ ಹೆಂಡತಿ ಮಕ್ಕಳು ಇದ್ದಾರೆ" ಎಂದು ಸಮಾಧಾನಪಡಿಸಿದ. "ನನಗೆ ಯಾವ ಹೆಂಡತಿ ಮಕ್ಕಳೂ ಇಲ್ಲಪ್ಪ. ನಿನಗೆ ಇದ್ದಾರೆ ಅಂತಲೇ ಅವರ ಯೋಗಕ್ಷೇಮಕ್ಕಾಗಿಯೇ ನಾನು ನಿನಗೆ ಎಚ್ಚರಿಕೆ ಕೊಟ್ಟೆ" ಎಂದು ಹೇಳಿದೆ.

ಇನ್ನೊಂದು ಸಲ ಒಬ್ಬ ಆಟೋ ಚಾಲಕ ಕೇಳಿದ: "ಏನು ಸ್ವಾಮಿ, ಈ ವೇಗಕ್ಕನೇ ಭಯಪಡುತ್ತೀರಿ. ನೀವು ಅಮೆರಿಕಾಕ್ಕೆಲ್ಲಾ ಹೋಗಿದ್ದಿರಿ ಅಂತ ಕೇಳಿದ್ದೇನೆ, ವಿಮಾನದಲ್ಲಿ ಹೋಗುವಾಗ ನಿಮಗೆ ಭಯವಾಗಲಿಲ್ಲವೇ" ಎಂದು ಪ್ರಶ್ನಿಸಿದ. "ಇಲ್ಲಪ್ಪ, ನನಗೇನೂ ಅಲ್ಲಿ ಭಯವಾಗುವುದಿಲ್ಲ. ಯಾಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು, ಜನ ಅಡ್ಡ ಬರಲಿಲ್ಲ. ಜೊತೆಗೆ ವಿಮಾನವನ್ನು ಓವರ್ ಟೇಕ್ ಮಾಡಿದ ಪ್ರಸಂಗವೂ ಇಲ್ಲ" ಅಂದೆ. "ಕರೆಕ್ಟ್ ಸಾರ್ ನೀವು ಹೇಳಿದ್ದು" ಎಂದು ಒಪ್ಪಿದ. ಇನ್ನೊಂದು ಸಲ ಇನ್ನೊಬ್ಬ "ಸಾರ್, ನೀವು ಆ ಶಿವ ಬಾಲಯೋಗಿಗೆ ಸರಿಯಾದ ಸವಾಲ್ ಹಾಕಿದಿರಿ. ಆತನ ಪ್ರಾರ್ಥನೆಯಿಂದ ಬರೋ ಮಳೆಯೂ ತಪ್ಪಿಹೋಯಿತು. ನೀವು ಹಿಂದೆ ಆ ಸಾಯಿಬಾಬಾಗೂ ಹೀಗೆ ಬುದ್ಧಿ ಕಲಿಸಿದಿರಿ." ಎಂದು ನಮ್ಮ ದೇಶದ ಯೋಗಿ, ಬಾಬಾಗಳನ್ನು ಸಾಕಷ್ಟು ಕಠಿಣ ಶಬ್ದಗಳಲ್ಲಿ ವರ್ಣಿಸಿದ.

ಒಂದು ಸಲ ವಿಧಾನಸೌಧದ ಬಳಿ ಆಟೋಗಾಗಿ ಪರದಾಡುತ್ತಿದ್ದೆ. ದೂರದಲ್ಲಿ ಹೋಗುತ್ತಿದ್ದ ಒಬ್ಬ ಆಟೋಚಾಲಕರು ನಾನಿದ್ದ ಕಡೆ ಬಂದರು. "ಏನ್‌ಸಾರ್, ನೀವು

ನರಸಿಂಹಯ್ಯನವರಲ್ಲವೆ? ಆಟೋ ಬೇಕೆ? ಎಲ್ಲಿಗೆ ಹೋಗಬೇಕು?" ಎಂದು ತುಂಬಾ ವಿಶ್ವಾಸದಿಂದ ಕೇಳಿದರು. ನನಗಂತೂ ಪರಮಾಶ್ಚರ್ಯವಾಯಿತು. ಹಿಂದಿನ ಕಹಿ ಅನುಭವಗಳಿಗಿಂತ ತೀರ ಭಿನ್ನವಾದ ಅನುಭವ. "ಬಸವನಗುಡಿ ನ್ಯಾಷನಲ್ ಕಾಲೇಜಿಗೆ ಹೋಗಬೇಕಪ್ಪಾ" ಎಂದೆ. "ಕುಳಿತುಕೊಳ್ಳಿ" ಅಂದರು. "ಏನ್ ಸಾರ್, ನೀವು ವೈಸ್ ಚಾನ್ಸಲರ್ ಆಗಿದ್ದೀರಿ, ಎಂ. ಎಲ್. ಸಿ. ಆಗಿದ್ದೀರಿ, ಒಂದು ಕಾರ್ ಇಟ್ಟುಕೊಳ್ಳೋದಕ್ಕೆ ಆಗಲಿಲ್ಲವೇ? ಈ ವಯಸ್ಸಿನಲ್ಲಿ ಈ ಬಿಸಿಲಿನಲ್ಲಿ ಆಟೋ ಹುಡುಕುತ್ತಿದ್ದೀರಿ. ಯಾರು ಯಾರೋ ಕಾರ್ ಇಟ್ಟುಕೊಂಡಿದ್ದಾರೆ" ಎಂದು ತನ್ನ ಆಗ್ರಹ ಅನುಕಂಪವನ್ನು ವ್ಯಕ್ತಪಡಿಸಿದರು. "ನನಗೆ ಅವಶ್ಯಕತೆಯೂ ಇಲ್ಲ, ನನ್ನಲ್ಲಿ ದುಡ್ಡೂ ಇಲ್ಲಪ್ಪ" ಅಂದೆ. "ಇದು ಅಯೋಗ್ಯರಿಗೆ ಕಾಲಾ ಸಾರ್" ಎಂಬುದಾಗಿ ಹೇಳಿ ಅದೇ ಧಾಟಿಯಲ್ಲಿಯೇ ಮುಂದುವರೆದು ಸಾರ್ವಜನಿಕ ಕ್ಷೇತ್ರದ ಆಯಕಟ್ಟಿನಲ್ಲಿ ಕುಳಿತಿರುವ ಎಲ್ಲಾ 'ಸೇವಕ'ರನ್ನೂ ವಾಚಾಮಗೋಚರವಾಗಿ ಬೈದುಕೊಂಡು ಬಂದರು.

ಒಂದು ಸಂಜೆ ಜಯನಗರದಲ್ಲಿರುವ ನ್ಯಾಷನಲ್ ಕಾಲೇಜಿನಲ್ಲಿ ಒಂದು ಕಾರ್ಯಕ್ರಮವಿತ್ತು. ಅದು ಮುಗಿಯುವುದು ರಾತ್ರಿ 10 ಘಂಟೆಯಾಯಿತು. ಆಟೋಗಾಗಿ ಕಾಲೇಜಿನ ಹತ್ತಿರ ಅಲ್ಲಿಯ ಕೆಲವು ಉಪಾಧ್ಯಾಯರೊಂದಿಗೆ ಕಾದು ನಿಂತಿದ್ದೆ. "ಇಷ್ಟು ಹೊತ್ತಿನಲ್ಲಿ ಹಾಸ್ಟೆಲ್‌ನಲ್ಲಿ ಊಟ ಇರುವುದಿಲ್ಲ; ಆದುದರಿಂದ ನಮ್ಮ ಮನೆಗೆ ಬಂದು ಊಟಮಾಡಿಕೊಂಡು ಹೋಗಿ" ಎಂದು ಒಬ್ಬಿಬ್ಬ ಉಪಾಧ್ಯಾಯರು ಒತ್ತಾಯಪಡಿಸುತ್ತಿದ್ದರು. "ಪರವಾಗಿಲ್ಲ, ಒಂದು ಹೊತ್ತು ಊಟ ಇಲ್ಲದೇ ಇದ್ದರೆ ಚಿಂತೆ ಇಲ್ಲ. ತುಂಬಾ ಹೊತ್ತಾಗಿದೆ" ಎಂದು ಹೇಳಿ ಅಲ್ಲಿಂದ ಹೊರಟೆ. ಆಟೋ ಚಾಲಕರು ಸ್ವಲ್ಪ ವಯಸ್ಸಾದವರು. ಇದನ್ನೆಲ್ಲಾ ಸಾವಧಾನವಾಗಿ ಕೇಳುತ್ತಿದ್ದರು. 'ಯಾಕೆ ಸಾರ್, ನಿಮಗೆ ಮನೆ ಇಲ್ಲವೇ? ಊಟ ಇಲ್ಲದೇ ಇದ್ದರೂ ಪರವಾಗಿಲ್ಲ ಅಂತ ಹೇಳುತ್ತಿದ್ದೀರಿ" ಎಂದು ಕೇಳಿದರು. "ಇಲ್ಲಪ್ಪ, ನನಗೆ ಮನೆ-ಗಿನೆ ಇಲ್ಲ, ನ್ಯಾಷನಲ್ ಕಾಲೇಜ್ ಹಾಸ್ಟೆಲಿನಲ್ಲಿದ್ದೇನೆ" ಅಂದೆ. "ಇಷ್ಟು ಹೊತ್ತಿನಲ್ಲಿ ಉಪವಾಸ ಮಲಗಿಕೊಳ್ಳಬಾರದು ಸಾರ್. ವಿಶ್ವೇಶ್ವರಪುರದಲ್ಲಿರುವ ಸಜ್ಜನರಾವ್ ಸರ್ಕಲ್‌ಗೆ ಹೋಗೋಣ ಬನ್ನಿ, ಅಲ್ಲಿ ಇಡ್ಲಿ ಮಾರುತ್ತಾರೆ. ನೀವು ಇಡ್ಲಿ ತಿನ್ನುವ ತನಕ ಕಾಯುತ್ತೇನೆ" ಎಂದು ತುಂಬಾ ಆತ್ಮೀಯವಾಗಿ ವಿನಂತಿಸಿಕೊಂಡ. "ತುಂಬಾ ಥ್ಯಾಂಕ್ಸ್, ನಿಮ್ಮಂತಹವರು ಬಹಳ ಅಪರೂಪ. ಆಟೋದವರಿಗೆ ಮಾನವೀಯತೆ ಇಲ್ಲ ಎಂದು ಹೇಳುತ್ತಾರೆ. ನೀವು ಅದಕ್ಕೆ ಅಪವಾದ" ಎಂದು ವಂದಿಸಿದೆ.

ಕೃತಿಕಾರರ ಪರಿಚಯ



ಡಾ. ಎಚ್. ಎನ್. ಎಂದೇ ಜನಪ್ರಿಯರಾದ ಹೊಸೂರು ನರಸಿಂಹಯ್ಯನವರು ಜೂನ್ 6.1920 ರಂದು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ, ಹೊಸೂರು ಗ್ರಾಮದಲ್ಲಿ ಒಂದು ಬಡ ಹಿಂದುಳಿದ ಕುಟುಂಬದಲ್ಲಿ ಜನಿಸಿದರು. ತಂದೆ ಹನುಮಂತಪ್ಪ ತಾಯಿ ವೆಂಕಟಮ್ಮ. ಪ್ರಾಥಮಿಕ ಮತ್ತು ಮಾಧಮಿಕ ವಿದ್ಯಾಭ್ಯಾಸವನ್ನು ಹೊಸೂರಿನಲ್ಲಿ ಮುಗಿಸಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಬಿ. ಎಸ್ಸಿ. ಮತ್ತು ಎಂ. ಎಸ್ಸಿ. ಪದವಿಗಳಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿ ಬಸವನಗುಡಿ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿ ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಬೆಂಗಳೂರಿನ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು. ಇವರು 'ಪದ್ಮಭೂಷಣ' ಪ್ರಶಸ್ತಿ ಪಡೆದಿದ್ದಾರೆ. ಅನೇಕ ವೈಚಾರಿಕ ಲೇಖನಗಳನ್ನು ಬರೆದಿದ್ದಾರೆ. ಮತ್ತು 'ತೆರೆದ ಮನ' ಮತ್ತು 'ಹೋರಾಟದ ಹಾದಿ' ಇವರ ಕೃತಿಗಳು.

ಅಭ್ಯಾಸ

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

1. ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯವೇನು?
2. ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಯಾವುದು ಲೇಸು?
3. ಸಿಡುಕಿನಿಂದ ಆಟೋ ಸ್ಟಾರ್ಟ್ ಮಾಡಿದ ಆಟೋ ಚಾಲಕ ಏನೆಂದು ಹೇಳಿದ?
4. ಲೇಖಕರಿಗೆ ವಿಮಾನ ಯಾನದ ಬಗ್ಗೆ ಭಯವಿಲ್ಲವೇಕೆ?
5. ಪ್ರಾರ್ಥನೆಯಿಂದ ಮಳೆಬರಿಸುವುದಾಗಿ ಹೇಳಿದ್ದವನಾರು?
6. ಆಟೋ ಚಾಲಕರಲ್ಲಿಯೂ ಮಾನವೀಯತೆಯನ್ನರಿತ ಪ್ರಸಂಗದ ಬಗ್ಗೆ ತಿಳಿಸಿ.